ಉಚಿತ ಪುಸ್ತಕ



# ಡಾ|| ಎಲ್ ಆರ್ ಹೆಗಡೆ

ಅಪ್ರಕಟಿತ ಸಂಗ್ರಹ ಮಾಲೆ

೧

# ನಾಮಧಾರಿಗಳ ಆಡುಭಾಷೆಯ ಕಥೆಗಳು

ಸಂಪಾದಿಸಿದವರು: ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ



ಮಿತ್ರಮಾಧ್ಯಮ

ಮುಕ್ತ ಮಾಹಿತಿಗೆ ಪುಟ್ಟ ಹೆಜ್ಜೆ

ಉಚಿತ ಪುಸ್ತಕ

**ಡಾ॥ ಎಲ್ ಆರ್ ಹೆಗಡೆ**

ಅಪ್ರಕಟಿತ ಸಂಗ್ರಹ ಮಾಲೆ

೧

# ನಾಮಧಾರಿಗಳ ಆಡುಭಾಷೆಯ ಕಥೆಗಳು

**ಸಂಪಾದಿಸಿದವರು**

ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ

ಮಿತ್ರಮಾಧ್ಯಮ

ಮುಕ್ತ ಮಾಹಿತಿಗೆ ಪುಟ್ಟ ಹೆಜ್ಜೆ

ಈ ಪುಸ್ತಕವನ್ನು 'ಮಿತ್ರಮಾಧ್ಯಮ'ದ 'ಉಚಿತ ಪುಸ್ತಕ ಸಂಸ್ಕೃತಿ' ಅಭಿಯಾನದ ಭಾಗವಾಗಿ ಪ್ರಕಟಿಸಿದ್ದು, ಸಾಫ್ಟ್ ಪ್ರತಿಗಳನ್ನು **freebookculture.riverthoughts.com** ವೆಬ್‌ಸೈಟ್‌ನಲ್ಲಿ ಉಚಿತವಾಗಿ ಪಡೆಯಬಹುದು.

*This book is published as part of `Mitramaadhyama' Trust's campaign FREE BOOK CULTURE; people who wish to have their own copy can download it from freebookculture.riverthoughts.com*

# ನಾಮಧಾರಿಗಳ ಆಡುಭಾಷೆಯ ಕಥೆಗಳು

ಸಂಗ್ರಹಕಾರರು
ಡಾ॥ ಎಲ್ ಆರ್ ಹೆಗಡೆ

ಸಂಪಾದಕರು
ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ

ಇ - ಪ್ರಕಟಣೆ
ಮಿತ್ರಮಾಧ್ಯಮ
ಬೆಂಗಳೂರು

ಮೊದಲ ಇ-ಪ್ರಕಟಣೆ : ಸೆಪ್ಟೆಂಬರ್ ೨೦೨೦
ಆಕಾರ: ೧/೮ ಡೆಮಿ
ಪುಟಗಳು: ೧೦೮+೪

# Naamadhaarigala Aadubhasheya Kathegalu

COLLECTED BY
**Dr. L R Hegde**

EDITED BY
**Smt. Renuka Ramakrishna Bhat**

E-PUBLICATION BY
**MITRAMAADHYAMA (TRUST)**
Bangalore

First E-Edition: September 2020
Size: 1/8 Demy
Pages: 108+4

ಈ ಪುಸ್ತಕದ ಉಚಿತ ಅಕ್ಷರ ಜೋಡಣೆ ಮಾಡಿ ಸಹಕರಿಸಿದವರು
**ಶ್ರೀಮತಿ ಸಂಧ್ಯಾಶಾಸ್ತ್ರಿ**
**ಶ್ರೀ ರುದ್ರೇಶ್ವರ ರಾಮನಗರ**
**ಶ್ರೀ ವೇಣುಗೋಪಾಲ ಗಾಂವ್ಕರ್**

ಮುಖಪುಟ ರಚನೆ: ಶ್ರೀ ಕೋಟೆಗದ್ದೆ ಎಸ್ ರವಿ

**This work is licensed under a Creative Commons Attribution-Non Commercial-NoDerivatives 4.0 International License.**

**ಈ ಪುಸ್ತಕವು ಕ್ರಿಯೇಟಿವ್ ಕಾಮನ್ಸ್ ಹಕ್ಕುಪದ್ಧತಿಯಲ್ಲಿ 4.0 ಅಂತಾರಾಷ್ಟ್ರೀಯ ಪರವಾನಗಿಯನ್ನು ಹೊಂದಿದ್ದು ಇದನ್ನು ಯಥಾವತ್ತಾಗಿ ವಾಣಿಜ್ಯೇತರ ಉದ್ದೇಶಗಳಿಗೆ ಮರುಮುದ್ರಿಸುವುದಕ್ಕೆ ಅನುಮತಿ ಇರುತ್ತದೆ.**

# ಪ್ರಕಾಶಕರ ಮಾತು

ಸುಮಾರು ಎರಡೂವರೆ ವರ್ಷದ ಹಿಂದೆ ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ ಅವರು ನನಗೆ ಕರೆ ಮಾಡಿ, ತಮ್ಮ ಪರಿಚಯ ಮಾಡಿಕೊಂಡರು. ನಾನು ಭಾರತವಾಣಿ ಬಹುಭಾಷಾ ಜ್ಞಾನಕೋಶ ಯೋಜನೆಯಲ್ಲಿ ಇರುವುದನ್ನು ತಿಳಿದುಕೊಂಡಿದ್ದ ಅವರು ತಮ್ಮ ತಂದೆ ದಿ. ಎಲ್ ಆರ್ ಹೆಗಡೆಯವರ ಅಪ್ರಕಟಿತ ಜಾನಪದ ಸಂಗ್ರಹಗಳ ಹಸ್ತಪ್ರತಿಗಳನ್ನು ಗಮನಿಸಬಹುದೇ ಎಂದು ಕೇಳಿದರು.

ನಾನು 1990-92ರ ಅವಧಿಯಲ್ಲಿ ಶಿರಸಿಯಲ್ಲಿದ್ದಾಗ ಒಂದೆರಡು ಸಲ ಶ್ರೀ ಎಲ್ ಆರ್ ಹೆಗಡೆಯವರನ್ನು ಬಸ್ ನಿಲ್ದಾಣದಲ್ಲಿ ಕಂಡಿದ್ದೆ. ಮಾತನಾಡಿಸಲು ಧೈರ್ಯ ಇರದವನಾಗಿದ್ದೆ. ಈಗ ಅವರ ಅಪ್ರಕಟಿತ ಸಂಗ್ರಹವೇ ಇದೆ ಎಂದು ತಿಳಿದಾಗ ಕುತೂಹಲ ಹೆಚ್ಚಾಯಿತು. ಶ್ರೀಮತಿ ರೇಣುಕಾ ಭಟ್ ಅವರ ಮನೆಗೇ ಹೋದೆ. ಅಲ್ಲಿರುವ ಅಪಾರ ಸಂಗ್ರಹವನ್ನು ನೋಡಿ ಅಚ್ಚರಿಯಾಯಿತು. ಅದಾಗಲೇ ಶ್ರೀ ಎಲ್ ಆರ್ ಹೆಗಡೆಯವರು 83 ಪುಸ್ತಕಗಳನ್ನು ಪ್ರಕಟಿಸಿದ್ದವರು. ಆದರೂ ಇಷ್ಟೆಲ್ಲ ಉಳಿದುಕೊಂಡಿದ್ದವು!

ಈಗ ಅವುಗಳಲ್ಲಿ ಆಯ್ದ ಸಂಗ್ರಹಗಳನ್ನು ಒಂದು ಸರಣಿಯಾಗಿ, ಮುಕ್ತ ಮಾಹಿತಿಯಾಗಿ ಪ್ರಕಟಿಸಲಾಗಿದೆ. ಇದನ್ನು ಕ್ರಿಯೇಟಿವ್ ಕಾಮನ್ಸ್ ಹಕ್ಕಿನಡಿಯಲ್ಲಿ ಪ್ರಕಟಿಸಿರುವುದರಿಂದ ಇವುಗಳ ಮುದ್ರಿತ ಪ್ರತಿಗಳನ್ನು ಯಾವುದೇ ಆಸಕ್ತರು ಯಾವ ಅನುಮತಿಯೂ ಇಲ್ಲದೆ, ಇದ್ದ ಹಾಗೆಯೇ ಮುದ್ರಿಸಬಹುದು!

**ಆನ್‌ಲೈನ್‌ನಲ್ಲಿ ಕೇಂದ್ರ ಸರ್ಕಾರದ `ಭಾರತವಾಣಿ' ಯೋಜನೆ, ರಾಜ್ಯ ಸರ್ಕಾರದ `ಕಣಜ' ಯೋಜನೆಗೆ, ಇನ್ನಾವುದೇ ಮುಕ್ತ ಮಾಹಿತಿಯ ಜಾಲತಾಣಕ್ಕೆ ಉಚಿತವಾಗಿ ಈ ಪ್ರತಿಗಳನ್ನು ನೀಡಲಾಗುತ್ತಿದೆ.** ಜಾನಪದ ಸಾಹಿತ್ಯದ ಮೌಲ್ಯಮಾಪನ ಆಗುವ ಮಾತಿರಲಿ, ಇದ್ದುದನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳುವ ಕಾಲ ಈಗ ಎದುರಾಗಿದೆ. ಆಧುನಿಕತೆ, ನಗರೀಕರಣದ ಪ್ರಭಾವದಿಂದ ಭಾಷೆ - ಲಿಪಿ - ಪರಂಪರಾಗತ ಅರಿವು ಎಲ್ಲವೂ ಕಣ್ಮರೆಯಾಗುತ್ತಿವೆ. ಇಂತಹ ಸಂದರ್ಭದಲ್ಲಿ ಸಿಕ್ಕಿದ್ದನ್ನು ಉಳಿಸಿಕೊಂಡು ಹೋಗುವ ತರಾತುರಿಯಲ್ಲಿ ಇದನ್ನು ಪ್ರಕಟಿಸಲಾಗಿದೆ ಎಂಬುದನ್ನು ಓದುಗರು ಗಮನಿಸಬೇಕಿದೆ.

**ಈ ಪುಸ್ತಕದ ಅಕ್ಷರಜೋಡಣೆಗೆ ಸಹಕರಿಸಿದ, ಮುಖಪುಟ ರಚಿಸಿಕೊಟ್ಟ ಫೇಸ್‌ಬುಕ್ ಮಿತ್ರಲೋಕಕ್ಕೆ ಮಿತ್ರಮಾಧ್ಯಮದ ಅನಂತ ವಂದನೆಗಳು. ಡಿಜಿಟಲ್ ಜನಪದವು ಪರಂಪರಾಗತ ಜನಪದವನ್ನು ಉಳಿಸಿಕೊಳ್ಳಲು ಮುಂದಾಗಿರುವುದು, ಅದರಲ್ಲೂ ಹಲವು ಯುವ ವಯಸ್ಕರೇ ಈ ಕೆಲಸ ಮಾಡಿರುವುದು ಕೊಂಚ ಸಮಾಧಾನದ ಸಂಗತಿ. ಇಂತಹ ಜೀವನ್ಮುಖಿ ಯುವಸಮುದಾಯ ವಿಸ್ತಾರವಾಗಲಿ ಎಂದು ಹಾರೈಸುತ್ತೇವೆ.**

**ಮುಕ್ತಮಾಹಿತಿಗೆ ಪುಟ್ಟ ಹೆಜ್ಜೆ ಇಡುವ ಮಿತ್ರಮಾಧ್ಯಮದ ಘೋಷವಾಕ್ಯವನ್ನು ಬೆಂಬಲಿಸುವ ಎಲ್ಲರಿಗೂ ವಂದನೆಗಳು.**

**- ಬೇಳೂರು ಸುದರ್ಶನ ಮತ್ತು ಕೃಷ್ಣನ್**

ಜುಲೈ 2019

# ಸಂಗ್ರಾಹಕರ ಮಾತು

ನಮ್ಮ ಪೂಜ್ಯ ತಂದೆಯವರಾದ ಡಾ|| ಎಲ್. ಆರ್. ಹೆಗಡೆಯವರು ಕನ್ನಡ ಜಾನಪದ ಸಾರಸ್ವತಲೋಕದಲ್ಲಿ ಚಿರಪರಿಚಿತರು. ಅವರು ತಮ್ಮ ಪೂರ್ತಿ ಜೀವನವನ್ನು ಉತ್ತರ ಕನ್ನಡದ ನಶಿಸಿಹೋಗುತ್ತಿರುವ ಜಾನಪದ ಸಂಪತ್ತನ್ನು ಸಂಗ್ರಹಿ, ಉಳಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಯಕ್ಷಗಾನ ಅಕಾಡೆಮಿಯವರು ಪ್ರಕಟಿಸಿದ, ತಮ್ಮ ಕೊನೆಯ ದಿನಗಳಲ್ಲಿ ಅವರೇ ಬರೆದ- 'ಕ್ಷೇತ್ರದಲ್ಲಿ ಕಾರ್ಯದ ನೆನಪುಗಳು' ಗ್ರಂಥವನ್ನು ಓದಿದರೆ ಜಾನಪದ ಕ್ಷೇತ್ರದಲ್ಲಿ ಅವರ ಅಪೂರ್ವ ಸಾಧನೆಯ, ಪಟ್ಟ ಕಷ್ಟಗಳ ಪರಿಚಯವಾಗುತ್ತದೆ. ಅವರಿರುವಾಗ ಪ್ರಕಟವಾದ ಪುಸ್ತಕಗಳು ಹಾಗೂ ಅವರೇ ಬರೆದ ಪಾಂಡಿತ್ಯ ಪೂರ್ಣ ಪೀಠಿಕೆಗಳು, ಮುನ್ನುಡಿಗಳು ಜಾನಪದ ಕ್ಷೇತ್ರದಲ್ಲಿ ಅವರ ಅಳವಾದ ಅಧ್ಯಯನವನ್ನು ಎತ್ತಿ ತೋರಿಸುತ್ತವೆ. ತುಲನಾತ್ಮಕ ವಿಶ್ಲೇಷಣೆಗಳು ನಿಜವಾಗಿಯೂ ಶ್ಲಾಘನೀಯ. ಉತ್ತರ ಕನ್ನಡದ ಬುಡಕಟ್ಟು ಜನಾಂಗಗಳ ಕುರಿತ ಅಧ್ಯಯನಗಳು ಅನನ್ಯವಾಗಿದೆ. ಸಂಶೋಧನಾ ಪ್ರಬಂಧಗಳು, ಭಾಷಣಗಳು, ಜಾನಪದ ಲೇಖನಗಳು ಉಲ್ಲೇಖನೀಯ.

ಜಾನಪದ ಅಧ್ಯಯನದ ಜೊತೆಗೆ ಹೋಮಿಯೋಪಥಿ, ಆಯುರ್ವೇದ, ಹಳ್ಳಿಯ ಚಿಕಿತ್ಸಾ ಪದ್ಧತಿಗಳಲ್ಲಿಯೂ ಕೂಡ ಅಪಾರ ಜ್ಞಾನ ಮತ್ತು ಅನುಭವಗಳನ್ನು ಪಡೆದುಕೊಂಡಿದ್ದರು. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದುಕೊಂಡಿದ್ದಾರೆ. ಉಚಿತವಾಗಿ ಔಷಧಿಗಳನ್ನು ಕೊಡುತ್ತಿದ್ದರು. ಕೆಲಸ ಮಾಡುವ ವೈಖರಿಯನ್ನು ನೋಡಿದಾಗ ಇಂಗ್ಲೀಷಿನ 'One man army' ನೆನಪಾಗುತ್ತದೆ.

ನಾವು ನಾಲ್ಕು ಮಕ್ಕಳು ರೇಣುಕಾ, ರಾಮಕೃಷ್ಣ, ಸುನಂದಾ ಹಾಗು ಸವಿತಾ. ನಾವು ಚಿಕ್ಕವರಿರುವಾಗ, "ಯಾಕಪ್ಪಾ ಈ ಹಳ್ಳಿಗರ ಹಾಡು, ಕಥೆ, ಸಾಹಿತ್ಯಗಳನ್ನಾದರೂ ಸಂಗ್ರಹಿಸುತ್ತಾರೋ" ಏನೂ ಪ್ರಯೋಜನವಿಲ್ಲದ ಉಪಯೋಗವಿಲ್ಲದ ಕೆಲಸವೆಂದೂ, ವೇಳೆ ಹರಣವೆಂದೂ ಅನ್ನಿಸುತ್ತಿತ್ತು. ಆದರೆ, ಈಗ ಕಷ್ಟಪಟ್ಟು ಸಂಗ್ರಹಿಸಿದ್ದರಲ್ಲಿ ಕೆಲವನ್ನಾದರೂ ಉಳಿಸಬೇಕೆಂಬ ಹಂಬಲದಿಂದ ಕೆಲಸ ಮಾಡತೊಡಗಿದಾಗ ಇದೆಷ್ಟು ಕಷ್ಟತರವಾದ, ಕ್ಲಿಷ್ಟವಾದ ಕೆಲಸವೆಂದು ತಿಳಿಯಹತ್ತಿದೆ. Absent minded professor ಆದರೂ ಜಾನಪದ ವಿಷಯಗಳನ್ನು ಸಂಗ್ರಹಿಸುವಾಗ ಹೇಳಿದವರ ಹೆಸರು, ಬರೆಸಿಕೊಂಡ ದಿನಾಂಕ, ವಿವಿಧ ವಿಷಯಗಳ ವಿಂಗಡಣೆ, ಸಂಸ್ಕರಣೆಗಳನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ, ಅಂದಿನ ದಿನಗಳಲ್ಲಿ ಅಷ್ಟೊಂದು ಶ್ರಮ ವಹಿಸದಿದ್ದಾರೆ. ಸಂಗ್ರಹಿಸಿದ್ದೆಲ್ಲವೂ ನಶಿಸಿಹೋಗುತ್ತಿದ್ದವೆಂಬ ಅನುಭವವಾಗುತ್ತದೆ. ದೂರದೃಷ್ಟಿ ಮೆಚ್ಚುವಂಥದ್ದು. ಬಹುಶಃ ನಿರೂಪಕರಾರೂ ಈಗಿಲ್ಲ. ಅವರ ಸಂಗ್ರಹಗಳೂ ಅವರ ಜೊತೆಯೇ ಆಧುನಿಕತೆಯ

ಜೀವನಶೈಲಿಯಲ್ಲಿ ಅಡಗಿಹೋಗಿದೆ. ಈಗಿನ ತಲೆಮಾರಿನವರ ಹತ್ತಿರ ಸ್ವಲ್ಪವೂ ಸಿಗುವ ಆಸೆಯಿಲ್ಲ. ಮಾಡಿದ ಸಂಗ್ರಹವನ್ನು ಅವಲೋಕಿಸಿದಾಗ ಜನಪದರ ಮುಗ್ಧ ಮನಸ್ಸು, ಸ್ವಚ್ಛಂದ ವಾತಾವರಣ, ಆಗಿನ ಸಾಮಾಜಿಕ ರೀತಿ-ನೀತಿಗಳ ಕಲ್ಪನೆ, ಜೀವನದ ಸರಳತೆ, ಸರಳ-ಸುಲಭ ಚಿಕಿತ್ಸಾಪದ್ಧತಿ ಎಲ್ಲ ತಿಳಿಯ ಹತ್ತಿದೆ.

ತಂದೆಯವರೇ ಹೇಳಿಕೊಂಡಂತೆ ಅವರಿಗೆ ಹಳ್ಳಿಯ ಹಾಡುಗಳನ್ನು ಕಲಿತು, ಹೇಳುವ ಹವ್ಯಾಸ ಚಿಕ್ಕಂದಿನಿಂದೇ ಇತ್ತು. ಧ್ವನಿ ಬಹಳ ಮಧುರವಾಗಿತ್ತು; ಸುಶ್ರಾವ್ಯವಾಗಿ ಹೇಳುತ್ತಿದ್ದರು. ಹವ್ಯಕ ಹೆಂಗಸರಲ್ಲಿ ಹಬ್ಬ-ಹರಿದಿನಗಳಲ್ಲಿ, ಮದುವೆ ಮುಂಜಿಗಳಲ್ಲಿ, ಮುಂಜಾನೆ, ಸಂಜೆ ಕೆಲಸ ಮಾಡುವಾಗ ಹಾಡುಗಳನ್ನು ಹೇಳುವ ಪರಿಪಾಠವಿತ್ತು. ಹೀಗಾಗಿ ಅರಿವಿಲ್ಲದಂತೆ ಜಾನಪದದತ್ತ ವಾಲಿದ್ದರು. ಮೊದಮೊದಲು ಸಮಯದ ಅಭಾವದಿಂದ, ಹೋಮಿಯೋಪಥಿ ಔಷಧಗಳ ಅಭ್ಯಾಸ, ದಿನಾಲೂ ಬರುವ ರೋಗಿಗಳ ಉಪಚಾರ, ಕಾಲೇಜಿನ ಕೆಲಸಗಳ ಮೂಲಕ ಹೆಚ್ಚು ಸಮಯ ಸಿಗುತ್ತಿರಲಿಲ್ಲ. ಕೆನರಾ ಕಾಲೇಜಿಂದ ಅಧ್ಯಾಪಕ ಕೆಲಸದಿಂದ ನಿವೃತ್ತಿಯ ನಂತರ ಉಳಿದ ಪೂರ್ತಿ ಆಯುಷ್ಯವನ್ನು ಜಾನಪದಕ್ಕಾಗಿಯೇ, ಆದರ ಸಂಗ್ರಹ, ಉಳಿಸುವ ಕೆಲಸಕ್ಕೇ ಮೀಸಲಿಟ್ಟಿದ್ದರು. ಉತ್ತರ ಕನ್ನಡದ ಬಹುತೇಕ ಎಲ್ಲ ಹಳ್ಳಿಗಳನ್ನು ತಿರುಗಿ ಸಾಕಷ್ಟು ವೈವಿಧ್ಯಪೂರ್ಣ ಜಾನಪದ ಸಾಹಿತ್ಯವನ್ನು ಸಂಗ್ರಹಿಸಿದ್ದರು. ಸಾಧ್ಯವಾದಷ್ಟು ಪ್ರಕಟಣೆ ಕಂಡಿವೆ.

ಈ ಕ್ಷೇತ್ರದಲ್ಲಿ ಅವರ ಏಳ್ಗೆಯನ್ನು ಕಂಡು ಪ್ರಕಟಣೆಗಳಿಗೆ ತೊಡಕನ್ನು ತಂದು ಒಡ್ಡುವವರೂ ಇದ್ದರು. ಗಮನಕ್ಕೆ ಬಂದರೂ ಅಷ್ಟಾಗಿ ಹಚ್ಚಿಕೊಳ್ಳದೆ ತಮ್ಮ ಕೈಯಿಂದ ಖರ್ಚು ಮಾಡಿ ಹಲವಾರು ಪುಸ್ತಕಗಳನ್ನು ಪ್ರಕಟಿಸಿದ್ದರು. ಜಾನಪದ ವೈದ್ಯಕೀಯದಲ್ಲಿ, ಅಂದರೆ- ಹಳ್ಳಿಯ ಚಿಕಿತ್ಸಾಪದ್ಧತಿಗಳನ್ನು ಅವರಷ್ಟು ಸಂಗ್ರಹಿಸಿ ಪ್ರಕಟಿಸಿದವರು ವಿರಳವೆಂದೇ ನನ್ನ ಭಾವನೆ. ಆದರೆ, ಕೊನೆಗಾಲದಲ್ಲಿ ಪರಿಷ್ಕರಿಸಿ, ವಿಂಗಡಿಸಿ, ನಾವಿಬ್ಬರೂ ಕೂಡಿ ತಯಾರಿಸಿದ ಹಸ್ತಪ್ರತಿಗಳು– ಸುಮಾರು ಮೂವತ್ತೈದು ಹಸ್ತಪ್ರತಿಗಳು. ನಮಗಾರಿಗೂ ಅರಿವಿಲ್ಲದಂತೆ ಅವೆಲ್ಲವೂ ಯಾರದೋ ಕೈ ಸೇರಿದೆ; ಅವೆಲ್ಲ ಅತ್ಯಮೂಲ್ಯವಾಗಿದ್ದವು. ಎಷ್ಟು ಪ್ರಯತ್ನಿಸಿದರೂ ಲಭ್ಯವಾಗಲಿಲ್ಲ. ಆದರೆ, ಒಂದು ಮಾತು– ಪರಿಷ್ಕರಿಸಿ, ವಿಂಗಡಿಸುವ ಮೊದಲು ಅವುಗಳ ಎರಡು-ಮೂರು ಮೂಲಪ್ರತಿಗಳು ಇರುತ್ತಿದ್ದವು. ಆ ಸಂಗ್ರಹಗಳನ್ನು ನಮ್ಮ ಮನೆಗೆ ತಂದು, ಆ ಮೂಲಪ್ರತಿಗಳಿಂದ ಸುಮಾರು ೧೪-೧೫ ಹಸ್ತಪ್ರತಿಗಳನ್ನು ತಯಾರಿಸಿ ಅದನ್ನು ಇ-ಪ್ರಕಟಣೆಯ ಮೂಲಕ ಜಾನಪದ ಪ್ರೇಮಿಗಳಿಗೆ ತಲುಪಿಸುವ ಪ್ರಯತ್ನ ಮಾಡಲಾಗಿದೆ.

ನಾವಂತೂ ಈ ಕೆಲಸದ ಆಶೆಯನ್ನೇ ಬಿಟ್ಟಿದ್ದೆವು. ಅನೇಕ ಜಾನಪದ ಕ್ಷೇತ್ರದಲ್ಲಿದ್ದವರ ಸಂಪರ್ಕ ಮಾಡುವ ಪ್ರಯತ್ನ ಮಾಡಿದರೂ ಏನೂ ಪ್ರಯೋಜನವಾಗಲಿಲ್ಲ. ಎಲ್ಲರೂ ಹೆಗಡೆಯವರ ಬಗ್ಗೆ ಗೌರವದ ಮಾತನಾಡುವವರೇ ಹೊರತು ಸಹಾಯಕ್ಕೆ ಅಥವಾ

ಮಾರ್ಗದರ್ಶನಕ್ಕೆ ಯಾರೂ ಮುಂದೆ ಬರಲಿಲ್ಲ. ಕೊನೆಯಲ್ಲಿ ಶ್ರೀಯುತ ನಂದಕುಮಾರರ ಪರಿಚಯವಾಗಿ ಅವರು ಶ್ರೀಯುತ ಬೇಳೂರು ಸುದರ್ಶನರ ಬಗ್ಗೆ ಹೇಳಿದರು. ನಾನು ನಿರಾಸೆಯಿಂದಲೇ ಕೊನೆಯ ಪ್ರಯತ್ನವೆಂದು ಅವರಿಗೆ ಫೋನ್ ಮಾಡಿದೆ. ಅವರು ಸಹಾಯ ಹಾಗೂ ಮಾರ್ಗದರ್ಶನ ಮಾಡಲು ಮುಂದೆ ಬಂದರು. ಇಂದು ಅವರ ಜೊತೆಯಲ್ಲಿ ಅವರ ಅನೇಕ ಸ್ನೇಹಿತರೂ ಕೈ ಜೋಡಿಸಿದ್ದಾರೆ. ತಂದೆಯವರೇ ಹೇಳಿಕೊಂಡಂತೆ ೧೫ ಸಾವಿರ ಪುಟಗಳ ಸಂಗ್ರಹದಲ್ಲಿದ್ದ ಸ್ವಲ್ಪ ಭಾಗವನ್ನು ಉಳಿಸುವ ಪ್ರಯತ್ನ ಸಾಗಿದೆ. ಇಷ್ಟು ಉಳಿದರೂ ನಮ್ಮೆಲ್ಲರ ಪ್ರಯತ್ನ ಸಾರ್ಥಕವಾಯಿತೆಂದು ತಿಳಿಯುತ್ತೇನೆ. ಈ ನಿಟ್ಟಿನಲ್ಲಿ ಸಹಾಯ ಮಾಡಿದ (ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ) ಎಲ್ಲರಿಗೂ ನಾವು ಚಿರಋಣಿಗಳು.

**ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ**

9535192074 / 8660421309

# ಡಾ॥ ಎಲ್ ಆರ್ ಹೆಗಡೆ ಕೃತಿಗಳು

## ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

| | | |
|---|---|---|
| ೧ | ಮೂಢನಂಬಿಕೆಗಳು | (ಪ್ರಚಾರೋಪನ್ಯಾಸ) |
| ೨ | ಜಾನಪದ ಕಥೆಗಳು | (ಪ್ರಚಾರೋಪನ್ಯಾಸ) |
| ೩ | ಪುರಾಣ ಜಿಜ್ಞಾಸೆ | (ಪ್ರಚಾರೋಪನ್ಯಾಸ) |
| ೪ | ಜನಪದ ಸಾಹಿತ್ಯದಲ್ಲಿ ಮದುವೆ | (ಪ್ರಚಾರೋಪನ್ಯಾಸ) |
| ೫ | ಬತ್ತಲೇಶ್ವರ ರಾಮಾಯಣ | (ಪ್ರಚಾರೋಪನ್ಯಾಸ) |
| ೬ | ಮಕ್ಕಳಲ್ಲಿ ಮೂಢನಂಬಿಕೆಗಳ ಬೆಳವಣಿಗೆ | (ಪ್ರಚಾರೋಪನ್ಯಾಸ) |
| ೭ | ಪರಮೇಶ್ವರಿಯ ಪದಗಳು | (ಕಥನಗೀತೆಗಳು) |
| ೮ | ಗುಮ್ಮನ ಪದಗಳು | (ಕಥನಗೀತೆಗಳು) |
| ೯ | ಉತ್ತರ ಕನ್ನಡ ಜನಪದ ಕಥೆಗಳು | (ಪ್ರಚಾರೋಪನ್ಯಾಸ) |
| ೧೦ | ಹಾಲಿನ ತೆನೆ | (ಜಾನಪದ ತ್ರಿಪದಿಗಳು) |
| ೧೧ | ಕುಮಾರವ್ಯಾಸನ ಪಾತ್ರಸೃಷ್ಟಿ | (ಮಹಾಪ್ರಭಂಧ) |
| ೮೦ | ಗಾಮೊಕ್ಕಲ ಕಥೆಗಳು | |

## ಮೈಸೂರು ವಿಶ್ವವಿದ್ಯಾಲಯ

| | | |
|---|---|---|
| ೧೨ | ತಿಮ್ಮಕ್ಕನ ಪದಗಳು | (ಕಥನಗೀತೆಗಳು) |
| ೧೩ | ಕೆಲವು ಲಾವಣಿಗಳು | (ಕಥನಗೀತೆಗಳು) |
| ೧೪ | ನಮ್ಮ ಜನಪದ ಕಥೆಗಳು | (ಕಥನಗೀತೆಗಳು) |
| ೧೫ | ಮಲೆನಾಡಿನ ಸೆರಗಿನ ಕಥೆಗಳು | (ಕಥನಗೀತೆಗಳು) |

## ಬೆಂಗಳೂರು ವಿಶ್ವವಿದ್ಯಾಲಯ

| | | |
|---|---|---|
| ೧೬ | ಹಾಡುಂಟೇ ನನ್ನ ಮಡಿಲಲ್ಲಿ | (ತ್ರಿಪದಿ ಸಂಕಲನ) |
| ೧೭ | ಗುಮಟೆಯ ಪದಗಳು | (ಜನಪದ ಗೀತೆಗಳು) |
| ೧೮ | ಮುಕ್ರಿ ಮತ್ತು ಹೊಲೆಯರ ಪದಗಳು | (ಜನಪದ ಗೀತೆಗಳು) |

## ಗ್ರಾಮಜೀವನ ಕಾರ್ಯಾಲಯ ಕುಮಟಾ

| | | |
|---|---|---|
| ೧೯ | ಬಾಳ ದೀಪಾವಳಿ | (ಕವನ ಸಂಕಲನ) |

## ವಿವೇಕೋದಯ ಗ್ರಂಥಮಾಲೆ, ಗುಡಿಬಂಡೆ

| | | |
|---|---|---|
| ೨೦ | ಜೈನಭಾರತ ಕಥೆಗಳು | |

## ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

| | | |
|---|---|---|
| ೧೦ | ಜನಪದ ಸಾಹಿತ್ಯ | (ವಿಮರ್ಶಕ ಗ್ರಂಥ) |
| ೧೧ | ಗೊಂಡರ ಪದಗಳು | (ಜನಪದ ಗೀತೆಗಳು) |
| ೧೨ | ಮಾಚಯು ಕಥನ ಗೀತಗಳು | ಕ.ಸಾ.ಪ., ಬೆಂಗಳೂರು ೧೦೦೧ |
| ೧೪ | ಕತೆ ಗಾದೆಗಳು | ಕ.ಸಾ.ಪ., ಬೆಂಗಳೂರು ೧೦೦೪ |

## ಸಮಾಜ ಪುಸ್ತಕಾಲಯ, ಧಾರವಾಡ

| | | |
|---|---|---|
| ೧೫ | ಕಾವ್ಯ ವ್ಯಾಸಂಗ | (ಕಾವ್ಯವಿಮರ್ಶೆ) |
| ೧೬ | ಸುವ್ವೀ ಸುವ್ವೀ ಸುವ್ವಾಲೆ | (ಜಾನಪದ ತ್ರಿಪದಿಗಳು) |
| ೧೭ | ಬೆಳಿಯಮ್ಮನ ಹಾಡುಗಳು | (ಕಥನಗೀತೆಗಳು) |
| ೧೮ | ಜನಪದ ಜೀವನ ಮತ್ತು ಕಲೆ | (ಲೇಖನಗಳು) |
| ೧೦ | ಗಾಂವಠಿ ಚಿಕಿತ್ಸೆ | |
| ೨೦ | ಪಾಕರಸಾಯನ | (ಅಡಿಗೆ ಗ್ರಂಥ) |

## ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

| | | |
|---|---|---|
| ೨೦ | ಕರ್ನಾಟಕದ ಕರಾವಳಿಯ ಜನಪದ ಗೀತೆಗಳು | |
| ೨೧ | ಕರ್ನಾಟಕ ಕರಾವಳಿಯ ಜನಪದ ಕಥೆಗಳು | |
| ೨೨ | ಗೇಣುಗುಡ್ಡದ ಕುಳ್ಳ | (ಮಕ್ಕಳ ಕಥೆಗಳು) |
| ೨೪ | ಉತ್ತರ ಕನ್ನಡದ ಗೊಂಡರು | |
| ೨೫ | ಉತ್ತರ ಕನ್ನಡದ ಸಿದ್ದಿಯರು | (೨ನೇ ಆವೃತ್ತಿ) |
| ೨೬ | ಜನಪದ ಸಾಹಿತ್ಯ | (ಇತರರೊಡನೆ ಬರೆದುದು) |
| ೨೭ | ಗೇಣುಗಡ್ಡದ ಕುಳ್ಳ ಮತ್ತು ಇತರ ಕಥೆಗಳು - ೦೯೮೦ | |

## ಸಾಹಿತ್ಯ ಭಂಡಾರ, ಹುಬ್ಬಳ್ಳಿ

| | | |
|---|---|---|
| ೨೮ | ಲಂಕಾದಹನ | (ಬತ್ತಲೇಶ್ವರ ರಾಮಾಣದ ಭಾಗ) |
| ೨೯ | ಅನುಭವ ಚಿಕಿತ್ಸೆ | (ವೈದ್ಯಗ್ರಂಥ) |
| ೪೦ | ಆರೋಗ್ಯ ಧರ್ಮ ಪಾಲನೆ | (ವೈದ್ಯಗ್ರಂಥ) |
| ೪೦ | ದನಗಳ ವೈದ್ಯ | (ವೈದ್ಯಗ್ರಂಥ) |
| ೪೧ | ರೂಢಿಯ ಚಿಕಿತ್ಸೆ | (ವೈದ್ಯಗ್ರಂಥ) |

## ವಿಶ್ವ ಪ್ರಕಾಶನ, ಹುಬ್ಬಳ್ಳಿ

| | | |
|---|---|---|
| ೪೩ | ಸುಲಭ ಚಿಕಿತ್ಸೆ | (ವೈದ್ಯಗ್ರಂಥ) |

## ಜ್ಞಾನಸಾಧನ ಗ್ರಂಥಮಾಲೆ ಹೆಗೆಡೆ, ಕುಮಟಾ/ಸಿದ್ದಾಪುರ

| | | |
|---|---|---|
| ೪೪ | ಹಕ್ಕಿ ನರಸಣ್ಣ | (ಕಥಾ ಸಂಕಲನ) |
| ೪೫ | ಸಿದ್ದಿಯರ ಕಥೆಗಳು | (ಜನಪದ ಕಥೆಗಳು) |
| ೪೬ | ಕರಾವಳಿಯ ಕಥೆಗಳು | (ಜನಪದ ಕಥೆಗಳು) |
| ೪೭ | ಜನಪದ ಭಾರತದ ಕಥೆಗಳು | (ಜನಪದ ಕಥೆಗಳು) |
| ೪೮ | ಕುಮರಿ ಮರಾಟಿಗರ ಕಥೆಗಳು | (ಜನಪದ ಕಥೆಗಳು) |
| ೪೯ | ಜನಪದ ವೈದ್ಯ | (ಜನಪದ ಕಥೆಗಳು) |
| ೫೦ | ಹೆಂಗಸರ ಗೀತಗಳು | |
| ೫೧ | ಕುಮಾರವ್ಯಾಸ | (ವಿಮರ್ಶೆ) |
| ೫೨ | ಮಂಗಲ ಗೀತಗಳು | |
| ೫೩ | ಪೂಜಾ ಗೀತಗಳು | |
| ೫೪ | ಒಗಟುಗಳು ಮತ್ತು ಕಥೆಗಳು | |
| ೫೫ | ಅಪೂರ್ವ ಮೃದಂಗ | (ಜನಪದ ಕಥೆಗಳು) |
| ೫೬ | ಹೋಮಿಯೋಪಥಿ ಚಿಕಿತ್ಸೆ | |

## ಕದಂಬ ಪ್ರಕಾಶನ, ಸಿರ್ಸಿ

೫೭ ಹಾಲಕ್ಕಿ ಹೆಂಗಸರ ಮದುವೆ ಹಾಡುಗಳು

## ಸಾಹಿತ್ಯ ಅಕಾಡೆಮಿ, ನವದೆಹಲಿ

೫೮ ಜಾನಪದ ಗಿರಿಜನರ ಕಥೆಗಳು

## ಶ್ರೀ ರಾಜು ಶೆಟ್ಟಿ, ಕುಮಟಾ

೫೯ ಆಹಾರ ಉಪಾಹಾರ

೬೦ ಆರೋಗ್ಯವೇ ಭಾಗ್ಯ

## ಜ್ಞಾನಜ್ಯೋತಿ ಪ್ರಕಾಶನ, ಸಿದ್ದಾಪುರ (ಉ.ಕ)

೬೧ ಊರೌಷಧಿಗಳ ಚಿಕಿತ್ಸೆ

## ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ

೬೨ ಪಶುವೈದ್ಯ ರತ್ನಾಕರ

## ಜ್ಞಾನಸಾಧನ ಗ್ರಂಥಮಾಲೆ, ಸಿದ್ದಾಪುರ (ಉ.ಕ)

| | | |
|---|---|---|
| ೬೩ | ಕನ್ನಡ ಗಾದೆಗಳು | |
| ೬೪ | ಹಳಗನ್ನಡದ ಕವಿಗಳು | |
| ೬೫ | When The Indicated Remedy Fails in Homeopathic Practice | |
| ೬೬ | ಗರ್ಭಿಣಿ, ಬಾಣಂತಿ ಉಪಚಾರ | ಸಂಗ್ರಾಹಕಿ ಸೌ. ರೇಣುಕಾ ಭಟ್ಟ |
| ೬೭ | ಮಧುರ ಗೀತಗಳು | ಸಂಗ್ರಾಹಕಿ ಸೌ. ರೇಣುಕಾ ಭಟ್ಟ |

## ಡಾ. ಎಲ್. ಆರ್. ಹೆಗಡೆ ಕೃತಿ ಪ್ರಕಾಶನ ಸಮಿತಿ, ಸಿರ್ಸಿ

| | | |
|---|---|---|
| ೬೮ | ಡಾ. ಎಲ್. ಆರ್. ಹೆಗಡೆ ಕೃತಿ ಸೂಚಿ | |
| ೬೯ | ಬಿಂಬ ಪ್ರತಿಬಿಂಬ | |
| ೭೦ | ಗಾದೆ ಕಥೆಗಳು | |
| ೭೧ | ಹೊನ್ನಮ್ಮನ ಮನೆಯ ಕಥೆಗಳು | |
| ೭೨ | ಮಾತಿನರಗಿಣಿಯೇ ನುಡಿದಾವೋ | |
| ೭೩ | ನಾಡ ಮದ್ದು | |
| ೭೪ | ಜಾನಪದ ಕ್ರೀಡೆ | |
| ೭೫ | ಆರೋಗ್ಯ ದರ್ಶನ | |
| ೭೬ | ಸಣ್ಣ ಕೂಸ ಹೇಳಿದ ಕಥೆಗಳು | |
| ೭೭ | ಪಡುವಣದ ಬೆಡಗು | (ವಿದ್ವಾಂಸರ ಉಪನ್ಯಾಸಗಳು) |
| ೭೮ | ನಾಮಧಾರಿ ಕತೆಗಳು | ಡಾ.ಎಲ್. ಆರ್. ಹೆಗಡೆ ಕೃತಿ ಪ್ರಕಾಶನ ಸಮಿತಿ, ಕುಮಟಾ |

## ಕನ್ನಡ ಸಂಘ ಕ್ರೈಸ್ತ ಕಾಲೇಜು, ಬೆಂಗಳೂರು

| | | |
|---|---|---|
| ೭೯ | ಅವರಿವರು ಹೇಳಿದ ಕಥೆಗಳು | |

## ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ, ೨೦೦೨

| | | |
|---|---|---|
| ೮೦ | ಲೋಕಗೀತ ಮಂಜರಿ | ರಂಗಕಲೆಗಳ ಅಧ್ಯಯನ ಕೇಂದ್ರ ಉಡುಪಿ, ೨೦೦೨ |
| ೮೧ | ಸಾಂಪ್ರದಾಯಿಕ ಅಡುಗೆಗಳು | ಸಂಗ್ರಾಹಕಿ ಸೌ.ರೇಣುಕಾ ಭಟ್ಟ |

## ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

| | | |
|---|---|---|
| ೮೨ | ಡಾ|| ಎಲ್. ಆರ್. ಹೆಗಡೆಯವರ ಕ್ಷೇತ್ರ ಕಾರ್ಯದ ನೆನಪುಗಳು | ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು |

## ಸಪ್ನ ಬುಕ್ ಹೌಸ್

೮೩ ಆರೋಗ್ಯಕರ ಚಿಕಿತ್ಸೆ (ವೈದ್ಯಗ್ರಂಥ)

೮೪ ಹೋಮಿಯೋಪಥಿ ಔಷಧಿ ಗುಣಧರ್ಮ
ಮತ್ತು ಚಿಕಿತ್ಸಾಸಾರ

---

- ಇವುಗಳಲ್ಲಿ 'ಹಾಲಕ್ಕಿ ಹೆಂಗಸರ ಮದುವೆಯ ಹಾಡುಗಳು' ಎಂಬ ಗ್ರಂಥಕ್ಕೆ ೧೯೮೮ನೇ ಸಾಲಿನ 'ಉತ್ತಮ ಜನಪದ ಗೀತ ಸಂಕಲನ' ಎಂದು ಮತ್ತು 'ಜನಪದ ಮತ್ತು ಗಿರಿಜನರ ಕಥೆಗಳು' ಎಂಬ ಗ್ರಂಥಕ್ಕೆ ಗದ್ಯ ಪ್ರಕಾರದಲ್ಲಿ ೧೯೯೦ನೇ ಸಾಲಿನ ಉತ್ತಮ ಗ್ರಂಥವೆಂದೂ ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿಯ ಪುಸ್ತಕ ಬಹುಮಾನ ದೊರೆತಿವೆ.
- ೧೯೮೯ ಜಾನಪದ ಅಕಾಡೆಮಿ ಪ್ರಶಸ್ತಿ- ಹೊಸಪೇಟೆಯಲ್ಲಿ ಹಾ.ಮಾ. ನಾಯ್ಕರಿಂದ ಪ್ರಶಸ್ತಿ ಪ್ರಧಾನ.
- ೨೦೦೧ ನವಂಬರ್ ೧, ಮಾನ್ಯ ಮುಂತ್ರಿ ಎಸ್.ಎಂ.ಕೃಷ್ಣರಿಂದ ರಾಜ್ಯ ಪ್ರಶಸ್ತಿ ಪ್ರಧಾನ.

# ಪರಿವಿಡಿ

1. ಅಜ್ಜಿ-ಮೊಮ್ಮಗ
- **ಪಾರ್ವತಿ ಶಿವು ನಾಯ್ಕ**, ಬಾಡ. ಕುಮಟಾ ತಾಲೂಕ ............................... 15

2. ಏಡಿರಾಜ
- **ದಿ. ಮಾಸ್ತಿ ನಾಗಪ್ಪ ನಾಯ್ಕ**, ಹೆಗಡೆ ಊರು ....................................... 17

3. ಕತೆಗಾಗಿ ಜತೆ
- **ಶ್ರೀ ದೇವಪ್ಪ ಅಣ್ಣಪ್ಪ, ನಾಯ್ಕ**, ಹೊದ್ಕೆ ................................................ 21

4. ಗಳುವಿನಲ್ಲಿ ಹೆಣ್ಣು
- **ದಿ. ಸೋಮ ಮಾಸ್ತಿ ನಾಯ್ಕ**, ಮಾಣುಮನೆ, ಹೆಗಡೆ ಊರು ........................23

5. ಗೌಡತಿ ಕಥೆ
- **ದಿ. ಶಿವಮ್ಮ ಮಾಸ್ತಿ ನಾಯ್ಕ**, ಮಾಣುಮನೆ, ಊರು ಹೆಗಡೆ........................ 26

6. ಚಾತುರ್ಯಕ್ಕೆ ಜಯ
- **ರಮೇಶ ಬೀರಪ್ಪ ನಾಯ್ಕ**, ಹೊದ್ಕೆ .....................................................32

7. ಚೋಟಣ್ಣ.................................................................................................
- **ಸೌ| ವಿಜಯಲಕ್ಷ್ಮಿ ರಾಮನಾಥ ನಾಯ್ಕ**, ಅರೆ ಅಂಗಡಿ, ತಾ: ಹೊನ್ನಾವರ. ..... 36

8. ಚಿನ್ನದ ಕೂದಲಿನ ಪಾರ್ವತಿ
- **ನಾಗಮ್ಮ ನಾಗಪ್ಪ ನಾಯ್ಕ**, ಹೆಗಡೆ ಊರು.........................................38

9. ಚಿನ್ನದ ಕೋಳಿ
- **ಪಾರ್ವತಿ ಶಿವ ನಾಯ್ಕ**, ಬಾಡ, ........................................................ 40

10. ಜಗದೇಕ ವೀರನ ಕಥೆ
- **ಶ್ರೀ ಲಕ್ಷ್ಮಣ ಬೊಮ್ಮಣ್ಣ ನಾಯ್ಕ**, ಕಣಗೀಲ, ತಾಲೂಕು ಅಂಕೋಲಾ. ............ 43

11. ಜನ್ಮಾಂತರದ ಋಣ
- **ದಿ. ಸೋಮ ನಾಯ್ಕ** (ಮಾಣುಮನೆ ಅಮ್ಮ), ಹೆಗಡೆ ಊರು. .....................47

12. ದುಷ್ಟಬುದ್ಧಿ ಕತೆ
- **ದಿ. ಸೋಮ ನಾಯ್ಕ**, ಮಾಣುಮನೆ, ಹೆಗಡೆ ಊರು .............................. 49

13. ದೈವ ಸಂಕಲ್ಪ
- **ದಿ. ಪರಮೇಶ್ವರಿ ಗಣಪಯ್ಯ ನಾಯ್ಕ**, ಸದ್ದನಮನೆ, ಹೆಗಡೆ ಊರು................56

14. ನಿಧಿ ಲಕ್ಷ್ಮೀ ಭಾಗ್ಯಲಕ್ಷ್ಮಿ
- **ದಿ. ರಾಮಕೃಷ್ಣ ಬೆಳ್ಳಿ ನಾಯ್ಕ**, ಹೆಗಡೆ ಊರು ....................................... 60

15. ಪುಣ್ಯದ ಫಲ, ಪಾಪದ ಫಲ
- **ಶ್ರೀ ರಮೇಶ ಬೀರಪ್ಪ ನಾಯ್ಕ**, ಹೊದ್ಕೆ ................................................ 63

16. ಬುರುಡೆ ಮಹಿಮೆ
- **ಸಾವಿತ್ರಿ ರಾಮ ನಾಯ್ಕ**, ತಾರಿ ಬಾಗಿಲ, ಹೆಗಡೆ ಊರು.......................... 68

17. ಬುಸನಾಗಪ್ಪಾ
- **ಇಟ್ಟಪ್ಪ ಪಾಂಡು ನಾಯ್ಕ**, ಕೂಜಳ್ಳಿ ....................................................70

18. ಬೆಳ್ಳಿ ಕಾಲಿನ ಬಿಳಿ ಹಂದಿ
- **ದಿ. ರಾಮಕೃಷ್ಣ ಬೆಳ್ಳಿ ನಾಯ್ಕ**, ಹೆಗಡೆ ಊರು.........................................72

19. ನೆರೆಹೊರೆ
- **ಸೌ| ಮಾಸ್ತಿ ಕೊಂ. ರಾಮ ನಾಯ್ಕ**, ಮುರೂರು.......................................73

20. ಮಾಟಗಾತಿ ರಾಕ್ಷಸಿ
- **ಸೌ| ಮಾಸ್ತಿ ಕೊಂ. ರಾಮ ನಾಯ್ಕ**, ಮೂರೂರು.......................................77

21. ಮೀನಿನ ಹುಡುಗಿ
- **ದಿ. ಶಿವಮ್ಮ ಮಾಸ್ತಿ ನಾಯ್ಕ**, ಹೆಗ್ಗಡೆ ಊರು ......................................... 80

22. ಮೊದಲು ನಗೆ ತುದಿಗೆ ಹೊಗೆ
- **ದೇವಪ್ಪ ಅಣ್ಣಪ್ಪ ನಾಯ್ಕ**, ಹೊದಕೆ ....................................................83

23. ವಶಮದ್ದು
- **ರಾಮಕೃಷ್ಣ ಬೆಳ್ಳ ನಾಯ್ಕ** (ಕುರುಡ).................................................... 86

24. ಶಂಖ- ಚಕ್ರ
- **ದಿ. ಪರಮೇಶ್ವರಿ ಗಣಪಯ್ಯ ನಾಯ್ಕ**, ಹೆಗಡೆ ಊರು ................................ 90

25. ಸಣ್ಣ ಗಂಗಿ
- **ದಿ. ಮಾಣುಮನೆ ಅಮ್ಮ ಸೋಮ, ಕೊಂ. ಮಾಸ್ತಿ ನಾಯ್ಕ**, ಹೆಗಡೆ ಊರು ....... 93

26. ಸರ್ಪ-ಶಿಶು
- **ಮಾಣುಮನೆ ಅಮ್ಮ ಸೋಮ, ಕೊಂ. ಮಾಸ್ತಿ ನಾಯ್ಕ**, ಹೆಗಡೆ ಊರು ............97

27. ಹಗಳಮ್ಮ
- **ದಿ. ರಾಮಕೃಷ್ಣ ಬೆಳ್ಳಿ ನಾಯ್ಕ**, ಹೆಗಡೆ ಊರು ........................................ 99

28. ಹುಡುಗೀಯ ನಸೀಬ
**ಸೌ| ಮಾಸ್ತಿ ರಾಮನಾಯ್ಕ**, ಮೂರೂರು, ಹಾಲಿವಸ್ತಿ, ಹೆಗಡೆ ಊರು.............102

29. ಹೆಣ್ಣು ಯಾರಿಗೆ?
- **ಲಕ್ಷ್ಮೀ ಯೇರಯ್ಯ ನಾಯ್ಕ**, ಹೆಗಡೆ ಊರು............................................105

# ಅಜ್ಜಿ-ಮೊಮ್ಮಗ

ಅಜ್ಜವಿ-ಮೊಮ್ಮಗ ಇದ್ರು. ಅವ ಅಜ್ಜವಿಕಲ್ ಯೇನೆಂದ? "ತಾನು ಕಾಶಿಗೆ ಹೋಗಬತ್ತೆ. ಮೂರ ರೊಟ್ಟಿ ಸುಟಕೊಡು" ಅಂತ. "ಮಗನೇ, ಕಾಶಿಗೆ ಹೋದವರವರೆ, ಹೋದೋರ ಬಂದೋರಿಲ್ಲ. ನೀ ಕಾಶಿಗೆ ಹೋಗ್ವದೆ ಬೇಡ" ಅಂತು. ಆದ್ರೂ ಕೇಳದಿದ್ದೆ ಅಜ್ಜವಿಕೈಲ್ ಮೂರ್ ರೊಟ್ಟಿ ಸುಡ್ಸಕಂಡಿ ಹೋದ. ಹೋಗ ಸುಮಾರ್ ರಾತ್ರೆಯಾಗೆಬಿಟ್ಟು. ರಾತ್ರಿ ಯೇನ್ ಮಾಡೋಕೆ ಬತ್ತದೆ?

ಗೌಡ-ಗೌಡತಿ ಮಾಳ ಕಾಯ್ತ ಇದ್ರು. ಮೂರ ರಾಗಿರೊಟ್ಟಿ ತಂದ್ಕಂಡು, "ನಂಗೆ ಹೆಚ್ಚು..." "ನಂಗೆ ಹೆಚ್ಚು..." ಅಂದಿ ಜಗಳ ಮಾಡ್ತ ಕೂತಿದ್ರು. ಇವನ ರೊಟ್ಟಿ ದಾರೀಲಿ ಕರ್ಚಾಗ ಬಿಡ್ತದೆ. ಇವ ಹೋದ.

"ನಮಗೆ ಯೆರಡೆರಡ್ ಬೇಡ. ಅವನಿಗೆ ವಂದ ಕೊಟ್ಕಂಡಿ ತಿಂಬನಿ" ಅಂತ. ಹಿಂಡ್ತಿ ಬೇಡ ಅಂತದೆ, ಆದ್ರೂ ಕೊಟ್ಕಂಡ್ ತಿಂದ.

ಬೆಳಗಾಗ, "ಯೆಲ್ಗ್ ಹೋಗ್ವವ? ಯೆಲ್ಲಿದ್ ಬಂದವ?" ಕೇಳತ್ರು. "ತಾ ಕಾಶಿಗೆ ಹೋಗ ಬತ್ತೆ. ಅಜ್ಜವಿ ಮೊಮ್ಮಗ", "ತಾ ವಂದ್ ಸುದ್ದಿ ಕೇಳ್ತೆ. ಕೆಳಕ್ಕಂಬಾ ಕಾಶೀಲಿ. ತಾ ಮಾಳಕಾಯ್ತೆ. ಮಾಳದಾಗ ಹಂದಿ ರಾಶಿ ಬತ್ತದೆ. ಬರ್ವದ ಕಮ್ಮಿಯಾಗೂದೋ ಕೇಳ್ಕ ಬಾ" ಅಂತ. ಮುಂದೆ ಹೋದ ಕೂಡ್ಲೆಯ ಅವಗೆ ವಂದ ನರಿ ಶಿಕ್ತದೆ. "ಯಲ್ಗ್ ಹೋಗ್ವವ?" ಕೇಳ್ತದೆ. "ತಾನು ಕಾಶಿಗೆ ಹೋತೆ" ಅಂತ. "ನಂಗ್ ಹೋದ್ ಹೋದಲ್ಲಿ ಮಾಂಸ ಶಿಕ್ಕೂದೋ ಶಿಕ್ಕೂದಿಲ್ವೋ? ಕೇಳು" ಅಂತದೆ. "ಆಗೂದು" ಅಂತ.

ಮುಂದೆ ಹೋತಾ ಇರಬೇಕಾರೆ, ವಂದ ಮಾಯಿನ ಮರದ ಅಡಿ ಕೂತ್ಕಂತ. ಮಾಯಿನ ಹಣ್ಣು ಪುಟಿ ಪುಟಿ ಪುಟಿ ಬೀಳ್ತದೆ. ಇವಗೆ ಯೇನ ಹಸವಾಗಿ ಮರದ ಅಡಿ ಕುಳ್ಳುತನ ವಂದೇ ಹಣ್ ಹೆಕ್ಕಂಡಿ ತಿಂಬೂಕೆ ಹೋದ– ಹುಳವಾಗ ಹೋತದೆ.

ಹಸ್ವಾಗಿ ಮಾತೆಲ್ಲ. ಅಂದಿ ಚಿಂತಿ ಮೇನೆ ಅಲ್ಲೆ ಕೂತ ಬಿಡ್ತ. ತೀಡ್ತ ಕುಂತ ಕೂಡ್ಲೆ ಪಾರ್ವತಿ-ಪರಮೇಶ್ವರ ವನವಾಸ್ಕ ಹೋಗ್ ಬರವರು. ಗಂಡನ ಕೈಲಿ, "ಯಾರು ತೀಡ್ವರು. ನೋಡ್ ಬರವ" ಅಂತು. "ನರಮನಸರ ಈ ಕಾಡಲ್ ಯೆಲ್ಲವ್ರೆ?" ಕೇಳ್ತ. ಆದ್ರೂ ಕೇಳ್ಗದೆ ಕರಕ ಬತ್ತದೆ. ಮಾಯಿನ ಮರದ ಅಡಿಗೆ ಬತ್ತರೆ, "ಯೇನ್ ತಾನ? ಯಲ್ಗ್ ಹೋಗ್ವವ?" ಕೇಳತ್ರು. ಕೇಳೂತನವ, "ಅಜ್ಜವಿ ಮೊಮ್ಮಗ್ನಾಗಿತ್ತು. ದಿನಾ ಬೇಡ್ಕಂಬಂದ ತಿಂಬವ್ನಾಗಿತ್ತು. 'ಕಾಶೀಗೆ ಹೋತೆ' ಅಂದ ಹೇಳ್ ಮೂರ್ ರೊಟ್ಟಿ ಸುಡ್ಸಕಂಡ ಬಂದೆ ತಾನು. ಆಸ್ರ ಬಾಯಿಗೆ ಆಸ್ರಿಲ್ಲ. ಉಂಬೂಕಿ ಕೂತನೆ. ಆಯಾರಿಲ್ದೆ ಬಿದ್ದನೆ."

"ಕಾಶಿಗೆ ನೆಡ್ದ ಹೋಕ್ಕೆ ಸಾದ್ದಿಲ್ಲ... ಹಿಂದೆ ಹೋಕ್ಕೆ ಸಾದ್ದಿಲ್ಲ. ನನ್ ಜೀವ ಇಲ್ಲೇ ಹಾನಿ" ಅಂದ ಹೇಳ್ಕ ತೀಡ್ತ. ಮೂರ ಹಳ್ ಮಂತ್ರಸ ಕೊಟ್ರು. "ನೀನು ತಿರಗಿ ಕಾಶಿಗೆ ಹೋಬೇಡ.

ಮನಿಗೂ ಹೋಬೇಡ. ಬೆಳಿಗ್ಗೆ ಯೆದ್ದವ, 'ಹನ್ನಯ್ಡು ಅಂಕಣ ಮನ್ಯಾಲಿ ಕನ್ನಡಿ ಕಡಕಟ್ವಾಲಿ, ಈಳ್ಯಾಲಿ ಬಾಳ್ಯಾಲಿ' ಅಂದ್ ಹೇಳಿ ಮಂತ್ರಸ ಹೊಡಿ" ಅಂದ್ ಹೇಳಿ ಹೇಳತ್ರು.

ಆವಾಗ್ ಅವ ಹಾಗೆ ಹೇಳಿ ಹೊಡಿತ. ಊರೊರ್ಗೆಲ್ಲ ದಂಗ್ಲ ಸಾರ್ತ. "ಬೇಡ್ ಬೇಡ್ ಬೇಡ್ ಕಾಶಿಗ ಹೋಗುಕೆ ಬಂದನೆ. ಮುಂದೆ ಹೋಗುಕೆ ಅಂಥ್ ಪುಣ್ಯ ಸಿಕ್ಲಿಲ್ಲ. ಮನಿಕಟ್ ಮನೆವಳಗೆ ಗ್ರಾಪ್ರವೇಸ ಮಾಡ್ತೆ" ಅಂದಿ ದಂಗ್ಲ ಸಾರ್ದ. ಸಾರಿ, ಅಲ್ಲಿ ಜನ ಕೂಡತ್ರು ಆವಗೆ.

ಅವ ಯೇನ ಹೇಳ್ದ? "ಕಾಶಿಗೆ ಹೋಗ್ತೆ ಹೇಳಿ ಅಜ್ಜವಿ ಕಲಿ ಮೂರ್ ರೊಟ್ಟಿ ಸುಡ್ಸಕಂಡ ಬಂದಿದೆ. ರೊಟ್ಯೆಲ್ಲಾ ತೀರ್ತು." ಗೌಡ-ಗೌಡತಿ ರೊಟ್ಟಿ ಕೊಟ ಇಟ್ಕಂಡ್ರು.

"ಕೊಯ್ಡ್ ಕುತ್ರಿ ಹಾಕುತನ, ಇದೆ ನಮನಿ ಹಂದ್ ಬತ್ತದ್ಯೋ" ಕೇಳಿರು. ಮುಂದೆ ಕಾಶಿಗೆ ಹೋಕ್ ಮುಂದ್ ಬಂದೆ, ಬರುತನ ಮಾಯ್ನ್ ಮರದ ಅಡಿ ಕೂತೆ. ನಂಗೆ ಊಟಯೆಲೆ ಆಯಾರ ಯೆಲ್ದೆ ಕುಂತ್ಕಂಡ್ ತೀಡ್ತಾ ಇರಬೇಕಾರೆ ಪಾರ್ವತಿ-ಪರಮೇಶ್ವರ ಬಂದ. ಮೂರ ಹಳ್ ಮಂತ್ರಸ ಕೊಟ್ಟ. 'ಕಾಶಿಗೆ ಹೋಗೋದೆ ಬೇಡ, ಮನಿಗೆ ಹೋಗೂದು ಬೇಡ. ಹನ್ನೆಯ್ಡ್ ಅಂಕಣದ ಮನ್ಯಾಲಿ ಹೇಳಿ ಕಲ್ ಹಳ್ ಹೊಡಿ' ಅಂದ್ರು. 'ಸಣ್ಣಕ್ಕಿ ದೊಡ್ಡಕ್ಕಿ ಯೆಲ್ಲಾ ಆಲಿ. ಊರೂರ್ಯೆಲ್ಲಾ ಕರ್ದ್ ಬಡ್ಸ್ಸಟ್ಟು ಜಾತಿ ಅಡ್ಗಿ ಆಗ್ಲಿ' ಅಂದಿ ಬೇಡಕಂಡಿದ್ದೆ. ಊರೂರ್ಗೆ ಯೆಲ್ಲಾ ಊಟ ಹಾಕ್ತೆ ಅಂದಿ" ಅಂತ ಊಟ ಹಾಕ್ತ. ಗೌಡ-ಗೌಡತಿ ಇಟ್ಕಂಡಿ ಉಳಿತ. 'ಹೋಗಿರ್ ಕೇಳಿತಿದ್ದೆ ತಾನು'. ಯೆಲ್ಲದಿರೆ ಯೆಂತ ಕೇಳ್ತೆ? ಅಜ್ಜವಿನು ತನ್ ತಾವ ಕರ್ಸಕಂಡ. ಸುಖ ಸಂತೋಸದಾಗ್ ವಳ್ದ.

- **ಕೆಲವು ಪದಗಳ ವಿವರಣೆ**

  ಅಡ್ಗಿ = ಅಡಿಗೆ

  ಬಡ್ಸ್ಸಟ್ಟು = ಬಡಿಸುವಷ್ಟು

■ ಹೇಳಿದವರು : **ಪಾರ್ವತಿ ಶಿವು ನಾಯ್ಕ,**
ಬಾಡ, ಕುಮಟಾ ತಾಲೂಕು, ದಿನಾಂಕ: ೪-೫-೭೨

# ಏಡಿರಾಜ

ಚೆಲೋ ವಂದು ಅರಸು ಮನಿ, ಗಂಡ-ಹೆಂಡ್ತಿ ದೊಡ್ಡ ಮನ್ತಾನದಲ್ ಆಳ್ಕತಿದ್ರು. ಆವಾಗೆ ಆ ಅರಸೂಗೆ ಗಂಡ್ ಹುಡ್ಗರಿಲ್ಲ. ಸಂತತ್ಯಲ್ಲ, ಇದ್ರದು ನಿಚ್ಚಾ ಕೆಲ್ಸಯೇನಪ್ಪ ಅರಸು ಹಿಂಡ್ತಿದು, ಮನಿ ಸಮೀಪಕೇಯ್ ನಾಕ್ ಮಾರ್ ಹೆರ್ಗೆ ಹಳ್ಳದೆ. ಅಲ್ಲಿ ವಂದ್ ಹೊಂಡ ಮಾಡ್ಕೊಂಡರೆ ಅವರು; ನೀರು ಗೀರು ತೆಕ್ಕಂಡ್ ಹೋಗೂಕೆ.

ಅಲ್ಲೇನಾಗದೆ? ವಂದು ಯೆಸಡು ಅದೆ. ಕುಳಿ ತೆಕ್ಕಂಡಿ ಆ ನೀರ್ನಲ್ ಆಡ್ತಾ ಇರ್ತದೆ. ಯೇಡಿ, ಏಡಿ ಹೇಳ್ತ್ರು ಅದಕ್ಕೆ. ಇದು "ಅಬ್ಬಾ!" ಅಂತು. ಮನ್ಸಿಗೆ ಆಲಚ್ನೆ ಹಾಕ್ತು ನೋಡ್ಕಂಡಿ. ತಮ್ಮಂತಾ ಶಿರಿಮಂತರಿಗೇ ಅರಸ್ತಾನ್ದಲ್ಲಿ ಮಕ್ಕಳು ಮರಿ ಹುಡ್ಗರುಯೆಲ್ಲ. ಇದು ಇಟ್ಟೊಡ್ ಯೆಸಡು! ಅಡ್ಗನ ನೀರು ಕಪ್ಪಾಗುವರಿಗೆ ಇಟ್ಟೆಲ್ಲ ಮರಿ ಹಾಕ್ತು ಹೇಳಿ ಮೇನಿದ್ ಕಲ್ ನೆಗ್ದ್ ಹೊತಾಕ್ತು ಕೊಲ್ಲುಕೆ. ಚೆಂದ ಕಂಡ್ತು ಅದ್ಕೆ. ಅಷ್ಟರಲ್ಲಿ ಇದ್ ಮಾಡ್ದ ಪಾಪದ ಕೆಲ್ಸ.

ಮತ್ ಯೆಯಡನೆ ವಂದ್ ಪಾಪ ಉತ್ಪನ್ನಾಗೊಯ್ತು. ವಂದ್ ಹೆಚ್ ಕಡಾಮ್ಯಾಗೆ ಬದಿಕಂಡ್ತು ಅದರಲ್ಲಿ. ಬದಿಕೊಂಡಿ, ಆ ಯೆಸಡು ತಾನ್ ಪ್ರಾಯಕ್ ಬಂದಾ ಹೇಳಾಯ್ತು. ಅದ್ರ ಲೆಕ್ಕ ರಾತ್ರಿಗೆ ಅರಸಗೊಳ್ ಮನಿಕಂಡ್ ಯಾಳಿದಲ್ಲಿ ಸಪ್ನದಲ್ ಬಂದ್ ಕಾಣ್ಸಿಕೊಂಡ್ತು.

"ಮತ್ತೆ ತನ್ನ ಹೇಳ್ಕೆಯಂತೆ ನೀನು ತನ್ಗೆ ವಂದ ದೊಡ್ ಬಾವಿ ಕಡಸಿ ಬಾವಿಲ್ ತಕಂಡ್ ಹೋಗೆ ಹಾಕ್ಬೇಕು. ಇಲ್ ತನ್ಗೆ ಆಡ್ಲಿಕ್ ಆಗೋದೆಲ್ಲ" ಅವ, "ಅಬ್ಬ! ಇದ್ದೇನ್ ಕಷ್ಟ ಬಂತಪ್ಪ" ಅಂದ ಅರಸು.

"ತಾ ಇಂತಾ ಕಡ್ಗೆ ಅವನೆ" ಹೇಳಿತ್ತು. ಜನ್ರ ತಂದಿ ಬಾವಿ ಕಡಿಸ್ದ. ಆ ಜನ್ರ ಕಲಿ, "ಇಂತಾ ಕಡೆಗೆ ಯೇಡಿ ಅದೆ. ಆ ಯೇಡಿ ತಕಂಡ್ ಹೋಗಿ ಅದರೊಳ್ಗೆ ಬಿಡ್ರಪ್ಪ" ಅಂದ. ಆಗ ಅವರು ಬಾವಿ ಕಡದ್ರು ಅವ್ರೆ ಹೊತ್ಕಂಡ್ ಹೋದ್ರು. ನಾಕ್ಜನರ ಹೊರಿ, ಅಟ್ ದೊಡ್ಡ ಬಾವೀಲ್ ಹಾಕದ್ರು. 'ಇನ್ ತನ್ಗೆ ತ್ರಾಸೆಲ್ಲ ಅಂಬುದ್ ಮಾಡ್‌ದ್ರು' ಸಾಮಾನ್ಯ ಉಳ್ಕಂಡ.

ವಂದ್ ವರ್ಷಾಯ್ತು. ಅಷ್ಟ್ರಾತನಕ ಸಪ್ನದಲ್ ಹೇಳ್ತು. 'ತನ್ಗ ಇಂತಾ ಬಾವಿ ಕಡ್ದ್ ಹೀಗೆ ಮಾಡಿದ್ದೇನಿದ್ದೂ ಈಗೆ ಇದ್ರಲ್ಲಿ ತನ್ಗೆ ಸುತ್ತಿರಗೂಕೆ ಆಡೂಕೆ ತಾಮ್ ಸಾಕಾಗುದೆಲ್ಲ. ದೊಡ್ ಮದ್ಗ ತೋಡ್‌ಬೇಕು. ತೊಡ್ ನೀರಾದ ಕೂಡ್ಲೆ ಇಂತಾ ಕಡ್ಗೆ ಬಾವಿವಳಗೆ ಈ ಯೇಡಿ ಅದೆ. ಆ ಯೇಡಿ ನೀವು ಯೆಂಟ್ ಜನ ಬೇಕಾತದೆ. ಯೆಟ್ ಸಾಮಾನ ಬೇಕಾತದೆ ಅಂದ್ಕಂಡಿ ಮುಂಡಿ ಬಳ್ಳಿ ತಕಂಡಿ, ಆ ಮದ್ಗ್‌ಕ್ ಹೊತ್ಕಂಡಿ ಹೋಗಬೇಕು. ಮದಗದಲ್ ಹಾಕಬೇಕು.'

ಯೆಂಟ್ ದಿವಸ ಮದ್ಗಕ್ಕೆ ನೂರಾರ್ ಜನ ವಟ್ಟಾಗಿ ಕೆಲ್ಸ ಮಾಡ್‌ದ್ರು. ಆ ಮದ್ಗದಲ್ಲಿ ನೀರು ಸಂಪಾಯ್ತು. ಇಲ್ ಬಂದ್ರು. ಈ ಬಾವಿ ವಳ್ಗನ್ದ ಯೇಡಿ ಹೊತ್ ಮೇಲ್ ಹಾಕಂಡ್ರು.

ಬಳ್ಳಿ ಮುಂಡಿಲ್ ಕಟ್‌ಕಂಡಿ ಹತ್ ಹದ್ನೈದ್ ಜನ ಹೊತ್ರು ಅದ್ನ. ಆಗ ತಕಂಡ್ ಹೋಗ್ ಮದಗದಲ್ ಬಿಟ್ರು. ಅದ್ ಆ ಮದಗದಲ್ಲಿ ಆ ನೀರ್ನಲ್ ಆಡ್ಕಂಡ್ ಉಳಿತು. ಉಳ್ಕಟ್‌ರಲ್ಲಿ ಆಗ ಮತ್ ಯೆಯ್ಡ್ ವರ್ಸಾಯ್ತು. ಯೆಯ್ಡ್ ವರ್ಸ ಆದ್ ನಂತ್ರ ಮತ್ ಬಂತು. ಬಂದಿ ಅರಸೂಗೆ ಸಪ್ನದಲ್ಲಿ, 'ತಂಗೆ ಸುಕಪಡ್ಸಿದ್ಯಲ್ಲೋ ಮದಗ ತೋಡ್ಸ್ ಹಾಕು ಅಂದೆ. ತೋಡ್ಸಹಾಕ್ದೆ. ಈಗ ಈ ಕಟ್ಟ್ ನಿಮ್ಗ ಬೇಡ. ನನ್ಗೂ ಬೇಡ. ತನ್ನ ವಂದು ಕುದ್ಲ ರೋಮಕ್ ಪೆಟ್ಟಾಗ್ದಿಗಿದ್ದಂತೆ ವಳಿತೆ. ಸಮುದ್ರದಲ್ ಹಾಕಬೇಕು. ಸಮುದ್ರದಲ್ ಹಾಕ್ಬಿಟ್ರೆ ತಾನ್ ಆನಂದದಲ್ ಉಳಿತ್ನಪ್ಪಾ. ಪದೇ ಪದೇ ಲಾಕಲ್ಲಾ ಇದು' ಅಂತು.

ಆವಾಗೆ ಮದ್ಗದನ್ ತೆಗ್ದ್ ಮೇನ್ ಹಾಕೂದು ಬಾಳ ಕಟ್ಟಬಂತು. ಅಂತೂ ಮದ್ಗದಲಿನ್ ಯೇಳ್ಸಿ ಹೊತ್ರು ಸಮುದ್ರಕೇ ನೂರ್ ಜನ ಹಿಡ್ಕಂಡಿ ಗುಂಪಲ್ ಹಾಕದ್ರು. ಆಗ ಅದ್ಕೆ ಪ್ರಾಯ ಬಂತು ಹೇಳಾಯ್ತು. ಪ್ರಾಯ ಬಂದ ನಂತ್ರ ಅರಸೂಮನಿಗೆ ಸಪ್ನದಲ್ ಬಂತು.

ಬಂದಿ ತನ್ಗೆ, 'ಲಗ್ನಾಗಬೇಕು. ಮತ್ ನನ್ಗ್ ವಂದ್ ಹೆಣ್ ತಕಂಡ್ ಹೋಗಿ ಇಂತಾ ಕಡ್ಗೆ ಚಪ್ಪರ ಹಾಕಿ ಆ ಹುಡ್ಗಿ ತಕಂಡೋಗಿ ಯೆಯ್ಡು ಬದಿ ಬಲ್ಕ್ ಯೆಡಕೆ ದೀಪ ಹಚ್ಚಿ ಚಪ್ಪರದಲಿ ಇರಸಬೇಕು. ಅಷ್ಟ ಚೆನ್ನ ಯೇನದೆ ಹಾಕೂದ್ ಹಾಕಿ ಕುಳ್ಸ್ ಬಂದ್ ಬಿಡಬೇಕು' ಅಂತು.

"ಯೇ ದೇವರೆ" ಅಂದ ಅವನಿಗೆ ಕಮ್ಮಿಲ್ಲ. ವಂದ ಮಾಭಾಗ್ಯ ರಾಜ್ಯಕ ಕರಿ ಕೊಟ್ ಕರ್ಸದ. ಮತ್ತೆ ಇಂತಾ ಕಡ್ಗನ ಏಡಿ ಅದ್ಕೆ ಲಗ್ನ ಮಾಡಬೇಕು. "ತನಗೆ ಹೆಣ್ ತಕಂಡ್ ಹೋಗ್ ಕುಳ್ಸಿ ಯೇನ ಲಗ್ನದಲಿ ಮಾಡು ಉಚ್ಚವ ಮಾಡೋದದೆ, ಮಾಡಿ ತಕಂಡ್ ಹೋಗ್ ಕುಳ್ಸಬಿಡ್ಬೇಕು ಅಂತ ಮಾಡ್ಲಿಕ್ಕೇ ಬೇಕು" ಹೇಳ್ದ.

"ಬೇರೆ ರಾಜಕ್ ಅರಸು ತಾನೇ ಹೋಗ್ತನೆ. ನೀನೇ ಹೋಬೇಕು" ಹೇಳದೆ. ಸತ್ತಿವಂತನಾದ್ದರಿಂದ ಕಷ್ಟ ಪಾರಾತದೆ. ಅವನ್ಗೇ ಆವಾಗ್ ಅಲ್ಲಿ ಯೇಳ್ ಜನ ಹೆಣ್ ಹುಡಗೀರು, ಚಿಕ್ಕಪ್ಪದೇ ಅಧಿಕಾರ. ತಂದೆ-ತಾಯಿ ಸತ್‌ಹೋಗ್ಬಿಟ್ಟರೆ ಇವನ್ದೇ ಅಧಿಕಾರ, ಮಾಡಿದ್ದೇ ಕರೆ ಅಲ್ಲವೋ?

"ಯೇನ ಬಂದ್ರಿ? ಯೇನತಾನ?" "ಮತ್ಯೇನೆಲ್ಲ ವಂದ್ ಹೆಣ್ ತನ್ ಮಗನಿಗೇ ಬೇಕು' ಹೇಳ್ತನೆ.

ಇವ, "ವಂದ್ ಹುಡ್ಗಿ ಕೊಡುಕಡ್ಡಿಲ್ಲ, ವಂದ್ ಲಕ್ಸ ರೂಪೈ ಕೊಡ್ಬೇಕು." ಅವನೂ ವಂದ ಅರಸುವೇಯ. ಅವಂಗೆ ಇವಗೆ ವಡನಾಟ ಸುರುವಾಯ್ತು ಹೇಳಾಯ್ತು. ಮತ್ ಹೋಗ್‌ಲಿಲ್ಲಾ ಅಟದೂರೆ. ಕಡಿಗೆ ಹೆಣ್ ತಂದ. ಲಕ್ಷ ರೂಪೈ ಕೊಟ್‌ತಂದ.

ಸಮುದ್ರದ ತಟ್ಗೇಯ ಚಪ್ರಹಾಕಿ, ಅಂತೂ ಮಂಚಗಿಂಚ್ ಇರ್ಸಿ ಹೆಣ್ ತಕಂಡ್ ಹೋಗಿ ಕುಳ್ಸಿ ಯೆಯ್ಡ್ ಬದಿಗೂ ನಂದಾದೀಪ ಹಚ್ಚಿ ರಾತ್ರಿ ಮೂರಸಂಜೀಲ ಇಟ್‌ಬಂದರು.

ಬಂದ ನಂತ್ರ ಬೆಳಗ್ಗೆಗೆ ಹೋಗ ನೋಡುವಾಗ ಯೆಂತದೂ ಇಲ್ಲ. ನುಂಕಂಡ ನಡ್ದೆಬಿಟ್ತು. ಅದು ಮದ್ರಾತ್ರಿ ವೇಳಿದಲ್ ಬರಬೇಕಾದ್ರೆ ಸಮುದ್ರದ ನೀರ ಬಕ್ಕಂಡ್ ಬತ್ತದೆ.

ನುಂಕಂಡ್ತ್ತು ನಡ್ದೆಬಿಟ್ತು. ಅಲ್ಲೈನೂ ಇಲ್ಲ. ಬೆಳ್ಗಾಮುಂಚೆ ಚಪ್ರ ವಂದದೆ, ದೇಪ ಇಟ್‌ದ್ರು, ದೀಪ ಕತ್ತ ಅದೆ. ಬೆಳ್ಗಾಗೆ ಪೋಲೀಸ್ರ ಸೂರ್ಯ ಉದ್ಯಾದ ಮೇಲೆ ಕಳ್ಸ್‌ದ, ನೋಡ್ಕಂಡ್ ಬಂದ್ ಹೇಳ್ರು.

ಯೆಂಟ್ಟತ್ ಕೋವಿ, ಕತ್ತಿ, ಈಟಿ, ಬಾಚಿ... ಅವ್ರೆ ಆಯುದ ತಕಂಡ್ ನಡ್ದೆಬಿಟ್ರು ಆ ಹೆಣ್ಣಿಲ್ಲ. ದೀಪ ಕತ್ತ ಅದೆ. ಚಪ್ರವೊಂದೆ ಅದೆ.

ಬಂದ್ ತಾಪ್ಡತೋಪ್ಡ ಅರಸೂಗ್ ತೆಳಿಸಿದ್ರು. ಅಟ್ಟೊ ಅದೇ, ಹೆಣ್ಣಿಲ್ಲ. ಯೇನ್ ಮಾಡ್ದೆ? ಕೇಳ್ವೋರೆಲ್ಲ ಅಂದ್ ಸೂಮ್ಗ ಉಳ್ಕಬಿಟ್ರು.

ನಂತ್ರ ಮತ್ತೆ. ಯೆಯ್ದನೆ ವರ್ಸ ಬಂತು. ಸಪ್ನದಲ್ಲಿ ಹೇಳ್ತು, 'ಹಿಂದ್ ಯಾವ ರೀತಿ ಮಾಡಿದ್ದೆ ಅದ್ರಂತೆ ಮತ್ ಮದ್ಯಾಗಬೇಕು. ಅದೇ ರೀತಿಂದ ಮತ್ತೆ. ಹೆಣ್ ತಕಬಂದಿ ಅಲ್ ತಕಂಡ್ ಹೋಗ ಕುಳ್ಸಬೇಕು. ಜಾಗ್ರತೀಲ್ ಆಗಬೇಕು. ಯಲ್ಲಾದ್ರೆ ನಿನ ರಾಜ್ಯಕ್ಕೆ ಕೇಡ ಬರೊದು' ಅಂದ.

'ಯೆಲ್ಲಾ ಕಾಲ್ವೆ ನಾನು ಇಟ್ಟೆಲ್ಲಾ ಮಾಡ್ಕಂಡ್ ಬಂದ್ರೂ ಸುಕವೇ ಇಲ್ಲಾಯ್ತುಲಾ? ಈಗ ಮತೆ ಯಾರ ಕೊಡತ್ರು?' ಮಾರ್ನೆ ದಿವಸ ಹೋಗಿ ಅಲ್ಲೇ ಹೋದ ಯೇಳ ಜನ ಹೆಣ್ ಹುಡ್ಗಿರು ಕೇಳ್ ಬಂದಿದ್ದ. ಯೇಳೂ ಜನ ಲಗ್ನ ಮಾಡಬೇಕು ಹೇಳಿದ್ದ. ಆ ಅವನು ಮತ್ತೆ ಅಲ್ಗೇ ಹೋದ್ನ, "ತಾನ್ ಮತೆ ಬಂದ್ ಬಿಟ್ಟೆ ಗಂಡ್ ಹುಡ್ಗರು ಬಾಳ ಜನ ಅವರೆ ಹೆಣ್ಣೇ ಕಮ್ಮಿ ನಮ್ಮ ರಾಜ್ಯದಲ್ಲಿ" ಅಂದ.

"ಅಡ್ಡಿಲ್ಲಪ್ಪಾ, ಮತ್ ಯೆಯ್ದು ಲಕ್ಸ್ ರೂಪೈ ಕೊಡಬೇಕು". "ಅಡ್ಡಿಲ್ಲ. ಕೊಡ್ತೆ." ಅವರ್ಗೆ ಇವರ್ಗೆ ಒಪ್ಪಂದಾಗಿ ಮಾತಾಡ್ರು. ಆರ್ ಜನ ಉಳ್ದರೆ ಪ್ರಾಯಕ್ ಬಂದರೆ.

ಮತ್ತೊಂದ್ ಹೆಣ್ ಕೊಟ್ಟ. ಇದೇ ನಮನ್ಯಾಯ್ತು. ಆರು ಕಿರಿದೊಂದ್ ಉಳಿತದೆ. ಹುಡ್ಗಿ ತಕಂಡ ಹೋದೋರು, "ಚಲೋದಾಗವರೋ? ಹುಡ್ಗಿರೆಲ್ಲ?" ಕೇಳ್ತರು "ಚಲೋ ಸಂಪಾಗವ್ರೆ" ಕಣ್ ಕಟ್ ಮಾಡ್ತ.

ಮತ್ ಹೋದ ಮಂದಿಗ್ಯೆಲ್ಲಾ ಚಪ್ರ ಹಾಕಿ, ಕುರ್ಚಿ, ಮೇಜು, ಬೆಂಡು ಯೆಲ್ಲಾ ತಕಂಡ್ ಹೋಗ್ ಹೊಂಗ್ನಮಾಲಿ ಕೈಲ್ ತೊಟ್ ಕುಳ್ಸಿ, 'ನಿನ ಗಂಡ ಬತ್ತ' ಅಂದ್ ಹೇಳ್ಕಿ 'ಇಟ್ ಬನಿ' ಅಂದ ಬಂದ್ರು.

ಆವಾಗೆ ಅಲ್ಲಿ ಪರಮಾತ್ಮನ ಜಾನ ಮಾಡ್ತದೆ ಕಿರೀದು. 'ತನ್ನ ತಂದಿಗೆ ಯೇಳ ಜನ ಹೆಣ್ ಮಕ್ಳು. ನಾವ್ ಹುಟ್ಟಿ ತಾಯಿ-ತಂದೆ ತೀರ ಹೋಗಿರು. ರಾಮ ರಾಮ... ಶಿವ ಶಂಕರ ಶಂಬೋ... ತನ್ ಗತಿಯೇನ್. ಆರ್ ಜನ ಅಕ್ಕದಿರ ತಂದಿ, ವಬ್ರೂ ಕಾಂಬೋದೆಲ್ಲ. ಯೇನಾಯ್ತು? ಯೇನ್ ಹೋಯ್ತು ವಂದೂ ತೆಳೂದಿಲ್ಲ. ನೀನೇ ಕಾಪಾಡ್ಬೇಕು' ಅಂದಿ ಗೋಳ್ ಗುಡಿತದೆ, ತೀಡ್ತದೆ.

ಆವಾಗೆ ಆಕಾಶವಾಹಿನಿ ಆಯ್ತು; ಪರಮಾತ್ಮ ದೃಷ್ಟಿ ಇಟ್ಟ. ವಂದ ಸನ್ಯಾಸಿ ರೂಪದಲ್ ಬಂದ ಕೂತ ಪರಮಾತ್ಮ, ಭಗವಂತ, "ಯೇನಾಯ್ತು ತಂಗಿ? ನಿನ್ಗೆ ಯಾವುರಾಯ್ತು? ಯಾವ ದೇಸಾಯ್ತು? ಇಲ್ ಬಂದ್ ಕುಳ್ಳೊ ಕಾರಣಯೇನು?" ಕೇಳ್ದ. "ತೀಡಬೇಡ" ಅಂದ. "ನಿನ್ಗೆ ಯೇನ್ ಕಟ್ಟ ಬಂದ್ರೂ ಪಾರ್ ಮಾಡಕೊಡ್ತೆ. ನೀನು ಸಾಂತ ರೀತಿಂದ ಉಳಿ" ಚಂದಾಗ್ ಹೇಳ್ದ. ಹೋಗ್ ಸಪೋಟ್ ಕಾಲ್ಗೆ ಬಿದ್ದಬಿಡ್ತು. "ಯೆದ್ದೇಳು, ಯೆದ್ದೇಳು ಹೆದ್ರಬೇಡ" ಅಂದ.

ಆವಾಗ್ ಯೆದ್ ಕುಂತಕೊಂಡ್ತು. ದುಕ್ಕ ಅಂತ್ರಸ್‌ಕಂಡಿ ಹೇಳ್ತು. ಈ ರಾಜದಲ್ಲಿ ತಾನು ಬೇರೆ ರಾಜದ್ದು, ಈ ರಾಜದ ಅರಸ ಹೋಗಿ ತನ್ನ ಚಿಕ್ಕಪ್ಗೆ ಹೇಳಿ ಮತ್ತು ನಿ ವಂದ್ ಯೇಳ ಲಕ್ಸ ರೂಪಾಯಿ ತಕಂಡಿ ವನಂದ್ ಲಕ್ಸದಂತೆ ಯೆರ್ಸ್ ಕಂಡ್ ಬಂದಿದ್ದ. ಆಟ್ ತಕಂಡಿ ಅವ ಅಕ್ಕದಿರ ತೆಕ ಬಂದಿದ್ದ. ವಬ್ರೂ ಕಾಂಬೊದೆಲ್ಲ. ತನ್ಗೆ ಇಂತಾ ಪರಿಸ್ಥಿತಿ ಬಂತು. ಈ ಕಟ್ಟ ಪಾರಗಬೇಕು. "ಯೇ ತಂದೇ! ನಿನ್ನಿಂದ ಕಟ್ಟ ಪಾರಗಬೇಕು ಹೊರ್ತು ಬೇರೆಯಲ್ಲ" ಅಂತು ಮತ್ ಸಪೋಟ್ ಪಾದ್ಕ ಬಿತ್ತು.

ಆವಾಗೆ, "ಹೆದ್ರಬೇಡ. ನೀನು ತನ್ನ ಹೆಳ್ಕೆಯಂತೆ ಕೇಳಬೇಕು. ದುಕ್ಕ ಮಾಡುಕಿಲ್ಲ. ನಿನ್ಗೆ ಧೈರ್ಯಾಗ್ಲಿ" ಹೇಳಿ. ಶಬ್ದದಲ್ ಹೇಳಿ ದೈರಿ ಮಾಡ್ದ ಅದ್ಕೆ. ಮಂತ್ರಿಸಿ ಮೂರ ಹಳ್ ಕೊಟ್ಟ ನೋಡಿ ಅದ್ರಕಲ್. ಹಳ್ಳು ಕೈಮುಟ್ಟೆಲಿಟ್ಟ. "ನೋಡು, ನೀನು ಹಿಂಗೆ ಕುಂತಲ್ಲಿ ನಿನ್ ಮೊಕಸಾರೆ ಸಮುದ್ರ ನೀರ್ ಬಕ್ಕಂಡ್ ಬತ್ತದೆ. ನೀ ಹೆದ್ರೂಕಾಗ. ಗೋರ್ ಕಪ್ಪಾಗೂದು, ಆದಕೂಡ್ಲೆ ನೀ ಹೆದ್ರೂಕಾಗ. ಈಗ್ ಅದು ನೀರ್ನಲ್ಲದೆ. ನೀರ್ ತಪ್ಪಿ ದೆಡ ಹತ್‌ದಕೂಡ್ಲೆ ಬಿಂಬಿ ಆಕಾರ್ದಲ್ ಬರೂದು. ಬೋರ್ಗುಡಿತದೆ. ಹೆದ್ರೂಕಾಗ. ದೆಡ ಹತ್ತ್‌ತು ಅಂದ ಕೂಡ್ಲೆ ನೀನು ಮೂರ್ ಹಳ್ಳ ಮಂತ್ರಿಸಿ ಹೊಡ್ದ ಬಿಡ್ಬೇಕು. ತನ್ ಕಟ್ ಪಾರಾಗ್ಲಂದ್ ವಂದ್ ಹೊಡೆ. ಬಿಂಬಿ ಆಕಾರದ್ದಲ್ ಬಂದಾಗ ಬೋರ್ಗುಡತದೆ. ದಿಡಹತ್ತ್‌ತೂ ಅಂದ್ ಕೂಡ್ಲೆ ವಂದ್ ಹಳ್ಳ ಹೊಡೆ. ವೋಡ್ ಕಳ್ಚಿ ಸಾಪ್ ನಿಜರೂಪಾಗಬೇಕು" ಅಂತ, "ಇದ್ದಿ ಬುದ್ಧಿ ಕಲ್ತಂತ ಮನ್ಸಿನಾಗೆ ಬರಬೇಕು' ಅಂತ ಹೊಡೆ ಯೆಯ್ದನೆಹಳ್ಳ. 'ಕಪ್ ವರ್ಣಾಗಿತ್ತು ಕೆಂಪ ವರ್ಣಾಗಬೇಕು" ಅಂತ ಮೂರನೇದ ಹೊಡೆ.

"ಮೂರೂ ಹಳ್ ಹೊಡಿತಲ್ವೊ? ಸಾಪ ಸಮುದ್ರದಲ್ಲಿ ಸಂತೋಸ್ನಲ್ಲಿ ಬರಬೇಕಾಯ್ತು. ಹಾಲಹರ್ದಂತೆ ನೀರ ಹರೀತದೆ" ಹೇಳಿ ಪರಮಾತ್ಮ ಅಲ್ಲೆಲ್ಲ.

ಪರಮಾತ್ಮ ಹೇಳಿದ ಹಾಗೆ ಮೂರು ಕಲ್ ಹಳ್ಳ ಮಂತ್ರಿಸಿ ಹೊಡಿತು. ಮುಂದೆ ಬಂದಿ ಮಂಚದ ಮೇನ್ ಕುಂತ. "ಮಾಲಿ ಹಾಕು ಹೇಳನೆ ಪರಮಾತ್ಮ" ಮಾಲಿ ಹಾಕ್ಬಿಟ್ತು. ಅವನೂ ತೆಗ್ದೆ ಹಾಕ್ದ. ಅವ್ರು ಕುಂತ್ಕಂಡ ಚಂದದಲ್ ಉಳದ್ರು. ಕತ್ತು ದೇಪತತಾ ಉಳೀತು. ಬೆಳಗಾದ ಕೂಡ್ಲೆ ಅರಸು ಸಿಪಾಯಿಯರ ಕರದು, 'ಹೋಗ್ ಬರ್ರಪ್ಪಾ, ಯೇನಾಯ್ತು ನೋಡ್ಕ ಬನಿ' ಹೇಳ ಕಳ್ಗಸ್ದ. ಹೋದ್ರು. ತಾಪಡತೋಪ್ ಹೋಗಿ ನೋಡದ್ರು. ಜ್ಯೋತಿ ಉರಿತದೆ. ಸಕಲ ಸಂಪನ್ನ ಮೇಲ್ ಕುಂತರೆ ಅವರು... ಅವ ಸೂರಿ ಪ್ರಕಾಶವ್ನೆ.

ಬಂದ ಅರಸೂಗೆ ತಾಪ್ಡತೋಪ್ ಹೇಳದ್ರು. ಅವನ ಮನಿಂದ ಅದ ಕುಂತಲ್ಲಿವರಿಗೆ ಮೆಟ ಮಟ್ಗೆ ತೋರಣ ಅಲ್ಲಿದ್ದಿಲ್ಲೂ ಹಾಕ್ಸ್‌ದ. ಮಂದಿ ಮಾರ್ಬಲ ಆವಾಗೆ ರಾಜದವರೆಲ್ಲ ಕೂಡ್ಸಕಂಡಿ, ಸಂಗ್ರಯ ಸಮ ಮಾಡ್ಕಂಡ ಮಂಚಾಲ ತಕ್ಕ ಹೋಗಿ ಹತ್ತಕೊಂಡಿ, ಉಚ್ಚಯದ ಮೇನೆ ಬಂದು ಇವ್ರ ಮನೆಗೆ ತಂದಿ, ಆರತಿ ಗೀರತಿ ಯೆಲ್ಲಾ ಮಾಡಿ ವಳ್ಗ್ ತಕೊಂಡ. ವಳ್ಗ್ ತಕೊಂಡಿ ಆ ರಾಜ್ಯ ಅವಗೆ ಅದಕೆ ಕೊಟ್ ಮನೀಲ ಇಟ್ಕಂಡ. ಸುಕಸಂತೋಸದಲ್ ಉಳಕಂಡ್ರು. ಪಾಪದ ಕೆಲಸ ಮಾಡ್ದ ಹಿಂಡ್ತಿ ಹೆರ್ಗೆ ಹಾಕಬಿಟ್ಟ. ಅದಕ್ಕೂ ಸಂತೋಸದಲ್ ಇರ್ಸದ.

- **ಕೆಲವು ಪದಗಳ ವಿವರಣೆ**

ಧೈರಿ = ಧೈರ್ಯ (ಇಲ್ಲಿ ಧೈರ್ಯಕೊಟ್ಟ)

ಕೈಮುಟ್ಟಿ = ಕೈಮುಷ್ಟಿ-ಹಿಡಿ

ಬೋರ್ಗುಡಿತದೆ = ಬೋರ್ ಎಂಬ ಶಬ್ದ ಮಾಡುತ್ತದೆ.

ತಾಪಡತೋಪಡ = ಕೂಡಲೇ

ಚಪ್ರ = ಚಪ್ಪರ

ಬಕ್ಕಂದ್ = ಆಚೆ ಈಚೆ ಮಾಡಿಕೊಂಡು

ಕರ್ತ = ಉರಿಯುತ್ತ

ಕಣ್ಕಟ್ = ಮೋಸ, ಸುಳ್ಳು,

ಆಕಾಶವಾಹಿನಿ = ಆಕಾಶವಾಣಿ (ಮಾತು ಏನೆಂದು ತಿಳಿಸಲಿಲ್ಲ; ಆಕಾಶದಿಂದ ಬಂದು ಸಹಾಯ ಮಾಡುವ ಆಶ್ವಾಸನೆ ಇರಬಹುದು.)

■ ಹೇಳಿದವರು : **ದಿ. ಮಾಸ್ತಿ ನಾಗಪ್ಪ ನಾಯ್ಕ,** ಹೆಗಡೆ ಊರು, ದಿನಾಂಕ :- ೧೩-೨-೭೩

◆

# ಕತೆಗಾಗಿ ಜತೆ

ರಾಜರ ಮನಿಲಿ ವಂದ್ ಮಡವಾಳವ ಬಟ್ಟೆ ಶೆಳೀಲಿಕ್ಕಿದಿದ್ದ. ಅವನಿಗೆ ನೆಂಟ್ರ ಮನಿಗೆ ವಂದಿವ್ಸ ಹೋಗಬೇಕು ಹೇಳಿರೆ ಸೌಡಾಗುದಿಲ್ಲ. ನಿತ್ಯ ಬಟ್ಟೆ ಶೆಳುದ್ ವಂದೇಯ. ವಂದಾನೊಂದ ದಿವಸ ಇವತ್ ಹೋಗಬೇಕು, ನಾಳಿಗೆ ಹೋಗಬೇಕು ಹೇಳಿ ಯೆಷ್ಟೋ ದಿವಸ ಕಳದ ಹೋಯ್ತು. ಆ ದಿವ್ಸ ರಾಜರ ಮನಿಹತ್ರ ಹೇಳ್ದ. 'ನಾ ಇವತ್ತ್ ನೆಂಟ್ರ ಮನಿಗ್ ಹೋಗಬೇಕು' ಹೇಳಿ ನೆಡ್ದ ಬಿಟ್ಟ. ಅವ ಮೊಳೆಯಾಗಿ ಯೆಲ್ಲಾ ವಯ್ ಸ್ತ್ರ ಅದ್ದಿ, ವಂದ್ ಅಜ್ಜಿ ಮುದ್ಕಿ ಮನಿಲ್ ಹೋಗಿ ಕೂತ ಶನೀಪದಲ್ ವಂದ್ ಊರಲ್ಲಿ.

ಆ ಅಜ್ಜಿ ಮುದ್ಕಿ ಹತ್ರ ಹೇಳ್ತ ಯೇನಂದಿ? "ನಾನು ಇಲ್ಲೆ ಬಗಿಲ್ ಮನಿಕಳ್ತೆನೆ. ಸಲ್ಪ ಜಾಗ ಕೊಡ್ಬೇಕು" ಅಂದ. ಅಜ್ಜಿ ಮುದ್ಕಿ ಯೇನ್ ಹೇಳ್ತಾಳೆ? ಹೇಳದ್ರೆ, "ನಿನ್ಗೆ ಜಾಗಕೊಡ್ಲಿಕ್ಕೆ ಎಡ್ಡಿಲ್ಲ. ಹೊದಿಲಿಕ್ಕೆ ಮಾಡ್ಲಿಕ್ಕೆ ಯೆಲ್ಲಾ ಕೊಡ್ತೇನೆ. ನಾನು ವಂದ್ ರಾಜ್ರ ಮನಿಲಿ ಕೆಲ್ಸಕೆ ಹೋಗ್ತೆ ಇದ್ದೆ. ಅಲ್ಲಿ ಆ ದಿವಸ ಯೇನಾಗಿದೆ? ನಂದು, ರಾಜ್ರ ಮನಿ ಹುಡುಗಿಗೆ ಆಳು ಅಲ್ಲಿದ್ ನಾನು ಅದ್ ಕೆ ಕತೆ ದಿನಾಲೂ ಹೇಳ್ಬೇಕು. ಇವತ್ ನಂದ ಬಾರಿ ಬಂದದೆ. ಅದ್ಕೆ ಕತೆ ಹೇಳು ದಿವಸ ಇವತ್ತೆ ಆಗದೆ. ನನ್ಗೆ ಕೆಲ್ಸ ಮಾಡಿ ಸಾಕಾಗದೆ ಕತೆನ್ನ ನೀನ್ ಹೇಳಬೇಕು."

ಆವಾಗ ಇವ ಹೇಳ್ತಾನೆ. ಯೇನಂದ್ರೆ? "ಹಾಗಾದ್ರಜ್ಜಿ, ನೀನು ಆ ಹುಡ್ಗೀನೇ ಇಲ್ ಕರಕಂಬಾ. ನಮ್ಮನಿಲ್ ವಬ್ಬ ಮೊಮ್ಮಗ ಬಂದನೆ. ಚಲೋಕತೆ ಹೇಳ್ತಾನೆ; ಹೇಳಿ ಕರಕಂಡ ಬಾ ನಿನ್ ಮನಿಗೆ" ಅಂದ.

ಆವಾಗ ಅಜ್ಜಿ ಮುದ್ಕಿ ಅಲ್ ಹೋಗಿ ಆ ಹುಡ್ಗಿ ಹತ್ರೆ, "ಮಗಾ ಇವತ್ತೆ ನನ್ ಮೊಮ್ಮಗ ಬಂದನೆ ನನ್ನ ಮನಿಗೆ ನನಕಿಂತಾ ಚಲೋ ಕತೆ ಹೇಳ್ತಾನೆ. ಮತ್ತು ನಂಮನಿಗೆ ಹೋಗ್ವ ಬಾ" ಹೇಳಿ ಕರಕಂಡ ಬಂತು ಅಜ್ಜಿ ತನ್ ಮನಿಗೆ. ಆವಾಗೇ ಇವ್ರ ಊಟ ಬೀಟ ಮಾಡಿ, ಸಲ್ಪ ಮನಗದ್ರು. ಆವಾಗೇನಾಯ್ತು ಹೇಳಿದ್ರೆ ಅಜ್ಜಿಗೆ ಕೆಲ್ಸ ಮಾಡಿ ಸಾಕಾಗ್ ಹೋಗಿತ್ತು. ಅಜ್ಜಿಗೆ ಚಲೋ ನಿದ್ದೇನೆ ಬಿತ್ತು. ಆವಾಗ ಇವ ಕತೆ ಹೇಳ್ತಾನೆ ಹುಡ್ಗಿ ಹತ್ರ.

ಹುಡ್ಗಿ ಹತ್ರೆ ಕತೆ, "ವಂದ್ ಊರಲ್ಲಿ ವಂದ ರಾಜನ ಮನ್ಯಲ್ಲಿ ವಂದ ಮಡವಾಳರವ ಇದ್ದ. ಅವನಿಗೆ ನೆಂಟ್ರಮನಿಗೆ ವಂದ್ ದಿವಸ ಹೋಗಬೇಕು ಹೇಳದ್ರೆ ವಂದ್ ದಿವಸನೂ ಬಟ್ಟೆ ಶೆಳದಿ ಪುರಸತಿ ಹೇಳೊದಿಲ್ಲ. ಆವಾಗೆ ವಂದಲ್ಲ ವಂದ್ ದಿವಸ ಆ ಮಡವಾಳರವನಿಗೆ ಸಲ್ಪ ಸಿಟ್ ಬಂದ್ ಹೋಯ್ತು. ನೆಂಟ್ರಮನಿಗೆ ಹೋಗಲೇಬೇಕು ಹೇಳ್ ಕಾಣಿಸ್ತು." ಆವಾಗೆ ಇವಯೇನ್ ಹೇಳ್ತ, ಹುಡಗಿ ಹತ್ರ "ನೀ ಅಷ್ಟದೂರ ಮನಿಕಂಡಿದ್ರೆ ಕೇಳವಾಂಗಿಲ್ಲ. ಚಲೋ ಕತೆ ಇದೆ." ಮುಂದೆ ಬಂತು. "ಸಲ್ಪ ನನ್ನ ಬುಡಕೆ ಬಂದಿ ಮನಿಕೊ" ಹೇಳಿ ಹೇಳ್ತ. ಅದು ಹತ್ರ ಬಂತು. ವಂದಾನೊಂದು ದಿವಸ ಮಡವಾಳರವ ನೆಂಟ್ರ ಮನಿಗೆ ಹೋಗಕಾಗದೆಯ ವಂದ್ ಅಜ್ಜಿ ಮುದ್ಕಿ ಮನಿಲಿ ಉಳಕಂಡ. ಆಗೆ ಆ ಹುಡಗಿ ಹತ್ರೆ ಕತೆ ಹೇಳತೆ ಹೇಳತೆ ಇರಬೇಕಾದ್ರೆ ಹುಡ್ಗಿ ಮೇಲೆ ಕೆಲಸ ಸಲ್ಪ ಪೂರ್ರೈಸಿದ. ಬೆಳಿಗ್ಗೆ ಎದ್ದಿ ಮಡವಾರವ ಮನಿಗೆ ಹೋದ. ಆ ಹುಡಗೀನು ಮನಿಗೆ ಹೋಯ್ತು. ಹೋಗಿ ಅಪ್ಪನ ಹತ್ರ ಈ ಹುಡುಗಿ ಹೇಳತಾಳೆ "ದಿವಸಾ ವಬ್ಬಬ್ಬ ಕತೆ ಹೇಳುವುದಾಗಿತ್ತು. ಇನ್ನು ಕತೆ ನನಗೆ ಬೇಡ."

■ ಹೇಳಿದವರು : **ಶ್ರೀ ದೇವಪ್ಪ ಅಣ್ಣಪ್ಪ, ನಾಯ್ಕ, ಹೊದ್ಕೆ**, ದಿನಾಂಕ :-೨೫-೧೨-೭೧

◆

# ಗಳುವಿನಲ್ಲಿ ಹೆಣ್ಣು

ವಂದ್ ಬಟ್ಟ, ಬಟ್ನ ಹುಡುಗ. ತಾಯಿ ಸತ್ ಹೋಯ್ತು. ತಂದೆ ಇಟ್ಕಂಡ. ಮೀಸಿ ಮಾಡಿ ದೊಡ್ಡ ಮಾಡ್ದ. ತಂದಿನೂ ತೀರಕಂಡ. ಹುಡ್ಗ ನಮ್ಮೂರ ರಾಜನ ಮನೆಗೆ ಹೋಕಂಡಿ ಉಳ್ದ. ರಾಜನ ಮನೆಲಿ ಉಂಡ್ಕಂಡ್ ಉಳ್ದ. ರಾಜನಿಗೆ ವಂದ್ ಹುಡ್ಗಿದ್ದಿತು. ಅವನಿಗೆ ಇವಳಿಗೆ ಗನಾ ದೋಸ್ತ್ಯಾಯ್ತು. ಆ ಹುಡ್ಗ ಅಂದ್ರೆ ಹೇಂಗಿದ್ದಿದ್ದ? ಸೂರ್ಯ ಚಂದರಟ್ ಚಂದ ಇದ್ದಿದ್ದ. ಆ ಕೂಸ್ಯೇನಂತು? "ಅಪ್ಪಾ, ಬಟ್ನ ಹುಡ್ಗನಿಗೇಯ ನನ್ ಮದಿ ಮಾಡ್ ಕೊಟ್ ಬಿಡು" ಅಂತು.

ರಾಜ, "ನಿನ್ಗೆ ಯೆಂತಕೆ? ಇಲ್ಲೇ ಯಾವಾಗಿಂದ್ ಅವ್ನೆ. ಅವ್ನಗೆ ಯಾರಾರೂ ಇಲ್ಲ. ನಿನ್ನ ಹೊಟ್ಟಿಗ್ ಯೆಲ್ಲುಳೂದು? ಈಗ ಅವ ನಮ್ಮನೇಲಿ ದೊಡ್ಡಾದ. ಅವ್ನಿಗೆ ಮದ್ವೆ ಮಾಡಕೊಡು ಅಂತೆ ನೀನು? ಅವ್ನಿಗೆ ಯೆಂತಾ ಅದೆ?" 'ಹೀಂಗೆಯ ತನ್ಗೆ ಯಂತದೂ ಆಗ್ಲಿ. ತನ್ ಹಣೇಲಿ ಯೇನ್ ಸಿಕ್ಕೊದು ತಾನ್ ಅದೇ ತಿಂತೆ. ತೆಳ್ಯಾದ್ರೂ ಕುಡೀತೆ'. ಅವ್ನಿಗೇ ಆಗ ನಗ್ನ ಮಾಡಕೊಟ್ಟ ರಾಜ. ನಗ್ನ ಮಾಡಕೊಡೊಕೇಯ ವಂದ್ ಯೆಂಟ್ ದಿನಾ ಉಳದ್ರು. ಯೆಂಟ್ ದಿನ್ನ ತಕ ನೋಡದ್ರು. "ತಂಗೀ, ನಿಮ್ಮನೆಗೆ ಹೋಗು. ಮದ್ವೆ ಮಾಡಕೊಡು ಅಂತ ಹೇಳಿದ್ಯಲ್ಲಾ! ಈಗ ನಿನ್ನ ಗಂಡನಿಗೆ ಕರ್ಕಂಡ್ ಹೋಗು" ಹೇಳದ್ರು.

ತಾಯಿ ಹುಗ್ಸಿ ಗಂಡನಿಗೆ ತೋಡೆ ದುಡ್ ಕೊಟ್ತು. ಹೊಟ್ಟೆಗಿಲ್ಲ ಅಂದಿ. ಹದ್ನೆಯ್ದ್ ದಿನಕಾಗ್ವಷ್ಟು ಐವತ್ ಕೊಟ್ತೊ, ನೂರ ಕೊಟ್ತು, ಯಾರಿಗೆ ತಿಳೀತದೆ? ದುಡ್ ತಕಂಡ್ ಹೋದ್ರು.

ವಂದೆ ಮನೆ ಅದೆ? ಮನೆ ಇಲ್ಲ. ವಂದ್ ಅಜಿಮುದ್ಕಿ ಮನೆಗೆ ಹೋದ್ರು. ಬೇಡ್ಕಂಡ್ ತಿಂಬ್ವದು. ನನ್ ಹಾಗೇ ಬೇಡ್ಕಂಡ್ ತಿಂಬ್ವದು, "ಅಜ್ಜಿ ನನ್ಗೆ ವಂದ್ ತುತ್ ಅನ್ನ ಬೇಸ ಹಾಕು." "ಯೇ ಮಗ್ನೇ ಯೆಂತಾ ಅದೆ ನನಗೆ? ರಾಜ್ರಮನೆ ಕಸ ತೆಗದಿ ವಂದ್ ನಾಡ ಶಿದ್ದೆ ಕಗ್ಗನಕ್ಕಿ ತರಬೇಕು. ತಾನು ತಂದಿ ಅನ್ನ ಮಾಡ್ಕಂಡ ಉಣಬೇಕು."

"ನೀನು ಯೇನೂ ತರೂದ ಬೇಡ. ಬೇಯ್ಸ್ ವಂದ್ ಹಾಕು" ಅಂತು. "ಆಗುದು" ಅಂತು. ಆಗುದು ಅಂದ ಅವ್ರು ಅಲ್ಲೇ ಉಳ್ ದ್ರು. ಹೆಂಡ್ತಿ ಅಟ್ ಚೆಂದ ಅದೆ. ಆಗೆ ಆ ಮುದ್ಕಿಕೆ ಚೌರ ಮಾಡುಕೆ ಬತ್ತಿದ್ದ ವಂದ್ ಕೆಲ್ಸಿಯವ.

ಆ ಕೂಶ್ ಕಂಡಿ ಇವ ಮಳ್ಳಾಗ ಹೋದ ಆ ಕೆಲ್ಸಿಯವ. ತಲೆ ಕೆತ್ತುದಿತ್ತು. ಕೈ ತಲೆ ಮೇನೆ ಅದೆ. ಅತ್ಲಾಗ ನೋಡ್ತೇ ಉಳೂದು. ವಂದೇ ಸರ್ತಿ ನೋಡ್ತ. ಕಡೆಗೆ ಮತ್ ತೆಗಿತ. ಮತ್ತೆ ನೋಡ್ತೇ ಕೂತ. ಮತ್ತ ವಂದ್ ಸರ್ತಿ ತೆಗ್ದ. ಯೆಯ್ದ್ ತಾಸಾಯ್ತು. ವಳ್ಗೆ ಹೋಯ್ತು. ಹೋಗುಕೇಯ (ಅಜ್ಜಿ ಕೂದ್ಲ) ತೆಗ್ದ. ತೆಕ್ಕಂಡಿ ಅಲ್ಲೇ ಕೂತ್ಕಂಡ. ಅದ್ ಹೆರಗೇ ಬರೋದಿಲ್ಲ. ಕಂಡಾಪಟ್ಟೆ ಆಚೀಗ್ ನೋಡೋದಿಲ್ಲ.

ಬೇರೆ ರಾಜ್ನ ಮನೆಗೆ ಹೋದ. "ರಾಜ್ರೆ ವಂದು ಕೂಸದೆ. ಆ ಕೂಸ್ ನಿಮ್ಗೆ, ನಿಮ್ಮ ಹೆಣ್ತಿ ನನ್ಗೆ. ಆ ಬಟ್ನ ಹೆಣ್ತಿ ಅಟ್ ಚೆಂದದೆ. ಆದ್ರ ನಿಮ್ಗ್ ತಂದ ಕೊಡ್ತೆ" ಅಂದ. "ಯೇನ್ ಚೆಂದದೆ ನೋಡಿ ನೀವು ಬಟ್ನ ಮನೆಗೆ ಹೋಗಹೇಳು" ಅಂದ. ಬಟ್ಟನಿದ್ದಲ್ ಹೋಗಿ ಕೆಲ್ಸಿ, "ರಾಜರು ಕರ್ಕಂಡ ಬಾ ಅಂದ ಹೇಳರೆ ನಿನ್ಗೆ" ಅಂದ. "ಯೆಂತಕ್ಕೆ?" "ಯೆಂತಕೊಯೇನೋ? ಬಟ್ನಿಗೆ ಕರ್ಕಂಡ್ ಬಾ ಅಂದರೆ ರಾಜ್ರು" ಅಂದ. ಹೆಂಡ್ತಿ ಕೈಲ್ ಹೇಳ್ದ, "ವಳ್ಗೇ ಉಳಿ ನಾ ಬರೋತಕ ವಳ್ಗೆಂದ ದಾಟ್ ಹೆರ್ಗೆ ಬೀಳಬೇಡ" ಅಂದ. "ಹೂಂ" ಅಂತು. "ನೀವು ಯೆಂತದಾರೂ ಹೇಳ್ ದ್ರೂ 'ಆಗ' ಅಂದ್ ಹೇಳಾಕ್ ಬನ್ನಿ. ಮಾಡೂಕ ಸಾದ್ದಿಲ್ಲ ಅಂದ್ ಹೇಳಾಕೆ ಬಂದ್ ಬಿಡಿ ನೀವು" ಅಂದೆ ಹೆಣ್ತಿ ಹೇಳ್ತು. "ಯೆಲ್ಲಿದ್ದೊ ಹೋಗಿ ಬಟ್ರೆ, ವಂದ ರಸಬಾಳೆ ಕೊನಿ ತಂದ್ ಕೊಡಿ" ಅಂದೆ ಹೇಳದ್ರು ಅವ್ರು. "ಹೋಗೋಕಾಗೊದಿಲ್ಲ" ಅಂದು ಬಟ್ರು ಹಾಂಗೇ ಮನೆಗೆ ಹೋದ್ರು.

ಮೂರ ದಿನಾಗ್ಲಿಲ್ಲ, ಮುದ್ಕಿ ಚೌರ ಮಾಡಿ. ಆದ್ರೂ ಮತ್ತೂ ಬಂದ ಆ ಕೆಲ್ಸಿ. ಬಂದ್ಕಂಡ ಅದ್ ಹೆರ್ಗೆ ಬರುಕೆ ನೋಡ್ದ. ಅದ್ ವಳ್ಗೇ ಉಳೀತು. ಅವ ಚೌರ ಮಾಡೂಕೆ ಅತ್ಲಾಗಿತ್ಲಾಗ್ ನೋಡ್ದೇಯ ಚೌರ ಮಾಡೂಕೆ ತಡ ಮಾಡ್ದ. "ಇಟ್ ಸಣ್ಣಕದೆ ತಲೆ ಕೂದ್ಲು ಮತ್ ನಾಕ ದಿನ ಹೋಗ್ಲಿ" ಅಂತು ಮುದ್ಕಿ. ಅಲ್ಲೇ ವಂದ್ ಯೆಯ್ಡ ತಾಸ್ ತಕ ಕೂತ. ಕೂಸು ಹೆರ್ಗೆ ಬೀಳೊದಿಲ್ಲ.

ಮನೇಗ್ ಹೋದ. ರಾಜರ ಮನೆಲ್ ಹೋಗೆ ಹೇಳ್ದ, "ಆ ಬಟ್ರ ಹಿಂಡ್ತಿ ಹೆರ್ಗೆ ಬೀಳಲಿಲ್ಲ. ಆ ಮುದ್ಕಿ ಚೌರ ಮಾಡ್ತೆ ಅಂದ್ರೆ, 'ಮೂರೇ ದಿನಾಯ್ತು ಕೂದ್ಲು ತೆಕ್ಕಂಬೂದಿಲ್ಲ' ಅಂತು" ಅಂದ.

ಬಟ್ಟ ಮನಿದ್ದಲ್, ಬೆಟ್ಟದಲ್, ಅಡವೀಲ್ ವಂದ ಹಾದಿ ಹಿಡ್ಕಂಡ ಹೋದ. ಆಗೆ ವರ್ಲೆ ಹುತ್ತಾಗಿ ವಂದ್ ಮುನಿ ಬೆಳ್ದ ಹೋಗನೆ. ಪರ್ತಿ ಹುತ್ತಾಗೆ ಬೆಳ್ದ ಹೋಗುಕೇ ಯೇನ ಮಾಡ್ದ? ಹೀಗೆ ಹೋಗ್ ಬಟ್ಟ ಅವನ್ ಕಾಲ್ ವತತೆ ಕೂತಬಿಟ್ಟ. ಮುನಿದು, ಅಡ್ವಿಲ್ ಹೋಕ್ಕಂಡಿ ಸುಮಾರ್ ಹೊತ್ತ ತಕ ಆ ಮಣ್ಣೆಲ್ಲಾ ಕರ್ಸ್ ತೆಗದಿ ಮುನಿದು ಕಾಲ್ ವತ್ತತೆ ಕೂತ. ಜಪ ಮಾಡ್ತೇ ಕೂತದ್ದೇ. "ಯೆಲ್ಲಿ ಬಂದಿದ್ಯೊ? ನರ ಮನಶ್ಯಾ?" ಅಂದಿ ಮುನಿ ಹೇಳ್ದ. "ಯೇನಿಲ್ಲ ನನ್ಗೆ ವಂದು ಹೆಣ್ಣ ತಂದುಕೊಡಬೇಕು."

ಆಗೆ, "ನೀ ಹೋಗು... ಯೇಳ ಸಂದ್ರದ ಆಚೆ ಕೀಳ ಸಂದ್ರಕೆ ಹೋಗು. ವಂದ ಬೆತ್ತ ಕೊಡ್ತೆ, ಬೆತ್ತ ಬೀಸುಕೇಯ ಕೀಳ ಸಂದ್ರದಲ್ ಹೋಗ್ತೆ" ಹೇಳ್ದ ಮುನಿ, ಕತ್ತಿ ಕೊಟ್ಟ. ಮುನಿ, "ವಂದು ಗನಾ ಇಷ್ಟ ದೊಡ್ಡಗಳ ಬೆಟ್ಟದ್ದು ಕಡ್ಕಂಬಾ, ನೀನು ಕಡುಕೇಯ ನೆಲ ವಡದಿ ಯೆಯ್ಡು ಜನ ಮಕ್ಳು ಬತ್ರು ನಿನ್ನಿದಲ್ಲಿ, ನೀನು ತಾನಿದ್ದಲ್ ಬೆನ್ನಿಗೆ ಕರ್ಕಂಡ್ ಬಾ." ಬೆಟ್ಟಕ್ಕೋಗಿ ಗಳ ಕಡದ. ಆಗ ಹೋದ.

ಅದ್ರ ಬೆನ್ನೀಗೆ ಹೆಣ್ ಮಕ್ಳು ಯೆಯ್ಡ ಜನ ಬಂದ್ರು. ಬರುಕೇಯ, "ಅಜ್ಜಾ ಬಂದೆ" ಅಂದ. ಹಾಂಗೇಯ, "ಆ ಮಕ್ಕಳಿಗೆ ಹಾಗೇ ತಕಂಡ್ ಹೋಗುಕೇನ್ ಕೊಡ್ವಾಂಗಿಲ ಜನ್ರು. ಅಟ್ ಚಂದ ಅವ್ರೆ. ಗೋಡ್ಡೆ ವಡ್ಡ ಗೋಡ್ಡೆದಾರ ಬಂದ ಮಕ್ಕಳು, ತಾನೂ ಗಳೂನ್ ದಲ್ ಹಾಕ್

ಕೊಡ್ತೆ" ಅಂದ ಅವ್ಕೀಗೆ ಗನಾದಾಗದೆ. ಆಗೆ ಗಳ್ನಲ್ ಹಾಕಕೊಟ್ಟ. ಬೇರೆ ವಂದ ಬಾಟ್ಲಿ ಬುಯ್ಡಲ್ಲಿ ಕಮಂಡಲನೀರ್ ಹಾಕ ಕೊಟ್ಟ, "ನೀನು ಮನೆಗೋಗಿ ಗಳ ಕಡುಕೇಯ ಯೆಯ್ಡು ಜನ ಹೆಣ್ ಮಕ್ಕು ಹೆರ ಬೀಳತ್ರು. ಬೀಳುಕೆಯ ನೀನು ಜನ್ರಿಗೆ ಕಾಣ್ಸೂಕಾಗ ವಳಗೇ ಉಳಿಸ್ ಬೇಕು." ಮಕ್ಕಳು ವಬ್ಬಬ್ರಿಗೆ ಹನ್ನೈಯ್ಡು ವರ್ಷಾಗಿತ್ತು.

ಆಗೆ ವಳದ್ರು. ಮೂರ್ ಜನ ಆಯ್ತು... ಅಂದ ಹೇಳ್ದ ಹಾಂಗಾಯ್ತು. ಅವ್ನ ಹೆಂಡ್ತಿರೇ ಆಯ್ತು, ಆಗೆ ಚಂದದಿಂದ ಉಳದ್ರು.

ಕೆಲ್ಸಿ ದಿನಾಗೂ ಬಂದ ಹೋಗ್ತ. ಕಡೇಗೆ ತಲೆ ಕೂದ್ಲು ಬಗೀಲ್ ನೆರೀತು. ಬಂದ ಅವ ಬೆಳ್ಗಾ ಮುಂಚೆ. ಅವ ಬಂದ ಶಮೆಲಿ ಮಂಡಿ ಬಾಚ್ತೇ ಇದ್ರು ಮೂರು ಜನ. ಅಟ್ ಚೆಂದ ಅವರೆ! ನೋಡ್ದ ಯೆಯ್ಡ ಜನಕೆ. ಬೇಗ ಬೇಗ ವೋಡ ಹೋದ್ರು. ಅಮ್ಮಗೆ ತಲಿ ಚೌರ ಮಾಡ್ದ. ಯೆಯ್ಡ ತಾಸ್ ತಕಂಡ ಚೌರ ಮಾಡ್ದ. ಅತ್ಲಾಗ ನೋಡ್ದ, ಇತ್ಲಾಗ ನೋಡ್ದ. ಅವ್ರು ಬರೋದಿಲ್ಲ.

"ರಾಜರೇ, ಬಟ್ಟರಿಗೆ ಮೂರ ಜನ ಹಿಂಡ್ರು. ತಾನ್ ಇವ್ರ ತಂದ್ ಕೊಡ್ತೆ ಬಗೆಲ್ ಇದಾಗದೆ. ಅವ್ರು ಯೆಟ್ ಚಂದ, ಬರೀ ಸೂರಿ-ಚಂದ್ರಾಂಗೆ ಅವ್ರೆ. ಊರಲ್ಲೆಲ್ಲಾ ಅಟ್ ಚಂದ ಹೆಣ್ಮಕ್ಳ ನೋಡ್ಲಿಲ್ಲಾಗಿದೆ" ಅಂದ.

ರಾಜ, "ಬಟ್ಟನಿಗೆ ಬಂದ ಹೋಗಂದ ಹೇಳು" ಅಂದ, ಕೆಲ್ಸಿ ಕೂಡೆ. ಕೆಲ್ಸಿ ಹೋಗೆ ಹೇಳ್ದ ಬಟ್ನ ಕೂಡೆ. "ರಾಜ್ರು ನಿಂಗ ಬಾ ಅಂದ್ ಹೇಳರೆ" ಅಂದ. ಮೂರು ಜನ ಹೆಂಡ್ರು ಬರೀ ಚಿನ್ನನೇಯ ಆವಂಗೆ ಬಟ್ಟ ಹೋದ. ಬರೂಕೇಯ ರಾಜ, "ನನ್ಗೆ ಯೆಂತದೋ ತಂದ ಕೊಡ್ಬೇಕು" ಅಂದ. "ಯಂತದು? ನೀವ್ ಹೇಳಿ ನಾ ತಂದ ಕೊಡ್ತೆ" ಅಂದ. "ತನ್ಗೆ ಇಂತಾ ಕಡೆ ಹೋಗಿ ವಂದ ಸಾವ್ರ ಸಮಾರ್ ಬಂದಿ ತಂದ ಕೊಡು" ಅಂದ. "ಆಗೂದು" ಅಂದ ಹೇಳ್ದ. ರಾಜ ಅವ್ರ ಮನೇಗೆ ಹೋದ. ಯಾರೂ ಹೆರಗೇ ಬೀಳಲ್ಲಿಲ್ಲ. "ಆ ಹೆಣ್ ಮಕ್ಕಳಿಗೆ ಇಲ್ಲಿ ಕೆಲ್ಸ ಉಳಿತದೆ ಬರುಕಾಗುದಿಲ್ಲ?" ಅಂದ ಬಾಗ್ಲದಲ್ ನಿತ್ಕಂಡಿ ಹಿರಿ ಹೆಣ್ತಿ ಹೇಳ್ತು. ಹೋದ ಅವ ಸಮಾರ್ ಬಂದಿ ತಂದ್ ಕೊಟ್ಟ.

ಮರುದಿನ ಕೆಲ್ಸಿ ಬಂದ. ಕೆಲ್ಸಿ ಕೂತಾಗೇಯ ಗಳದ ತುಂಡ ತಂದ ಹೊಡ್ದ. ಗಳಾ ತುಂಡಾಗ್ವಾಗ ಮತ್ತೊಂದು ಹುಡ್ಗಿ ಹೆರಬಿತ್ತು. ನಾಕ್ ಜನ ಆದ್ರಾ? ನಾಕ್ ಜನ ಆದ್ರೂ ಇವ್ನ ಕೂಡ ತರುಕೆ ಆಗೂದಿಲ್ಲ. ಕೆಲ್ಸಿಯವ ಬಟ್ನಿಗೆ ತೆಗೀಬೇಕಾಯ್ತು ಅಂದ್ ಮಾಡ್ದ.

ರಾಜ್ನ ಹತ್ರ ಹೋಗ್ ಹೇಳ್ದಾ. "ಅವ್ನಿಗೆ ಕೊಂದೇ ತೆಗೀಬೇಕಾಯ್ತು. ಅಡ್ಗಿ ಮಾಡೂಕಾಯ್ತು. ಯೆಲ್ಲಾ ಆಯ್ತು."

ಹೆಣ್ತಿ ಹೇಳ್ತು. "ದೊಡ್ ಕೊಂಡ ತೆಗೀಬೇಕು ಬಾಗ್ಲಲ್ಲಿ" ಹೇಳ್, "ಕೆಂಡರಾಶಿಲಿ ದೂಡಬೇಕು" ಹೇಳ್ತು.

"ನಿಂಗೆ ತೆಗಿಬೇಕು ಅಂದ್ ಮಾಡರೆ, ಕೊಂಡ ತೆಗಿದಿ ಮಾರಾಶಿ ಕೆಂಡ ಮಾಡಬೇಕು. ಅಡಿಗಡಿಗೆ ಸುರಂಗ ಮಾಡಬೇಕು. ಬೆಂಕಿ ಬೀಳುಕೇ ಅಲ್ ವಳಗ್ ಹೋಗಬೇಕು." "ರಾಜ್ನ

ಕರೆಲಿಕ್ ಹೋಗು ನೀನು" ಹೇಳ್ದ ಕೆಲ್ಸಿಗೆ. ರಾಜ್ನ ಮನೆಗೆ ಹೋದಾ. "ರಾಜನ್ದು ಮಾವನಿಗೆ ತೋಲ್ ಸಂಗ್ಟಂತೆ. ಬಟ್ಟ ಹೋಗ್ ಬರಬೇಕಂತೆ. ಈಗೆ ತಾನ್ ಹೋಗು ಬದ್ಲು ಪಾತಾಳ ಲೋಕ್ಕೆ ನೀ ಹೋಗಬರತ್ಯೊ?" ಕೇಳ್ದಾ. ಬಟ್ಟ ಕೊಂಡದಲ್ ಹಾರ ಸುರಂಗದಲ್ಲಿ ತಿರುಗಾಡಿ ತಿರುಗಿ ಬೇರೆ ಕಡೆ ಎದ್ದು ಬಂದ. ಬಟ್ಟ ಕೆಲ್ಸಿಗೆ, 'ಚೌರ ಮಾಡ್ಕಂಡ ಬರಬೇಕು ನೀನು, ಅಲ್ ಹೋದ್ರೆ ಬೇಕಟ್ ನಂದಗೋಕ್ಲ. ನೀ ಹೋಗ್ ಚೌರ ಮಾಡ್ಕಂಡ್ ಬಾ ಬೇಕಟ್ ಶಿಕ್ಕೂದು ನಿನ್ಗೆ. ಆ ಲೋಕದಲ್ ಬಾಳಟ್ ಶಿಕ್ಕೂದು ನಿನ್ಗೆ." ಹೋದ್ಯ ಸುತ್ತ ತಿರಗಾಡದ. ಕೆಲ್ಸ್ಯವ್ನ ಕೂಡೆ, "ಹಾರೆ ಬಿಡು" ಅಂದ. ಕಡಿಗೆ ಅವ ಸುಟ್ ಹೋದ. ರಾಜರು, "ತಂದ ಕೊಟ್ರೆ ಅರ್ಧ ರಾಜ ಕೊಡ್ತೆ" ಹೇಳದ್ರು. "ಅವ ನಂಗೆ ಕೊಲ್ಲೂಕ ಮಾಡಿದ್ದಾ" ಮತ್ತಂದ್ ಕೋಲ್ ಹೊಡ್ದಾ. ಐದ್ ಜನ ಮಾಡ್ಕಂಡಿ ಬಟ್ಟ ಉಳ್ದ. ಕೆಲ್ಸಿ ಯೆಲ್ ಹೋದಾ? ಅವನಿಗೆ ತೆಗೂಕ್ ಮಾಡಿದ್ದ ಅವ್ನೇ ಹೋದ. ಬಟ್ಟ ತಿರಗಿದ. ಕೆಲ್ಸಿ ಹಿಂಡ್ತಿ ಬಂದ್ ಕೇಳ್ತು, "ಅವ ಸುತ್ ತೆಗವಾಗ ಬಿದ್ ಸುಟ್ಟೋದ. ಕೊಂಡ್ದಲ್ ಬಿದ್ ಸತ್ ಹೋದ್ನೊ ಯೇನೋ" ಅಂದ. ರಾಜ ಅರ್ಧ ರಾಜಿ ಬಟ್ನಿಗೆ ಕೊಟ್ಟ. ಸುಖ-ಸಂತೋಶ್ದಲ್ ರಾಜ್ನ ಮನೇಲುಳ್ದ.

■ ಹೇಳಿದವರು : **ದಿ. ಸೋಮ ಮಾಸ್ತಿ ನಾಯ್ಕ,** ಮಾಣುಮನೆ, ಹೆಗಡೆ ಊರು.

◆

# ಗೌಡತಿ ಕಥೆ

ಗೌಡ ದೊಡ್ಡ ಕುಮರಿ ಮಾಡಿದ್ದ. ಕುಮರಿಗೆ ದಿನಾಗು ಹೋಗ್ತ ಹೆಂಡ್ತಿ ಅನ್ನ ತಕಂಡೆ ಹೋಗ್ತಿತ್ತು. ಗಂಡನಿಗೆ ಕೊಟ್ಟಾಕ್ ಹೋಗ್ತಿತ್ತು. ಸಂಜಿಗೆ ಗಂಡ ಬತ್ತಿದ್ದ. ಬಸ್ತಿದಲ್ ಉಳಿತು. ತಿಂಗಳ ತುಂಬ್ತು. ಕುನ್ನಿ ಸಾಕ್ತು. ದಿನಾಗು ತಕಂಡ್ ಹೋಗ್ತಿತ್ತು ಗಂಡನಿಗೆ ಅನ್ನ.

ಬೆಳ್ಗಾ ಮುಂಚೆ ಹೋದ್ರೆ ಸಂಜ್ಯಾಗ್ತಿತ್ತು. ಅನ್ನ ಕೊಟ್ಟಾಕ್ ಬರುಕೆ ಹೋಗ್ಲೇ ಇಲ್ಲ. ಕುನ್ನಿ ಕುತ್ಗೆಗೆ ಚೀಟಿ ಕಟ್ಟಿ ಕಳಸತು. 'ನನ್ಕೂಡೆ ಬರುಕಾಗುದಿಲ್ಲ. ಮಾರ್ಗದಲ್ ಕುಂತಕಂಡನೆ.' ಅನ್ನ ಪಂಜಿಲ್ ಕಟ್ಟಿ ಅದ್ಕೆ ಕುತ್ಗಿಲಿ ಕಟ್ತು. "ನಿನ್ನ ವಡಿನಿಗ್ ತಕಂಡ ಹೋಗು" ಅಂತು. ಕುನ್ನಿ ಬಂತು. ಕುಯಿ ಕುಯಿ ಮಾಡ್ಕಂಡು ಅಳ್ಳೊ ಬಳ್ಳೊ ತೀಡ್ತು. ತೀಡುಕೆ ಆಗ ಚೀಟಿ ನೋಡ್ಕಂಡ ಹೆಣ್ತಿ ಅಲ್ಲೇ ಅದೆ. 'ಬೇಜರ' ಅಂದ್ ಹೇಳಿ ಮಾರ್ಗದಲ್ಲೆಯೇ ಕೂತದೆ. ಅನ್ನ ಕುನ್ನಿಗೆ ಬಿಡಿಸಿ ಹಾಕ್ದ. ಬಡ್ಸಿ ಹಾಕಿ ಕೆಲಸ ಬಿಟ್ಟಿ ನೇಗ್ಲಬೀಗ್ಲ ಹೊತ್ಕಂಡ್ ಮನಿಗೆ ಬಂದ. ಅನ್ನ ಇನ್ನೈಲ್ಲ ಹೆಂಡ್ತಿಗೆ ಅಷ್ಟ ಸಂಗಟ.

ಹೆಂಣ್ತಿ ಜನ್ನ್ಯಾಗಿ ವಂದು ಮಗು. ವಂದ ಮಾಶೇಶ, ವಂದ ಬಸವ. ಮಾರ್ಗದಲ್ ಇರತ್ರು. ಬಾಳಂತಿ ಸತ್ ಬೀಳ್ತದೆ. ಮಾಶೇಶ ನೆಲನ್ ಅಡಿಗೆ ಹೋದ. ಬಸ್ವ ಆ ಮಗು

ಅಲ್ಲೇ ಇರ್ತ್ರು. ಅದೇ ಮಾರ್ಗದಲ್ಲಿ ಬಂದ್ಕಂಡಿ ಬಸ್ಸನಿಗೆ ತಂದ, ಮಗಿಗೆ ತಂದ ಬಂದಿ ಮೀಸ್ದ ಬಸುಗೆ ಕೊಟ್ಟಿಗಿಲಿಟ್ಟ. ಮಾರಾಶಿ ದನ ಬಾಗಾತಿ ಮಾಡ್ಕಂಡ್ರೆ, ಹೆಣ್ಣು ವಂದು. ಬದ್ಕು ಬಾಳಾ ಅದೆ. ದೊಡ್ಡ ಮಾಡ್ಕಂಡಿ ಇಟ್ಕಂಡ. ಯೆಯ್ಡ್ ಮೂರ್ ತಿಂಗ್ಳಾಯ್ತು. ವರ್ಸಾಗೂಷ್ಟು ದೊಡ್ಡಾಗೆ ಹೋಯ್ತು. ಐದ ವರ್ಸಾಯ್ತು. "ಮಗನೆ ನಾ ಗಂಜಿಗೆ ಅಕ್ಕಿ ಹಾಕಂಡೆ ಯೆಸ್ರು ಮಾಡ ಹೋಗ್ತೆ, ನೀ ಬೆಂಕಿ ಮುಂದ ಮಾಡು" ಅಂದ ಗೌಡ. "ಆಗುದು" ಅಂದ ಹೇಳ್ತು.

ವಂದ್ ಗೌಡತಿ ಬಂತು. ಗಂಡಿಲ್ಲ. "ತಂಗೀ ಸಣ್ಣ ಬೆಂಕಿ ಕೊಡು" ಅಂತಾ ಮಾರ್ಗದ ಮೇನ ಬಿದ್ದ ಕಲ್ಲ ತಂತು. ಕಲ್ಲ ಗುಂಡ ಮಡ್ಕೆಲ್ ಹಾಕ್ತು. ಕಲ್ಲ ಗುಂಡು ಗಾಬ್ರಿಲ್ ಹಾಕಿದ್ನೊ ಯಾರ್ಬಲ ಅಂದ್ಕಂಡು ಮಗಿಗೆ ಮೀಸ್ದ. ಮೀಸ್ಕಂಡಿ ತಾನೂ ಮಿಂದ್ಕಂಡ ಬಂದ್ಕಂಡಿ ಊಟ ಮಾಡ್ದ. ಮಗು ದೊಡ್ಡಾಯ್ತು. ಹನ್ನೊಂದ ಹನ್ನೆರಡ್ ವರ್ಸಾಯ್ತು. ಮಗೇ ಅಡ್ಗಿ ಮಾಡ್ತು. ಮತ್ತೆ ಗೌಡತಿ ಬೆಂಕಿಗೆ ಬಂತು. "ವಳಗಡೆ ಐತೆ ತಕಂಡ್ ಹೋಗು" ಅಂತು. ಕಲ್ ಗುಂಡ ತಕಂಡ ಅನ್ನಕೆ ಹಾಕ್ತು. ಬರೀ ಕಲ್ ಗುಂಡೇಯಾ. "ಮಗ್ನೇ ಯಾವ ನಮೂನಿ ಕಲ್ಲೆ, ಕಲ್ ಹೆಕ್ಲಿಲ್ಲಾ" ಕೇಳ್ದ. "ನಾ ಹೆಕ್ಕಿದ್ದೆ. ಗನಾ ಮಾಡ್ ಹೆಕ್ದೆ" ಅಂತು.. ಮರದಿನ ಮತ್ತೆ ಗೌಡತಿ ಬಂತು. ನಾಕೈದ್ ದಿನ ಹಾಗೇ ಮಾಡ್ತು. ಮಗು ಮಣಿಮೇನೆ ಉಣ್ಣು ಅಕ್ಕಿ ಹೆಕ್ಕಿ ಅನ್ನಕ್ಕಾಕ್ತು. ಗೌಡತಿ ಕಲ್ಗುಂಡ್ ಹಾಕ್ತದೆ, ಹೋಗ್ತದೆ.

"ಅಪ್ಪಾ, ನಾ ಮಣಿ ಮೇನೆ ಹೆಕ್ ಹಾಕಿದೆ. ಮತ್ತೆ ಹ್ಯಾಂಗ್ ಮಾಡ್ ಹೆಕ್ಕಾಕ್ಲಿ ನಾನು" ಅಂತು. ಗೌಡತಿ ಆಚೆ ಮನೇಲ್ ಕೇಳ್ಕಂಡು, ಮಜ್ಜಾನ ಬಂದ್ಕಂಡಿ, "ನಿನ್ನ ಅಪ್ಪ ಕೈಲಿ ವಂದ ಚಿಕ್ಕಿ ತಕಂಡ್ ಬಾ ಹೇಳು" ಅಂತು. ಸಣ್ಣಕ್ಕಿ ಅನ್ನ ಮಾಡಿ ಬುತ್ತಿ ಕಟ್ಟ್ ಕೊಡು. "ಚಿಕ್ಕಿ ಕರ್ಕಂಬಾ ಅಂದ್ ಹೇಳು ತನ ಕೂಡಾಗುದಿಲ್ಲ ಹೇಳು" ಅಂತು. "ಅನ್ನದ ಮುದ್ದೆ ಮೇನಿಟ್ಟು ಹೇಳ್ತಾ ಕೊಟಾಕ್ ಹೋಯ್ತು" ಅಂದ್, ಸಣ್ಣಕ್ಕಿ ಅನ್ನ ಮಾಡ್ತು ಚಟ್ನಿ ಮಾಡಿ ಮುದ್ದೆ ಕಟ್ಟಿ ಅಪ್ನ ಕೂಡೆ ಬುತ್ತಿ ಕಟ್ ಕೊಡ್ತು.

ಗೌಡತಿ ಯೆಯ್ಡು ಶಿದ್ದೆ ಕರ್ಗನಕ್ಕಿ ಹಾಕಿ ಮುರಗಲ ಸೊಪ್ಪ ಹಾಕಿ, ಬೇಯಿಸಿ, ಸಾರ ಮಾಡಿ ಬುತ್ತಿ ಕಟ್ಕಂಡ್ ಕೂತದೆ. ಹುಳಿಸಪ್ಪ ಹಾಕಿ, ಕಾಯ ಚೂರ ಹಾಕದೆ ಚಟ್ನಿ ಅರದದೆ. ತಕ್ಕಂಡಿ ಕೂತ್ಕಂಡದೆ. ಇವ ಅಂಗಿ ಬಿಂಗಿ ಹಾಕಂಡ್ ತಯಾರಾದ. ಇವ ಕೋಟ್ ಹಾಯ್ಕಂಡಿ ಬಿಸ್ಲ ಕೊಡೆ ತಕ್ಕಂಡ್ ತಲೆಗೆ ಸುತ್ ಸುತ್ಕಂಡ್ ಹೋದ. ಹೋಗುಕೇಶಯ್ ಇದು ಅವ್ನ ಬೆನ್ನಿಗೆ ಹಿಂದ್ನ ದಾರ್ ಹೋಯ್ತು. ಬೆನ್ನಕೇ ಈತು. ಹೀಗೆ ಹಿಂತಿರುಗಿ ನೋಡ್ದ ಗೌಡ.

"ನೀಯೆಲ್ ಹೋಗ್ತ್ಯೊ?" ಅಂತಾ ಕೇಳ್ತು, "ನನ್ಗ ವಂದ್ ಹೆಣ್ತಿ ಬೇಕಾಗಿತ್ತು. ಹೆಣ್ ಕೇಳ್ಕಂಡ್ ಬರ್ಗೀಕಂದ್ ಹೋಗ್ತೆ ತಾನು" ಅಂದ. "ಹಾಗಾರ ನೀಯೆಲ್ ಹೋಗ್ತೆ?" "ನನ್ಗೆ ವಂದ್ ಗಂಡು ಬೇಕಂದೊಳ ಹೋಗ್ತೆ" ಅಂತು. ಪುಂಡಿ ಮಗೇಯ.

"ನಾನೇ ಹೆಣ್ತಿ, ನೀನೇ ಗಂಡ" ಅಂತು ಅದು. "ಆಗೂದು" ಅಂದ. ದೊಡ್ಡ ಅಶ್ವತ್ಥ ಕಟ್ಟೆ ಇತ್ತು. "ಕಟ್ಟೆ ಮೇನೆ ಪೊಟ್ಲೆ ಇಡವಾ" ಅಂತು. "ನಾ ಸಣ್ಣಕ್ಕಿ ಅನ್ನ ತಂದನೆ. ನೀವ್ ಕೈಕಾಲ ತೊಳ್ಕಂಡ ಬನ್ನಿ. ನಾವ್ ಊಟ ಮಾಡ್ವ" ಅಂತು. ಆಗ್ಯೇನ ಮಾಡ್ತು? ಸಣ್ಣಕ್ಕಿ ಪೊಟ್ಲೆ ತಾನಿಟ್ಕಂಡ್ತು. ಕರ್ಗನಕ್ಕಿ ಪೊಟ್ಲೆ ಅವನ ಚಂಚಿಲ್ ಕೈಚೀಲದಲ್ ಹಾಕಿಟ್ತು, ಸುಮ್ನ ಕುಂತ್ತು.

ಅವ ಮೊಕ ತೊಳಕಂಡ್ ಬಂದ. ಇದು, 'ಬಿಡ್ಸಿ ಅನ್ನ' ಅಂತು. ಅವ ಬಿಡಿಸಿದ. "ನೋಡು, ಮಗು ಮಾಡ್ದು ಇದೇ ನಮೂನಿ. ಕಗ್ಗನಕ್ಕಿ ಕೂಳ ಮಾಡಕೊಟ್ಟಿದೆ. ಇದ್ ನೋಡಿ, ಅದ ಎಣ್ಬೇಡಿ ನೀವು. ಸಣ್ಣಕ್ಕಿ ಅನ್ನ ಮಾಡನೆ, ಗನಾ ಚಟ್ನಿ ಮಾಡನೆ ನೀವು ಉಣ್ಣಿ." "ಮುರಗನ ಸಪ್ನ ಸಾರು ತಿಂದರೆ ನೀವ್ ಬದ್ಗೂರಿ" ಹೇಳ್ತು. ತನ್ನ ಮಗಳ ಅದ್ ಮಾಡದ್ದ ಅವ ನೋಡಿದ್ದ. ಆದ್ರೂ ಇದು ಇಷ್ಟು ತಜಿವಿಜಿ ಮಾಡದೆ ತಾ ಬರುತನ್ಕವ ಅಂದಿ ಮನಸಿಗೆ ತೆಳಕಂಡು ಉಂಡ. ಅದಿಷ್ಟು ಉಣ್ತು. ಕಗ್ಗನಕ್ಕಿ ಅನ್ನ ವಗದರು.

"ಇದು ನನ್ಗೆ ಮೆಚ್ಚುದಿಲ್ಲ" ಅಂದಿ, ಅದೇ ಹೊತಾಕ್ತು. ಯೆಯ್ದು ಜನ ಅವ ಮುಂದೆ ಇದು ಹಿಂದೆ ಹಾಕಂಡ ಬಂತು.

ಮಗು, "ನನ್ನಪ್ಪ ಚಿಕ್ಕಿ ತಕಂಡ ಬರೂಕ ಹೋಗನೆ" ಅಂದಿ ಮನೆ ಮಾಡುಯೆಲ್ಲಾ ಚೊಕ್ಕಾಕ ಸಾರಸತು. ಹಾದಿ-ಬೀದಿ ಚೊಕ್ ಮಾಡ್ತು. ಹಲಿ ಬರಿತು. ಶೇಡಿ ಅಂತಾ ಬಾಗ್ಲಲೆಲ್ಲಾವ ಬರಿತು. ದೊಡ್ಡ ಹಶಿ ಹಾಶಿದ್ತು. ರಂಡೆ ಹಿಂದನ ದಾರೆ ಬಂದವ್ನ. ಇಷ್ಟ ಹೊಲ್ಸ ಮೆಟ್ಕಂಡ ಬಂತು. ಹೊಲ್ಸ ಹಶಿಗೆ ಕಾಲ ಬಡ್ಡ ಇಟ್ ಬಿಡ್ತು. ಕೂತ್ಕಂಡ್ತು ಅವ್ನೂ ಬಂದ.

ಹಶೆ ಮೆಟ್ತು. "ಹಪ್ಪಾಶ್ನೆ ಬತ್ತದೆ ಇಷ್ಟಂತಾ ಮಗು." "ನೀಮುಂಜಿ" ಅಂತು. "ಮಗ್ನೆ ಯೆಂತಾ ಮಾಡ್ಕಂಡಿದೆ?" "ಯೇನಿಲ್ಲ" ಅಂತು. "ನಾತ ಬತ್ತದ್ಯಲ್ಲೆ ಯಾವ ನಮೂನೆ ಮಾಡಿದ್ದೆ?" "ಯೇನ್?" "ಯೇನೋ ನಾಮಾರ್ಗ ಬಳ್ಳಿ ಹೊಸ ಹಶೆ ಹಾಕಿದೆ."

ಅವ ಹಸೆ ತೆಗೆದ ಚೊಕ್ಕ ಮಾಡಿಲ್ಲ. ಆಗೆ ಇದು, "ಈ ನಮೂನಿ ಮಾಡ್ಕಂಡದೆ ಈ ರಾತ್ರಿಗೆ" ಆವಾಗಿ, "ದನ ಕಾಯಕೆ ಹಾಕಬೇಕು. ವಳಗಿನ ಚಾಕ್ರಿ ಮಾಡೊದ್ ಬೇಡ" ಅಂತು. "ಮಗನೆ ದನಕಾವೂಕ ಹೋಗು" ಅಂದ. "ನೀನ್ ಕೂಡಾಗುದಿಲ್ಲ ಹಶೆ ಬೆಗೆಲ್ ತೊಳ್ದೆ ಹಾಕು" ಅಂದ. ದನ ಬಿಡೊಕೆ ಹೋಯ್ತು. ದನ ತಕಂಡಿ ಬಸವ್ನಿಗೆ ತಕಂಡ ಹೋಯ್ತು ಮಗು.

ಮಾಶೇಶ ನೆಲನ್ ಅಡಿಗೆ ಹೋಗಿನಲ್ಲ? ದನಿಗೆ ಮೇಸ್ಕಂಡ್ ಕೊಟ್ಗಿಲ್ ತಕಂಡ್ ಬಂತು. ಅನ್ನನೂ ಹಾಕುದಿಲ್ಲ ವಂದೆ ಸಟ್ಲ ಅನ್ನ ಮಾಡ್ಕಂಡ್ ಉಳಿತು. ನೋಡಿ ನೋಡಿ ಸಾಕಾಯ್ತು ಮಾಶೇಶ, ಬಸ್ವಂಗೆ.

ದನ ಬಿಟ್ಕಂಡ್ ಹೋಯ್ತು. ಆರ ತಾಸ್ನ ಬಿಸ್ಲಿಗೆ ಕರೆ ಮಿಂದ್ಕಂಡ್ ವಳಿತು. ಬೆಟ್ಟದಲ್ಲಿ ಕೈ ಮುಕ್ಕಂಡ್ ಕಣ್ ಮುಚ್ಕಂಡ್ ದೇವ್ರಿಗೆ ಹೇಳ್ಕಂಡ್ ಕೂತ್ತು. 'ದೆವ್ರೆ ನೀನೇ ನನ್ನ ಹೊಟ್ಟೆ ತುಂಬಬೇಕು' ಅಂದಿ ಕಣ್ ಮುಚ್ಕಂಡ್ ಕುಂತಕಂಡ್ತು. ಆಗ ಬಾಳೆ ಹೆಡೆ ಯೆರಡು ಹೆಡೆ ತುಂಬಿ ಸಣ್ಣಕ್ಕಿ ಅನ್ನ, ಬೇಕಾದ್ದಾಂಗ ಬಿತ್ತು. ವಂದು ಯೆಡೆ ಗೋವಿಗೆ ಕೊಟ್ರು. ವಂದ ಯೆಡೆ ತಾನು ಬಸ್ವ ಉಂಡ್ರು. ದನ ಕಟ್ಕಂಡ್ ಬಂದ್ ಬಿಟ್ತು. ಯಾರ್ ಕೂಡೂ ಹೇಳ್ಳಿಲ್ಲ. ೧೫ ದಿನಾಯ್ತು ಚಂದಾಗಿ ಗನಾಕಾಗದೆ ಸೂರಿ ಚಂದ್ರಾಗೆ ಆಗದೆ ಮಗು. ದಿನಾಗೂ ಅದ್ದೇ ನಮೂನಿ ೧ ಯೆಡ್ಯ್ ತಾನು ಬಸ್ವ ಉಂಬೂದು, ವಂದು ಗೋವಿಗೆ ಕೊಡೊದು, ಹಾಗೇ ಮಾಡ್ಕಂಡಿ ಯೆಯ್ದು ಮೂರೇ ತಿಂಗಳಾಯ್ತು.

ಚಿಕ್ಕಿ ಬಸ್ರಿ ಹತ್ನ ತಿಂಗಳಾಯ್ತು. ಜನ್ನೆ ಆಯ್ತು. ಜನ್ಯಾಗೋಕೇ ವಂದ ಹೆಣ್ ಮಗು ಆಯ್ತು. ಮಗುಗೆ ತುಪ್ಪಕೆ ಬರಗಾಲ ಇಲ್ಲ. ಹಾಲಿಗೆ ಬರಗಾಲ ಇಲ್ಲ. ತುಪ್ಪದಲ್ಲಿ ಮೈಗುದ್ದುದು. ಉಕ್ಳ ತೆಳಿ ಹೊಯ್ಯದು. ತುಪ್ಪ ಹಾಕಂಡಿ ಸಾಟಿಯಾಗಿತ್ತು ಮಗು. ಗಂಡನ ಕೂಡೆ ಅಡಿಗೆ ಮಾಡು ಅಂತು. ಮಗು ಹೆಳ್ಕೆ ಅಂತು. ಗಂಡನೆ ಅಡ್ಗೆ ಮಾಡಿ ಬಾಣಂತಿಗೆ ಮಗುಗೆ ಬಡ್ಸದ. ಹೊಟ್ಟೆ ತುಂಬ ಹಾಕ್ದ. ಹನ್ನೈಡ್ ದಿನಾಯ್ತು. ಕಡಿಗೆ ಇದೆ ಗೌಡ್ತಿ ಅಡಿಗೆ ಮಾಡ್ತು.

ಬಾಗ್ಲಾ ಹಾಕಂಡ್ ತೀಡ್ತೆ ಉಳಿತು. ಅದ್ರ ಬಡ್ರಾಗ್ ದೊಡ್ಡಾಗ ಬಂತು. ವಂದ ವರ್ಸಾಯ್ತು. ಯೆಯ್ಡ್ ವರ್ಸಾಯ್ತು. ಸಣ್ಣಕ್ಕಿ ಅನ್ನ ತುಪ್ಪದಲ್ಲೇ ಬೇಯ್ಸಿ ಮಗಿಗೆ ಹಾಕ್ತದೆ. ಗನಾಕಾಗೂದಿಲ್ಲ. ಜೀರಾಗೆ ಬಂತು ಇದು. ಗೌಡತಿ, "ತನ್ ಮಗಿಗೆ ಸಣ್ಣಕ್ಕಿ ಅನ್ನ ತುಪ್ಪದಲ್ಲೇ ಬೆಯ್ಸಿ ಹಾಕ್ತೆ. ಏನಂದ್ರೆ, ಅಳ್ಳ ಹಾಲ ನಂಜಿಗೆ ಬೆಳ್ಗಾಗ್ ಕುಡಿಕೆ ಕೊಡ್ತೆ. ನನ್ನ ಮಗು ಜೀರಾಗಿದೆ. ಗನಾಕ್ಯೆಂತಾ ಆಗುದಿಲ್ಲ."

ಅದು, "ಆ ಮಗಿಗೆ ಬರೀ ಇಷ್ಟ ತೆಳಿ, ಇಟ್ಟನ್ನ ಹಾಕ್ತೆ ಅದ್ರಿ ಬರ್ಣ ನೋಡಾ ಚಂದ ಬಣ್ಣ ಬಂತು." ಮತ್ತೊಮ್ಮೆ, "ದೇವ್ರ ಆದ್ಕೆ ಹಾಗೆ ಅಟ್ ಬಣ್ಣ ಕೊಟ್ಟನೆ" ಅಂತಾ ಮಗು ದಿನಾಗು ಹಾಗೇ ಮಾಡ್ತದೆ, ತೂಗಮಂಚದಲ್ ತೂಗ್ರೆ ಏಳೊದಿಲ್ಲ. ದನಾ ಯೆಲ್ಲಾ ಅದ್ರ ಬುಟ್ಕೆ ಉಳುದು ಅದ್ರ ಬಣ್ಣ ನೋಡಿ, ಚೆಂದ ಕಂಡಿ ನೋಡ್ತೆ ಉಳಿದೇರು. ಅಪ್ಪ ದನಾನ ಹೊಟ್ಟೆ ತುಂಬುದಿಲ್ಲ ಯೆಂತ ಮಾಡ್ತೆ ಕೇಳ್ತ. ದನ ಮೇಸ್ಕಂಡಿ ಬತ್ತದೆ. ಯಂತ ಮಾಡ್ಲಿ ಯೆಂತ ಮಾಡ್ಲಿ" ಕೇಳ್ತು.

ಹದಿನಾರ ವರ್ಸನ ಮಗುವಾಗಿ ಚಂದ ಆಗಿ ಬಂತು. ಇದು ತನ್ ಮಗಿನ ಕೂಡೆ (ಯೆಯ್ಡ್ ವರ್ಸ) "ಅಕ್ಕನ ಬೆನ್ನಿಗೋಗು ಯೇನ ಮಾಡ್ತದೆ ನೋಡ್ಕಂಡ್ ಬಾ" ಅಂತು. ೫ ವರ್ಷ ಹಿಡಿರಿ. ಬಂದೆ ತೆಳ್ಳ ಹೇಳ ಅಂತು. ಆರ ತಾಸಿಗೆ ಮಿಂದ್ಕಂಡಿ 'ಭಗವಂತಾ' ಅಂದಿ ಕೈ ಮುಗಿದ ಕೂತು, ಯೆರಡ ಯೆಡೆ ಸಣ್ಣಕ್ಕಿ ಅನ್ನ. ವಂದ ಯೆಡೆದು ಆಕ್ಳಿಗೆ, ೧ ಬಸವಿಗೆ ತನಗೆ. ಮಗು ವಂದ ಕಂಕ್ಳಲ್ ಹಾಕ್ಕಂಡ್ತು ಆವಾಗ ರಟ್ಟೆ ಬಿಟ್ಕಂಡ್ ಅನ್ನ ಉಣ್ತೆ ಕುತ್ತು. ಸಂಜ್ಯಾಯ್ತು. ದನ ಹೊಡ್ಕಂಡು ಬಂತು. "ತಂಗಿ, ಅಕ್ಕ ಯೇನ ಮಾಡ್ತದೆ?" "ಅಕ್ಕ, ದೊಡ್ಡ ಯೆಲೆ ಮೆನೆ ಅನ್ನ ಪಾಯ್ಸು ಯೆಲ್ಲಾ ಬೇಕಾದ ಆಗಿತ್ತು. ನಾವುಂಡ್ರು ವಂದ ಯೆಡೆ ಆಕಳಿಗೆ ಕೊಟ್ತು. ವಂದೆಯೆಡೆ ತಾನು ಬಸವ ತಿಂದ್ರು."

ಇದಕ್ ಶಿಟ್ ಬಂತು. ರಾತ್ರಿ ಗಂಡನ ಕೂಡೆ, "ಯೇನ್ ಯೇಂತನ್ಗೆ ಸಂಗಟ ಜಿವ್ವೇ ಉಳೊದಿಲ್ಲ" ಅಂತು. "ಬಸವನಿಗೆ ಮೂರ ದಾರಿ ಕೂಡದಲ್ ಕುತ್ಗಿ ಕಡ್ದ ಹಾಕ್ ಬಂದ್ರೆ ತನ್ನ ಜೀವ ಉಳಿತದೆ" ಅಂತು. "ಇಲ್ಲಾ ನಂಜೀವ ಉಳೂದಿಲ್ಲ" ಅಂತು. "ತನ್ಗೆ ಹೆಣ್ತಿಲ್ದಾಗ್ ಆಗುದಲ್ಲ" ಅಂದ್ಕಂಡಿ, ಅವ ಮೂರ್ ದಾರಿ ಕೂಡ್ದಲ್ ಕುತ್ಗಿ ಕಡ್ದ ಹಾಕ ಬಂದ. ಮಗು ರಾತ್ರಿಗೆ ಹೋಕ್ಕಂಡ್ ಬಸವನ ಕೂಡ ತೀಡ್ತೆ ಬಿದ್ದದೆ. "ಯೇನು ಹೆದ್ರಬೇಡ ತಂಗಿ ನೀನು. ಮೂರ್ ದಾರಿ ಕೂಡ್ದಲ್ ಕುತ್ಗಿ ಕಡದ್ರೆ, ತಾನು ಚಿನ್ನದ ಕೋಡಾಗಿ ಅಷ್ಟೇ ದೊಡ್ಡ ಮೊಕ್ಯಾಗಿ ಯೆದ್ ಬತ್ತಿ. ದೊಡ್ಡ ಸಾವ್ಕಾರ ಮನೆಲಿ ಮುಂದ ಬೇಟಿಗ್ ಹೋತ್ರು. ಪರದಾನಿ ಹುಡ್ಗ ಅರಸು ಹುಡ್ಗ. ಯಾರಾರೂ ಇಡೀ ಊರ್‌ನೋರ್ ಬಂದ್ರೂ, ಬಂದ್ರಿ ಕೀಳೂಕಾಗುದಿಲ್ಲ.

ಅವ್ರು ಕೀಳೊಕೊದ್ರು, ಅವರ ಕೂಡಾಗುದಿಲ್ಲ. ಯಾರಾರ ಕೀಳೂಕೆ ಬಂದ್ರೆ ಬರುದಿಲ್ಲ ನಾನು. ನಿನ್ ಕೂಡ್ ಕೇಳ್‌ತ್ರು. ತಾನು ಕುದ್ರೆ ಮೇಲ್ ಕುಳ್ಸಕಂಡಿ ಮದಿಯಾಗ್ತೆ ಅಂತ್ರು. ಆಗ ನೀ ಕೈಹಾಕದ್ರೆ ತಾನು ನಿನ್ ಕೈಲಿ ಯೆದ್ದು ಕವರಿಯಾಗ ಬತ್ತೆ. ತೀಡಬೇಡ. ತಾ ಅಣ್ಣ ಮಾಶೇಶನಿದ್ದಲ್ ಹೋಗ್ತೆ ತೀಡಬೇಡ" ಅಂತು. ಬೆಳ್ಗೆ ಮುಂಚೆ ಮೂರ್ ದಾರಿ ಕೂಡ್ದಲ್ ತಕಂಡ ಹೋಗಿ ಕಡ್ದ. ಚಿನ್ನದ ಕೋಡಾಗಿ ಯೆದ್ಬಂದ. ತೀಡಿ ತೀಡಿ ದನುಗೆ ಕಾವ್ಕೆ ಹೋಗ್ಲಿಲ್ಲ. ನಾಕೈದ ದಿನ ಉಣಲಿಲ್ಲ. ಮನಿಕೂಡೆ ಉಳಿತು. "ಚಿಕ್ಕಿ ಹೊಡಿತು ದನ ಕಾವ್ಕೆ ಹೋಗೂದಿಲ್ಲ" ಅಂದಿ. ನಾಕ್‌ನೆ ದಿನ್ಕೆ ಬೆಟ್ಟದಲ್ ಬಂತು. ದನ ಕಾವೂಕೆ ಹೋದಲ್ಲಿ ಬಸವ ಚಿನ್ನದ ಕೋಡಾಗಿ ಬಂತು.

ಅರಸು ಹುಡ್ಗ ಪರದಾನಿ ಹುಡ್ಗ ಮೂರಗ ಬೇಟೆಗೆ ಬಂದಿರು. ಕೀಳೊಕೆ ನೋಡದ್ರು. ಬರಲೇ ಇಲ್ಲ. ಡಂಗ್ರ ಸಾರದ್ರು. ಇಂತಾ ಕಡೆ ಈ ನಮೂನ್ಯಾಗದೆ ಹೇಳಿ ಅಪ್ಪನಿಗೆ ಗೊತ್ತಾಯ್ತು. ಅವನ ಕೂಡೂ ಆಗುದಿಲ್ಲ. ಯಾರ್ ಬಂದ್ರು ಕೀಳಾಕಾಗುದಿಲ್ಲ. ಅದು ದನ ಕಾವ್ಕೆ ಬಂತು. "ನೀ ಕಿತ್ರೆ ನಿನ್ಗೆ ತಕ್ಕಂತೆ ಆಗ್ಲಿ. ಯೇಳುಪ್ಪರಿಗೆ ಮೇನ್ ನಿನ್ ಇಡ್ತೆ. ನೀ ಕೆಲಸ ಮಾಡೂದ್ ಬೇಡ. ಕೀಳು ನೋಡ್ವ" ಅಂದ. ಇದು ಕಿತ್ತತು. ಕುದ್ರೆ ಮೇನ್ ಕುಳ್ಸರು ತಕಂಡ ಹೋದ್ರು. ಅಪ್ಪ, ಅವಿ ಅವನಿಗೆ ಮದುವೆ ಮಾಡ್ರು. ಏಳುಪ್ಪರಿಗೆ ಮೇನೆ ಕುಂತರಾಯ್ತು. ವಂದ ಗೋಮಯ ತಂದ್ ಗೋಮಯ್ದ ನೀರ್ ಹಾಕ್‌ದ್ರಾಯ್ತು. ಮತ್ತೇನಿಲ್ಲ, ಮೀವುದು ಉಣ್ಣುದು.

ಇಂತಾ ಕಡೇಲಿ ಅವಳ್ನ ಮದ್ವೀಗ್ ತಕಂಡ್ ಹೋದ್ರು ಅಂದಿ ಅಪ್ಪನಿಗೆ ಅವಿಗೆ ಸುದ್ದಿಯಾಯ್ತು. ಮದಿಯಾಯ್ತು ಅಂದಿ ಅಲ್ಲಿ ಹೋಗಲಿಲ್ಲ ಅವ. ವಂದು ವರ್ಸಾಯ್ತು. ಸುದ್ದಿಯಾಯ್ತು. ಚಿಕ್ಕಯೇನಂತು- "ವಂದು ವರ್ಸಾಯ್ತು. ಮಗಿನ ಜಾನವೇ ಇಲ್ಲ. ಮದಿಯಾಗದ್ಯಂತೆ ನನ್ಗೆ ನೋಡ್ಬೇಕಂತ ಕಾಣ್ತದೆ. ಕರ್ಕಂಬನ್ನಿ" ಅಂತು. "ಆಗುದೆ, ಹೋಗ್ತೆ. ಯಂತ ಕೊಡ್ತೆ?" "ಬೆಲ್ಲ ಹಾಕಿ, ಅಕ್ಕಿ ಹಾಕಿ, ಕಾಯಿ ಹಾಕಿ ರೊಟ್ಟಿ ಮಾಡಕೊಡ್ತೆ" ಅಂತು. ಕಾಸ್ಕನ ಸಪ್ಪ ಹಾಕ್ತು. ರೊಟ್ಟಿ ಮಾಡಿ ಕೊಟ್ತು. ಇದ ದೊಡ್ಡ ಪೊಟ್ಲೆ ಮಾಡ್‌ಕೊಟ್ತು.

ದೊಡ್ಡ ರಾಜ ಸಂಸ್ಥಾನದಲ್ಲಿ ಹೋದ. ಅಲ್ಲಿ ಮರ್ಯಾದ್ಯೆಲ್ಲಿ ಹೋಗಾಕೆ. ಸಂಜ ಕಡೆ ಹೋಗಿ ಪೊಟ್ಲೆ ಕೊಟ್ಗೆಗೋಡೆ ಮೇಗಿಟ್ಟ ಮಗಿಗೆ ಕೊಡುಕಾಗುದು ಅಂದಿ. ಮಗು ಹೆರಗೇ ಬೀಳಲಿಲ್ಲ. ಅವನಿಗಿಟ್ ಬಡಸರು. ಉಂಡ ಅಲ್ಲೆ ಮನಿಕಂಡ. ಮಗು ಕಪ್ಪಿಗೆ ಗೋಮಾಯಕ ಬಂತು. ದನ ರೊಟ್ಟಿ ಬಗ್ಗ ಕಂಡ್ ತಿಂದಿ ಸತ್ಬಿದ್ದೋಗದೆ. ಮುಂದಿದ್ದದ್ದು, ಅತ್ಲಬದಿ ದನ ಅದೆ. ಅಪ್ನ ಕೂಡೆ ಹೇಳ್ತು. "ದನ ಸತ್‌ಬಿದ್ದದೆ. ಯಂತ ಮಾಡ್ಕಂಡ ಬಂದಿದೆ?" ಕೇಳ್ತು. "ರೊಟ್ಟಿ ಮಾಡ್ಕಂಡ್ ಬಂದಿದ್ದೆ. ಚಿಕ್ಕಿ ಮಾಡ್ ಕೊಟ್ಟಿತ್ತು. ಕರಕಂಡ್ ಬಾ ಅಂದದೆ" ಅಂದ. 'ಬೇಗ ಹೋಗು ಆಸ್ರ ಕುಡು ಮೊದ್ಲೆ ಹೋಗು ನೀನ್ ಇಷ್ಟವಿಲ್ಲ" ಅಂತು. "ನಾ ಬರಾದಿಲ್ಲ" ಅಂತು. ದನಕಾವ ಮಕ್ಳ ಬರತಕ, ಹಾಲ ಗೀಲ್ ತೆಗಾತನ್ಕ ಬಂದ ಗೌಡ. ದನ ಸತ್ ಬಿದ್ದದೆ. "ರೋಗಾಯ್ತೆ ಯೇನಾಯ್ತು?" ದನ ಯೆಲ್ಲಾ ಯಳ್ದಹಾಕ್ರು? ಬಾಕಿದನ್ಕರ ಬಿಟ್ ಹಾಕಂಡ ಹೋದ್ರು. ಅಲ್ ಹೋಕಂಡ್ ಹೆಂಡ್ತಿ ಕೂಡೆ ಬಯ್ದ. "ನನ ಮಗಳ ಸತ್ಹೋಗ್ಲಿ ಅಂದಿ

ಕಾಸ್ಕನ್ ಕಾಯಿ ಹಾಕಿ ರೊಟ್ಟಿ ಮಾಡಿ ಕೊಟ್ಟಿದೆ. ಕೊಟ್ಗೆ ದನ ಸತ್ಬಿತ್ತು. ನನ್ಗೆ ಇಡ್ಸುದಿಲ್ಲ ಅಂದಿ ಬೇಗ ಬಂದೆ" ಅಂದ. "ಅದು ಕಾಯಿಬೆಲ್ಲ ಹಾಕ್ ಮಾಡ್ಕೊಟ್ಟಿದೆ. ರೋಗ ಬಂದಿತ್ತು ದನಿಗೆ ಸತ್ಹೋಯ್ತು" ಅಂತು. ಅವ, "ಅದರ ತಿಂದ ದನ ಸತ್ತದೆ. ಬಾಕಿದನ ಅದೆ" ಅಂದ. ನಂಬಲಿಲ್ಲ ಯೆಯ್ಡ ಮೂರ್ ವರ್ಸ ಹೋಯ್ತು.

ಚಿಕ್ಕಿ ಹೇಳ್ತು. "ಮಗಿಗೆ ನೋಡ್ಬೆಕಂದೆ ಕಾಣ್ತದೆ. ಮಗಿಗೆ ಕರ್ಕಂಡ ಬನ್ನಿ" ಅಂತು. "ಅಲ್ದಿದ್ರೆ ತನ್ಗೆ ಜೀವವೆ ವಳ್ಯುದಿಲ್ಲ. ನಾಕ್ ವರ್ಸಾಯ್ತು. ಮಗಿಗೆ ನೋಡ್ದೇಯ." ನೋಡುಕಾರು ನೋಡ್ವ ಅಂತು ರೊಟ್ಟಿಕೊಡ್ಲಿಲ್ಲ. ಕರಕಂಡ್ ಬರೂಕ್ ಹೋದ. ರಾಜನ ಹತ್ರ, "ನಾಕದಿನ ಕಳಿಸಕೊಡಿ. ನಮನಿಂದ್ ಹೊತ್ಕಂಡ ಬಂದಿ ಮದಿಯಾಗ್ರಿ- ಹೇಳ ಗೊತ್ತು. ನನ್ನ ಹಿಂಡ್ತಿಗೆ ನೋಡ್ಬೇಕಂದಿ ರಾಶಿ ಅದೆ" ಅಂದ. ಕಳಿಸಿ ಕೊಟ್ಟರು.

"ಚಿನ್ನ ಬಣ್ಣ ರಾಶಿ, ೨ ದಿನಾಯ್ತು ಬಂದಿ ತಂಗಿ. ತಲೆ ಕೆಸ್ರಾಗದೆ ತಂಗಿ. ಮೀಯಿಸ್ವ ಚಿನ್ನ ಯೆಲ್ಲ ತೆಗಿ ಮಗನೆ. ಕೆಮಿದು ಕಾಲ್ಗೆದಾ ಯೆಲ್ಲಾ ತೆಗ್ದಿ. ತಂಗಿಗ್ ಹಾಕು ಮಗನೆ. ಚೆಂದ ಕಾಣ್ತದೆ ನೋಡ್ವ" ಅಂತು. ತಂಗಿಗೆ ಯೆಲ್ಲಾ ಚಿನ್ನ ಹಾಕ್ತು. "ಮಗಳ ಕೂಡೆ ದೊಡ್ಡ ಬೆಂಕಿ ಮಾಡು" ಅಂತು ನೀರ ಕೊದಿತದೆ. "ತಲೆ ತಿಕ್ಕಕೊಡು ಮಗನೆ ಯೆಯ್ಡ್ ಕೊಡ ನೀರ ಹಾಕು" ಹೆರಿಮಗು ಕೂಡೆ. ಈ ಮಗಳ ಕೂಡೆ, "ಅಕ್ಕ ನೀರಿಗೆ ಹೋಗುಕೇಯ ಅಕ್ಕನ ಗಂಡನ ಮನೆಗೆ ನೀ ಹೋಗು. ಅಕ್ಕನ ಗಂಡನ ಮನೆಗೆ ನೀ ಹೋಗಬಹುದು ಮಗನೆ" ಅಂತು. "ಅದು ಬಾವಿಗೆ ಕೊಡಪಾನ ಹಾಕುಕೇಯ ಹಿಂದೆ ಹೋಗಿ ದೂಡ್ಹಾಕ್ಬುಡು" ಅಂತು ಮಗಳ ಕೂಡೆ. "ಅಷ್ಟು ಚಿನ್ನ ನಿನ್ಗೆ ಆಗುದು ಅಕ್ಕನ ಮನೆಗೆ ಹೋಗು ನೀನು" ಅಂತು.

ಅದು ನೀರಿಗೆ ಹೋಗುಕೇಯ ಅಕ್ಕನಿಗೆ ದೂಡ್ ಹಾಕಬಿಟ್ತು. ಎಲ್ಲಾ ಬಿಳುತೇಯ ಮಾಶೇಶ ಬಸ್ವ ಅಡಿಗಿಂದಾನೆ ಉಗದು ತಕಂಡ್ ಹೋದ್ರು. ಮಾಳ್ಗಿ ವಳಗಿಟ್ಕಂಡ್ತು ತಂಗಿಗೆ.

ಗಂಡನ ಕೈಲಿದ್ದದ್ದು ಹೆಂಡತಿಗೆ ಹಾಕಿದ್ದರ ಉಂಗ್ಲವಾ ತೆಗಿಲಿಲ್ಲ. ಪಾತಾಳ ಲೋಕಕ್ಕೆ ಹೋದ್ರು. ಅವ ತನ್ನ ಹಿಂಡ್ತಿಯಲ್ಲ ಅಂದಿ ತಂಗೀನ ಪಾಯಕಾನಿಲಿ ಹೊತಾಕಿದ್ದ. ಅಕ್ಕ ಮನಿಕಂಡಲೆ ಮನಿಕಂಡಿತ್ತು. ನಿತ್ತ್ ಹಾಂಗೆ ಮಾಡ್ತು. ಉಂಗ್ಲ ಇಲ್ಲ ಕಯ್ಯಿಗೆ. ಚಿಕ್ಕಿ ತನ್ನ ಮಗಳ್ನ ನೋಡುಕೊಯ್ತು. ಬಯಿಲಕಡೆಗೆ ಆಗಿತ್ತು. ಪಾಯಿಖಾನಿಗೆ ಹೋಗು ಅಂದ್ರು. ಅವಿ ಬೈಲ ಕಡೆ ಮಾಡ್ತು. "ಯವ್ವ ಯೆಲ್ಲ ಬಯ್ಲು ಕಡೆ ಮಾಡ್ತ್ರು ಹೇಳಿ ನೀನೂ ಮಾಡ್ತ್ಯ" ಕೇಳ್ತು. ಅವ್ ತಕಂಡ್ ಹೋಗಿ ಮೂರು ಕೊಡಪಾನ ನೀರ್ ಹೊಯ್ತು. ದನಕಾವ ಮಕ್ಳು, "ಕಾಲಿಗಿಡಿಬೇಕು, ಕಲ್ಲಿಗೆ ಬಡಿಬೇಕು, ಚೊಕ್ಕಾಗ್ತದೆ" ಅಂದ್ರು ಆಗ ಕಾಲಿಗಿಡಿತು. ನೆಲಕ್ಕೆ ಬಡಿತು. ಸತ್ತೇ ಹೋಯ್ತು. ತೀಡ್ತು ಹಾಂಗೇ ಮನಿಗೋಯ್ತು. ಅವ್ರು ಸುಟ್ಟಿ ಬೂದಿ ಮಾಡದ್ರು. ಅಕ್ಕ ಪಾತಾಳ ಲೋಕದಲ್ಲೇ ಉಳಿತು.

ಗಂಡ ಊರೂರ್ಯೆಲ್ಲಾ ಹುಡಕದ. ಯೆಲ್ಲೆಲ್ಲೂ ಇಲ್ಲ. ಬಳಗಾರ ಯೇಸ ತಕಂಡಿ, ಬಳೆ ತಕಂಡಿ ಇಡೀ ಊರಿಗೆ ಹೋಗಿ, "ಅಮ್ಮಾ ಬಳೆ ಬೇಕೋ" ಕೇಳ್ತ ಹೋದ. ಯೆಲ್ಲೂ ಕಾಣದೆ ಹುಡುಕದ. ಮಾರ್ಗದ ಮೇನಿತ್ತು. ಹೆಂಡತಿಗೆ ಕೇಳಿತು. "ಅಣ್ಣ ಬಳಗಾರ ಬಂದರೆ ನನ್ಗೆ ಬಳೆ

ಬೇಕಲ್ಲ" ಅಂತು. ಕರದ. ಮಾಳ್ಗಿಲಿ ಹೆರಗೆ ವಂದಕ್ಕೆ ಕೊಡ್ತು. ಕೈ ಕೊಡುಕೆ ಉಂಗ್ಲ ಕಂಡ್ತು. ತನ ಹಿಂಡ್ತಿ ಅಂದ್ ಹೇಳಿ ತೆಳಿತು. ಕಡೆಗೆ ಬಳೆ ಇಟ್ಟ. "ಇಲ್ಲಿ ಹ್ಯಾಂಗ್ ಬಂದಿದೆ?" ಕೇಳ್ದ.

ಅದು- "ನಾನು ನೀರ ಯೆತ್ತೂಕ ಬಂದಿದೆ. ಚಿಕ್ಕಿ, 'ಚಿನ್ನ ಯೆಲ್ಲ ಹಾಕು ಅಂತು ತಂಗಿಗೆ' ನಾ ಹಾಕ್ದೆ. 'ತಲೆ ಕೆಸ್ರಾಗದೆ ಮೀಸ್ಕೊಡ್ತೆ ಹೇಳ್ತು' ಚಿಕ್ಕಿ. ವಂದ್ ಕೊಡ ನೀರ್ ತರುಕೆ ಹೋಗಿದ್ದೆ. ತಂಗಿ ನನ್ನ ದೂಡ್ ಹಾಕ್ತು. ನಾನ್ ಅಡಿಗೋಗಿದೆ ಮಾಶೇಶ ಅಣ್ಣ ತಕಂಡ್ ಹೋಗ ಇಟ್ಕಂಡ್ತು ಅವತ್ತು."

ತನ್ನ ಗಂಡಗೆ ಹೆಂಡ್ತಿ ಅಂತ ತಿಳಿತು. ವಜ್ರದ ಉಂಗ್ಲ ಅದೆ. ಮಾಶೇಶ ಅವ್ರ ಕೂಡ್ಯಲ್ಲಾ ಕೆಳಗೆ ಮೊಕ ಮಾಡ್ಕಂಡೆ ಉಳಿತು. "ಹೆಡೆ ಮೇಲೆ ಮಾಡ್ಕಳೂಕಾಗಾ ತನ್ನ ತಂಗಿ ಗಂಡ ಬಂದನೆ" ಅಂತ ಮಾಶೇಶ ಹೇಳ್ತು. "ನಾಕ್ ದಿನ ಇಟ್ಕಂಡಿ ಕಳಿಸ್ಕೊಡ್ತೆ" ಅಂದ.

ಅಲ್ಲೇ ಉಳಿದ್ರು. ತಂಗಿಗೆ, ತಂಗಿ ಗಂಡಗೆ ವಂದ ತಿಂಗ್ಳ ಇಟ್ಕಂಡ್ರು. ತಂಗಿಗೆ ಶೀರಿನೊ, ಚಿನ್ನವೋ ಬೇಕಷ್ಟ ಕೊಟ್ಟು, "ಹೋಗಿ" ಅಂದ್ ಹೇಳಿ ಕಳಿಸಿಕೊಟ್ಟ. ಸುಖ-ಸಂತೋಶದಲ್ಲಿ ವಳದ್ರು.

■ ಹೇಳಿದವರು : **ದಿ. ಶಿವಮ್ಮಾ ಮಾಸ್ತಿ ನಾಯ್ಕ**, ಮಾಣುಮನೆ, ಊರು ಹೆಗಡೆ
ದಿನಾಂಕ:- ೭-೧೦-೭೦

◆

# ಚಾತುರ್ಯಕ್ಕೆ ಜಯ

ರಾಜ, ಮಂತ್ರಿ ಇದ್ದರು. ರಾಜಗೊಬ್ಬ ಹುಡುಗ. ಮಂತ್ರಿಗೊಬ್ಬ ಹುಡುಗ. ಶಾಲೆಗೆ ಹಾಕಿದರು. ಕಲಿತ ಕೂಡಲೆ ಕಟ್ಟೆ ಕಟ್ಟಿಸಿದರು. ರಾಜನ ಹುಡುಗ ಪ್ರಾಯಕ್ಕೆ ಬಂದ. ಮಂತ್ರಿ ಹುಡುಗ ಹನ್ನೆರಡ ವರ್ಷದವ. ರಾಜನ ಹುಡಗನಿಗೆ ಪ್ರಾಯದ ಹುಡುಗಿ ಮದುವೆ ಮಾಡಿದರು. ಮಂತ್ರಿ ಹುಡ್ಗಗೆ ಹತ್ತ್ ವರ್ಷದ ಹುಡುಗಿ ಮದುವೆ ಮಾಡಿದರು.

ದಿನಾಲು ಕಟ್ಟೆ ಮೇಲೆ ಹವಾ ತಕ್ಕೊಕೆ ಬರ್ತಿದ್ರು. ಅಪ್ಪ, ಅವಿಯೆಲ್ಲ ಶೋಬನ ತಯಾರಿ ಮಾಡಿದರು. ರಾಜನ ಹುಡಗ, "ಮಂತ್ರಿ ಹುಡಗನದು ನನ್ನದು ಎರಡೂ ಒಂದೇ ಸಲ ಶೋಬನವಾಗಬೇಕು" ಅಂದ. ಮಂತ್ರಿ ಹುಡ್ಗಗೆ ಹೆಣ್ತಿಗೆ ಪ್ರಾಯ ಮುಟ್ಟಲಿಲ್ಲಾಗಿತ್ತು. ಆವಾಗೆ ಅವನಪ್ಪ ರಾಜ ಎಲ್ಲಾ ಶೋಬನ ಮಾಡೂದು ಬಂದು ಮಾಡಿದರು. ರಾಜನ ಹುಡ್ಗನ ಹೆಣ್ತಿ ಮನಸ್ಸು ಸಣ್ಣ ಮಾಡ್ಕಂಡ್ತು. ಆವಾಗ ಅಜ್ಜಿ ಮುದ್ಕಿ ದಿನಾಲು ಹೂಗಿನ ದಂಡೆ ರಾಜನ ಮನೆಗೆ ಹುಡಗಿಗೆ ತಂದು ಕೊಡತಿತ್ತು. ಆ ದಿವಸ ಹೂಗಿನ ದಂಡೆ ತಂದ್ಕೊಡ್ಲೆ ಅದರ ಮೊಕ ಯೆಲ್ಲಾ ಬಾಡಿದ್ದ ನೋಡ್ತು. ಆವಾಗ ಅಜ್ಜಿಮುದ್ಕಿ ಕೇಳು, "ಇವತ್ತು ನಿನ್ ಮೊಕ ಎಲ್ಲಾ

ಬಾಡ್ಕಂಡದೆ.” ಆವಾಗ ರಾಜಕುಮಾರನ ಹೆಂಡ್ತಿ ಹೇಳಿತು, “ನನ್ನ ಶೋಬನವಾಗಲಿಲ್ಲ. ಮಂತ್ರಿ ಹುಡ್ಗನ ಹೆಂಡ್ತಿಗೂ ಪ್ರಾಯ ಬರಲಿಲ್ಲ. ನನ್ನ ಬಾಳ್ವೆ ಹೀಗಾಯ್ತು” ಅಂತು.

ಅಜ್ಜಿ ಮುದ್ಕಿ, “ನಾ ಮಾಡ್ಸಿ ಹಾಕ್ತೆ. ಹೆದ್ರಬೇಡ” ಅಂತು. ಆವಾಗ ಅಜ್ಜಿಮುದ್ಕಿ ಮನೆಗೆ ಹೋಯ್ತು. ಮಂತ್ರಿ ಹುಡ್ಗ ರಾಜನ ಹುಡಗ ಎರಡೂ ಜನ ಕುದ್ರೆ ಮೇನೆ ಕುಂತ್ಕಂಡಿ ತಿರ್ಗುಕ್ಹೋಗಿದ್ರು. ಆ ಅಜ್ಜಿ ಮುದ್ಕಿ ಮನೆ ಹಾದಿಂದೇ ಬಂದ್ರು ಎರಡು ಜನ ಕುದ್ರೆ ಹತ್ತಿ. ಆವಾಗ ಆ ಅಜ್ಜಿಮುದ್ಕಿ ಮಂತ್ರಿ ಹುಡ್ಗನ ಕೈಲಿ, “ಬಾ” ಹೇಳ್ತು. ಮಂತ್ರಿ ಹುಡ್ಗನ ಬೆನ್ನಿಗೇ ರಾಜನ ಹುಡ್ಗ ಹೋಗೂಕ್ ಹಣ್ಕದ. ಅಜ್ಜಿ ಮುದ್ಕಿ, “ಅಲ್ಲೇ ಉಳಿ. ಮಂತ್ರಿ ಹುಡ್ಗ ಮಾತ್ರ ಬರಲಿ” ಹೇಳ್ತು. ಅಲ್ಲೋಕಂಡ್ ಮಂತ್ರಿ ಹುಡ್ಗ ಕೇಳ್ದ. “ಯಂತಕ್ಕೆ ತನ್ಗೆ ಬಾ ಹೇಳದ್ದು?” ಕೇಳ್ದ. ಆವಾಗ ಮುದ್ಕಿ ಹೇಳ್ತು- “ಅಕ್ಕಿ ಸೊಲದ್ರೆ ಬತ್ತ, ಬತ್ತ ಸೊಲಿದರೆ ಅಕ್ಕಿ” ಹೇಳ್ತು. ಹಾಗೇಯ ಬಂದ ಅವ. ‘ಇದ್ಕೇಯಾ ತನ್ಗೆ ಕೇಳ್ತು ಹೇಳಿ’, ರಾಜನ ಹುಡ್ಗ ಮಂತ್ರಿ ಹುಡ್ಗನ ಕರೆದ, “ಯೆಂತಕ್ ಕರದಳು?” ಹೇಳಿ, “ಅಕ್ಕಿ ಸೊಲಿದರೆ ಬತ್ತ, ಬತ್ತ ಸೊಲಿದರೆ ಅಕ್ಕಿ.. ಹೇಳ್ತು.”

“ಅದಲ್ವೇ ಅಲ್ಲ. ಬೇರೇದೇ ಯೇನೋ ಹೇಳಿರ್ಬೇಕು ಮುದ್ಕಿ.” “ಇಲ್ಲ ಅದೇಯ ಹೇಳದ್ದು, ಬೇರೆಯೇನಿಲ್ಲ.” ರಾಜನ ಹುಡ್ಗ ಹೇಳ್ದ, “ನಿನ್ ಜೋಸ್ತಿ ಇವತ್ತಿಂದ್ ಬಿಟ್ ಬಿಡ್ತೆ ನೀನು ಖರೆ ಹೇಳೂದಿಲ್ಲ. ಸುಳ್ಳೇ ಹೇಳ್ತೆ” ಹೇಳ್ದ. ಮನೆಗೆ ಹೋದವ ಸುಮ್ನೆ ಮುಸ್ಕ ಹಾಕಂಡ್ ಮನ್ಗಬಿಟ್ಟ ರಾಜನ ಹುಡಗ. ಮಂತ್ರಿಗೆ ಹೆದರತಿದ್ದ ರಾಜನ ಹುಡ್ಗ. ಆವಾಗ ಅಪ್ಪ ಅವಿ ಉಂಬೂಕೆ ಯೇಳ್ಸಿದ ಕೂಡ್ಲೆ ರಾಜನ ಹುಡ್ಗ ಹೇಳ್ದ. “ಮಂತ್ರಿ ಹುಡ್ಗನ ರಕ್ತ ತಂದ್ ತೋರ್ಸದರೆ ಮಾತ್ರ ತಾ ಉಣ್ತೆ. ಇಲ್ಲಾದ್ರಿಲ್ಲ” ಹೇಳ್ದ. ಮಂತ್ರಿಗೆ ಹೇಳಿ ಕಳಿಸಿದ ರಾಜ. ಆವಾಗ ಮಂತ್ರಿ ಬಂದ್ಕಂಡ್, “ಯೆಂತಕೆ ಊಟ ಮಾಡುದಿಲ್ಲ?” ಕೇಳ್ದ. “ನಿನ್ನ ಹುಡಗನಿಗೆ ಈಗಿಂದೀಗ ಕೊಂದು, ರಕ್ತತಂದ್ ತೋರ್ಸದರೆ ಮಾತ್ರ ಉಣ್ತೆ. ಇಲ್ಲಾದ್ರಿಲ್ಲ” ಹೇಳ್ದ. “ನಿನಗೆ ಮಂತ್ರಿ ಹುಡುಗನಿಗೆ ಯೆಂತಾ ಆಯ್ತೋ?” ಕೇಳ್ದ ಅಪ್ಪ. “ಯೆಂತಾ ಆದ್ರೂ ಆಯ್ತು. ಮತ್ತದ್ರ ಕೇಳ್ ಪ್ರಯೋಜನವಿಲ್ಲ.”

ಅವನಿಗೆ ಮನೆಯೊಳಗೆ ಹುಗ್ಸಿಟ್ಟಿ ಬೆಟ್ಟ ಹೊನ್ನೆಮರನ ರಕ್ತತಂದ್ ತೋರ್ಸದ. ಹಾಗೆಯೇ ಮನೆಕೂಡೆ ಉಳ್ದ ರಾಜನ ಹುಡುಗ. ಅಪ್ಪ ಅವಿಕೈಲ್ಯೆಲ್ಲಾವ, “ಬೇಜಾರ ಬರೂಕೆ ಹಣಕತು.” ಹೇಳ್ ಹೇಳ್ದ. ಹಾಗಾರೆ ಅವಿ ಹೇಳ್ತು, “ನೀ ಶೋಬ್ನಾಯ್ಕಂಡೆ ಹಿಂಡ್ತಿ ಕೂಡೆ ಮಾತಾಡ್ಕಂಡ್ ಉಳಿ.” “ಇವತ್ತೇ ಶೋಬನ ಮಾಡಬೇಕು” ಹೇಳ್ ಹೇಳ್ದ. ಅದೇ ದಿವ್ಸ ಶೋಬನ ಮಾಡಿದರು.

ಹಾಗೇ ಒಂದೆರಡು ದಿವ್ಸ ಹೆಂಡ್ತಿ ಕೈಲ್ ಮಾತಾಡ್ತೆ ಕುಂತ. ಹಾಗೇ ಮತ್ತೂ ಬೇಜಾರ್ ಬರೂಕೆ ಹಣ್ಕತು. ರಾಜ ಇವನಿಗೆ ಮತ್ತೆ ಬೇಲೆ ಮೇಲ್ ಹೋಕಂಡ್ ಮತ್ತೊಂದ್ ಕಟ್ಟೆ ಕಟ್ಸಿದ. ಆವಾಗ ಕಟ್ಟೆ ಮೇಲ್ ಹೋಗ್ ದಿನಾಲು ಹವಾ ತಕ್ಕೊಳ್ಳುಕೆ ಕುಂತ. ಆವಾಗೊಂದು ತಾವ್ರ ಧ್ವಜ ಹೇಳು ರಾಜನ ಹುಡ್ಗಿ ಬಂತು. ದೋಣಿ ತಕಂಡ್ ಬಂತು. ಕಟ್ಟೆ ಬುಡ್ಕೆ ಬಂದ್ಕಂಡಿ ಮೂರ್ ಒಲೆಗುಂಡ ಹೂಡ್ತು. ಒಂದು ತಾಮ್ರದ ತಪ್ಪಲೇಲಿ ನೀರ

ತಂದ್ ಇರ್ಸಿತು ಒಲೆ ಮೇಲೆ. ಕಡೆಗದು ಸಮುದ್ರದಲ್ಲಿ ಕೆಳಮೊಕಾಕಂಡಿ ಇಳ್ಳೈ ಪಟ್ಟಿ ಬಿಟ್ತು. ರಾಜನ ಹುಡ್ಗನಿಗೆ ಯಂತದೆಂದೂ ತಿಳಿಲಿಲ್ಲ. ಹಾಗೇಯ ಮತ್ತೂ ಮನೆಗೋದ. ಹಾಗೇಯ ಉಂಬೂಕೆ ಯೇಳ್ಸಿದ ಕೂಡ್ಲೆಯ ಊಟಾ ಮಾಡೂಕೆ ಯೇಳ್ಳಿಲ್ಲ. "ನಾ ಉಂಬೂದಿಲ್ಲ" ಹೇಳ್ದ.

"ಯೆಂತ ಉಂಬೂದಿಲ್ವೋ?" ಕೇಳದ್ರು ಅಪ್ಪ, ಅವಿ. "ತನ್ಗೆ ಮಂತ್ರಿ ಹುಡ್ಗನ ಈಗಿಂದೀಗ ತಂದ್ ಕೊಡಬೇಕು" ಹೇಳ್ದ. ಆವಾಗ ಮಂತ್ರಿನ್ ಹೇಳ್ ಕಳಿಸದ್ರು. ಮಂತ್ರಿ ಬಂದ್ಕಂಡಿ "ಯೆಂತಾ ಆಯ್ತು?" ಹೇಳ್ ಕೇಳ್ದ ರಾಜ್ನ ಹತ್ರ.

"ಯೇ ನಿನ್ನ, 'ತನಗೆ ನಿನ್ನ ಹುಡ್ಗನ ಈಗಿಂದೀಗ ತಂದ್ ಕೊಡಬೇಕು' ಹೇಳ್ದ." "ಹಂಗಾರೆ ಆವಾಗ ಕೊಂದ ಹಾಕು ಹೇಳ್ದವ ನೀನೇಯ, ಈಗ ಕೊಂದಾಕದ ಮೇನೆ ಬತ್ನೂ ಅವ?" ಕೇಳ್ದ. "ಆವಾಗ ತಾ ಶಿಟ್ ಬಂದ್ ಹೇಳಿದ್ದೆ. ಆದ್ರೆ ಈಗ ತಂದ್ ಕೊಡಬೇಕು."

ಮಂತ್ರಿ ಹೇಳ್ದ, "ಕೆರೆ ಬುಡ್ಕ ನೀ ಹೋಕಂಡಿ, ಕುರ್ಚಿ ಹಾಕ್ಕಂಡಿ ಮೂರ್ ಸಲ ಕರಿ ನೀನು" ಹೇಳ್ದ. ಹಾಗೇಯ ಕುರ್ಚಿಹಾಕ್ಕಂಡ್ ಮೂರಸಲ ಕರ್ದ. ಆವಾಗ ಅವ ಕೆರೆ ಬದಿಂದ ಬಂದ ಅಲ್ಲಿ.

ಬಂದ್ಕಂಡ್, "ತನ್ನ ಕರ್ದದ್ಯೆಂತಕೆ?" ಹೇಳ್ ಕೇಳ್ದ. "ನಿನ್ನ ಕರದ್ದಕ್ಕೆ ಮೂರ್ ಮಾತು ನಿನ್ಕೈಲ್ ಮಾತಾಡ್ಬೇಕು ಹೇಳಿ ಬಂದಿದ್ದೆ." "ನಾನ್ ದೇವಲೋಕದಲ್ ದೊಡ್ಡ ಮಂತ್ರಿ. ತಾನ್ ಹೇಳ್ತೆ ನೀ ಕುಳ್ಳು" ಹೇಳ್ದ ಮಂತ್ರಿ ಹುಡ್ಗ ರಾಜನ ಹುಡ್ಗನ ಕೈಲಿ.

ಹಾಗೆಯೇ ರಾಜನ ಹುಡ್ಗ ಹೇಳ್ದ, "ಒಂದ್ ಹುಡಗಿ ಮೂರ್ ಒಲೆ ಗುಂಡು ಹೂಡಿ ತಾಮ್ರದ ತಪ್ಲಿ ಇಟ್ ವೀಳ್ಳೈದ್ ಪಟ್ಟಿ ಸಮುದ್ರದಲ್ಲಿ ಬಿಟ್ ಹೋಗದೆ ಕೆಳಮೊಕಾಗಿ." ಆವಾಗ ಮಂತ್ರಿ ಹುಡುಗ ಹೇಳ್ದ. "ಆ ತಪ್ಲೇಲ್ ನೀರು ತಂದಿಟ್ಟದ್ದು ತಾಮ್ರಧ್ವಜ ಹೇಳು ರಾಜನ ಹುಡ್ಗಿ ಅದು. ವೀಳ್ಳೈಪಟ್ಟಿ ಬಿಟ್ ಹೋದಾಗೇ ನಿನ್ಕೈಲ್ ಬಾ ಹೇಳದೆ." ಹಾಗೇಯ ವಂದ್ ದೋಣಿ ತಕ್ಕಂಡಿ ಎರಡೂ ಜನ ಹೋದ್ರು. ಹೋದ್ಕೊಡ್ಲೆಯ ಒಂದು ಅಜ್ಜಿ ಮುದ್ಕಿ ಮನೇಲ್ ಉಳದ್ರು. ಅಜ್ಜಿ ಮುದ್ಕಿ ಹೂಗಿನ ದಂಡೆ ಮಾಡ್ಕಂಡು ದಿನಾಲು ತಕ್ಕಂಡ್ ಹೋಗ್ ಕೊಡತಿತ್ತು ಹುಡಗೀಗೆ. ಮರುದಿವಸ ಮಂತ್ರಿ ಹುಡುಗ ಇವನೇ ಹೂಗಿನ ದಂಡೆ ಮಾಡಿದ. ಆವಾಗ ಅಜ್ಜಿ ಮುದ್ಕಿ ಕೈಲ್ ಕೊಟ್ಟ ಕಳ್ಸದ. ಆವಾಗ ಅದು ಹೂಗಿನ ದಂಡೆ ತಕಂಡ್ ಹೋಗ್ ಕೊಟ್ ಕೂಡ್ಲೆಯ ಹುಡುಗಿ ಯೆಂತಾ ಹೇಳ್ತು ಅಂತಂದ್ರೆ, "ಅಜ್ಜಿ ಈ ಹೂಗಿನ ದಂಡೆ ಇವತ್ ಕಟ್ಟದ್ದೊರ್ಯಾರು?" ಹೇಳ್ ಕೇಳ್ತು. "ಚಲೋದಂಡೆ."

"ಯಾರಿಲ್ಲ - ನಮ್ಮನೆಲ್ ದೊಡ್ ಮೊಮ್ಮಗಳ್ ಬಂದದೆ ಅದು ಕಟ್ಕೊಟ್ಟಿತ್ತು" ಅಂತು. ಹಾಗೇಯ ಹುಡ್ಗಿ, "ನಾಳೆ ಬರ್ಬೇಕಾರೆ ನಿನ್ ಮೊಮ್ಮಗ್ಳಿಗೆ ಕರ್ಕಂಬಾ" ಹೇಳ್ತು. ಮರುದಿವ್ಸ ಹೂಗಿನ ದಂಡೆ ಕಟ್ಟ ಇವನೇಯ ಹೂಗಿನ ದಂಡೆ ಒಳಗೆ ಒಂದ್ ಚೀಟಿ ಬರದ. 'ಒಂದು ಪಲಕು ಮತ್ತು ಒಂದು ಶೀರೆ ಕೊಟ್ಕಳ್ಸು' ಹೇಳಿ. ಅಜ್ಜಿ ತಕಂಡ್ ಹೋಗ್ ಕೊಟ್ತು.

ಹಾಗೇ ಅದು ಮುಡಿಬೇಕಾರೆ ಚೀಟಿ ಶಿಕ್ತು. ಚೀಟಿ ಒದ್ ನೋಡ್ಕಂಡಿ ಪಲ್ಕು ಶೀರೆ ಕೊಟ್ಕಳ್ಸ್ತು ಅಜ್ಜಿ ಮುದ್ಕಿಕೈಲಿ.

ರಾಜನ ಹುಡಗನಿಗೆ ಪಲ್ಕು ಸೀರೆ ಉಡ್ಸಿ ಅಜ್ಜಿಮುದ್ಕಿ ಬೆನ್ನಿಗೆ ಕಳಿಸಿಕೊಟ್ಟ, ರಾಜನ ಹುಡ್ಗಿದಲ್ಲಿ. ರಾಜನ ಹುಡ್ಗನ ಕೈಲಿ, "ರಾತ್ರೆ ನುಗ್ಲ ಬಿಡ್ತೆ ಆ ನುಗ್ಲ ಯೇಣಿ ಹತ್ತಿ ಅರಮನೆಗೆ ಬಾ" ಅಂತು.

ಮರುದಿವಸ ಹೂಗಿನ ದಂಡೆ ಕೊಟ್ ಬರ್ವಲ್ಲಿವರೆಗೆ ಇವರದು ಅಡ್ಡಿ ಬಿಡ್ಗಿಯೆಲ್ಲಾ ಆಗ್ಹೋಗದೆ. ಮರದಿವಸ ರಾತ್ರೆ ಹೋಗ್ತೆ ಬತ್ತೆ ಉಳ್ದ ರಾಜನ ಹುಡಗ. ಹಾಗೇಯ ಹುಡಗಿ ಸೋದರ ಮಾವನಿಗೆ ಸೂಟಿ ಬಿತ್ತು. ಹಾಗೇಯ ಅವ ಬಂದ. ಅಕ್ಕನ ಕೈಲಿ ಬಾವನ ಕೈಲಿ ಯೆಲ್ಲಾ ಹೇಳ್ದ. 'ಹೀಗೀಗಾಯ್ತುದೆ' ಹೇಳಿ. ಆವಾಗೆ ಆ ದಿವಸ ಕಾದುಕೊಂಡೆ ಕುಂತ್ರು. ಆ ದಿವಸ ಎರಡು ಜನರಿಗೆ ಹಿಡಿದರು. ಹಿಡ್ದಿ ಮನೆ ಒಳಗೊಂದು ಕತ್ಲೆ ಕೋಣಿತ್ತು. ಕೋಣೆಯೊಳಗೆ ದೇವರ ಮನೆಯಿತ್ತು. ಆ ಕೋಣೇಲ್ ತಂದ್ ಹಾಕಿಟ್ರು ಯರ್ಡೂಜನ್ರಿಗೂವ. ಮರುದಿವಸ ಮಂತ್ರಿ ಹುಡಗನಿಗೆ ತಿಳಿತು. ಎರಡೂ ಜನರ ಹಿಡ್ದು ಕೋಣೆಲಿ ಹಾಕಿಟ್ಟಿರು ಹೇಳಿ. ಆವಾಗೆ ಮರುದಿವ್ಸ ಇಡೀ ಊರೆಲ್ಲ ಡಂಗ್ರ ಹೊಡೆದರು. ಮನೆಗೊಬ್ಬೊಬ್ಬರು ಬರಬೇಕು ಹೇಳಿ ಡಂಗ್ರ ಹೊಡದಾನ್ ಹೇಳಿ.

ಈ ಮಂತ್ರಿ ಹುಡ್ಗ ಹೆಣ್ ಡ್ರೆಸ್ ಮಾಡ್ಕಂಬಂದ. ಆ ಅಜ್ಜಿಮುದ್ಕಿ ಕೈಲಿ ಬಾಳೆಕೊನೆ, ಕಾಯಿ, ಕರ್ಪೂರಯೆಲ್ಲ ಕೊಟ್ಟ ಮುಟ್ಟಿಲ್ಹಾಕಿ ರಾಜನ ಮನೆಕೂಡ ಬಂದ್ರು. ರಾಜನ ಕೈಲಿ ಹೇಳಿದರು. "ಮೊಮ್ಮ್ಗ ಗಟ್ಟಕ್ಕೋದವ ಬಂದನೆ. ಮತ್ತೆ ಒಂದ್ ಪೂಜೆ ಹೇಳ್ಕಂಡಿದ್ದೆ." ರಾಜ ಹೇಳ್ದ. "ಇವತ್ ಪೂಜೆ ಕೊಡುಕಾಗುದಿಲ್ಲ" ಹೇಳ್ದ. "ಇಲ್ಲ, ಮೊಮ್ಮ್ಗ್ನಿಗೊಬ್ನಿಗೆ ಒಳಗೆ ಬಿಟ್ತೆ." "ಒಬ್ಬಳಿಗೆ ಹೆರಗೆ ಹಾಕಿ" ಹೇಳ್ತು ಅಜ್ಜಿ, ರಾಜ ಒಳಗೆ ಬಿಟ್ಟ ಹುಡಗೀಗೆ.

ಪೂಜೆ ಗೀಜೆ ಕೊಟ್ಟಾದ್ಮೂಕ್ಲೆ ಇವ ಹಾಕಿದ ಡ್ರೆಸ್ ರಾಜನ ಹುಡಗೀಗೆ ಕೊಟ್ರು. ಬಾಳೆ ಕೊನೆ ಮುಟ್ಟಿಯಲ್ಲಾ ಹುಡುಗಿಕೈಲ್ ಕೊಟ್ ಕಳಿಸದ್ರು. ಹೆರ್ಗೆ ಬಾಗಿಲ ಹಾಕಿದರು. ಒಳಗಿದ್ದ ವಸ್ತ್ರ ಅಂಗಿ ಬಿಂಗಿ ಮಂತ್ರ ಶಕ್ತಿಂದ ಸುಟ್ ಬೂದಿ ಮಾಡಿಬಿಟ್ರು. ಹಾಗೇಯ ಜನರೆಲ್ಲ ಬಂದ್ರು.

ಎರಡೂ ಜನರನ್ನು ಹೊರಗೆ ಹಾಕಿದ್ರು. ಪಾರ್ಟು ತಕ್ಕಂಡ್ ಖುಷಿಯಾಗಿ ಹೊರಗೆ ಬಿದ್ರು. ರಾಜ ಕೇಳ್ದ ಪೋಲೀಸರೆಲ್ಲ ಹೇಳಿದರು, "ಹಾದಿಮೇಲ್ ಹೋಬೇಕಾರ್ ತಂದ ಹಾಕವ್ರೆ ಒಳ್ಗೆ" ಬಿಟ್ರು. ಅಜ್ಜಿಮನೆಗೆ ಹೋದ್ರು ಅವ್ರು.

ಮರುದಿವಸ ಮಂತ್ರಿ ಹುಡ್ಗ ಅಜ್ಜಿಮುದ್ಕಿ ಡ್ರೆಸ್ ಮಾಡ್ಕಂಡ್. ರಾಜನ ಹುಡ್ಗಗೆ ಹೆಣ್ ಹುಡ್ಗಿ ಡ್ರೆಸ್ ಮಾಡ್ದ. ಕರ್ಕಂಡಿ ರಾಜನ ಮನೆಕಡೆ ಬಂದ. ರಾಜನ ಕೈಲಿ ಮಂತ್ರಿ ಹುಡ್ಗ (ಅಜ್ಜಿವೇಷ) ಮೊಮ್ಮ್ಗ ಗಟ್ಟೆ ಹೋಗನೆ. ಮೊಮ್ಮ್ಗಗಳು ಒಬ್ಳೇಯ. ಮೊಮ್ಮ್ಗಗಳ ನಿನ್ನ ಹುಡ್ಗಿದಲ್ಲಿ ಇಟ್‌ಹೊಗ್ತೆ ಅಂದ. ರಾಜ, "ನಮ್ಮದೇನ ಅಡ್ಡಿಲ್ಲ. ಹುಡ್ಗಿ ಅಡ್ಡಿಲ್ಲ ಹೇಳಿದರೆ ಅಡ್ಡಿಲ್ಲ" ಅಂದ.

ಹುಡ್ಗಿ ಕೇಳ್ಕಂಡ್ ಬಂದ, "ಹುಡ್ಗಿ ಇಲ್ಲೇ ಇಟ್ ಹೋಗ್ತೆ" ಅಂದ. ಹಾಗೇ ಬಿಟ್ಟಾಕ ಬಂದ. ಮತ್ತೆ ಹುಡಗಿ ಮಾವ ಬಂದಿದ್ದ. ಅಕ್ಕ-ಬಾವ ಮಾತಾಡ್ಕಂಡು ಹೇಳಿದರು. "ಹುಡ್ಗಿದಲ್ಲಿ ಅಜ್ಜಿ ಹುಡ್ಗಿ ತಂದಿಟ್ಟಿ ಹೋಗದೆ" ಹೇಳಿ. ಅವ ಹೋದ ಮೆತ್ತಿನಮೇನೆ. ಹಾಗೇಯ ಅಲ್ಲೇ

ಮಾತಾಡ್ತೆ ಅಲ್ಲೆ ಮನಿಕಂಡ ಹುಡ್ಗಿ ಮಾವ. ಮೆತ್ತಿನ ಮೇಲೆ ಮಾವನ ಬುಡ್ಕೆ ಮನಿಕಂಡ್ತು ಆ ಹುಡ್ಗಿ. ರಾಜನ ಹುಡಗ (ಹೆಣ್ಣು) ಇಚೆ ಮನಗಿದ. ರಾತ್ರಿಕೂಡೆ ರಾಜನ ಹುಡ್ಗನ ಮಾವನ ಬದಿಗೆ ಹಾಕ್ತು. ಹಾಗೇ ಮೈಮುಟ್ದ ಹೇಳ್ ಆಯ್ತು. "ಅಕ್ಕನ ಹುಡಗಿ ಮಾವ ಮೈಮುಟ್ದ" ಹೇಳ್ ಬೊಬ್ಬ ಹೊಡಿತು. ಮೆತ್ತಿನ ಮೇಲೊಂದು ಗಂಡಿತ್ತಂತೆ. ಗಂಡಿಲ್ ಬೊಬ್ಬೆಕೊಟ್ ಕೂಡ್ಲೆ ಹಾರಿಬಿಟ್ಟನಂತೆ ಮಾವ. ಯಲ್ಲು ಪುಡಿಪುಡಿಯಾಯ್ತು.

ರಾಜನ ಹುಡ್ಗನಿಗೆ ಅಜ್ಜಿ ಮನೆಗೆ ಕಳಿಸದಳು. ಬೆಳ್ಗಾದ್‌ಕೂಡ್ಲೆ ಅಪ್ಪನ ಕೈಲ್ ಹೇಳ್ತು. "ಹೀಗೀಗೆ ಮಾಡ್ಕಂಡು ಬೊಬ್ಬೆ ಮಾವ ಹಾಕುತ್ಲೂ ಕಿಡ್ಕಿಗಂಡಿಲ್ ಹಾರ್ಕಂಡಿ ಸತ್ಕಂಡನೆ ಹುಡ್ಗಿ ಯೆಲ್ಹೋಯ್ತು ಹೇಳಿ ಪತ್ತಿಲ್ಲ" ಅಂತು.

ಮರುದಿವಸ ಮಂತ್ರಿ ಹುಡ್ಗ ಅಜ್ಜಿ ಡ್ರೆಸ್ ಮಾಡ್ಕಂಬಂದ. ರಾಜನ ಕೈಲಿ "ಮೊಮ್ಮಗ ಬಂದ. ಮೊಮ್ಮಗಳಿಗೆ ಕರ್ಕಂಡ್ ಹೋಗ್ತೆ" ಹೇಳ್ತು. ಹೇಳದ್ರ ರಾಜ ಹೇಳ್ದ, "ನಿನ್ನ ಮೊಮ್ಮಗಳು ಎಲ್ಲಿ ಓಡ್ಹೋಗದೆ ಪತ್ತಿಲ್ಲ" ಹೇಳ್ದ. "ಯೆಂತಾಮಾಡೂದು" ಕೇಳ್ದ.

ಇಲ್ಲಾಂದ್ಕೂಡ್ಲೆ ಅಜ್ಜಿಮುದ್ಕಿ ತೀಡೂಕೆ ಹಣ್ಕಬಿಡ್ತು. ರಾಜ ಹೇಳ್ದ, "ನೀನು ತೀಡೂದೆ ಬೇಡ. ತನ್ ಹುಡ್ಗಿನೇ ಕೊಡ್ತೆ ತಕಂಡ್ ಹೋಗು" ಹೇಳ್ದ. ಅಜ್ಜಿಮುದ್ಕಿ ಬೆನ್ನಿಗೆ ಕಳಿಸಿಕೊಟ್ಟ. ಕರ್ಕಬಂತು ಮನೆಗೆ. ರಾಜನ ಹುಡ್ಗ ಮನೆಗೆ ಕರ್ಕಂಡ ಹೋದ. ಮದಿಯಾಗಿ ಇಬ್ರ ಹೆಂಡ್ರ ಜೊತೆನೂ ಸುಖ-ಸಂತೋಶ್ದಲ್ಲಿ ವಳ್ದ.

■ ಹೇಳಿದವರು: **ರಮೇಶ ಬೀರಪ್ಪ ನಾಯ್ಕ, ಹೊದ್ಕೆ.**

◆

# ಚೋಟಣ್ಣ

ವಂದೂರ್ನಲ್ಲಿ ವಂದ್ ಅಜ್ಜಿರ್ತದೆ. ಅಜ್ಜಿಗೆ ಯಾರೂ ಇರಲ್ಲ. ವಬ್ಬಳೇಯ. ಹೀಗೆ ಇರಬೇಕಾದ್ರೆ ವಂದಿವ್ಸ ಅನ್ನಬಾಗಿಸ್ತಾ ಇರಬೇಕಾದ್ರೆ ತಿಳಿ ಕೈಮೇನ್ ಬಿದ್ಬಿಡ್ತದೆ. ಅದ್ ಕೈಮೇಲ್ ಗುಳ್ಳ್ಯಾಗಿ ನಾಕೈದ್ ದಿನದ ಮೇಲೆ ವಡಿತದೆ.

ಆ ಗುಳ್ಳೆ ವಡ್ದ್ ನಂತ್ರ ಅದರೊಳಗೊಬ್ಬ ಚೋಟಣ್ಣ ಹುಟ್ತಾನೆ. ಚೋಟಣ್ಣ ದೊಡ್ಡಾದ. ಹೀಗೆ ವಂದಿವ್ಸ ಕಡಿಗೆ, "ಸೌದಿ ತಕಂಡ್ ಬರ್ತೇನೆ" ಅಂತ ಹೋಗ್ತಾ. ಹೋಗ್ ವಂದ್ ಮರ ಹತ್ಕಂಡು ಸೌದಿ ಕಡಿತ್ ಇರಬೇಕಾರೆ ನಾಲ್ಕ್ ಜನ ಕಳ್ಳರು ಬರ್ತಾರೆ. ಅವ್ರು ಬಂದವ್ರು ಇವ ಹತ್ದ ಮರದ ಕೆಳಗೇ ಕೂತಿರ್ತಾರೆ.

ಇವ ವಂದ್ ಯೆಲಿ ಮರಿಗೆ ಕೂತ್ಕಂಡಿರ್ತಾನೆ. ಈ ಕಳ್ಳರು ತಾವ್ ತಂದ ಬಂಗಾರ, ದುಡ್ಡು ಯೆಲ್ಲಾ ಪಾಲ್ ಹಂಚ್ಕೊಳ್ಳಿಕ್ ಸುರುಮಾಡ್ತಾರೆ.

ಯೆಲ್ಲಾ ಸರಿ ನಾಲ್ಕ್ ಪಾಲ್ ಹಾಕಂತೇ ಇರಬೇಕಾರೆ, 'ಪೊಲೀಸ್ ಪೊಲೀಸ್' ಹೇಳ್ ಕೂಗ್ ಬಿಡ್ತಾನೆ. ಕಳ್ಳರಷ್ಟೂ ಬಿಟ್ ಹಾಕ್ ವೊಡ್ಬಿಡ್ತಾರೆ.

ಇವ ಮರದಿಂದ ಕೆಳಗಿಳ್ದು ಆದಷ್ಟು ಕಟ್ಕಂಡ್ ಮನೆಗೆ ಬರ್ತಾನೆ. ಹೀಗೇ ಇರಬೇಕಾದ್ರೆ. ಅಜ್ಜಿಮನೆಲ್ ವಂದಿವ್ಸ ತುಳಿಸಿ ಹುಣ್ಣಿಮಿ ಪೂಜೆ. ಯೆಲ್ಲಾ ಸಾಮಾನ ತಂದಿರ್ತಾರೆ. ಬಾಳೆ ಹಣ್ ವಂದ್ ತಂದಿರೋಲ್ಲ.

ಆವಾಗ್ ಇವಂಗ್ ಪೂಜಿಗ್ ಬಾಳೆ ಹಣ್ ಬೇಕಾಯ್ತು. ಅಂಗಡಿಗೆ ಹೋಗ್ತಾನೆ. ಅಂಗಡಿ ಬಾಗ್ಲೆಲ್ಲಾ ಹಾಕಿರ್ತದೆ. ಆವಾಗ ವಂದ್ ಸಣ್ಣ ಸಂದಿರ್ತದ. ಅದ್ರೊಳ್ಗೆ ಇವ ವಳ್ಗೆ ಹೊಕ್ತಾನೆ. ಹೊಕ್ ಬಾಳಿಹಣ್ ತಕಂಡ್ ಬರ್ತಾನೆ ಮನಿಗೆ.

ಇವ ಮಾರ್ನೆ ದಿವ್ಸ ಅಷ್ಟೇ ಹೊತ್ತಿಗೆ ಬಾಳೇ ಹಣ್ ತಿನ್ನೊ ಆಶ್ಯಾಗಿ ಅಂಗ್ಡಿಗ್ ಹೋಗ್ ಬಾಳಿಹಣ್ ಯೆಲ್ಲಾ ತಿಂದ್ ಅಲ್ಲೇ ಶಿಪ್ಪಿ ಹಾಕ್ ಬಂದ್ಬಿಡ್ತಾನೆ.

ಶೆಟ್ಟಿ ಬೆಳಿಗ್ಗೆ ಬಂದ್ ಬಾಗ್ಲ ತೆಗ್ದ ನೋಡ್ವಾಗ ಹಣ್ಣಿಲ್ಲಾ. 'ಬಾಗ್ಲೆಲ್ಲಾ ಹಾಕ್ದಹಾಗೇ ಉಂಟು, ಬಾಳೇಹಣ್ ಯೆಲ್ಲಾ ತಿಂದ್‌ಹಾಕ್ ಹಾಕಿಬಿಟ್ಟಿದಾರೆ. ಯಾವದೋ ವಂದ್ ಕಳ್‌ಬರ್ತಾನೆ. ಇವತ್ ರಾತ್ರಿ ಅವ್ನ ಹಿಡೀಲೇ ಬೇಕು' ಅಂತ ಹೇಳಿ, ಆ ದಿವ್ಸ ರಾತ್ರಿ ಅಂಗಡೀಲೇ ಕಾಯ್ತಾ ಇರ್ತಾನೆ. ಈ ಚೋಟಣ್ಣ ದಿವಸಾ ಬರೋ ಹೊತ್ತಿಗೇ ಬಂದ. ಬಂದವನೇ ವಳ್ಗ್ ಹೊಕ್ದ. ಅಂಗ್ಡಿಯವ ನೋಡಿ ಅವನ ಹಿಡ್ದ್ ಬಿಡ್ತಾನೆ.

ಮಾರನೇ ದಿವಸ ಬೆಳಿಗ್ಗೆ, 'ಇವನಿಗೆ ವಂದ್ ಶಿಕ್ಷೆ ಕೊಡಬೇಕಾಯ್ತು. ಆವಾಗಿವ್ನಿಗೆ ಯಾವ ಶಿಕ್ಷೆ ಕೊಟ್ರೆ ಇವ ಸಾಯ್ತಾನಪ್ಪಾ?' ಅಂತ ಆಲೋಚ್ನೆ ಮಾಡಿ, 'ಬಾವೀಲ್ ಹಾಕ್ಬೇಕಿವನ' ಅಂತ ಹೇಳಿ ವಂದ್ ಬುಟ್ಟಿಗ್ ವಂದ ಹಗ್ಗಕಟ್ಟಿ, ಇವನ ಬುಟ್ಟಿ ವಳಗೆ ಹಾಕಿ ಬಾವಿವಳ್ಗ್‌ಬಿಡ್ತಾನೆ. ಇವ ಯೇನ್ ಮಾಡದ್ರೂ ಬುಟ್ಟಿ ಮುಳುಗೂದಿಲ್ಲ.

ಆವಾಗ ಶೆಟ್ಟಿ ಹತ್ರ ಹೇಳ್ತಾನೆ ಅವ ಬಾವಿ ವಳಗಿಂದೇಯ, "ನನ್ನ ಜತಿಗೆ ಬುಟ್ಟಿವಳ್ಗೆ ವಂದ್ ಕಲ್ಲೂ ಹಾಕಿದ್ರೆ ತಾನ್ ಮುಳ್ಗತಿದ್ದೆ. ನಿನ್ಗೆ ಅಷ್ಟೂ ಬುದ್ಧಿ ಗುತ್ತಿಲ್ಲ. ಅದ್ರಿಂದ್ ಮೇಲೆ ತೆಗಿ, ವಂದ್ ಕಲ್ ಹಾಕಬಿಡು" ಅಂತ ಹೇಳಿ ಚೋಟಣ್ಣ ಹೇಳ್ತಾನೆ.

ಹೀಗೇ ಶೆಟ್ಟಿ ಬುಟ್ಟಿ ಮೇಲೆ ಯೆತ್ತ್‌ತಾನೆ. ಮೇಲೆ ಕಟ್ಟಿ ಮೇಲಿಟ್ಕಂಡು ಬುಟ್ಟಿಲ್ ಹಾಕ್ಬೇಕಂದಿ ಕಲ್ ತರಲಿಕ್ ಹೋಗ್ತಾನೆ. ಚೋಟಣ್ಣ ತಪ್ಸಕಂಡ್ ಮನಿಗೆ ವೋಡ್ ಪರಾರ್ಯಾಗ್ತಾನೆ. ಆಗ ಶೆಟ್ಟಿ ಬಂದ್ ಬುಟ್ಟಿಲ್ ನೋಡ್ತಾನೆ. ಚೋಟಣ್ಣಿಲ್ಲಾ.

■ ಹೇಳಿದರು: **ಸೌ| ವಿಜಯಲಕ್ಷ್ಮಿ ರಾಮನಾಥ ನಾಯ್ಕು,** ಅರೆ ಅಂಗಡಿ, ತಾ: ಹೊನ್ನಾವರ.
ವಯಸ್ಸು ಆಗ 30. ದಿನಾಂಕ: ೩೦-೧-೭೩

# ಚಿನ್ನದ ಕೂದಲಿನ ಪಾರ್ವತಿ

ಅಜ್ಜಿ-ಮೊಮ್ಮಗ ಇದ್ರು. ಬಹಳ ಬಡತನ, ಬೇಡ್ಕಂಬಂದಿ ತಿನ್ನುದು. "ವಂದ್ ಬುತ್ತಿ ಕಟ್ ಕೊಡಜ್ಜವ್ವಾ. ತಾನು ಊರ್ ತಿರಿಕಂಬತ್ತೆ" ಅಂದ್ ಹೇಳ್ತ. "ಬುತ್ತಿ ತಕಂಡ್ ಹೊರಟು ತಾರಿಮೇನ್ ತಿರ್ಗತ. ಯೆಯಡ್ಡ ಬಿಲ್ಲಿ ಕೊಟ್ಟಿ ಆಚಿ ದಾಟ್ದ. ತಾರ್ನವ ಯೇನ್ ಕಷ್ಟ ಬಂದ್ರೂ ಬೆಡ್ಕೊ, ತಾ ಬಂದ್ ಪರಿಹರ್ಸ ಕೊಡ್ತೆ" ಅಂತ.

ಮುಂಚೆ ಹುಲಿ ಶಿಕ್ತದೆ. ಬೆಂಡ್ ಕಟ್ಟ ಹಾಕ್ತ, ಹುಲಿ ಕೇಳ್ತದೆ. ಹುಲಿ ಸಿಕ್ದ ಕೂಡ್ಲೆ "ಯೆಲ್ಲ ಹೋಗ್ತೆ?" "ತನ್ ಬಡಸ್ತನದ ತಕ್ಕಾಗಿ ಬೇಡ್ ಬೇಡ್ ಸಾಕಾಗಿ ಊರ ತಿರಿಕಂಬೂಕ ಬಂದಿದ್ದೆ" ಅಂದ.

"ಯೇನ್ ಕಷ್ಟ ಬಂದ್ರು ಪರ್ಯಾರ ಮಾಡ್ತೆ" ಅಂತು ಮುಂದಕ್ ಹೋತ. ಯೆರವಿ ಯೆಂಬತ್ ಕೋಟಿ ಶಿಕ್ತದೆ. ಸೊಪ್ಪ ಟೊಂಕಿ ತಕಂಡಿ ಹರೂ ನೀರಗೆ ಯೆರವಿ, ಆಚಿದ್ದ ಈಚಿ ಈಚಿದ್ ಆಚಿ ಮಾಡಿ ಹೊರ ಹಾಕ್ತ. "ಯೆಲ್ ಹೋಗ್ತವ? ಬೇಡ್ಕಂತ ಬಂದವ." "ಕಷ್ಟ ಊರ ತಿರಗ್ ಹೋಗಬವುದು" ಅಂದ. "ಕಷ್ಟ ಪರಿಹರ್ಸ ಕೊಡ್ತೆ" ಅಂತದೆ.

ಮತ್ ಗುಮ್ಮಕ್ಕಿ ಸಿಕ್ತದೆ. ವಂದು ಗುಮ್ಮಕ್ಕ ಕೇಳ್ತದೆ. "ಹಾದೀಲ್ ಕೂತಿದಿಯೇ ಯೆಲ್ಗ್ ಹೋಗುವವ? ಬೇಡ್ಕಂತ ಬಂದವ." "ಊರ ತಿರಗೂಕೆ ಬಂದನೆ" ಅಂದ. "ಇದೇ ರಾಜನ ಮನಿಗೆ ಹೋಗು. ಒಂದು ತುತ್ತ್ ಅನ್ನದೆ" ಅಂತು. ರಾಜನ ಮನಿಗೆ ಹೋಗ್ತ ಅವ.

ರಾಜ್ನ ಹುಡುಗಿ ವಳಿತದೆ. ಯಾರ ಬಂದ್ರೂ ನಗ್ನಾಗುಕಾಗುದಿಲ್ಲ. ನಾಕ್ ಪಣ ಇಟ್ಟದೆ. ವಂದ್ ನೂರಾ ವಂದ್ ಮಾಳ್ದಲ್ಲಿ 'ಕೂ' ಹೊಡ್ವದು. ವಂದ ಮಾನ್ಗಕ್ಕಿ ಅನ್ನ ತಿನ್ನಬೇಕು. ವಂದ ಕೊಟ್ಗಿ ದನ ಮುರಿಬೇಕು. ವಂಚೀಲ ರಾಗಿ, ವಂಚೀಲ ಸಾಸ್ಮಿ ಬೇರ್ ಮಾಡಕೊಡ್ಬೇಕು. (ಮಾಳ ಅಂದರೆ ಗದ್ದೆಯ ಬೆಳೆಯನ್ನು ಕಾಯಲು ಗದ್ದೆಯಲ್ಲೇ ಎತ್ತರದಲ್ಲಿ ಕೂಡ್ರಲು ಮಾಡಿದ ಮಾಡು)

ವಂದಿನ ಯೇನಂದು ಪಣ ಇಟ್ತು? ನೂರಾವಂದ್ ಮಾಳದಗೂ ಸರಿಯಾಗ್ ಕಾಯಬೇಕು. ನೂರಾ ವಂದ್ ಮಾಳದಗೂ ಯಾರ್ ನೋಡುಕ್ ಬಂದ್ರೂ ಅಟ್ರಗೂ ಇದ್ದವ ಕೂಗು ಹೊಡಿಬೇಕು. ಗುಮ್ಮಕ್ಕಿ ನೆನಕಂತ, 'ಈ ಮಾಳಕಾವರೊಳಗೆ ನೀ ಬರಬೇಕು' ಅಂದ ನೂರಾ ವಂದ್ ಗುಮ್ಮಕ್ಕಿ ಕರಕಬತ್ತದೆ. ಯಾವ ಮಾಳಕ್ ಹೋದ್ರೂ 'ಊಂ.. ಊಂ...' ಅಂತದೆ.

"ಕೊಟ್ಟಗೀಲಿ ನೂರಾವಂದ್ ದನ ಉಳಿತದೆ. ರಾತ್ರಿ ಬೆಳಗಾಗೂ ತನ ನೂರಾವಂದ್ ದನನೂ ತಿನಬೇಕು. ನೂರಾವಂದ ತಲಿ ಗುಮಟೆ ಬೀಳಬೇಕು" ಅಂದಿ ಪಣ ಇಟ್ತು. ಹುಲಿ ನೆನಕಂತ, ಹುಲಿ ಬಂದಿ ದನ ಅಟ್ಟೂ ಮುರ್ಕ ತಿಂದ್ಕಂಡಿ ತಲಿ ಬಿಟ್ ಹಾಕ್ ಹೋತದೆ.

"ವಂದ್ ಚೀಲ ರಾಗಿ ವಂದ್ ಚೀಲ ಸಾಸ್ಮಿ ಬೆರಸಿ ರಾತ್ರಿ ಬೆಳಗಾಗುವವರಿಗೂ ವಂದ್ ಅಲಕ್ ಆಗದೆ ಬೇರ್ಮಾಡಕೋಡ್ಬೇಕು" ಅಂತು. ಆವಗೆ ಯರ್ಗ ನೆನಕಂತ. ಅವ, 'ನೀ ಬಂದ್ ತನ್ಗೆ ಸಾಯತನ ಮಾಡ್ ಕೊಡಬೇಕು' ಅಂದಿ. ಯೆಂಬತ್ ಕೋಟಿ ಯರ್ಗೆ ಹೆಕ್ ಬೇರಮಾಡಿ ಹೋಗಬೇಕಾದರೆ ವಂದ್ ಗರ್ಭಿಣಿಯರಗ ವಂದ ಸಾಸ್ಮಿ ಕಚ್ಕ ಹೋತದೆ. ಹುಡುಗಿ ಬೆಳಿಗ್ಗೆ ಬಂದದ್ದು ಅಳದು, "ವಂದ ಸಾಸ್ಮಿ ಕಮ್ಮಿ ಬಂದದೆ, ತಂದ ಕೊಡಬೇಕು. ಯೆಲ್ದಗಿದ್ರೆ ನಾ ಇಟ್‌ಪಣ ಮುರಿತೆ?" ಅಂತದೆ. "ತಾತಂದ್ ಕೊಡ್ತೆ" ಅಂದಿ, ಯರ್ಗ ನಿದ್ದಲ್ ಹೋಗಿ ಸಾಸ್ಮಿ ತಂದ್ ಕೊಡ್ತ. ಕೂಡಲೇಯ ಮತ್ತೊಂದು ಪಣ ಇಟ್ತು. "ವಂದ್ ಮಾನ್ಗಕ್ಕಿ ಅನ್ನ ಮಾಡಿ, ಕುಂಬಳಕಾಯಿ ಪಲ್ಯ ಮಾಡಿ ನಿರಾತ್ರಿ ಬೆಳಗಾಗೂವರಿಗೆ ಉಣಬೇಕು" ಅಂದಿ ಪಣ ಇಟ್ತು.

ತಾರ್ನವ್ನೇ ಬಂದಿ, 'ಅನ್ನ ಉಂಡಿ ಕರ್ಚಮಾಡ್ಬೇಕು' ಅಂದ. ತಾರ್ನವ ಉಣ್ಣದೇಯೆಷ್ಟ ದಿವ್ಸಾಗಿತ್ತು ಯೇನೋ ಬಂದವ ಅಟ್ಟೂ ಅನ್ನ ತಿಂದ. ತಿಂದ ತಿಂದ ನೆಲದ ಮಣ್ಣನ್ನೂ ವಂದ ಮುಟ್ಟಿ ತಿಂದ್ಕಂಡ್ ಹೋತ. ಬೆಳಿಗ್ಗೆ ಬಂದ್ ಕದ ತೆಗಿತದೆ ಅದು ಪಣ ತೀರ್ತು ಅಂದಿ.

ಊರರ್ಗೆಲ್ಲ ಕರ್ಯ ಮುಟ್ಸತ ಜನ ಬಂದರು. 'ನಗ್ನಾಗೂಕ್ ನಮ್ಮ ಕೈಲಾಗಲೆಲ್ಲ. ಇವ ಚೆನ್ನದ ಕೂದ್ಲ ಪಾರ್ವತಿ ನಗ್ನಾತ' ಅಂದಿ ಎಲ್ಲರೂ ಅಶ್ಚೀರ್ ಬೀಡ್‌ತ್ರು. ಕುದ್ರಿ ತಕಂಡು, ಸಾಮಾನ ತಕಂಡಿ, ಹಿಂದ್ತಿ ಕೂರ್‌ಕಂಡಿ ಅಜ್ಜಿಮನಿಗೇ ಬತ್ತ. ಅಜ್ಜವಿ ಕೈಲ್ ಹೇಳ್ತ, 'ತಿರ್ಗ್ ತಿರ್‌ಗಿ ಪಣ ಗೆದ್ದಿ ಲಗ್ನಾಗ್ ಬಂದೆ' ಸುಕದಲ್ ವಳಿತ್ರು.

- **ಕೆಲವು ಪದಗಳ ವಿವರಣೆ**

    ಟೊಂಕಿ = ಟೊಂಗೆ

    ಬೆಂಡ್ ಕಟ್ ಹಾಕ್ತ = ಹೊಳೆಗೆ ಬೆಂಡಿನ ಕಟ್ಟನ್ನು ಹಾಕುತ್ತಾನೆ

    ಗುಮ್ಮಕ್ಕಿ - ಗೂಬೆ

    ಗುಮಟಿ - ದುಂಡನ್ನ ತಲೆ

    ಪಣ - ಶರ್ತು

    ಕರ್ಯ-ಕರೆ, ಆಮಂತ್ರಣ

■ ಹೇಳಿದವರು : ನಾಗಮ್ಮ ನಾಗಪ್ಪ ನಾಯ್ಕ, ಹೆಗಡೆ ಊರು

◆

# ಚಿನ್ನದ ಕೋಳಿ

ಅರಸು ಮಂದಮತಿ. ಚಿನ್ನದ ಕೋಳಿ ತಂದ್ರೆ ಪರಿಹಾರ. ಅವನ ಮೂರ್ನೆ ಮಂಗಗೆ ಕಾಳಿಕಾಮ್ಮ ಪರಸರಾಮನ ಆಯಧ ಕೊಟ್ಟಿದೆ. 'ಚಿನ್ನದ ಕೋಳಿ ತರ್ವಲ್ಲಿ ಹೋಗ್ ಹೋದೋರ್ ಕಂಡಿದ್ದೆ, ಬಂದೋರ್ ಕಾಣ್ಣಿಲ್ಲ' ಅಂತರೆ. ಹಿಂಡ್ತಿ ಮೂರ್ ಹಳ್ಳ ಕೊಡತ್ಲು. ಯೇಳ ಸಮುದ್ರದಾಚೆ ಚಿನ್ನದ ಕೋಳಿ ಅದೆ.

ಬಿಸಲ್ನಲ್ಲಿ ಆರಾಂ ಕುಂತಕೊಂಡ. ಗಂಡ್ ಬೇರುಂಡ, ಹೆಣ್ ಬೇರುಂಡ ಮರಿಗೆ ಆಯಾರ ತರೂಕ್ ಹೋದಾಗೆ ಸರ್ಪ ಮರಿ ತಿಂಬೂಕೆ ಬಂತು. ಮರಿ, "ಮಾರಾಯ, ನಮ್ ಜೀವ ಇದ್ರೆ, ನಿನ್ನ ಜೀವ ಕಾಯತ್ರು ನಮ್ ತಾಯಿ-ತಂದೆ, ನೀನೇ ತಂದೆ-ತಾಯಿ" ಅಂತ ಗಿಜರತದೆ. ಕೊಡ್ಲಿಂದ ಹೊಡೆದ ಸರ್ಪ ಸತ್ತಿತು ಮರಿಗೆ ಸಂತೋಸಾಯ್ತು. "ನಿನ್ನ ಕಾರ್ಯ ಮಾಡಿಕೊಡತೇವೆ." ತಾಯಿ-ತಂದಿ ಆಯಾರ ತಕಂಡಿ ಬಂದ್ರು, ಹಣ್ಣು ಹಂಪ್ಲಿ ಕಿಟ್ಟಬೇಕಾದ್ರೆ ಪಣ ಹೇಳಾಗದೆ. 'ಅವ್ವಾ ತಾಯಿ ವಳಗೂ ನೀವಲ್ಲ, ತಂದಿ ವಳಗೂ ನೀವಲ್ಲ. ನಮ್ಮ ಜೀವ ಕಾಪಾಡಿದವ ಈ ಮನಶ. ಚಿನ್ನದ ಕೋಳಿ ತಗಬರೂಕೆ ಅವ ಬಂದನೆ. ಯೇಳ್ ಸಮುದ್ರದಾಚೆ ಅವನ್ನ ತಕೊಂಡ ಹೋಗಿ ಬಿಟ್ ಹಾಕ್ ಬನ್ನಿ' ಹೇಳ್ತದೆ.

ಅವ ಯೆರಡೂ ಹಕ್ಕಿ ರಟ್ಟಿ ಮೇಲೆ ಸಮುದ್ರ ದಾಟಿ ಹೋತ. ವಂದ್ ಪಕ್ಕದ ಗಿರಿ ಕೊಟ್ ಹಾರ್ ಹೋತದೆ. ಗಿರಿ ಹಿಂದೆ ಮುಂದೆ ಮಾಡಿ ಹಿಡದ್ರೆ ತಾ ಬತ್ತೆ. ಹೇಳಾಕ್ ಹೋತದೆ.

ಅಲ್ಲಿ ವಂದ್ ಮರನಲ್ಲಿ ಪಿಶಾತಿ ಬೂತಂಗಳು, ರಕ್ಕಸರು ಯಲ್ಲವರು ಕಾಯತ ಇರತ್ರು. ಮರಕೆ ಹೋದ ಮೇಲೆ ಚಿನ್ನದ ಕೋಳಿ ಅದೆ. ಅವ ವಂದ್ ಗುಂಡ ಮಂತ್ರಿಸಿ ಹೊಡಿತ. "ಬೂತ, ಪಿಶಾತಿ, ರಕ್ಕಸರು ಏನೂ ಇದ್ದರೂ ಅಡ್ಡಾಗಿ ನಿಲ್ಲಬೇಕು" ಅಂದಿ ವಂದ್ ಕಲ್ ಹೊಡದ. ಮರನಲ್ಲಿ ಯೆಲ್ಲಾ ಬಿಟ್ಟಿ ಸೊಮಗ್ ನಿತ್ ಬಿಟ್ರು. ಚಿನ್ನದ ಕೋಳಿಯ ತೆಕಂಡ ಬಂದ. ಗಿರಿ ಹಿಂದ್ ಮುಂದ್ ಮಾಡಿ ಹಿಡ್ದ. ಆ ಹಕ್ಕಿ ಯೆಯಡೂ ಅಲ್ಲಿ ಹಾರ್ ಬಂತು.

ಕಟ್ಟೆಗೆ ತಂದ್ ಬಿಟ್ರು. ಪುನಃ ನೆಂಟರ್ ಮನಿಗ್ ಬಂದ. ಮಾವನ ಕೈಲಿ, "ನನ್ ಮನಿಗ್ ಹೋಗ್ತೆ" ಅಂದ. ಹಿಂಡ್ತಿನ ಕರ್ಕಂಡ್ ಹೊಂಟ. ಕೂಡಿ ಬಂದ್ರು.

ಸುಮಾರ್ ಕುಮಟೆಗೆ ಬಂದ. ಸೂಳಿಮನೆ, ದಾರೀಲ್ ಸೂಳಿಮನೆ ಅದೆ. ಪದ್ಮಾವತಿ ಅಲ್ಲಿ ಬೋರ್ಡ್ ಬರೆದಿಟ್ಟದೆ.

'ನಾನು ಬರೆದ ಬೋರ್ಡನ ಅಕ್ಸರ ನೋಡಿ ಯಾವವ ಹಿಂದೆ ಹೋದನೋ ಅವ ನನ್ ಕಿಕ್ಕಾಲ್ ಗಂಡಿಲ್ ಮನ್ಗೆ ಹೋದಂತೇಯ' ಹೇಳಿ ಬರದಿಟ್ಟದೆ. ಬಂದ್ ನೋಡ್ದ. ಮೊಕಸಾರೆ ಪಗಡಿ ಆಟ ಗೆದ್ಕಂಡ್ ಹೋಗ್ಬೇಕು.

ಅಡವಿಗೆ ಯೆಯ್ದು ಜನ ಆಳಗೋಳ ಕಳ್ಸ್ ಕೊಟ್ಟ್. "ಮೂರ್ ಯೆಲಿ ಬುಡ್ಕ ಹಿಡ್ಕ ಬನ್ನಿ" ಅಂದ. ಬುಟ್ಟಿಲ್ ಹಾಕಂಡ್ ಬತ್ತ ಸೀದಾ ಸೂಳಿಮನಿಗೆ ಹೋದ. "ನೀನಿಟ್ ಪಂತ

ಮಾಡಿ ಬೋರ್ಡ್ ಹಚ್ಚಿದೆ. ನುಸ್ದ ಹೋದಾಂಗಾತದೆ! ಪಗಡಿ ಆಡವ" ಅಂದ. ಕೂತ್ರ ಆಡ್ತ ಇರಬೇಕಾದ್ರೆ ಬೆಕ್ಣ ತಲಿಮೇಲೆ ಪಣತಗಿ ಇಟ್ಟು ಆಡ ಬತ್ತದೆ. ಅದ್ಕೆ ಪಗಡಿ ಆಡಬೇಕಾದ್ರೆ ಗೆಲತದೆ. ಅದು ಗೆದ್‌ತು. ಮತ್ತೆ ಆಟ ಆಡ್ತಾ.

ಒಂದ್ ಯೆಲಿ ಬಿಟ್ಡೇವ ನೋಡ್ತು ಬೆಕ್ಕು. ಆಟವ ಇವ ಗೆದ್ದ. ಮಗಳು ಬೆಕ್ಕು, ಹಿಡ್ಕ ಬಂದಿ ಅದ್ಕೆ ಮೂರೆ ಗುದ್ ಹೊಡಿತು. ಅವಿಗೂ ಹೊಡಿತು. "ನೀನು ಹಾಲು ಹಣ್ಣ್ ಹಾಕ್ಲಿಲ್ಲ."

ಅದು, "ನೀನು ಪಗಡಿ ಆಡಿ ಗೆದ್ದರೆ ನಾನೂ ಸೈತ ನಿಂದು" ಅಂದ್ ಪಣ ಇಡ್ತದೆ. ಅವ ಸೋತ್ರೆ ಅದರ ಕೆಳಗಾಗಿ ದುಡಿಬೇಕು. ಬೆಕ್ಕು ಹಿಡ್ಕಬಂದ. ಅದ್ರ ತಲಿಮೇನ್ ದೀಪ ಇಟ್ತು ಮತ್ತೊಂದಾಟ ಆಡಿ ಮತ್ತು ಗೆಲ್ಲು ಟ್ಯಾಂನಲ್ಲಿ ಮತ್ತೊಂದ್ ಯೆಲಿ ಬಿಟ್ ಬಿಟ್ಟ. ಆಗೂವ ಇವನೇ ಗೆದ್ದ. ಮತ್ ವಳ್ಗೆ ಹೋಗಿ ಬೆಕ್ಕಿಗೆ ಗುದ್ ಹೊಡಿತು. ಅವಿಗೂ ಹೊಡಿತು. ಬೆಕ್ ತಕಬಂದ್ ಮತ್ ದೀಪ ಇಟ್ಟು, ಮತ್ತೆ ಪಗಡಿ ಆಡೂಕೆ ಕೂತ್ರು. ಪಗಡೆ ಗೆಲ್ತದೆ ಅನ್ಬೇಕಾದ್ರೆ ಮತ್ಯೆಲಿ ಬಿಟ್ಬಿಟ್ಟು ಇವನೇ ಗೆದ್ದ. ಬೆಳಗಾಯ್ತು. ವಳ್ಗೆ ಹೋಗ್ ಸಿಕ್ಕಬಿಟ್ತು. ಸೋಳಿ ಹೇಳ್ತದೆ. "ಪಣ ಹೊತ್ತದಕೆ ನೀನ್ನ ಗೆದ್ದೆ. ನೀನು ನನ್ನ ಬೆನ್ಗೆ ಬರಬೇಕು" ಅಂದ. "ಐಸರಿ ಅಟ್ಟೂ ನನ್ಗೆ ಕೊಡಬೇಕು." ಅವ್ನ ಹಿಂಡ್ತಿ ಮಕ್ಳು ಯೆಯ್ದು ಜನ ತೂತ್ ಕೊಡದಲ್ ನೀರ ಹೊರತ್ರು. ನೀರ್ ಹೊರಬೇಕಾದ್ರೆ ನೋಡ್ಕಂಡಿದ್ದ. "ಶಿಕ್ಷಿ ಗನಾ ಕೊಟ್ಟದೆ" ಅಂದ್ ನೋಡ್ಕಂಡಿದ್ದ. ಕುದ್ರಿಗಿದ್ರಿ, ಸಾಯ್ಕಲ್, ಮೋಟರ್, ಯೆಲ್ಲಾ ಸೋತಿ ಸಾವ್ಕಾರ್ ಜನ ಅದ್ರ ಕೈಕೆಳಗೆ ದುಡೀತವ್ರೆ. ಅವರ ಕತೆಯೆಲ್ಲಾ ಕೇಳ್ದ. "ಯಾವ ಯಾವ ಅರಸಗೊಳು? ಯಾವ ಯಾವ ದೇಸಾಯ್ತು? ನಿಮ್ಮ ಆಯಾದಿ ಹಿಡ್ಕಂಡಿ ನಿಮ್ ನಿಮ್ ದೇಸಕ್ ಹೋಗಿ." ಅವರವರ ದೇಸಕ್ ಅವರವರೂ ಪಾರು. ತನ್ನ ಅಣದಿರನೂ ತಪ್ಕೊಂಡ ಯೆಯಡೂ ಜನ್ರನೂ ಕರಕೊಂಡ ಬಂದ.

ಬರಬೇಕಾದ್ರೆ ಇವನಕಲ್ ಯೇನಂದ್ರು? "ನೀನು, ತಮ್ಮ ನೀನು ಚಿನ್ನದ ಕೋಳಿ ತಂದಿದೆ. ಅಪ್ಪ ತಮ್ಮ ಹೆರ್ಗ್ ಹಾಕ್ತ. ಇದ್ ನಮ್ಮ ಕೈಲ್ಲಿ ಕೊಡು, ಈ ಹುಡ್ಗಿನೂ (ಅವನ ಹಿಂಡ್ತಿ) ಕೊಡು. ಈ ಕುದ್ರಿ ಮೇಲೆ ನೀ ಹತ್ತು. ಆ ಕುದ್ರಿ ಮೇನೆ ನಾವ್ ಹತತ್ರು.'

ಚಿನ್ನದ ಕೋಳಿ ವಂದ್ ಕೊದ್ರಿ ಮೇಲೆ, ಹುಡ್ಗಿ ವಂದ್ ಕೊದ್ರಿ ಮೇಲ್ ಕುಳ್ಸಕೊಂಡ್ರು. ಸಮಾನ ಮೂರ್ ಜನರೂ ಕೊದ್ರಿ ಹೊಡ್ಕಂತ್ ಬಂದ್ರು. ಅಲ್ಲೊಂದ್ ಹಾಳು ಬಾವಿತ್ತು. ಬಾವಿಲ್ ಇವ್ನ ದೂಕ್ ಕೆಡ್ಗ್‌ಬಿಟ್ರು.

ಅವ್ರ ಮುಂದೆ ಮನಿಗ್ ಬಂದ್ರು. ಚಿನ್ನದ ಕೋಳಿ ಮನಿ ಕೋಳಗಂಬಕೆ ಕಟ್ಟಿಕೊಂಡ್ರು. ಹಿರಿತಾಯಿ, "ಹುಡ್ಗಿ ಯಾಕ್ ತೀಡ್ತು?" ಅಂತ ಅಕಲ್ ಹಾಕ್ತ್ ಇದ್ದಿತ್ತು. ಅದ ತೀಡ್ಕಂತ ಇತ್ತು. ಹುಡ್ಗಿ ಅದ್ರ ತಾಯ್ಮನಿಗ್ ಹೋಯ್ತು. "ನೀವ್ ಯಾಕೆ ತೀಡತ್ರಿ? ಯೇನ್‌ತನ?" ಯೆಲ್ಲ ವಿಚಾರ ಕೇಳ್ಕಂತು. ಅದ್ರದಲ್ಲಿ ಉಳಿತು ಅದು.

ಅವಗೆ ಪರ್ಸ್‌ರಾಮನ ಕೊಡ್ಲಿ ಇತ್ತು. ಕಾಳಿಕಾಮ್ಮನ ಗುಡಿ ನೆನಕೊಂಡ. ಕಾಳಿಕಾಮ್ಮ ಅವನ ಮೇನ್ ನದ್ರ ಇಟ್ಕೊಂಡಿ, ಅವನ ಮೇನೆ ತಕೊಂಡ ಬಂದ ಹಾಕತು.

ಹತ್ ಮನಿಗೆ ಬಂದ, ಅವನ ಹಿಂಡ್ತಿ ತಾಯ್ಮನೆಲ್ಲಿತ್ತು. ಹೋಗೆ ನೋಡ್ದಾ. ಉಳ್ಕೊಂಡ.

ಕಡಲೇಳು ಸಮುದ್ರದ ಆಚೆ ಬೂತಗಳು, ಮಾಸೇಸ ಯೆಲ್ಲಾ ವಟ್ಟಾಗಿ ಹುಡ್ಗ, 'ಮತ್ ಮೊದ್ಲಿನಂತೆ ಆಬೇಕಂತ' ಗುಂಡ್ ಹೊಡ್ದ್. ಅಲ್ ಕೋಳಿ ತಂದ ಅಂಬುದು ತೆಳಕಂಡಿ ಪರಾ ಗಣಂಗಳು ಮಾಸೇಸ, 'ಚಿನ್ನದ ಕೋಳಿ ತಂದವ ಯಾವವ?' ಅಂದಿ ವಿಚಾರ ಮಾಡ್ತ ಬಂತು. ಮಾಸೇಸ ಸ್ವತಃ ಬಂದದೆ. ಅಪ್ಪ ಗಡಗಡ ನಡಗತ. "ಯಾರ್ ತಂದೋರು?" ಅಣ್ಣದಿರು ತರ್ಲೆಲ್ಲಾ, "ಅಪ್ಪಾ, ನಾವ್ ತರ್ಲೆಲ್ಲಾ, ನಾವ್ ತರ್ಲೆಲ್ಲಾ..." "ತಮ್ಮ ತಂದನೆ" ಅಂತ್ರು. ಹುಡ್ಗನ್ (ತಮ್ನ) ಅಲ್ ಕರ್ಸರು. ಆಗ, "ಮಗನೇ, ಮಾಸೇಸ ಬೂತಂಗಳು ಬಂದರೆ ಚಿನ್ನದ ಕೋಳಿ ನೀ ತಂದಿದ್ಯ?" "ನಾನೇ ತಂದವ" ಅಂದ. "ಇನ್ನೇನ್ ಮಾಡಬೇಕು? ಬಂದ್ರೆ ಬರಲಿ, ನಾ ನೋಡ್ಕಂತೆ" ಅಂದ.

ಮಾಸೇಸ ಮುಂದೆ ಬಂತು. ಹುಡ್ಗಿ ಮಾಸೇಸನ ಎದುರಿಗೆ ನಿತ್ತ್ತು. ಆಯ್ದ ಅದ್ಕೆ ಬಿಟ್ತು. ಮಾಸೇಸ, ಕಲ್ಲಾಳ ಬೂತಂಗೊಳು ಆಚ್ ದೇವಕನ್ಯೊರು ಹುಡಗೀಗೆ ಸರಣು ಕೊಟ್ರು. "ನಮ್ಮ ತೆಗದೆ" ಅಂತ ಗೋಳ ಗೆಡಿತ್ರು. "ನೀಮ್ ಅಟ್ಟಿದ್ದವರು ಯಾಕೆ ಇಲ್ಲಿ ಬಂದ್ರಿ? ನಾನು ಕಳ್ಸ್ ಕೊಡ್ತಿದ್ನಲ್ಲವೋ? ನನ್ನ ಗಂಡನ ತೆಗೂಕ ಬಂದಿರಿ." ಚಿನ್ನದ ಕೋಳಿನು ಕೊಟ್ತು. ಮಾಸೇಸ್ನ ಆಸಿವ್ರಾದ ಪಡಿತು ಹುಡಗಿ. ಅವರ ಕಳ್ಸಿದ್ರು. ಅರಸು ಸರಿ ಹೋದ. ಈ ಹುಡಗ ಆ ಹುಡಗಿ (ಅವ್ನ ಹಿಂಡ್ತಿ) ತಂದಿ ಪಟ್ಟ ಕಟ್ದ. ಯೆಯ್ಡ ಹುಡಗರ ಹೆರಗೆ ಹಾಕ್ದ.

- **ಕೆಲವು ಪದಗಳ ವಿವರಣೆ**

ಸರಣ್ - ಶರಣು

ಆಯಸ - ಆಯುಷ್ಯ

ಕಿಕ್ಕಾಲ್ - ಕಾಲಿನ ಕೆಳಗೆ

ಪಣತಗಿ - ಹಣತೆ

ಸೂಳಿ - ಸೂಳೆ

ಗೋಳ್ಗಡಿ - ಗೋಳಾಡು

ಗೀಜರು - ಕೂಗು

ಗಂಡಿ - ನಡುವಿನ ಖಾಲಿ ಜಾಗ, ತೂಬು

ಯೆಲಿ ಬಿಟ್ದೇವ - ಇಲಿ ಬಿಚ್ಚಿದ ಕೂಡಲೇ

■ ಹೇಳಿದವರು : **ಪಾರ್ವತಿ ಶಿವ ನಾಯ್ಕ**, ಬಾಡ,

◆

# ಜಗದೇಕ ವೀರನ ಕಥೆ

ಚಂದ್ರಸೇನ ರಾಜ, ಕಲಾವತಿ ಹೆಂಡತಿ. ಪ್ರೇಮದಿಂದಿದ್ದಿರು. ರಾಜಂಗಳದ ಹೊರಗೆ ನರಿ ಬಂದು ಹೆಬ್ಬಾಗಿಲ ಹತ್ತರ ಮಲಗಿತ್ತು. ಕವಡೆ ಹಳ್ಳ ಮಣಿ ತಕಂಡು ಆಟ ಆಡತಿದ್ರು ರಾಜ-ರಾಣಿ. ಅವ, "ಅಲ್ಲಿ ಹೆಬ್ಬಾಗಿಲ ಹತ್ರ ಹುಲಿ ಮಲಗಿದೆ" ಅಂತಾನೆ. "ಅದು, ನರಿ" ಹೇಳ್ತದೆ. ಇಬ್ಬರಿಗೂ ವಾದ ಬೀಳ್ತದೆ. ನನಗೆ ಎದರುತ್ತರ ಆಡತಿ ಎಂದು ಬಯ್ದು. "ಹುಲಿಯಾದರೆ ಘೋರಶಿಕ್ಷೆ ಕೊಡುವೆ. ನರಿಯಾದರೆ ನನ್ನ ಶಿರಸ್ಸು ಕಡಕೊಳ್ಳುವೆ" ಎನ್ನುತಾನೆ. ವಿಚಾರ ಮಾಡಿತು. "ತನಗೆ ಶಿಕ್ಷೆ ಎದರು ಆಗಲಿ. ಇದು ಹುಲಿಯೆಂದು ಹೇಳು" ಹೇಳಿ, ಮಂತ್ರಿಗೆ ಬೋಧನೆ ಮಾಡ್ತು. "ಹುಲಿಯೇ" ಹೇಳತಾನೆ. ಘೋರಡವಿಲಿ ಬಿಟ್ಟು ಬರಬೇಕೆಂದು ಆಜ್ಞೆ. ಅದು ಉಪವಾಸ ಇರತದೆ. ಬಸುರಿ ಅವಳು. ಹಕ್ಕಿ-ಪಕ್ಷಿ ಉಪಚಾರ ಮಾಡತವೆ. ನವಿಲು ಗರಿ ಸೂಡತದೆ. ಪ್ರಾಣಿಗಳು ಉಚರಿಸುವವಲ್ಲಿ. ಋಷಿಗಳ ವನ್ದ್ ಮಹಾತ್ಮೆ ಎಂದು ಅವರು, "ಯಾರು?" ಕೇಳತಾರೆ. "ವಾದ-ವಿವಾದ ಕಾರಣ ಪ್ರಾಣ ಕೊಡಬೇಕೆಂದು" ಅಂದಳು. "ಗಂಡು ಹುಡಗ ಹುಟ್ಟತಾನೆ" ಅಂದ ಮುನಿ. ಎಂಟೊಂಬತ್ತು ತಿಂಗಳು ಮುನಿಗಳೇ ಸೀಮಂತ ಮಾಡತಾರೆ. ಹುಡುಗ ಹುಟ್ಟಿದ. ಜಗದೇಕವೀರ ಹೆಸರು.

ವನ್ದಲ್ಲಿ ತಾಯಿ ಮಗ ಇರುವಾಗ ಪಟ್ಟಣ ಶೆಟ್ಟಿ ಪೇಟಿಂದ್ ಬಂದ. "ನೀಮ್ ಯಾರು?" ಕೇಳಿದ. "ಚಂದ್ರಸೇನನ ಹೆಣ್ತಿ." "ನಿನ್ನ ಪತಿಗೆ ಕಪ್ಪ ಕೊಡುವೆ. ತಾನು ನಂಜೊತೆ ಬಂದಿರಿ" ಎಂದ. ಮುನಿ ಒಪ್ಪಿಗೆ. ಅಲ್ಲಿ ಹೋಗತಾರೆ. ಅವನಿಗೆ, "ಮಗ ತಾನು ಚಿಕ್ಕಪ್ಪ ಶೆಟ್ಟಿ" ಎಂದ ಶೆಟ್ಟಿ, ಹುಡುಗ್ನ್ ವಿಚಾರ ಮಾಡಿದ. "ನಿನ್ನ ವಿಚಾರವೇನು ಕೇಳಿದ?" ಹುಡುಗ, "ಬ್ರಹ್ಮಲಿಪಿ ಮೀರಲಾರ ಅಂತೆ ನಡಿಬೇಕು" ಅಂದಾ. ಅವನಿಗೆ ತಾತ್ಸರವಾಯ್ತು. ಮಗಗೆ ಕೇಳಿದ. "ತಾ ತಿಂದ ತೇಗತೇನೆ" ಅಂದ. ಇವ ಹುಸಾರಿ ಇದ್ದ. ತನ್ನ ಹೆಸ್ರ ಹೇಳನೆಂದು ಮಗ.

ಹುಡುಗ್ನ್ ಮುತ್ತು ರತ್ನ ವ್ಯಾಪಾರಕ್ ಕಳ್‌ಸ್ತಾನೆ. ಇರಾಣ ದೇಸದವರು ಉಪ್ಪು ತಿನ್ನುವ ಜನರು, ಮನುಷ್ಯರನ್ನು ತಿನ್ನುವ ಪ್ರಾಣಿಗಳು, ಕುದುರೆ ಎಲ್ಲ ನೊಡರೆ, ಹೋದವರು ಅಕ್ಕಿಧೂಳು, ಉಪ್ಪಿನ ಮೂಟೆ ಕಳ್ಸಿ ಕೊಟ್ಟು ಮುತ್ತು-ರತ್ನ ತರುವದಾಗಿತ್ತು. ಅವರು ನೋಡಿ- 'ದೂಳಿಲ್ಲ' ಅಂದು, ಮುತ್ತು ರತ್ನಾದಿ ಹೊಳೆಪಾಲು ಮಾಡಿದರು.

ಚಿಕ್ಕಪ್ಪ ಶೆಟ್ಟಿ ಜೀಪ ತರಲು ಸಾದ್ಯಾಯಿತು. ತಾಯ ಹತ್ತರ ಹೇಳತಾನೆ ಹುಡುಗ, "ಚಿಕ್ಕಪ್ಪ ಶೆಟ್ಟಿ ಪರದೇಶಕ್ಕೆ ಹೋಗತಿದ್ದ. ತಂದೆ ಹತ್ರ ನಾ ಹೋಗ ಬರತಿದ್ದೆ ಹಡಗ ಹತ್ತಿ" ಹೇಳತಾನೆ ಅವಿ, "ನಾವು ಚಲೋ ಇದ್ರೆ ಅವ ಏನ್ ಮಾಡುತಾನೆ?" ಅಂದು ಪಟ್ಟಣ ಶೆಟ್ಟಿಗೆ ಹೇಳಿದಳು. ಶೆಟ್ಟಿ ನೆವನಕ್ಕೆ ಬೆಂಡ ಜಾತಿ ಹಡಗ ಮಾಡಿ ಕೊಡುತಾನೆ. ಕಿಮ್ಮತ್ತ ಇಲ್ಲದ ವಸ್ತು ಹಾಕುತಾನೆ. ಬೆಗಣಿ ಚಾಪರಕೆ ಇಂಥ ಸಾಮಾನ ತುಂಬತಾನೆ ಹೊರಟ ಹುಡಗ. ಹಡಗ ನುಸಿಕೋಟೆಗೆ ಹೋಯಿತು. ಅವನಿಗೆ ಹೊಗೆ ಹಾಕಿ ಬಹಳ ದ್ರವ್ಯ ಮುಂತಾದ ಕೊಟ್ಟರು. ಬೇಡ, ಬಹಳ ಜನ ಬದುಕಿದರು. "ವಿಚಿತ್ರವಿದ್ದರೆ ಹೇಳಿ" ಅಂದ ಹುಡುಗ.

'ಗುಡ್ಡದ ಮೇಲೆ ಪಾತಾಳಕೇತು ಎಂಬ ಮಾಯಾವಿ ಇದಾನು. ಬೆಟ್ಟದಲ್ಲಿ ಅವನ ಪಾದ ನೋಡಿದರೆ ಎರಡು ಆಳುವರೆಗಿದೆ.' ಇವರು ಕಬೂಲಾಗರು ಹೋಗಲಿಕ್ಕೆ. ಅವ ಒಬ್ಬನೆ ಹೋಗತಾನೆ. ಒಬ್ಬಳು ನಾಗಕನ್ನಿಕೆ ಮಂಚದ ಮೇಲೆ ಮಲಗಿದ್ದಾಗ ಪಾತಾಳಕೇತು ಮಂಚ ಹೊತ್ತು ತಂದಿಟ್ಕಂಡಿದ್ದ. ಅವಳಿಗೆ ಕಾಳಿಕಾದೇವಿ ದೇವರ ವರವಿದೆ. 'ಇಪ್ಪತ್ತೈದನೇ ವರ್ಸದಲ್ಲಿ ನಿನ್ನ ಲಗ್ನಾಗತ್ತೇನೆ' ಎಂದು ಪಾತಾಳ್ ಕೇತುವನ್ನು ಹೊಗಳಿಕೊಂಡು ಜೀವನ ಮಾಡತಾಳೆ.

ಬಾವಿಕಟ್ಟೆಯಿಂದ ಸ್ಟ್ರಿಂಗ್ ಜಿಗಿದು ಬರವಂತೆ ಅವ ಮಾಡಿದ್ದ. ಅವಳು ಗುಡ್ಡದ ಮೇಲೆ ಹವೆ ಬಗ್ಗೆ ಒಂದ್ ಮಣೆ ತಂದು ಆಡತಿತ್ತು. ಆತ ಹೆದರಿಸಿದ್ದಾ. 'ಮೂರು ಲೋಕದಲ್ಲೆಲ್ಲಿದ್ದರೂ ಗೊತ್ತಾಗುತ್ತದೆ. ನರ ಮನುಷ್ಯರು ಬಂದರೆ ಬಾವಿಲಿ ಗುದ್ದಿ ಬಾ' ಹೇಳತಾನೆ. ಕವಡೆ ಬಿಟ್ಟೂ ಮಣೆ ಹಿಡಿದು ಜಿಗದಳು. ಅವ ನೋಡಿದ. ಇವಳ ನೋಡಿ ಮೋಹ ಬಂತು. ಕವಡೆ ಹಳ್ಳಿದೆ ಇವಳಿಲ್ಲ. ಯಂತ್ರದಿಂದ ಪಾಸಾಗಿರಬೇಕೆಂದು ಹಳ್ಳ ತಕ್ಕಂಡು ನುಸಿಕೋಟೆಗೆ ಬಂದ. ಜನರ ಹತ್ರ ಹೇಳಿದ, "ನೀವು ಹೇಳಿದ್ದು ಹೌದು. ಹುಡಗಿ ಕವಡೆ ಬಿಟ್ಟು ಹೋಗದೆ" ಹೇಳಿದ. ಅವರು ಕೃತಜ್ಞತೆಯಲಿ ಸತ್ಕರಿಸಿದರು.

"ವಂದ ತಿಂಗಳು ತಾಯಿದ್ದಲಿ ಹೋಗುವೆ" ಹೇಳಿ ಕೊಟ್ಟ ಮೌಲ್ಯ ವಸ್ತು ತಕ್ಕೊಂಡು ಬಂದನು. ಬಂದ ಕೂಡಲೆ ಚಿಕ್ಕಪ್ಪ ಶೆಟ್ಟಿಯರು, "೧೫ ದಿವಸ ಮೊದಲೆ ಕಳಸಿ ಬಂದಿತು" ಎಂದ್ರು.

ಜಗದೇಕವೀರ ಸದ್ದಿನ ಕೋವಿ ಮಾಡಿದ. ಕಲಾವತಿ ಶೆಟ್ಟಿಗೆ ಹೇಳಿದಳು. ಅವ ತಾತ್ಸಾರ ಮಾಡಿದ. 'ತಾನು ಬಾಲೆ ಎಂಬಾ ಮಗ ಪ್ರೇಮಕ್ಕೆ ಬೀಳ್‌ತಾನೆ' ದ್ರವ್ಯ ತಡಿ ಹಾಕಿಸಿದ್ದ. ಅವಳು ಶೆಟ್ಟಿಗೆ, "ನಮಗೆ ಇದರ ಮೇಲೆ ಆಶೆಯಿಲ್ಲ ಕೊಡುವ" ಅಂದಳು. ಊಟ-ಉಪಚಾರ ಆಯ್ತು. ಹಳ್ಳ ದೀಪ ಇಡುವ ಇದರೊಳಗೆ ಇಟ್ಟಿದ್ದ. ತಾಯಿ ದೀಪ ತಾಗಿಸಬೇಕೆಂದು ಹೋಗುತಾಳೆ. ದ್ರವ್ಯ ಹರಳ ಕಂಡಳು. ನೋಡಿದ ಕೂಡಲೇ "ಇವಳು ಹರಳೇಕೆ?" ಎಂದು ಶೆಟ್ಟಿಯಿದ್ದಲ್ಲಿ ಹೋಗತಾಳೆ, ಹಳ್ಳ ಕೊಟ್ಟಳು. ಅವ ಮಂತ್ರಿಗಳಿಗೆ ತೋರಿಸಿದ. ಅವ, "ಇದ್ರ ಗಂಡ ಚಂದ್ರಸೇನನಿಗೆ ಕೊಟ್ಟರೆ ಸಂತಸ" ಎಂದ ಅವನಿಗೆ ಮುಟ್ಟಿಸಿದ.

ಅಲ್ಲಿ ಕೂಡಿದ ಆ ಸಭಾ ಪಂಡಿತರು, "ವಿಚಿತ್ರ ವಸ್ತು ಹೌದು. ಆಡುವ ಮಣೆ. ಹುಡುಗಿ ಇದ್ದರೆ ಮಾತ್ರ ದೇವಲೋಕದಲಿ ಆಡತಕ್ಕ ಹಳ್ಳು." "ಎರಡೂ ವಸ್ತು ತಂದರೆ ಒಳ್ಳೆಯದು. ಇಲ್ಲ ೧ ತಿಂಗಳ ನಂತರ ಶೊಲಕ್ಕೇರಿಸತೇವೆ" ಎನ್ನುತಾನೆ. ಮೋರೆ ಸಣ್ಣ ಮಾಡಿಕೊಂಡು ಬರುತಾನೆ. ಅವಳು ಮಗಗೆ ಹೇಳುತಾಳೆ. ಆಗ, "ಸಾವಿರ ಮಾರು ಉದ್ದದ ನಾಲ್ಕು ಸರಪಳಿ, ಒಂದು ತೊಟ್ಟಿಲಬೇಕು, ತಕ್ಕಂಡ್ ಹೋಗು," "ತಾ ಹೋಗಿ ಬರುವೆ" ಅಂದ.

ಹಾಗೆ ಹೇಳಿದ, ತಯಾರ ಮಾಡಿದ್ರು ಹೋಗ್ ಸಾಮಾನು ಹಾಕಿಕೊಂಡು ದೋಣಿಯ ಮೇಲೆ ಹೋಗತಾನೆ. ಚಿಕ್ಕಪ್ಪ ಯೋಜನೆ ಹುಡುಕಿದ ಬುಸಕೋಟನಲ್ಲಿ ನಾಲ್ಕ ಪಿಸ್ತೂಲ ಹಾಕಂಡಿದ್ದ. "ನಾ ಬರತೇನೆ ಹೇಳಿದ ಊರ ನೋಡುವೆ" ಅಂದ. ಕೂರಿಸಿಕೊಂಡು ಹೋದ.

ಊರವರು ಬಂದರು. "ಮತ್ತೇನು ಕೈಹಾಕ್‌ತೆ? ಮೊದಲಿನಂತೆ ಮಾಡಿದರೆ ಸಾಯುವೆ" ಎಂದು ಹೇಳ್ದ್ರು. ಪಾತಾಳ ಕೇತುವಿದ್ದಲ್ಲಿ ಹೋಗಬೇಕೆಂದು ಹೊರಟ, ಬಾವಿಲಿ ತೊಟ್ಟಲ ನಾಲ್ಕ ಸಿಪಾಯಿ ಸಹಾಯದಿಂದ ಸರಪಳಿ ಹಾಕಿ ಬಿಟ್ಟ, "ಅಲುಗಿಸಿದಾಗ ಜಗ್ಗಿ ನೆಗಿರಿ" ಅಂದ.

ಅಲ್ಲಿತನಕ ಮಳ್ಳನಂತಿದ್ದ ಚಿಕ್ಕಪ್ಪ ಶೆಟ್ಟಿ. ಅವ ತೊಟ್ಟಿಲಲ್ಲಿಳಿದ ಸಂಗಮರವರಿಕಲ್ಲ ಅರಮನೆ ನೆಲಮಾಳಿಗೆಲಿ ಮುಂದೆ ಹತ್ತಿಪ್ಪತ್ತು ಖೋಲಿ, ದೊಡ್ಡ ಮನೆ ಹೋದ. ಮೆಟ್ಲು ಹತ್ತಿ ಹೋದ. ಪಾತಾಳಕೇತು ಮಲಗು ಬಿಡಾರ ಮನೆಲಿ ಮನಗಿ ಬಿಟ್ಟಿದ್ದ. ರೂಪ ಡಿಂಬ ನೋಡಿ ದಿಗಲ ಬೀಳಬೇಕು. ಒಳಗೆ ಪ್ರವೇಶ ಮಾಡಿದ ಹುಡಗಿ ಹಾರ ಹಾಕಿತು. ಕೂಡ್ಲೆ ಉಪದೇಶಿಸಿದಳು. "ಇವ ಎದ್ದರೆ ಮಾಯಾವಿ. ಅವ ಮುನಿದರೆ ಜಗತ್ತನ್ನೇ ನುಂಗುವ ಶಕ್ತಿಯದೆ" ಅಂದಳು. "ಹನ್ನೆರಡು ತಾಸು ರಾತ್ರಿಗೆ ಅಡವಿಗೆ ಹೋಗುತಾನೆ, ಹಗಲು ಯೆರಡು ತಾಸು ನಿದ್ರೆ. ಮೃಷ್ಟಾನ್ನ ತಯಾರ ಮಾಡಿಕೊಡಬೇಕು. ಅವನ ಆಹಾರ ಆನೆ, ಹಾವು, ಗಮಯ ಯಾವುದೂ ತಿನ್ನುತ್ತಾನೆ. ಕಿವಿ ರಂದ್ರದಲ್ಲಿ, ಮೂಗಲಿ, ಕೈಲಿ, ಬಾಯಲ್ಲಿ ಕಟ್ಟಿ ತಂದು, ಹನ್ನೆರಡು ಕಾವಲಿ ನೀರು ಕಾಯುತ ಬೀಳತದೆ. ತಂದು ಪ್ರಾಣಿಗಳ್ನ ಅದರಲ್ಲಿ ಚಲ್ಲಿದರಾಯ್ತು. ಸಾಯತವೆ ಹಿಡದು ತಿಂಬುದು."

ಆವಗ ಜಗದೇಕ ಕೇಳ್ದ, "ಶಕ್ತಿ ಬರಲಿಕ್ಕೆ ದೈತ್ಯರ ವರ ಇದೆ ಏನು?" "ಅವ ಏಳು ಹೊತ್ತಾಯ್ತು" ಹೇಳಿ ಗೋಪ್ಯದಲ್ಲಿಟ್ಟಳು. "ಅವ ರಾತ್ರಿ ಸಂಚಾರ ಹೊರಟರೆ ಬೆಳಿಗ್ಗೆ ಬರುವುದು" ಅಂತ ಎಲ್ಲಾ ಮಾತುಕತೆ ನಡೆಸಿದರು, ಯುಕ್ತಿ ಮಾತು. "ವರ ಇರಬೇಕು. ಗುಟ್ಟು ತಿಳಿದೂ ಬಿಡಬಹುದು. ಅವನ ಲಗ್ನಾಗಲಿಕೆ ನೀನು ತಯಾರಾಗಬೇಕು. ಅವನ ನಾಳೆ ೧೨ ಗಂಟೆಯೊಳಗೆ ಲಗ್ನಾಗು. ತನ್ನ ಬೆಂಬಲ ಈತು." "ನಾಳೆ ನೀನು ವನಸಂಚಾರಕ್ಕೆ ಹೋಗುಕಿಲ್ಲ ಹೇಳು. ಕಾಳಿಕಾದೇವ್ರು ಹೇಳಿತು ಹೇಳು." "ಪ್ರಾಣಿಗಳನು ತಿನ್ನದಿದ್ದರೆ ಬದುಕೆನು" ಎನ್ನುತಾನೆ. "ಅಲ್ಲಿ ಜೀವ ಬಿಡುವೆ ನೀನು. ನಮಗೆ ವಿಪತ್ತು ಬರುವಂತೆ ಪ್ರಾಣಿಗಳು ಮಾಡಿದರೆ? ತಾನು ಸಾಯುವೆ ಬಾವಿವಳಗೆ ಎನ್ನು" ಎಂದು ಹೇಳಿಕೊಟ್ಟಾ.

"ಅವ ಹಾಗಿಲ್ಲ ಹೀಗಿಲ್ಲ. ಅನ್ನುವ ನಂಬೂಕಿಲ್ಲ. 'ನೀನು ಈಶ್ವರನ ಆಣೆ ಮಾಡ್ತಿದೆ. ಮುಟ್ಟಿ ಹೇಳಿದರೆ ನಂಬುವೆ' ಎನ್ನು ಆಗಲವ ನಿಜ ಸಂಗತಿ ಹೇಳುತಾನೆ" ಅಂದ್ಕ ಹಾಗೇ ಅಂತದೆ. ಅವನ ಹತ್ತರ ಮಾಯಾವಿ ಅವ ಹಾಗೇ ಅಂತಾನೆ. "ಹುಟ್ಟಿದ ಮನುಷ್ಯಗೆ ಮರಣ ಇದ್ದೆ ಇದೆ. ಈಶ್ವರನ ಅಣೆ ಹಾಕಿ ಹೇಳಿದರೆ ನಂಬುವೆ" ಅಂತಾಳೆ.

ಇವ, "ಡಿಂಬದಂತ ಮರವಿದೆ. ಎರಡು ಹೆಗೆಕೈಯಂತೆ ತಲೆಯಂತೆ ಅಕಾರ, ಅವನ ರೂಪಿನಂತೆ. ಅದು ಈಶ್ವರನ ವರ. ಈ ಮರ ನನ್ನ ದೇಹ, ಇದನ್ನು ಬೆಂಕಿ ಹಿಡಿದು ಕಡಿವಂತವರಿಲ್ಲ. ಕಡಿವಂತ ಹತಾರ ಮೊಳೆಯ ಪೆಟ್ಟಿಗಿಲದೆ ಮಹಾದೊಡ್ಡ ತಲವಾರ ತೆಗಿಬೇಕು." "ಕೀಲಿ ತೆಗೆಬೇಕಲ್ಲ." "ಕೀಲಿ ಗಿಳಿ ಹೊಟ್ಟೆಯೊಳಗದೆ. ಈಜಿ ದಿಡಕೆ ಹೋದರೆ ಆಚೆಗೆ ಹೋಗತದೆ. ಗಿಳಿ ಮುರಿದ ಕೂಡಲೇ ಹೊಟ್ಟೆಯೊಳಗೆ ಕೀಲಿಯಿರತದೆ." "ಅದು

ಸಾಧ್ಯವಿಲ್ಲ" ಅಂತದೆ. ಇದು, "ಈಶ್ವರನ ಆಣೆ ಮುಟ್ಟಿ ಹೇಳಿರಿ" ಅಂತದೆ. ಅಂತ ನಿಜ ಸಂಗತಿ ಆಣೆ ಮಾಡಿದ. ಆಗ ಅದು, "ನಾಳೆ ಲಗ್ನಾಗುವ" ಅಂತು. "ನಿದ್ರೆ ಗೊರಕೇಲಿ ನನ್ನ ಶ್ವಾಸದಲ್ಲಿ ನೀ ಸಿಕ್ಕರೆ ಪಾರಾಗಲಾರೆ, ಪ್ರಾಣ ಹೋಗಬಹುದು, ದೂರ ಹೋಗಿರಬೇಕು" ಅಂತ ಹೇಳಿದ್ದ.

ಅವಗೆ ನಿದ್ರೆ ಬಿದ್ದ ಕೂಡಲೆ ಯೋಜನೆ ಮಾಡತಾರೆ ಅವರು. ಅವಳ ಹತ್ರ ಒಂದು ತಂದ ಗಿಳಿ ಪಂಜರ ಇತ್ತು. ಈ ಗಿಳಿಗೆ ಉಪದೇಸಿಸಿ, ಆ ಗಿಳಿಯನ್ನು ಪ್ರೇಮದ ಸರಸಾಟದಲಿ ಹಿಡಿದು ತರಬೇಕು ಅಂದಳು. ಅದು ಗಿಳಿನ್ನ ಸುಲಭದಲ್ ಹಿಡಿಯುತದೆ. ನದಿ ನಾಲ್ಕು ಮೈಲು ಪ್ರೇಮ ಹುಟ್ಟಿಸಿಕೊಂಡು ಗಿಳಿ ತರತದೆ. ಜಗದೇಕಗೆ ಕೊಡತಾಳೆ. ರಾತ್ರಿ ಸಂಚಾರಕೆ ಹೋದಾಗ ಮಾಡುವದು. ಗಡಬಡೆಯಿಂದ ಬೇಗ ಎದೆಗುಂದದೆ ಕೀಲಿತೆಗೆದು ಹಕ್ಕಿ ಮುರಿದಾಗ ಸರೋವರ ಆರುತದೆ. ಪೆಟ್ಟಿಗೆ ಮಿಂಚತದೆ ಇಪ್ಪತ್ತೇಳು ಹೆಡೆ ಮಾಶೇಷನೇ ತಲವಾರ. ನೋಡಿದಾಗ ಅಂಜಿ ಹಿಂದೆ ಸರಿಬಾರ್ದು. ಹೆಡೆ ಬಿಚ್ಚಿ ನಿಂತಿತ್ತು. ಮಾಶೇಷ. ಓಡಿ ಹಿಡಿದರೆ ತಲವಾರವಾಯ್ತು ಮಾಶೇಷ.

ಆಗ ಹಿಡಿದ ಕೂಡಲೇ ತಲವಾರ ಮರದ ಬೇರಿಗೆ ಕತ್ತಿ ಹಾಕಿದ. ಕಡಿದು ಹೋಯ್ತು ಮರದ ಯೆರಡು ಹೆಗೆ ಕಡಿದ. ಅವ ಬರುವಾಗ ಘೋರ ಸಪ್ಪಳ, ಅಲ್ಲಿಂದ ಬರತಾನೆ. ಅದು ಮನೆ ಹತ್ತರ ಅವ ಬರುವಾಗ, ಮುಂಡ ಬಗಿತಾನೆ, ಬಿದ್ದ ರಕ್ತದ ಕಾಲುವೆ ನೋಡಿ ನಾಗಕನ್ನಿಕೆ ಅದು ಹೆದರಿ ಹೋಗಿ ಬಿಟ್ಟಿತು ಹೌಹಾರಿ. "ಯಾವ ವಸ್ತುವೂ ಬೇಡ. ಮೇಲೆ ಹೋಗುವೆ" ಅಂತದೆ. ಮಾಣಿಕ್ಯ ಇತ್ಯಾದಿ ಇತ್ತು. "ಗಳಿಸಿದ್ದು ಮಾಣಿಕ್ಯ ಎಲ್ಲ ತಕ್ಕೊಂಡು ತೊಟ್ಟಿಲೊಳಗೆ ಹೋಗಬೇಕು" ಅಂದ. ತಯರಾಗಲಿಲ್ಲ ಅವಳು. "ನೀನು ಮುಂದೆ ಹೋಗು ನಾ ಹಿಂದೆ ಬರುವೆ" "ತೊಟ್ಲ ಬಿಡು" ಅಂದ.

ಸಿಪಾಯರು ಸರಪಳಿ ಜಗ್ಗಿದಾಗ ಬಂದಳು ಮೇಲೆ ಹತ್ತಿ. ಅದು ತೊಟ್ಲ ಬಿಟ್ಟು ಕೆಳಗೆ. ಹತ್ತು ಮಾರಿದ್ದಾಗ ಚಿಕ್ಕಪ್ಪ ಶೆಟ್ಟಿ ಎರಡೆರಡು ಪಿಸ್ತೂಲ ಹಿಡಿದು ಶಿಪಾಯರಿಗೆ, "ಜೀವ ಬೇಡಾದ್ರೆ ಒಗಿರಿ ಇಲ್ಲಾ ಬಿಡಿರಿ" ಎಂದ. ಹೌಹಾರಿದರು. ಸರಪಳಿ ಹಿಡಿದು ಜಗ್ಗಿದ ಶಿಪಾಯರನ್ನು ಹೊಡೆದ ಅವ್ರು ಎರಡು ಜನ ಹೆದರಿ ಕೈ ಬಿಟ್ಟರು. ಕೆಳಗೆ ಜಗದೇಕ ಬಿದ್ದ ತೊಟ್ಲ ಸಂಗಡ. ಇದು ದೈತ್ಯನಿಂದ ತಪ್ಪಿ ಕ್ರೂರ ಚಿಕ್ಕಪ್ಪ ಕೈಗೆ ಶಿಕ್ತು. ಅವ ಕೈಹಿಡಿದು ದೋಣೆನ್ನ್ ಎಳೆದು ಶಿಪಾಯರ ಕರೆದು ಹತ್ತಿಸಿ ಬಂದ. ಆಗ ಮನೆಗೆ ಮುಟ್ಟಿದ ಪಟ್ಣಶೆಟ್ಟಿ ಚಂದ್ರಸೇನನಿಗೆ ಅವಧಿ ಕೊಟ್ಟಿದ್ದರ ಮೊದಲೆ ಮಣೆ - ಹೆಣ್ಣು ಒಪ್ಸ್‌ದ.

ಗಂಡನ ಪ್ರೇಮದಿಂದ ಊಟ ಬೇಡ ಚಿಂತೆ, ದೇವಭಕ್ತಿ "ಹದಿಮೂರು ದಿನ ಸಬೆ ನಡೆಬೇಕು" ಎಂದಿ ಚಂದ್ರಸೇನಗೆ ಹೇಳಿದಳು. "ನಾ ದೇವಲೋಕದ್ ಹೆಣ್ಣು ಇಲ್ಲಿರಬೇಕು ಅಂದರೆ ಗೀತಾ-ಪಾರಾಣ ಆಗಬೇಕು" ಅಂದಳು. "ಇಪ್ಪತ್ನಾಲ್ಕು ತಾಸೂ ನಡೇಬೇಕು ಖರ್ಚೂಕೊಡಿ" ಅಂದಳು. ಒಪ್ಪಿ ಹಾಗೇ ಮಾಡಿದ. ಬಾಜೂಗ್ ಒಂದು ಖುರ್ಚಿ ಇಡತಾಳೆ ಗಂಡಗೆ. ತಾನು ಸಣ್ಣ ಕುರ್ಚಿಲಿ ಕೂತಿರ್ತಾಳೆ. ಕೀರ್ತನೆಕಾರರು ಹರಿಕಥೆ ಹೇಳುತ್ತಿದ್ದರು.

ರಾತ್ರಿ ಹನ್ನೆರಡು ಕಳೆಯಿತು. ಹದಿಮೂರನೇ ರಾತ್ರಿ ದಿನ ಗಂಡ ಬಂದ. ಸಭೆಲಿ ಜಗದೇಕ ನಡ್ದ ಕತೆ ಎಲ್ಲ ಹೇಳ್ತ. ಅವಗೆ ನಾಗಕನ್ನಿಕೆ ಮಾಲೆ ಹಾಕಿತು. ಪಟ್ಟಣ ಶೆಟ್ಟಿಗೆ ನೆನಪು ಬೇಸರ. ತಂದೆ ಮಗನ ತಂತ್ರಿಗೆ ಆನಂದಪಟ್ಟು ಕಲಾವತೀನ ಕರಸ್ತಾನೆ. ಚಿಕ್ಕಪ್ಪ ಶೆಟ್ಟಿ ಕುತಂತ್ರಿಗೆ ಶಿಗಿದು ತೋರಣ ಮಾಡಲು ಅಪ್ಪಣೆ ಕೊಟ್ಟ. ಮಗ್ನ ಲಗ್ನ ಮಾಡಿಸಿದ. ಎಲ್ಲರೂ ಸುಖ-ಸಂತೋಶದಾಗೆ ವಳದ್ರು.

- **ಕೆಲವು ಪದಗಳ ವಿವರಣೆ**

| | |
|---|---|
| ಕಲಸಿ - ಕಳಸಿ | ಬೆಗಣಿ - ಬೆರಣಿ |
| ಚಾಪರಕೆ - ತೆಂಗಿನ ಒಣಗಿದ ಉರವಲ | ಡಿಂಬ-ಶರೀರ |
| ಹೆಗೆ-ಟೊಂಗೆ | |

■ ಹೇಳಿದವರು : **ಶ್ರೀ ಲಕ್ಷ್ಮಣ ಬೊಮ್ಮಣ್ಣ ನಾಯ್ಕ,** ಕಣಗೀಲ, ತಾಲೂಕು ಅಂಕೋಲಾ.

◆

# ಜನ್ಮಾಂತರದ ಋಣ

ಭಟ್ಟರಿಗೆ ಐದ್ ಜನ ಗಂಡ್ ಮಕ್ಕು. ಹೆಂಡ್ತಿ ಸತ್ ಹೋಯ್ತು. ಭಟ್ರು ಯತೆ ಮೇನೆ ಬಿದ್ರು. ಐದ್ ಜನ ಗಂಡ್ ಮಕ್ಕೂ ಸತ್ ಹೋದ್ರು. ಬೇಕಷ್ಟಿದೆ ಅವರಿಗೆ. ತನ್ನ ಯಾರ್ ನೋಡೂರು ಹೇಳ್ ಅವರಿಗೆ ಮನಸಿಗೆ ಕಂಡ್ತು. ರಾಜನ ಮನೆಲೆ ವಂದ್ ಹೆಂಗ್ಸು ಇತ್ತು. ಅರ್ದ ಪರಾಯ ಅಗೂದು ಮಕ್ಕಳೇ ಇಲ್ಲ ಅವರಿಗೆ. ಭಟ್ರು, 'ತನ್ ಬೊಜ್ಜ ಕರ್ಮ ತಯಾರ್ ಮಾಡ್ತೆ' ಅಂದ್ ಹೇಳಿ ಇಷ್ಟು ಗಾತ್ರ ದೊಡ್ಡ ಗಳ ಮಾಡ್ಕಂಡಿ, ಅದರಲ್ ಕುರ್ಜಾತ, ನಾಣ್ಣಿ, ಪವನ ತುಂಬ್ಕಂಡೆ, ಅರವಿ ಹಾಕಂಡ್ ದಾರಿ ನಡೆದ್ರು.

ಗೋಕರ್ಣಕ್ ಹೋಗಬೇಕಂದಿ ರಾಜನ ಮನೆಗೆ ಹೋದ್ರು. "ಮಗನೆ ಇದ್ ತಗಂಡ್ ಹೋಗ್ ವಳಗಿಡಿ" ಅಂದ್ರು. ತಕಂಡ್ ಹೋದ್ರು. ಆಸ್ರು ಬೀಸ್ರು ಕೊಡಲಿಲ್ಲ. "ರಾತ್ರಿ ಇದ್ರ್ ಯೆಂತಾ ಅದೆ?" ಹೇಳ ಅದ್ನ್ ಬಿಡ್ಸದ್ರು. ಕುರ್ಜಾತ, ನಾಣ್ಣಿ ಅದೆ. ಹರಿವಾಣದಲ್ ಸೊರಿಕಂಡಿ, ಮೇನ್ ಯೆಯ್ದು ಪವನ ನಾಣ್ಯೆ ಹಾಕಿ, ಅಟ್ಟು ಕಲ್ ಗುಂಡ್ ಹಾಕಿ ಸಮಾ ಮಾಡಾರೆ, ಮೇಲೆ ಅರವಿ ತುರಕಾರೆ, ಹಾಗೆ ಉಳಿತು.

ಬೆಳಗಾಗ ಬಟ್ರು "ದೊಣ್ಣೆ ಕೂಡು" ಅಂದ್ರು. ರಾಜನ ಹೆಂಡ್ತಿ, "ಬೇಡ ಉಳಿರಿ" ಅಂದಿ ಸೊಲ್ಗಿ ಮೇಲೆ ಹಾಲು ತುಪ್ಪ ಯೆಲ್ಲಾ ಹಾಕಿ ಕೊಟ್ತು. "ಉಳಿರಿ ನಾಳೆ ಹೋಗಬವ್ದು"

ಅಂದಳು. ಉಂಡ್ಕಂಡಿ, ತಿಂದ್ಕಂಡಿ ರಾಜನ ಕೂಡೆ ತನ್ನ ಕತೆ ಹೇಳಿದ್ರು. "ಹೋಗಿ ತಿರಗಿ ಹೀಗೆ ಬನ್ನಿ" ಅಂದ್ರು ರಾಜ. ಬಟ್ರು ಗೋಕರ್ಣಿಕೆ ಹೋಗಿ ಮಕ್ಕಳ ಕಿರಿಯ ದಾನ, ವಸ್ತ್ರ ಬಿಸ್ತ್ರ ಯೆಲ್ಲಾ ಮಾಡಿರು.

ಹರಿವಾಣ ಹಿಡಿ ಅಂದ್ರು, ಹಿಡದ್ರು ಐದ್ ಜನ ಬಟ್ಟಕ್ಕೊಳು ಬರಿ ಕಲ್ಲುಂಡು ಯೆಯ್ಡ್ ಪವನ, ಯೆಯ್ಡ್ ನಾಣ್ಣಿ, "ನಿಮ್ಗೆ ಇನ್ನೊಂದ್ ಜನ್ಮಕ್ ಕೊಡ್ತೆ" ಹೇಳ್ರು. ಸತ್ತೇ ಹೋದ್ರು. ಕಾಯ ವಂದು, ತೆಕ್ಕಂಡ್ ರಾಜನ ಮನಿಲಿ ಬಂದ್ರು. ರಾಣಿ ಬಸುರಾದ್ರು. ಅರ್ದ ಪರಾಯಾಗಿತ್ತು. "ರಾಜನ ಹಿಂಡ್ತಿ ಬಸರಿ" ಅಂದ್ವೇಳಿ ನಾಕೈದ್ ತಿಂಗ್ಳಾಯ್ತು. ಏಳ್ ತಿಂಗ್ಳಿಗೆ ಊರೂರ್ ಕರದಿ ಬಯಕಿ ಹಾಕ್ರು.

ವಂಬತ್ ತಿಂಗಳಾಯ್ತು. ಜನ್ನೆ ಆಯ್ತು. ಹುಡ್ಗ ಹುಟ್ದ. ದಿನಾ ದಿನಾ ಇಂದ್ ನೋಡ್ರೆ ಯೆಯ್ಡ್ ತಿಂಗ್ಳ ಬಾಲೆ, ನಾಳೆ ನೋಡ್ರೆ ನಾಕ್ ತಿಂಗ್ಳ ಬಾಲೆ, ದೊಡ್ಡಾದ.

ಮುಂಜಿ ತಯ್ಯಾರ್ ಮಾಡ್ರು. ಹದ್ನಾರ್ ವರ್ಸಕ್ ಮುಂಜಿಗೆ ತಯ್ಯಾರ್ ಮಾಡ್ದ್ರು. ವಂದೇ ಹುಡ್ಗ.

"ಅಪ್ಪ, ಯಾರಿಗೆ ಹೇಳ್ತಿ ಬಟ್ಟಕ್ಕೊಳಿಗೆ?" "ಇಲ್ಲಿಗೇ ಬರೂರು ಮಗ್ನೆ" ಅಂದ ರಾಜ. "ಗೋಕಣ್ಡ ಬಟ್ಟಕ್ಕೊಳಿಗೆ ಹೇಳಿ" ಅಂದ ಮಗ. "ಅಗೂದು" ಅಂದ ಅಪ್ಪ. ಗೋಕಣ್ಡ ಬಟ್ಟಕ್ಕೊಳಿಗೆ ಹೇಳ್ದ್ರು. ಬಂದು ಮುಂಜಿ ಸಾಗ್ಸದ್ರು.

"ಎಲ್ಲಾ ಚಾಕ್ರಿ ಆಯ್ತೇ?" ಕೇಳ್ದ. "ಆಯ್ತು" ಅಂದ್ರು. "ಅಮ್ಮ ಬೀಗದ ಕಾಯಿ ಕೊಡೆ ನಿಮ್ ಕೂಡ ಕೊಟ್ಟಿದ್ ತಕಂಡ್ ಬನ್ನಿ" ಅಂದ.

ಅದ್ಕೆ ಕಪಾಲ್ ಮೇಲ್ ಹೊಡ್ದ ಹಾಂಗೆ ಆಯ್ತು. ತಿಳಿದ್ ಹೋಯ್ತು. ಚಾವಿ ಕೊಟ್ತು. ಹರವಾಣ ತಂದಿ, "ಹಿಡಿರಿ ಅಟ್ಟೂ ಜನ ಹಂಚ್ಕಳಿ ಋಣತೀರ್ತೂ ತೀರ್ತೂ?" ಅಂದ. ಬಿದ್ ಬಿಟ್ಟ. ಜೀವ ಹೋಯ್ತು ಹುಡ್ಗಂದು. ಊಟ ಇಲ್ಲ. ಆಸ್ರಿ ಇಲ್ಲ.

ಬಟ್ಟಕ್ಕೊಳ್ ಯೆನಂದ್ರು? "ಅವ್ರು ಅಟ್ಟಕ್ಕೆ ಬಂದಿರು ನೀವ್ ತೀಡುದ್ ಪುಕ್ಸಾಟೆ" ಅಂದ್ರು.

■ ಹೇಳಿದವರು: **ದಿ. ಸೋಮ ನಾಯ್ಕ** (ಮಾಣುಮನೆ ಅಮ್ಮ), ಹೆಗಡೆ ಊರು.

# ದುಷ್ಟಬುದ್ಧಿ ಕತೆ

ವಂದ್ ರಾಜ್ನಿಗೆ ವಂದ್ ಹುಡ್ಗ. ಪರ್ದಾನಿಗೆ ವಂದ್ ಹುಡ್ಗ. ಅವ್ರು ಪಿರಾಯಕ್ ಬಂದ್ರು. "ಗನಾ ನೆಂಟತನ ಬೇಕು. ಈ ಫೋಟ್ ತಕಹೋಗು. ಹೀಗೇ ಉಳೀಬೇಕು, ಚಂದ ಹುಡ್ಗಿ ಬೇಕು. ಬೇರೆ ರಾಜಿಕ್ ಹೋಗಿ ತಲಾಸ್ ಮಾಡ್ಕಂಡ್ ಬರಬೇಕು" ಹೇಳಿ ಪರದಾನಿ ಕೂಡೆ ರಾಜ ಹೇಳ್ದ. "ಬೇರೆ ಬೇರೆ ಊರ್ ತಿರ್ಗು. ಯೆಷ್ಟ ಊರದೆ ಯೆಲ್ಲಾ ಕಡೆ. ರಾಜನ ಮನೇಲಿ, ಸಾವ್ಕಾರ ಮನೆಯ ತಿರ್ಗಬೇಕು. ಅಷ್ಟ ಚಂದ ಹುಡ್ಗಿ ಶಿಕದ್ರೆ ತರಬೇಕು" ಅಂದ್ರು ಪರದಾನಿಗೆ.

ಫೋಟ್ ತಕಂಡ್ ಹುಡ್ಕೋಕ್ ಬಂದೋರು, ಅವರ ಮನೆ ಪರದಾನಿ ಇವರ ಮನೆ ಪರದಾನಿ ತಿರಗಿ ತಿರಗಿ ಅಂತೋರ ಶಿಕ್ದೆ ಯತೆ ಬಿಡ್ತೆ ಕೂತರೆ, ಹೋಳೆ ಆಚ್ಗೆ ಇಚ್ಗೆ, ಅವರಿಗೆ ಆಗ ಬಗೇಲ್ ಕಣ್ ಕೂರ್ತು. ತಿರಗ್ ತಿರ್ಗಿ ನಾಕೈದ್ ದಿನಾಯ್ತು. ಊಟಿಲ್ಲ, ಅಲ್ಲೇ ವರ್ಕ್ ಬಂದ್ ಹೋಯ್ತು ಅವರಿಗೆ. ಈ ಫೋಟು ಆ ಫೋಟು ಬಡ್ದಾಡ್ಕಂತೇ (ಹಾರಾಡ್ತಿದೆ) ಬಿದ್ದಾರೆ. ಮೇನ್ ಆಕಾಸಕ್ ಹೋಗೂದು, ಕೆಳ್ಗ ಬರೂದು ಯೆಯ್ಡೂ ಫೋಟಾ ವಟ್ಟಾಡಿ, ಇವರ್ ಯೆಚ್ರಾಗಿ ಹೀಗೆ ನೋಡ್ದ್ರು, ನೋಡೂಕ್ ಎಡ್ರೂ ಫೋಟು ಕೆಳ್ಗ್ ಬಂದ್ ಕೂತ್ತು. ಫೋಟಾ ಅದೆ. ಆಚೆ ಫೋಟಾ ಆಚೆ ಕುಳ್ತು ಈಚೆ ಫೋಟಾ ಈಚೆ ಕುಳ್ತು. ಹೆಣ್ಣಿನ ಫೋಟಿದ್ದೋರು ದೋಣಿ ಮೇಲೆ ಆಚೆ ದಾಟಿದ್ರು, ದಾಟ್ ಹೋಗಿ ಅವರ ಹತ್ರ ಮಾತಾಡ್ದ್ರು. ಹೆಣ್ಣಿನ ಫೋಟನ್ ತಕಂಡ್ ಬಂದವ್ನ್ ಕರ್ಕಂಡ ಆ ರಾಜನ ಮನೆಗ್ ಹೋದ್ರು. ರಾಜ, "ನನ್ನ ಹುಡ್ಗಿಗ್ ತಕ್ಕನ್ ಹುಡ್ಗ ಶಿಕ್ದ. ಮನ್ಸಿಗ್ ಹೋದ್ ಹುಡ್ಗ ಶಿಕ್ದ, ಇವ್ನಿಗೇ ಕೊಡಬೇಕು. ಯಂಟನೇ ದಿನ್ಕೆ ಲಗ್ನಾ ಹಿಡಿಬೇಕು" ಹೇಳಿ ಹೇಳ್ ಕಳ್ಸರು ಪರದಾನಿ ಕೂಡೆ, "ನೀವ್ ಬನ್ನಿ ಮೂರ್ತ ಇಡೂಕೆ" ಹೇಳಿ ಹೆಣ್ಣಿನ ಬದಿ ಅರಸು ಕಾಗ್ತ ಕೊಟ್ಟ. ಹೆಣ್ಣಿನ ಫೋಟೋನು ತಕಂಡ್ ಪರದಾನಿ ಮನೆಗ್ ಬಂದ. "ಆಗೂದು" ಅಂದ್ ಹೇಳ್ ಬಂದ.

ಅಪ್ಪ ಮೀವ್ಕ್ ಹೋದ, ಪರದಾನಿ ಹುಡ್ಗ ಫೋಟೋ ನೋಡ್ ಬಿಟ್ಟ. ನನ್ನಪ್ಪ ನನ್ಗೆ ಇಷ್ಟು ಚಂದ ಹುಡ್ಗಿ ನೆಂಟಸ್ತನ ಮಾಡ್ಲಿಲ್ಲ ಹೆಳ್ದ. ದಾತ್ ತಪ್ ಬಿಟ್ಟ. ತಂದ್ ಜೀವ ಜೀವಾಯೇನಿಲ್ಲಾ. ಬರೀ ಕೊಲ್‌ಗೆಟ್ಟಿ ಬಿದ್ದಾಂಗೇ ಬಿದ್ದ. ವಂದ್ ತಾಸಿನ ಮೇಲೆ ಯೆಚ್ರಾಕ್ಕಂಡ್, "ಅಪ್ಪ ತನ್ಗೆ ಯೆಂತಾ ಇಷ್ಟ್ ಚಂದ ಹೆಣ್ ನೆಂಟಸ್ತನ ಮಾಡ್ಲಿಲ್ಲಾ" ಕೇಳ್ದ. ಪರದಾನಿ, "ಅವ್ರಿಂದ್ ನಮ್ಮ ಸಂಸಾರ ಹೋಗ್ತದೆ ನಾವು ಅವ್ರ ಹೇಳ್ದಾಂಗೆ ಕೇಳಬೇಕು. ನಿನ್ಗೆ ಇದ್ಕೂ ಚೆಂದ ಹೆಣ್ ತಂದ್ ಮದ್ವೆ ಮಾಡ್ಸೆ" ಅಂದ. ಪರ್ದಾನಿ ಹುಡ್ಗ ಸುಮ್ನೆ ವಳ್ದ. ತಕೊಂಡೋಗ್ ರಾಜನ ಕೈಲ್ ಪರದಾನಿ ಫೋಟೋ ಕೊಟ್ಟ, ಚೀಟಿನೂ ಕೊಟ್ಟ.

ಯೆಂಟ್ ದಿನ್ಕ್ ಮದ್ವೆಗ್ ತಯಾರಾಕ್ಕಂಡಿ, ಹೋಗದಿದ್ ಊರಿಗ್ಯೆಲ್ಲಾ ಪತ್ರ ಬರೆದ್ರು ಹೋದ ಊರಿಗ್ ಡಂಗುರ ಸಾರ್ದ್ರು. ಪೇಟ್ ಪಟ್ಟ ಶೃಂಗಾರ ಮಾಡ್ಕಂಡಿ ದಿಬ್ಣ ತಕಂಡೋದ್ರು. ದಿಬ್ಣ ಹೋಗ್ ಹೊಕ್ತು. ಬಾಶಿಂಗ ಕಟ್ಕಂಡಿ ಮಂಟಪ್ದಲ್ಲಿ ಕುಂತಾನೆ

ರಾಜ್ನ ಹುಡುಗ, ಮದ್‌ವಾಳ್ತಿ ತಂದ್ ಕೂರ್ಸುಕೇಯ ಪರದಾನಿ ಹುಡ್ಗನಿಗೆ ಮತ್ ಯೆಚ್ರ್ ತಪ್ ಹೋಯ್ತು. "ಅಟ್ ಚೆಂದ ಬೊಂಬೆ ತನ್ಗಾತ್ತಿತ್ತಲ್ಲ" ಹೇಳ್ ದಾತ್ ತಪ್ ಹೊಯ್ತು. ಮದಿಯಾಯ್ತು. ಸಕ್ರೆ ಬಾಳೆಹಣ್ಣು ತಿಂದ್ರು. ಊಟ ಮಾಡ್ಕಂಡ್ರು. ಬೆಳಗಾಗೂಕೆಯ ದಿಬ್ಣ ತಕಂಡ್ ಮನೆಗೆ ಬಂದ್ರು. ಮನೆ ತುಂಬಾಯ್ತು. ಕಡೆಗ್ ದಿಬ್ಣ ಹೋಗ್ಲೆ ಇಲ್ಲ. ಗಂಡ್ನ ಮನೆಲ್ ವಳ್ದದ್ದೇಯ. ಒಂದ್ ವರ್ಸಾಯ್ತು. ಕಡೆಗ್ ಅದು ಯೆರ್ಡ್ ಮೂರ್ ತಿಂಗಳ ಬಸ್ರಿ. ಯೇಳ್ ತಿಂಗ್ಳಾಯ್ತು. ಬಯ್ಕಿ ಹಾಕೂಕ್ ಬಂದ್ರು. ಹಾಯ್ಕಂಡ್ ಅಪ್ನ ಮನೆಗ್ ಕರ್ಕಂಡ್ ಹೋದ್ರು. ಕೂಸಿಗೆ ಕಡೆಗದ್ ಜನ್ಯಾಯ್ತು. ಹುಡ್ಗ ಸುರಿಚಂದ್ರಂತವ್ನೇಯಾ. ಜನ್ಯಾದ್ ನಾಕ್ ತಿಂಗ್ಳಾಯ್ತು. ಅರಸ ಪರದಾನಿ ಕರ್ಸಿ, "ಪರದಾನಿ ಕರ್ಕಂಡ್ ಬಾ" ಅಂದ. ಪರದಾನಿ ಕರ್ಕಂಡ್ ಬರಬೇಕೂ ಹೇಳಿ "ಆಗೂದು" ಅಂದ.

ಪರದಾನಿ ಮಗ ಅಪ್ ಬರೂಕೇ ವೋಡ್ತೇ ಬಂದ. "ರಾಜ್ನ ಹುಡ್ಗನ ಕೂಡೆ ತಾನೇ ಹೋಗ್ತೆ" "ಅಪ್ ಬೇಡ" ಅಂದ. ನಾನು, ನೀನು ವಂದ್ ಬಾಳೆ ಮೇನ್ ಊಟ ಮಾಡ್ತ್ರು ನಾಹೋಗ್ಲೋ ಕೇಳ್ದ.

"ಯೇನ್ ಮಾಡ್ತೆ ನೋಡು ನೀನು" ಅಂದ. ರಾಜ್ನ ಹುಡ್ಗ, "ತಾನೇ ಹೋಗ್ತೆ" ಹಟ ಮಾಡ್ದ. "ನೀನೇ ಕರ್ಕಂಡ್ ಬಾ" ಅಂದರು. ಮಜ್ಜಾನೆ ಹೋಗೂಕೆ ಮೊಕ ಗಿಕ ತೊಳ್ದ. ಆಸ್ರ ಕುಡ್ದ. ಸಂಜೆಯಾಯ್ತು. ಕುದ್ರೆ ತಾಂಕ್ಲ್ ಮೇನ್ ಹೋಗಿದ್ದಾ. ಮಾರ್ನೆದಿನ ಬೆಳಗಾಗ, "ನಿಮ್ ಮಗಳಿಗೆ ಏನೇನ್ ಕೊಡ್ತಿ?" ಹೇಳಿ. "ಅರಸು ಇಂದೇ ಕರ್ಕಂಬಾ" ಹೇಳಿದ್ದ. "ಕಳಿಸ್ ಕೊಡಿ" ಅಂದ. ಮಾಣಿಗೆ ಚಿನ್ನದ ಬಳಿ, ಹನಮಂತಿ ತಾಳಿ, ಕುತ್ಗಿಗೆ ಚಿನ್ನದ ಸರಪಳಿ ಮಾಡ್ಸ್ ಹಾಕುದ್ರು.

ಸಂಜಿ ಕಡೆಗೆ ತಯಾರಾಯ್ತು. ಮಗಳಿಗೆ ಕೆಲ್ಸ ಮಾಡೂಕ್ ವಂದ ದಾಸಿ ಕಳ್ಸಕೊಟ್ರು. ವಂದ್ ಆಕ್ಳ, ಆಕ್ಳ ಕರ ಪರದಾನಿ ಮಗ್ನ ಕೂಡೆ ಕಳಿಸ್ ಕೊಟ್ರು. ಕಳಿಸ್ ಕೊಡುಕೇಯ ಕರ್ಕಂಡ್ ಬಂದ. ಬಂದವ ಆ ಮಾರ್ಗದಲ್ ಬರುದಿಲ್ಲ, ಬೇರೆ ಮಾರ್ಗದಲ್ ಕರ್ಕಂಡ್ ಹೋಗ್ತ. ತಮಜಾನ ಮೇನ್ ಬಂದಾರೆ. ಅವ ಕುದ್ರೆ ತಾಂಕ್ಲ್ ಬೆಟ್ಟದ ದಾರೀಲೆ ತರ್ತ. "ಈ ದಾರಿಯಲ್ಲವೋ ಆ ದಾರಿ" ಅಂದ್ರು. ಸಂಜೀ ಮಾಡೇ ಬಿಟ್ಟ. ಬೆಟ್ಟದಲ್ಲಿ ಬೀಡ್ಕಿ ಹಾಕ್‌ದ್ರು. ಅವ್ನ ಪದಾತು ಮಾಡ್ಕಂಡ್ರು. ಅಲ್ಲೇ ಉಳ್ಕಂಡಿ ಅಲ್ಲೇ ಬೆಳಗಾಯ್ತು. ಆ ದಿನ ಅದ್ರ ಮೈ ಮೇಕ್ ರಾತ್ರೆ ಕೈ ಹಾಕ್ಲಿಲ್ಲ. ಬೆಟ್ಟದ ದಾರೀಲೇ ತಾಂಗ್ನೂ ತಿರಗ್ಸತ.

"ಆ ದಾರ್ಯಲ್ವೋ ಪಾಪಿಷ್ಠ" ಅಂದ್ರು. "ಇದೇ ದಾರಿ ಅಂತ ಏನೋ ಮೋಸ ಮಾಡೂಕೆ ತನ್ಗ ತಂದಾನೆ. ಮನೆಗೆ ತಂದಿಲ್ಲ" ಹೇಳಿ ಇದ್ಕೆ ಅನ್ಮಾನ ಹುಟ್ತು. ಅನ್ಮಾನ ಉಂಟಾಗುಳೇಯ ಮಜ್ಜಾನ್ಕೆ ಅವ ಇಲ್ಲಾಗಿದ್ದ. ಇಡೀ ಬೆಟ್ಟ ಹುಡ್ಕಿ ಮೂರ ಮೈಲದಲ್ಲಿ ವಂದ್ ಕಾಳಮ್ನ ಗುಡ್ಯದೆ. ನೋಡ್ಕಂಡ್ ಬಂದ್ಳಂಡ್ ಸುಮ್ನುಳೀತು. ಆಗ, "ಬೇಗ ಬಡ್ಸು" ಅಂದ ದಾಸಿ ಕೂಡೆ. "ಆಳ್ ಮಕ್ಳಿಗೆಲ್ಲಾ ಬಡ್ಸು" ಅಂದ. ಅವರ್ಗೆಲ್ಲಾ, "ಮಲಗಿರೊ" ನೀವು ಅಂದ. ಸಂಜಾಯ್ತು. "ಇದ್ರ ಕೂಡೆ ಹಸೆ ಹಾಕು' ಅಂದ. ಹುಡ್ಗನಿಗೆ ಹಾಲು ಬೀಲು ಎಲ್ಲ ಹೊಯ್ಯುತನ್ಕ ಮೂರ್ ತಾಸ್ ರಾತ್ರ್ಯಾಯ್ತು. ಹೊಟ್ಯಲ್ ಕಳವಳಾಯ್ತು.

"ತಾನು ಬೈಲ ಕಡೆ ಹೋಗಬೇಕು" ಅಂತು. "ತಾನೂ ಬತ್ತೆ" ಅಂದ. "ನೀ ಬರೂದ ಬೇಡಾ, ಗಂಡ್ಸರು ಸಂಗ್ತೀಗೆ ಬಂದ್ರೆ ಹೆಂಗ್ಸರಿಗೆ ನಾಚ್ಕೈಲ್ಲ?" ಮತ್ತಂದ. "ತಾನೇ ಬತ್ತೆ ಈ ಯೆಣ್ ಜಾತಿ ಬಿಡೂದಿಲ್ಲ" ಹೇಳ್ತ. "ಲಾಟನ್ನು ನೀನೇ ಹಿಡ್ಕೊ. ನಾನು ಬಗ್ಗೆಲ್ ಮರೆಗೆ ಕುತ್ಕಂತೆ. ಸೀರೆ ಶರ್ಗ್ ಹಿಡ್ಕೊ" ಅಂತು.

"ಹು" ಅಂದ. ಸೀರೆ ಶರ್ಗ ಹಿಡ್ಕಂಡ. ಬಿಡಸತು. ಅಡೀಗ್ ವಂದ್ ಕಿರ್ಗಣೆ ಇದ್ದಿತ್ತು. ಶೀರೆ ವಂದ್ ಮರಕ್ ಕಟ್ತು ವೋಡ್ತು ಕಾಳಿಕಾಮ್ನ ಗುಡೀಗೆ, "ನಾನು ಪತುವರ್ತಿ ಹೆಂಗ್ಸಾದ್ರೆ ಬಗ್ದೆ ಬಾಗ್ಲ ತೆಗೀಬೇಕು. ಇಲ್ಲಾರಿಲ್ಲ" ಅಂದ ಹೇಳ್ತು. ಆಗ ಬೇಗೆ ಗುಡಿ ಬಾಗ್ಲ ತೆಗ್ದೆ ಹೋಯ್ತು. "ತಾ ಸತುವಂತಿ, ಪತುವರ್ತಿ ಹೆಂಗ್ಸಾದ್ರೆ ಬಾಗ್ಲ ಹೆಂಗಿದ್ದಿತೊ ಹಾಂಗೇ ಬಾಗ್ಲ ಹಾಕೇ ಉಳೀಬೇಕು" ಅಂತು. ಬಾಗ್ಲ ಗಟ್ಟ್ಯಾಯ್ತು. ಆಗ ದೇವಿಗೆ ಆಣ್ ಹಾಕ್ಕಂಡ್ ಮುಡುಕಂಡ ಕೂತದೆ. "ರಂಡೆ ಯೆಟ್ ಹೊತ್ತಾಯ್ತು ಬರೂದಿಲ್ಲ" ಹೇಳಿ ಕಷ್ಡ ಯೆಳ್ದ, ಮರಕ್ ಶಿಕ್ಸ್ ಹಾಕ ಹೋಗಿತ್ತು.

ಇವ ಹುಡೀಕಂತ ಲಾಟಣ್ ತಕಂಡ್ ಬಂದ. "ನನ್ಗೆ ಧಗ ಮಾಡ್ಕಂಡೆ ಇಲ್ ಬಂದಿದ್ದೆ?" ಕೇಳ್ದ. "ಆಳ್ ಮಕ್ಳು ಕೊಚ್‌ದ್ರೂ ಬರೂದಿಲ್ಲ" ಅಂದ. "ಈ ಕ್ಷಣ ಬಾ ಇಲ್ಲಾದ್ರೆ ಯೆಲ್‌ವ್ರಿಗೆ ರುಂಡ ಹಾರಸ್ತೆ" ಅಂದ. ಅದು ಬಾಗ್ಲ ತೆಗುದಿಲ್ಲ. ಆಳ್‌ಮಕ್ಳಿಗೆ, "ಬಾ ಅಂದದೆ" ಅಂದಿ ಕೈಲಿ ಯಳ್ಕಂಡ ಬಂದ. ನಾಕೂ ಜನ್ಕೆ ಯಳ್ಕಂಡ್ ಬಂದ್ ಕುತ್ಗಿ ಕಡ್ದ. "ಆಕ್ಳಿಗೆ ಕರಿಗೆ ಕಡಿತೆ, ಹೆರಗ್ ಬಾ" ಅಂದ. ಅದ್ ಕೇಳುದಿಲ್ಲ. ದಾಸಿಗೆ, ಆ ಹುಡ್ಗನಿಗೆ ತಂದ. "ದಾಸಿ ಕಡೀತೆ ಬತ್ಯೊ ಇಲ್ವೊ?" "ಅಹ ಬರುದಿಲ್ಲ." "ಹುಡ್ಗನಿಗೆ ಕಡಿತೆ." "ಬರೂದಿಲ್ಲ." ಹುಡ್ಗನಿಗೆ ಕಡಿದ. ಬೆಳಗಾಯ್ತು. ವೋಡ ಹೋದ. ಯಾವೂರಿಗೆ ಹೋದ್ನೋ ಯೇನೋ. ಸುಮಾರೆ ಆರ್ ತಾಸ್ನ್ ಕೂಡೆ ಹೆರ್ಗ ಬಂತು. "ದೇವ್ರೇ ನಾ ಪತುವರ್ತಿ ಹೆಂಗ್ಸಾದ್ರೆ ಕದತೆಗೆ" ಹೇಳ್ತು. ನಾಕೂ ಜನ್ರ ತಲೆ ಕೂಡ್ಸ್ ಹಾಕ್ತು. ದಾಸಿ ತಲೆ ಕೂಡ್ಸ್ ಹಾಕ್ತು. ಹುಡ್ಗನ ತಲೆ ಕೂಡ್ಸಿ ಇಡ್ತು. ಆಕ್ಳು, ಆಕ್ಳ ಕರಿಗೆ ತಂತು. ಮತ್ತೊಂದ್ ಸಾಲ್ನಲ್ಲಿ ಕೂಡ್ಸಿ ಇಟ್ತು.

ಇದ್ ಹೆರಗ್ ಬಿತ್ತು. "ನಾನು ದುಷ್ಟಬುದ್ಧಿಗೆ ಆಪ್ತಿ ಕೊಟ್ಕಂಡಿ, ಆಗ ನೀವೇ ಜೀವ ಕೊಡ್ಸಬೇಕು" ಅಂದಿ, ದೇವಿಗೆ ಹೇಳ್ಕಂಡಿ ಹೆರಬಿದ್ ಬಂತು. ಹೆರ್ಗೆ ಬರೂತೆಯ ಒಬ್ಬಂವ್ ಕತ್ತೆ ತಕಂಡ್ ಬಂದ. "ಇದು ನನ್ನಾಗೂದು" ಹೇಳ್ದ. "ನೀ ಹಿಂಡ್ತಿ, ನಾ ಗಂಡ" ಅಂದ. "ಅಡ್ಡಿಲ್ಲ" ಹೇಳ್ತು ಹೆಂಗ್ಸು. "ನಾನು ಉಣ್ದೆ ನಾಕ್ ದಿನಾಯ್ತು. ಇಟ್ ನೀರು, ಬೆಂಕಿ, ಅಕ್ಕಿ ಬಿಕ್ಕಿ ನೀ ತಕಂಡ್ ಬಾ. ಅಡ್ಗಿ ಮಾಡ್ ಉಂಡ್ಕಂಡಿ ಯೇನು ಹೇಳ್ವೆ. ಆಗ ಗಂಡ ಹಿಂಡ್ತಿ ಆಗೂಕಡ್ಡಿಲ್ಲ" ಹೇಳ್ತು. ಅವ, "ಆಗೂದು" ಹೇಳಿ ಸಾಮಾನ್ ತರೂಕೆ ಹೊರಟ. ಕತ್ತೆ ಮೇಲೆ ಹತ್ಕಂಡು ನೆಡೀತೂ. ನೆಟ್ಕ ನಾಕು ಮೈಲೆ ಹೋತು. ಅದ್ಯಲ್ಲ ತಕಂಡ್ ಬರೂತನ್ಕ ಹೆಂಗ್ಸೂ ಇಲ್ಲ ತೀಡ್ತೆ ಬಿದ್ದನೆ, "ಕತ್ತೆ ಇಲ್ಲ, ತನ್ ಗೆಂಟೆಲ್ಲಾ ಹೋಯ್ತು."

ಮತ್ತೊಂದ್ ಕಡೆಗ್ ಹೋಗೂಕೇಯಾ ವಂದ್ ಸೊನ್ಗಾರವ್ ಸಿಕ್ದಾ. "ನನ್ಗೆ ಹಿಂಡ್ತಿಲ್ಲ. ನೀನ್ ಹಿಂಡ್ತಿ ನಾನ್ ಗಂಡ" ಅಂದ. "ಅಡ್ಡಿಲ್ಲಾ" ಅಂತು. ಸೊನಗಾರನ ಕೂಡೆ, "ಹಾಗಾರೆ ನಾಕ್ ದಿನಾಯ್ತು ಉಣ್ಣದೆ. ನಾನು ನಿನ್ ಕೈಚೀಲ ಇಡು, ಅಕ್ಕಿ ಬೆಂಕಿ ಮತ್ತು ನೀರು ಅಟ್

ತಕಂಬಾ. ಊಟ ಮಾಡ್ದಪಟೆಗೆ ಗಂಡ ಹಿಂಡ್ತಿ ಆಗ್ವ" ಅಂತು. ಅಂವ ತರೂಕ್ ಹೋದ. ಕಟ್ಲೆ ಚೀಲ ಇದ್ರು ಕೂಡ ಕೊಟ್ಟಾಕ್ ಹೋದ. ಕತ್ತೆ ಮೇನ್ ಕೂತ್ಕಂಡ್ ಕಟ್ಲೆ ಚೀಲ ತಕಂಡ್ ನೇಡೀತು. ಅಂವ ಅಕ್ಕಿ ತಕಂಡ್ ಬಂದ.

ಆಗ ವಬ್ಬ ಮುಸಲ್ಮಾನ್ನವ ಕುದ್ರೆ ಹತ್ಕಂಡ್ ಬಂದ. ಹುಡ್ಗಿ ನೋಡ್ದ. ಹುಡ್ಗಿ ನೋಡೂಕೇಯಾ, "ಅಚ್ಚಾ ಬುಡ್ಡಿ ಯೆಲ್ಲಿಗೋಗ್ತೆ ನೀನು" ಅಂದ. ಅವ್ರ ಬಾಣೀಲೆ ಮಾತಾಡ್ದ. "ನಾನು, ಗಂಡ ನೀನು ಹಿಂಡ್ತಿ ಆಡ್ಡಿಲ್ಲಾ?" "ಅಡ್ಡಿಲ್ಲಾ" ಅಂತು. "ನಾ ನಾಕ್ ದಿನಾಯ್ತು ಉಣ್ಣದೇಯ. ನೀನ್ ನನ್ನ ವಸ್ತ್ರ ಯೆಲ್ಲಾ ತಕಂಣ್ ಬೇಕು. ನಿನ್ನ ದುಸ್ತೈಲ್ಲಾ ಪೈಜಾಣ ಬೀಜಣ ಅಟ್ಟೂ ನನ್ಗೆ ಕೊಡ್ಬೇಕು" ಅಂದ್ ಹೇಳ್ತೂ. "ಅಡ್ಡಿಲ್ಲಾ" ಅಂದ. ಶೀರೆ ಉಟ್ಕಂಡ, ರವ್ಕಿ ಹಾಕ್ಕಂಡಿ, ಮುಷ್ಕ ಹಾಕ್ಕಂಡ್ ಹೀಗ್ ಮಾಡ್ತೆ ಹೋಗ್ವಾಗೆ ಯೆಯ್ಡ್ ತಾಸಾಯ್ತು. ಇದ್ ಕುದ್ರೆ ಹೊಡೀತು ನನ್ಗ್ ತೆಳೂದಿಲ್ಲ ಮಾಡ್ತು. ಕಡೆಗ್ ಅಂವ ಹೋಗೂಕೆ ಕುದ್ರೆ ಹತ್ಕಂಡ್ ಹೋಯ್ತು.

ವಂದಲ್ಲಾ ವಂದ್ ಊರಿಗೆ ಹೋಯ್ತು. ಅಲ್‌ವಂದ್ ಮುದ್ಕಿದಿತ್ತು. ಅವರ ಮನೆಗೆ ಹೋಯ್ತು. "ಅಜ್ ಮುದ್ಕಿ ನನ್ಗ್ ವಂದ್ ತುತ್ ಅನ್ನ ಹಾಕು" ಅಂತು. "ನನ್ಗೆ ಬೇಡ್ಕಂಡ್ ಉಂಬೂದು. ಅರಸೂ ಮನೆಗೆ ಕೆಲ್ಸ ಮಾಡ್ಕಂಡ ಬಾಗ್ಲ ಕಸತೆಗದಿ ಬಂದ್ ಒಂದ್ ಶಿದ್ದಕ್ಕಿ ತತ್ತೆ. ನಿನಗೆ ಯೇನ್ ಹಾಕ್ಲಿ ? ನಾಯೆಂತಾ ಉಣ್ಲೀ" ಅಂತು. "ಉಂಬೂಕೆ ಯೇನು ಬರಗಾಲ ಮಾಡೂದಿಲ್ಲ. ನಾನೇ ತಂದ್ ಹಾಕ್ತೆ ನೀ ಬೇಸ್ ಹಾಕು" ಅಂತು.

"ನಿಮ್ಮೂರ್ನಾಗೆ ಗೌಜಿಯೆಂತದು?" ಕೇಳ್ತು. ಮುದ್ಕಿ ಕೂಡೆ, "ರಾಜ (ರಾಜ್ಯ) ಗೆದ್ಕಂಡ್ ಹೋಗ್ತರಂತೆ. ಬಾಕಿ ಜನಕೆ ರಾಜಗೆ(ರಾಜ್ಯಕ್ಕೆ) ನಾಳೆಗೆ ಇರ್ಸೂದಿಲ್ಲಂತೆ" ಅಂತು. "ಹೌದೊ" ಅಂತು. ಮಗೂನ್ ಕೂಡೆ ತಲ್ವಾರ್ ಇದ್ದಿತ್ತು. ಬೆಳ್ಗಾಗೂತನ್ಕ ಯೆಲ್ಲರಿಗೆ ಕಡ್ಡ್ ರಾಶಿ ಹಾಕ್ ಬಂದ್ ಬಿಟ್ತು. ಸವ್ರ್ ಹಾಕ್ ಬಿಟ್ತು. ದಂಡಿಗ್ ಬಂದವ್ರುಗೆ ಬೆಳ್ಗಾದ್ರೆ ಯಾರೂ ಇಲ್ಲ.

ರಾಜ, "ದೇವ್ರೇ ಇದ್ದ್ಯಾವ್ ನಮ್ಮೆ. ಆಚರ್ಯ ಕಾಣ್ತದೆ" ಹೇಳಿ, ಬೆಳ್ಗಾ ಕೂಡೆ, "ಹೀಗೆ ಮಾಡ್ದವ್ನಿಗೆ ಪಟ್ಟಕಟ್ಬೇಕು" ಹೇಳ್ದ. ಆಗ, "ಆನೆ ಕೂಡೆ ಮಾಲೆ ಹಾಕ್ಬೇಕು" ಅಂದಿ, ಆನೆಕೂಡೆ ಮಾಲೆ ಕೊಟ್ ಕಳ್ಸಿಬಿಟ್ಟರು. ಅಟ್ಟು ಜನ ಕೂತರೆ ಸಬೇಲಿ ಕಟ್ಟೆಬುಡ್ಕ ಇದ್ ಕೂತದೆ. "ನನ್ಗ್ ಹಾಕು." "ನನ್ಗೆ ಹಾಕು" ಅಂದ್ರೂ ಹಾಕುದಿಲ್ಲ. ಅದ್ಕೆ ಮಾಲೆ ಹಾಕ್ತು. ಅದು ಮಾಲೆ ಹಾಕೂಕೆ ಕೊಡ್ಲಿಲ್ಲ. "ಅವ ಅಲ್ವೇ ಅಲ್ಲ" ಅಂದ್ರು. ಕಡೆಗೆ ಹೆಣ್ಣಾನೆ ಕೂಡೆ ಮಾಲೆ ಕೊಟ್ ಕಳ್ಗರೆ. ಹೆಣ್ಣಾನೆ ಆ ಹುಡ್ಗನ್ಗೇ ಹಾಕ್ತು. "ಬೇಡೂಕ್ ಬಂದವಂಗೆ ಮಾಲೆ ಹಾಕ್ತು ಅಬ್ಬ" ಹೇಳ್ತಾರೆ. "ಪಟ್ಟಕ್ ಕುಳ್ಸ್‌ಬೇಕು" ಅಂದ್ರು. "ಈಗ ಪಟ್ಟಕ್ ಕುಳ್ಳುಕೆ ಯೆಯ್ಡ್ ತಿಂಗ್ಳ ತಡ ಅದೆ. ನಿಮ್ಮ ಮನೆಗೇ ಬಂದ್ ಉಳಿತೆ. ಕಡೆಗ್ ನಾ ಪಟ್ಟಕ್ ಕುಳ್ತೆ" ಅಂದ.

ಅವನ ದುಡ್ಡದೆ, ರಾಜ್ನ ದುಡ್ಡದೆ ಮುಸಲ್ಮಾನನ ದುಡ್ಡದೆ. ದೊಡ್ ಬಂಗ್ಲಿ ಕಟ್ ಹಾಕ್ತು.

ಏಳುಪ್ಪರಿಗೆ ಬಂಗ್ಲೆಲ್ ಕೂತದೆ. ದಾರೀಲಿ ಬಾವಿ ಕಟ್ಸಿ ಬಂದವರಿಗ್ ಆಸ್ರು ಕುಡೂಕೆ ಹಗ್ಗ ಚಂಬು ಇಟ್ಟದೆ. ಯಾರೇ ಬಂದ್ರೂ ಆಸ್ರು ಕುಡಿಬೇಕು.

ಆಗ ಕತ್ತೆ ತಕಂಡ್ ಹೋದವ ಬಂದ. ತನ್ ಹಾಗೇ ವಂದ್ ಬೊಂಬೆ ಮಾಡಿ ಗೋಡೆಗೆ ಇಟ್ಟದೆ. ಆಗ ಪರ್ದಾನಿ ಹುಡುಗ ಕರ್ಕಂಡ್ ಬರ್ಲಿಲ್ಲ ಹೇಳಿ, ಗಂಡ ಮಾವನ ಮನೆಗೆ ಹುಡ್ಕಕ್ ಹೋಗನೆ. ಗಂಡನಿಗೆ ಮಳ್ಳ ಹಿಡ್ದಿ. ಗಂಡ ಊರ್ ಮೇನ್ ಹೋದ. ಅವ್ನ ತಮ್ಮ ತಾ ಹುಡಿಕಂಡ್ ಬತ್ತೆ ಹೇಳಿ, ಮರದ ಕುದ್ರೆ ವಂದ್ ನೂರು ರುಪ್ಯೆ ಕೊಟ್ಟು ತಕಂಡಿದ್ದ. ಅದು ಹೀಗೆ ಮಾಡೂಕೆ ಆಕಾಸದ ಮೇನ್ ಹೋಗ್ತದೆ. ಹೀಗೆ ತಿರುಗಿಸೂಕೆ ಕೆಳಗೆ ಬತ್ತದೆ.

ಇದು ನೋಡಿತ್ತು. ಮೈದ ಬಂದ. ಬರೂಕೆಯ ಮತ್ತೊಂದ್ ರಾಜ್ನ ಮಗಳು ಯೇಳುಪ್ಪರ್ಗೆ ಮೇನೆ ಕೂತಿತ್ತು. ಅದುನೋವೆ, "ಅಪ್ಪ ತನ್ಗೆ ಇದೇ ಗಂಡ ಬೇಕು" ಅಂತು. ಅಪ್ಪ ಇವ್ನ ಕರೆದು ತಿರಗಿಸಿ ಕೆಳಗೆ ಬಂದ. "ತನ ಮಗಳ್ ಮದಿಯಾಗಬೇಕು" ಅಂದ. "ಆಗೂದಿಲ್ಲ" ಅಂದ. "ತಾಂಡೆವ್ರಿಗ್ ಕರ್ಕಬಂದು ನಿನ್ನ ರುಂಡ ಹಾರಸ್ತೆ," "ಬರೂದಿಲ್ಲ" ಅಂದ. ಅವ್ನಿಗೆ ಮದ್ವೆ ಮಾಡದ್ರು.

ಮದ್ವೆಯಾಗ್ ವಂದ್ ತಿಂಗ್ಳಾಯ್ತು. ಆಗೆ ಇದು ಗಂಡನಿಗೆ ನೋಡ್ತೆ ಇತ್ತು. ಗಂಡ ಬುಳು ಬುಳು ತೀಡ್ತೆ ಅವನೆ. ಹೆಂಡ್ತಿ ಹೀಗೇ ನೋಡ್ತು. "ಎಂತಾಕ್‌ತೀಡ್ತ್ರಿ?" ಕೇಳ್ತು. "ನಾ ಬಂದಿದೆ ಹೀಗೆ" ಹೇಳ್ದ. "ಮದಿವ್ಯಾದೆ. ಅಣ್ಣನ ಹಿಂಡ್ತಿ ಹುಡ್ಕೋಕೆ ಬಂದಿದೆ. ಹುಡೀಕಂಡಿ ಇದೇ ದಾರೀಲಿ ಬತ್ತೆ ತಾನು" ಅಂದ. "ಯೇಕಜಾತ ಆಗೂದಿಲ್ಲ. ತಾನು ನಿಮ್ಮ ಬೆನ್ನಿಗೆ ಬರವವ್ನೇಯ" ಅಂತು. "ನೀರಿಲ್ಲ, ನೆಡೆ ಇಲ್ಲ. ಆಕಾಸ್ಕ್ ಹೋಗೂದು ಕುದ್ರೆ. ಯೆಂತಕ್ ಉಪಾಸ್ ಬೀಳುಕ್ ಬತ್ತೆ ಇಲ್ಲೇ ಇರು" ಅಂದ. "ನಿನ್ ಬೆನ್ನಿಗೇ ಬತ್ತೆ ಆಗೂದಿಲ್ಲ" ಅಂತು. ಬೆನ್ನಿಗೆ ತಕಂಡ್ ಕುದ್ರೆ ಮೇನ್ ಕೂರ್ಸಕಂಡ್ ಹೋದ. ಹೊಗುಕೇಯ ಇದ್ಕೆ, "ಆಶ್ರದಾವು ಬೇಡ ಅಂದಿನಲ್ಲ. ಅಲ್ಲೆ ಉಳಿ ಅಂದಿನಲ್ಲ" ಅಂದ. ದೊಡ್ಡ ಕೆರೆ ಕಂಡ್ತು. ವಸ್ತ್ರ, ತಕಂಡೋಗ್ ನೆನಿಸ್ಕಂಡ್, "ಬನ್ನಿ ನಾ ಕುಡಿತೆ" ಅಂತು. ಕೆರೆಕೂಡೆ ತಿರಗಿಸಿ ಬೆಟ್ಟದಲ್ಲಿಳಿಸಿ ಹೋಗೂಕೇಯ ಕಾಲು ಹುಗ್ದೇ ಹೊಯ್ತು. ಮತ್ತೊಂದ್ ಕಾಲ್ ತೆಕ್ಕಂಡ. ಅದೂ ಹುಗ್ದೇ ಹೋಯ್ತು. ಸೊಂಟದವರೆಗೆ ಹುಗ್ದೇ ಹೋಯ್ತು. ಕಡೆಗೆ ಬೊಬ್ಬೆ ಹಾಕಂಬಾಗೆ ದನಕಾವ್ ಮಕ್ಳ ಬಂದ ಯೆಳ್ಸ್ ಹಾಕಿದ್ರು.

ತಮ್ನ ಹಿಂಡ್ತಿ, "ಬರ್ವ, ಬರ್ಬ" ಅಂದಿ ಸುಮ್ನೆ ಉಳೀತು. ಕಪ್ಪಾಗೋಯ್ತು. ಅದ್ ತೀಡ್ತೇ ಬಿದ್ದದೆ. ಇದ್ಕೆ ಕುದ್ರೆ ತಿರಗೂಕೆ ತಿಳೀನಿಲ್ಲ. ಕಡೆಗ್ ಶೆರ್ಗ್ ಹೀಗ್ ತಾಗ್ ಹೋಯ್ತು. ಕುದ್ರೆ ಆಕಾಶಕ್ ಹಾರ್ ಹೋಯ್ತು. ಮೇನ್ ಮೇನೆ ತಿರಕಂಡಿ ಅಕ್ಕ ಇದ್ದಿದ್ ಅಜ್ಜಮುದ್ಕಿ ಮನೆಗೆ ಹೋಗ್ ಇಳೀತು. ಅಷ್ಟಕ್ ಅದ್ಕೆ ತಿರಗ್ಸೂದ್ ತಿಳಿದಿತ್ತು.

ಇದ್ಕೋ ಗುತ್ತಿದಿತು, ತನ್ ಮೈದನೇ ಕುದ್ರೆ ತಾನಿದ್ದಾಗ ನೂರು ರುಪ್ಯಾ ಕೊಟ್ ತಕಂಡಿದ್ದ. ಇದ್ರ್ ಕೂಡೆ, "ಯೆಲ್ ಬಂದಿದೆ?" "ನನ್ ಗಂಡ ಆಸ್ರ್ ತರೂಕೆ ಹೋಗೀರು

ತಾಸ್ ರಾತ್ರ್ಯಾಯ್ತು. ಬರ್ಲೇ ಇಲ್ಲ. ನನ್ ಕೂಡ್ ತಿರಗಸೂಕ್ ಆಗ್ಲಿಲ್ಲ. ಕಡೆಗ್ ಶೆರ್ಗ್ ತಾಗೂಕ್ ಮೇನ್ ಹೋಯ್ತು, ಕೆಳಗ್ ಕೂತ್ತು. ಮುದ್ಕಿ ಮನೇಲಿ" ಅಂತು. "ಯಾಕ್ ಬಂದಿದ್ದೆ? ಯೆಲ್ಲಾಯ್ತು?" ಕೇಳ್ತು. "ನಾ ಮುದ್ಕಿಮನೆಗೆ ಬಂದಿದೆ. ನೀನು ನನ್ನ ತಂಗ್ಯಾಯ್ತಾ, ನಾ ಅಣ್ಣಾಯ್ತು" ಅಂತು. ಸಾಯ್ಬಂದೆ ದುಸ್ತದೆ. "ಆಸ್ರ್ ತಗಂಡ್ ಬರೂಕೆ ಅಂಗೋಸ್ತ್ರ ಪಂಜಿ ತಕಂಡ್ ಹೋದೋರ ಬರ್ಲಿಲ್ಲ." "ನೀ ತಂಗಿ ನಾ ಅಣ್ಣ" ಅಂತು.

ಕತ್ತೆ ತಕಂಡ್ ಹೋದವ ಬಂದ. ತನ್‌ಗೊಂದ್ ಪೋಟು, ತಂಗಿ ಪೋಟು ತೆಗಿತು. ಗೋಡೆಗಿಡ್ತು. ಅವನ್ ಬಂದ್ಕಂಡಿ, "ನನ್ಗೆ ದಗ ಹಾಕ್ ಬಂದಿದೆ" ಅಂದ. "ಕೋಣೆಲ್ ಹಾಕ್ ಬೀಗ ಹಾಕಿ" ಅಂತು. ಕದಹಾಕ್ ಬೀಗಹಾಕ್ರು. ಸೊನಗಾರವ ಬಂದ. ಅವಗೂ ಕೋಣೆಲ್ ಹಾಕ್ರು. ಮುಸಲ್ಮಾನರವ ಬಂದ. "ರಂಡೆ ನನ್ಗ್ ದಗ ಹಾಕಂಡ್ ಕುದ್ರೆ ತಕಂಡ್ ಬಂದೆ" ಅಂದಿ ತೀಡ್ದ. ಬೇರೆ ಕೋಣೆಲ್ ಹಾಕ್ರು.

ಕಡೆಗೆ ಮೈದ ಬಂದ. "ನನ್ನ ಅತ್ಗಿ ಕಂಡಾಂಗೇ ಕಾಣ್ತದೆ ಇದು. ನನ್ನ ಹಿಂಡ್ತಿ ಕಂಡಾಂಗೆ ಕಾಣ್ತದೆ" ಅಂದಿ ಜೋರ್ನೆ ತೀಡ್ ಬಿಟ್ಟ. "ಅವ್ನಗೆ ಕೊಣೀಲ್ ಹಾಕಿ" ಅಂತು. ಕೋಣೀಲ್ ಹಾಕ್ ಬೀಗ ಹಾಕ್‌ದ್ರು. ಕಡೆಗ್ ಗಂಡ ಬಂದ. ತಮ್ಮನ ಮದ್ಯಾದ್ ಗೊತ್ತಿಲ್ಲ.

'ತನ್ ಹಿಂಡ್ಯಾಗಿತ್ತು' ತೀಡ್ದ. ಅವ್ನಗ್ ಕೊಣಿಲ್ ಹಾಕ್ ಬೀಗ ಹಾಕ್‌ದ್ರು. ಕಡೆಗ್ ಪರದಾನಿ ಹುಡ್ಗ ದುಷ್ಟಬುದ್ಧಿ ಬಂದು, "ರಂಡೆ, ನನ್ಗ್ ದಗ ಹಾಕ್ ಓಡ್ ಬಂದಿದ್ದೆ" ಹೇಳಿ ಅವರ ಪೋಟೋ ಹರ್ದೇ ಹಾಕ್ದ.

"ಅವ್ನೂ ಕೊಣಿಲ್ ಹಾಕು" ಅಂತು. ಬೆಳಗಾಗೂತನ ಉಪಾಸೆಯ. ಆಗ, "ವಬ್ಬಿಬ್ರಿಗೆ ಹೆರ್ಗ್ ತಕಂಬಾ" ಅಂತು. ಕತ್ತೆ ತಂದವ್ನ ಕೂಡೆ, "ನೀನು ಪೋಟೋ ಕಂಡ್ಕಂಡ್ ಯೆಂತಾಕ್ ತೀಡ್ದೆ?" "ನನ್ಗೆ ಉಳಿ ಅಂದ ಹೇಳ್ಕ್ ದಗಾ ಹಾಕ್ದ ಹೆಣ್ಣು ಅವ್‌ಳೆ... ತೀಡ್ದೆ" ಅಂದ. "ಇನ್ ಮೇನೆ ದಾರೆ ಹೆಂಗ್ಸರ ಮೇನೆ ಆ ಮಾಡೂಕಾಗ" ಹೇಳಿ, "ಕತ್ತೆ ತಕಂಡ್ ಹೋಗು" ಹೇಳಿ ದುಡ್ಡು ಕೊಟ್ತು. ಕಳಿಸ್ ಕೊಟ್ತು.

ಸೊನಗಾರನ ಹೆರಗ್ ತಕಂಡ್ ಬಂದ್ರು. "ಯೆಂತಕ್ ತೀಡ್ತೆ?" "ಸಾವಕಾರನ ಮನೆಗ್ ಚೆನ್ನ ಮಾಡೂಕ್ ತಕಂಡ್ ಬಂದಿದ್ದೆ. ಅದು ಕಂಡ್ತು ತಕಂಡ್ ಹೋಯ್ತು. ಅದೇ ಕಂಡಾಂಗೆ ಕಂಡ್ತು. ಪೋಟೋ ಕಾಂಬೂಕೇಯ." "ಬೇರೆ ಹೆಂಗ್ಸರ ಮೇನ್ ಆಳ್ ಮಾಡೂಕಿಲ್ಲ. ಆಗೂದೋ?" ಅಂತು. "ಆಗೂದು" ಅಂದ. ಚೆನ್ನ ಬಿನ್ನ ಅಟ್ಟೂ ಕೊಟ್ತು. ಇವ ಮುಸಲ್ಮಾನ್ನವ ಬಂದ. "ನನ್ಗೆ ನೀ ಸತಾಯ್ಸಿದೆ. ನನ್ನ ಉಡ್ಗಿ ತಕಂಡ್ ನಂಗೆ ಈ ನಮ್ನಿ ಮಾಡಬೇಕು" ಅಂದಿ ತೀಡ್ದ. "ಅಕ್ಕಿ ಬಿಕ್ಕಿ ತಕಂಡ್ ಬಾ" ಅಂದ ಹೇಳಿ, ಹೆಂಗ್ಸು, "ಇದು ಕೊಟ್ಟಿ ಈ ನಮ್ನಿ ಮಾಡಿದ್ದೆ" ಅಂದ್ಕ ತೀಡ್ದ. "ಗನಾ ಕುದ್ರೆ ಹೆಕ್ಕೊ, ಬೇರೆ ಹೆಂಗ್ಸಿನ ಮೇನೆ ಆಶೆ ಮಾಡೂಕಿಲ್ಲ" ಅಂತು. "ಆಗೂದು" ಅಂದ. ಹೊಸದೇ ಪೈಜಾಣ, ಅಂಗಿ, ತೊಪ್ಪಿ, ಹೊಸ್ತ ಕೊಟ್ತು. ತಕಂಡ್ ಹೋದ.

ಕಡೆಗೆ ಗಂಡ, ಮೈದ ಉಳ್‌ದ್ರು. ಮೈದನಿಗೆ ಹೆರಗೆತರಿಸ್ತು. "ಹೆಂಡ್ತಿ ಕಂಡಾಗೇ ಕಂಡ್ತು"

ಅದ್ಕೆ ತೀಡ್ದೆ ಅಂದ. "ನಿನ್ ಹೆಂಡ್ತಿ ಸಿಕ್ರೆ ಇಟ್ಕಂತ್ಯೋ ಕೇಳ್ತು." "ಯೆನಡ್ಡಿಲ್ಲ. ಹಿಂಡ್ತಿ ಸಿಕ್ಕಿರೆ ಇಟ್ಕಂತಿದ್ದೆ" ಅಂದ. "ಖರೆಯಲ?" "ಖರೆಯ" ಅಂದ. "ಕೆಳಗೆ ಕುಳ್ಳ" ಅಂತು. ಗಂಡನಿಗೆ ಕರಿತು. "ಯಂತಾ ತೊಂದ್ರಿ?" ಕೇಳ್ತು. "ನನ್ ಹಿಂಡ್ತಿ ಕಂಡಾಗೇ ಕಂಡ್ತು" ಅಂದ. "ಹೆಂಡ್ತಿ ಹೋಗ್ ನಾಕ್ ವರ್ಸಾಯ್ತು. ಸಿಕ್ರೆ ಇಟ್ಕಂತ್ಯೋ" ಕೇಳ್ತು.

"ಹೋ ಇಟ್ಕಂತಿದ್ದೆ. ಅವ್ಳು ಬೆರೆಯೋರ ಮಕ ನೋಡ್ವಳಲ್ಲ" ಹೇಳ್ ತೀಡ್ದ. ದುಷ್ಟ ಬುದ್ಧಿ ಕರಿತು. ಐದಾರ್ ಜನ ಹಿಡ್ಕಂಡ್ ಬಂದ್ರು. ಅವ್ನ. ರುಂಡ ಹಾರ್ಸು ಹುಕುಂ ಕೊಟ್ತು. ಆಗ ತಾಂಡೇಲ್ಕೊಳು ಪರದಾನಿ ಹುಡ್ಗನಿಗೆ ರುಂಡ ಹಾರ್ಸ್‌ದ್ರು. ಆಗೇ ಪುಲ್ಲೇಸ್ರಿಗೆ ಆಳುಗಳಿಗೆ ಹೇಳ್ತು, "ಅವರಿಗೆ ಇಂತಿಂತಾ ಗಡ್ಡ ಬಂದದೆ." ಆಳ್ ಮಕ್ಳ ಕೂಡೆ, "ಚೌರ ಮಾಡ್ಕಂಡಿ ಮೀಸು" ಹೇಳ್ತು. ಮಿಂದ್ಕಂಡ್ ಬಂದ್ರು ಅವ್ರು. ಅಡ್ಗಿ ಮಾಡದ್ರು. ಇದು ಗಂಡ್ಸನ ರೂಪಾತೆಗಿತು. ಹೆಣ್ ರೂಪ ತಕಂಡ್ತು. ಯೆಯ್ಡೂ ಜನ ಅಕ್ಕ ತಂಗಿ ಶೀರೆ ಉಟ್ಕಂಡ್ ಪಟ್ಟೆ ಉಟ್ಕಂಡ್ ಬಂದ್ರು.

ಗಂಡ, ಮೈದ ಮಿಂದ್ಕಂಡಿ ಬಂದ್ರು. ಅಡ್ಗಿಯಾಯ್ತಲ್ಲ. ದೇವರ ಸಾಮಾನ, ಕಾಯಿ ಬಾಳೆಕೊನೆಯೆಲ್ಲಾ ತಕಂಡ್ ಅಕ್ಕ-ತಂಗಿ ಯೆದ್ರು. ಯೆಲ್ಲಾ ಹೋಗರೆ ಮೈದ-ಮೈದನ ಹಿಂಡ್ತಿಯೆಲ್ಲ ಗಂಡ, ಮೈದ ಅಕ್ಕ-ತಂಗಿ ಹಿಂದ್ ಹೋದ್ರು. ಹೋಕಂಡಿ ಕಾಳಿಕಾಮ್ಮನ ಗುಡಿಗ್ ಹೋದ್ರು. "ತಾ ಖರೆ ಪತುವರ್ತಿಯಾದರೆ ಕದ ತೆಗಿಬೇಕು" ಅಂತು. ಕದ ತೆಗ್ದಬಿತ್ತು ಕಡೆಲಿ. ಯೇನಂತು ದೇವ್ರಕೂಡೆ, "ತಾನು ಪತುವರ್ತಿ ಹೆಂಗ್ಸಾದ್ರೆ ದಾಸಿಗೆ, ಹುಡ್ಗನಿಗೇ, ನಾಕ ಜನ ಆಳಮಕ್ಳಿಗೆ, ಆಕಳಿಗೆ, ಕರಿಗೆ ಅಟ್ಟೂ ಜನ್ನಿಗೆ ಜೀವ ತರ್ಸ್ಬೇಕು ಇಲ್ಲಾದ್ರೆ ತಾನು ಕೈಕಾಲ್ ಜಪ್ಕಂಡ್ ಜೀವ ಕೊಡ್ತೆ" ಹೇಳ್ ದೇವ್ರಕೂಡೆ ಹೇಳ್ತು. ಅಟ್ಟೂ ಜನ ನಿದ್ರಿಂದ್ ಯದ್ದವ್ರಾಂಗೆ ಯೆದ್ಕಂಡ್ರು.

"ನಿನ್ ಹರ್ಕೆ ತೀರ್ತು" ಅಂದ್ ಹೇಳಾಕಿ, ಹುಡುಗಗ್ ತಕ್ಕಂಡಿ, ಗಂಡನಿಗೆ- ಬಿಂಡನಿಗೆ ತಕ್ಕಂಡಿ ಮನೆಗ್ ಬಂದಿ ಊಟ ಮಾಡ್‌ದ್ರು. ಬಂದವ್ರಿಗ್ ಊಟ ಹಾಕದ್ರು. ತಾನು ತನ್ ಗಂಡ ಪಟ್ಟಕ್ ಕೂತ್ರು. "ಊಟ ಉಪಚಾರಾಕಂಡಿ ತಾ ಬತ್ತೆ" ಅಂದ್ ಹೇಳಿ ಮನೆಗೆ ಕರ್ಕಂಡ್ ಹೋಯ್ತು. ಮೈದನ ಹಿಂಡ್ತಿ ಅಪ್ಪನ ಮನೆಗೆ ಹೋಯ್ತು. ಯೆಲ್ಲಾ ಅಲ್ಲಿ ಯೆಂಟ್ ದಿನ ಉಳಿದ್ರು. ಉಳ್ಕಂಡಿ ಮನೆಗೆ ಹೋಯ್ತು. ಅಲ್ಲಿ ಮನೇಲಿ ಮೈದನಿಗೇ ಮೈದನ ಹಿಂಡ್ತಿಗೆ ಪಟ್ಟಕೆ ಕೂರ್ಸ್ತು. ತಾನ್ ಇಲ್ಲೇ ರಾಜಧಾನ್ಕೆ ಬಂತು. ಅಲ್ಲಿ ರಾಜತನ ಮೈದ ಮೈದ್ನ ಹಿಂಡ್ತಿ ಆಳ್‌ದ್ರು. ಸುಖ-ಸಂತೋಶದಾಗೆ ಉಳದ್ರು.

■ ಹೇಳಿದವರು: **ದಿ|| ಸೋಮ ನಾಯ್ಕ**, ಮಾಣಮನೆ, ಹೆಗಡೆ ಊರು.

ದಿನಾಂಕ:- ೧೨-೬-೭೦

# ದೈವ ಸಂಕಲ್ಪ

ರಾಜ, "ಮಕ್ಕಳೇ ಇಲ್ಲ..." ಹಿಂಡ್ತಿ ಕಲ್ ಹೇಳ್ದ ಅವ, "ತಾನು ಊರ್ ಬಿಡ್ತೇ ಎಂಟ್ ದಿವಸದ ಮಾತೇಗೆ ಯಾರ್ ಕಲೂ ಹೇಳ್ ಬೇಡ ಹೋಗ್ತೆ" ಅಂದ. "ಹೋಗಿಬನ್ನಿ" ಅಂದ ಹೇಳ, ಅವಗೆ ಅಪ್ಪೆ ಕೊಟ್ಟೇಬಿಡ್ತು. ಎಲ್ಲರೂ ಹೋಗ್ ರಾಜ್ನ ತಡ್ವರೇಯ, "ನಮ್ಮ ಹೊಟ್ಟೆ ಹೊರಿವರ್ಯಾರು?" "ಯಂಟ್ ದಿವಸದಲ್ ಬತ್ತೆ" ಅಂದ. ಹಿಂಡ್ತಿಗೆ ಯೆಲ್ಲಾ ವಳಗೇ ಆಗಬೇಕು.

ಆರ್ಯಾಣ ಅಡವಿಗೆ ಹೋಗಿ ತಪ್ಪಸಿಗೆ ಕೂತ; ನಾಕ್ ದಿನ ಕೂತ; ಆರ್ ದಿನ ಕೂತ ದೇವ್ರ ಭೇಟಿ ಆಲೆಲ್ಲ, 'ಜೀಮನೆ ತೆಕ್ಕ ಬಿಡವದು ಕೆರಿಲ್ ಹಾರ್ವದು' ಅಂದ. ಹೋಗ್ ಹಾರ್ ಬಿಡಬೇಕು ಅಂತ ಕೆರಿ ದಂಡಿಮೇನೆ ನಿತ್ತ. ದೇವರು, "ತಡಿಯಪ್ಪ" ಅಂದಿ ತಡೆದ, "ಬೇಟ್ಯಾದ ಪರಮಾತ್ಮ, ನನಗೆ."

"ಇಂತ ಕಷ್ಟ ಯೇನ್ ಬಂದ್ ಹೋತಪ್ಪ?" ಕೇಳ್ದ. "ಯೇನಲ್ಲ ಸ್ವಾಮಿ, ನಂದು ರಾಜ್ಯ ಮಾದೊಡ್ಡ. ಹುಡ್ಗರೆಲ್ಲ. ಜೀವನೆ ನಾಶಮಾಡಬೇಕು" ಅಂದ. "ಹುಡ್ಗರು ಇಲ್ಲ ಅಂದ್ ಹೇಳೋಕೆ ಹೀಗ್ ನೋಡು" ಅಂದ, ರಾಜ್ನ ಕೆಲಿ- "ನೋಡು..." ಅಲ್ ನೋಡ್ದ, "ಮಾಯ್ನ ಗಿಡದಾಗೆ ಮಾವ್ನ ಹಣ್ ತೂಗಾಡ್ತಾದೆ ಕೊಯ್ಕಬಾ" ಅಂದ. ಮೇನೆ ಮೇನೆ ಹೋತದೆ. "ಇನ್ನೊಂದು ಸರ್ತಿ ಹೋಗು" ಅಂದ. ಅವನ ಕೈಗೆ ಸಿಕ್ತು. ಮಾವ್ನಹಣ್ ಸಿಕ್ಕುವರಿಗೆ ತಂದ್ ಇರಸಕಂಡ. "ನೀನು ಮಾಯ್ನ ಹಣ್ಣ ತಕಹೋಗಿ ಕೋಯ್ದಿ ಯೇರಡು ತಾಟಿ ಮಾಡಬೇಕು. ರಸ ಬಂಗಾರದ ಹರಿವಾಣದಲ್ಲಿ ಹಿಂಡಿ ಹಿಂಡತಿಗೆ ಕೊಡು" ಅಂದ. ಹಣ್ಣ ತಕಂಡ್ ಬಂದ ರಾಜದೊರೆಲ್ಲಾ ಬಂದ್ಕಂಡ್, "ಯೇನೇನು ಯಾವಾಗ ಬರೋರು?" ಕೇಳ್ತ ಬಿದ್ದರೆ ಹಣ ತಕ ಬಂದ ಮನಿಗೆ. "ಯೆಲ್ ಹೋಗಿರಿ, ಸ್ವಾಮೀ?" ಅಂದ. ಹೇಳ್ಕಂಡಿ ಮೇರ್ ಬಾನ್ ಮಾಡ್ತು. "ಯೆಲ್ಲೆ ಹೋಗಿರಿ?" "ಹೋಗಿದ್ದೆ ಅಲ್ಲೆ" ಹೇಳ್ದ ಯೆರಡ ಹಣ್ಣ ಹೆಂಡ್ತಿ ಕೈಯಲ್ ಕೊಟ್ಟ. ಬಂಗಾರದ ಹರಿವಾಣದಲ್ ರಸ ಹಿಂಡಿ ಹಿಂಡ್ತಿ ಕೈಲ್ ಕೊಟ್ಟ. ಗೊಟುಸಿಪ್ಪೆ ಕುನ್ನಿಗೆ ಹಾಕ್ತು ಗರ್ಭಿಣ್ಯಾಯ್ಯು ಕುನ್ನಿನೂ ಗಬ್ಬಾಯ್ತು.

ವಂಬತ್ ತಿಂಗಳಾಯ್ತು. "ಎನಾಯ್ತು? ವಂದ್ ಹುಡಗ ಹುಟ್ದಿ ಅದ್ಕೆ" ಹುಟ್ಟುವರಿಗೆ ಬಟ್ರು ಕೇಳ್ತ. ಯಲ್ಲಾ ಜಾತೀಲೂ ಅದ್ಯಲ್ಲಾ? ಮೂರ್ ದಿನ್ಕೆ ಬಟ್ರ ಮನಿಗ್ ಹೋದ ರಾಜ. "ಯೇನಂದ್ ಬಂದಿದೆ?" "ಅವನ ಜನ್ನಿವಳ್ಗೆ ಹನ್ನೈಯ್ಡ್ ದಿವಸದ ಗಂಡಿಗೆ ಹನ್ನೈಯ್ಡುವರ್ಸದ್ ಹೆಣ್ ಲಗ್ನ ಮಾಡಬೇಕ್."

ಆವಾಗೆ, "ಹರಹರ ಹುಡ್ಗರ ಯಲ್ಲದೆಗಿದ್ದದ್ದೆ ವಂದ್ ಕಟ್ಟಾಗಿತ್ತು. ಈಗ ಹುಟ್ಟದ್ದೆ ತಪ್ಪಾಯ್ತು" ಅಂದ ಮುನಿಕಂಬಿಟ್ಟ. ಹೆಂಡ್ತಿ, "ಅಯ್ಯೋ ದೇವರೆ!" ಹೇಳಿ ರಾಜನ ಯಬ್ಬಿಸ್ತು. "ಹನ್ನೈಡ್ದು ದಿನದ ಹುಡಗಗ ಹನ್ನೈಯ್ಡು ವರಶನ ಹಿಂಡ್ತಿ ಯೀಗ ಮದ್ವಿ ಮಾಡಬೇಕು."

ಪರದಾನಿ ಬಂದ ರಾಜನ ಕೆಳಗಿದ್ದವ. ಪರದಾನಿ, "ಅಯ್ಯೋ ದೇವ್ರೆ! ಯೇನ ವಂದ್

ಕೆಲಸ ಮಾಡ್ದ?" ಪರದಾನಿ ಮಗನ ಪೋಟತೆಗವದು, "ತೆಗದಿ ಈ ಪರದಾನಿ ಕಲ್ ಕೋಟ್ಟಿ ನೀ ತಕಂಡ್ ದೇಸಾಂತ್ರ್ ಹೋಗೋದು, ಯಾವ ರಾಜ್ನ ಮನ್ಲಿ ಹೆಣ್ಣದ್ಯೋ ತೆಳಕಂಡಿ ಮೂರ್ ದಿನದ್‌ವಳಗ್ ಬರಬೇಕು" ಅಂದ್ ಹೇಳಿ ಕಳಗದ.

ಹೋದ. ಹೋಗುವರಿಗೆ ಮತ್ತೊಂದು ರಾಜನ ಮನಿಗೆ ಹೋದ. ಅವರೇನಂದರು ಅವ್ನ ಕಲಿ. "ಯೆಲ್ಲಿದ್ ಬಂದ್ರಿ?" "ಹಂಗಾದ್ರೆ ನೆಂಟ್ರೇ ವಂದ್ ಹುಡುಗ ಪರಾಯಕ್ ಬಂದನೆ ಲಗ್ನಮಾಡಬೇಕು ಹೇಳ್ ಬಂದನೆ" ಪೋಟು ಆ ಹುಡುಗಿಗೆ ತೋರ್ಸದ. ಪೋಟು ನೋಡಿ ಅದು ವಪ್ಕಂಡ್ತು.

"ಯಾವ ದಿವಸಾಗೂದು? ಹನ್ನೆಯ್ಡು ದಿವಸದೊಳಗಾಗಬೇಕು ಲಗ್ನ. ಇಂತಾ ದಿವಸ ಆಗೂದು. ಮೂರೇ ದಿನದೊಳಗಡ್ಡಿಲ್ಲ" ಹೇಳ್ದ. ತನ್ನ ಹುಡಗನ ಪೋಟೋ ತೋರ್ಸಿ ಹೆಣ್ ಕೇಳನೆ. ತನ್ನ ಹುಡಗಗೆ, "ಬಾಸಿಂಗ ಕಟ್ಕ ಹೋಬೇಕು" ಅಂದ. ಹುಡ್ಗನ ಹತ್ರ ಹೇಳ್ದ. "ಬಾಸಿಂಗ ಕಟ್ ಮದಿ ಮಾಡ್ರೂ ಆ ಹೆಂಗ್ಸೂ ಕೈ ಮುಟ್ಟಕಾಗ, ಸಂಗ್ತಿ ಮನಗೂಕಾಗ."

ಸೊನಗಾರ ಮನ್ಗೆ ಹೋಗಿ ಲಿಂಗ ಬೆಳ್ಳೀದು ಮಾಡ್ಸಕ ಬಂದು, ಬಂದಿ ಹುಡ್ಗನ ಕೊಳ್ಳಿಗೆ ಕಟದ್ರು. ಶಿಶುಕೊಳ್ಗೆ ಇಷ್ಟ್ ದೊಡ್ಡದು. ಹುಡಗನ ಕಟ್ಕಂಡಿ ಊರಗೆ ಐದು ಜನ ಬಟ್ರ ಕರಕಂಡ್ರು. ಬಟ್ರು ಶಿಶು, ಬಾಳಂತಿ, ಮದಮಗ ಯಲ್ಲವ ವಟ್ಟಾಕಂಡಿ ಹೋದ್ರು. "ನಾಡ್ದನ ಹನ್ನೆರಡ ದಿನ, ಹನ್ನೆರಡ್ ದಿನದೊಳಗಾಗಿ ಆಗಬೇಕು ಲಗ್ನ."

ದಿಬ್ಬಣ ಕಟ್ಕಂಡ್ ಹೋದ್ರು. ಬಟ್ಟರು ಯೇನಂದ್ರು? "ತಾಯಿ-ತಂದೆ ಲಗ್ನ ನೋಡೂಕಾಗ ಊರನೋರ್ ವಬ್ರೂ ವಳಗ ತಕಂಬೂಕಾಗ. ವಂದ್ ಪರದೆ ಕಟ್ಕಂಬೇಕು" ಅಂದ್ರು. ಕಟ್ಕಂಡಿ, "ದೇವ್ರೆ ವಂದ್ ಹುಡ್ಗಿಯಾಗಿತ್ತು. ನಾವೇ ಬಟ್ರಕಲ್ ದಾರಿ ಯೆರಿಸ್ಬೇಕಾಯ್ತಲ್ಲ?" ಅಂದ್ರು. ಹೋದೋರು ದಾರೀ ನೀರ್ ಬಿಟ್ರು. ಈ ಹುಡ್ಗ್ನ ಕೊಳ್ಳನ್ ನಿಂಗಕೆ, ಕೈಮೇನೆ ಇಟ್ಕಂಡು ನೀರ್ ಬಿಡೂದು.

ಲಿಂಗಕೆ ಹೂಗ್ ಹಾಕಿ ಲಗ್ನದ ನೀರ್ ಬಿಟ್ರು. ಪರದಾನಿ ಹುಡ್ಗ ಬಾಶಿಂಗ ಕಟಕೂತನೆ. ಲಿಂಗ ತೆಗೆದ್ರು ದಾರಿ ಯರದ್ರು. ಶಿಸನ ಕೊಳ್ಗೆ ಕಟ್ಟಿ ಹೋದ್ರು. ತಿರುಗ್ ಬಂದ್ ಬಿಟ್ರು ಬಟಕೋಳು. ದಿಬ್ಬಣದೋರು ಯೆಲ್ಲಾ ಉಂಡ್ರು. ಹಸೆಹಾಕ ಹೆರ್ಗ ಮಲೂಗಿದರು. ಮದಮಗ (ಪರದಾನಿ ಹುಡುಗ) ಹಾಸ್ಗಿ ಮೇನೆ ಮನಗಿದ. ಪಕ್ಸಕ್ಕೂ ಮೈ ಮುಟ್ಟಲಿಲ್ಲ. ಆ ಹುಡಗಿಗೆ ನಿದ್ರೆ ಬಿದ್ ಹೋಯ್ತು.

ಬಾಶಿಂಗ ಕಟ್ಕಹೋದವ್ನ ಯೇಳ್ಸ್ಕಂಡದ್ದು, ಶಿಶು ತೆಗದು ಅದರ ಮಗ್ಗಲದಲ್ ಮನಗಿಶಿದ್ರು. ಚೀಟಿ ಬರ್ದಿ ಶಿಸನ ಮಗ್ಗುಲದಲ್ ಇಟ್ಟರೆ. "ಈ ಗಂಡನ್ನ ಸಾಕಿ ಸಲಗಿ ಸಂರಕ್ಷಿಣ ಮಾಡದ್ ಹೌದಾರೆ ನೀ ಮುತ್ತೈತನದಲ್ ಉಳೀಬೇಕು" ಅಂದಿ ಬರದರೆ. "ಅವ ನಿನ್ ಗಂಡ" ಹೇಳ್ ಬರದರೆ.

ಬೆಳಗಾಗೂದ್ರೊಳ್ಗೇಯ ಈ ಬಾಲಯ್ಯನು ತೀಡ್ತದೆ. ಹಸ್ವಾಯ್ಕಂಡಿ, "ಇದೇನು? ಈ

ಬಾಲಿ ಇಲ್ ತೀಡ್ತದೆ?" ಈಚೆ ಬಳಚೂದು ಆಚೆ ಬಳ್ಚವದು. ಚೇಟಿ ವೋದ್ಕಂಡಿ, "ಹರಹರ ಹಣೀಲ್ ಬರದದ್ದು. ಇದ್ಕೆ ಯಾರ ಕೂಡ ಹೇಳದ್ರೆ ಸಾದ್ಯಿಲ್ಲ. ತಪ್ಪೂಸ್ಕೆ" ಅಂದ್ ಹೇಳ್ತು. ಸಂರಕ್ಸಣಿ ಮಾಡ್ಕಂಡ್ ಮುತ್ತೈತನದಲ್ ಉಳೀಬೇಕು.

ವಸ್ತ್ರದ ಮೇಲೆ ವಸ್ತ್ರ ಹಾಕಂಡಿ ದಾಗಿನಿ ಹಾಕಂಡ್ತು. ಶಿಸ ಯೇನ್ ಮಾಡ್ತು? ಜೋಳ್ಗಿ ಮಾಡ್ಕಂಡ್ ಬೇಡ್ವರಾಗೇ ಬೆನ್ನಿಗ್ ಬಿಕ್ಕಂಡ್ತು, ಹೊಂಟ್ತು. ಇದು ಹೋಗುವರಿಗೆ ವಂದಲ್ಲ ವಂದ್ ಊರ್ಗೆ ಹೋಗ್ ಮುಟ್ತು. ಬೆಳಗಾಗುತನ್ನ ತನ ಮಗಳ ಪರದಾನಿ ಬಂದಿ ಕಸ್ಕಂಡ್ ನೆಡ್ದ್ನಲ್ಲ ಅಂದಿ ಬಾರಿ ಚಿಂತಿ ಮಾಡ್ರು. ಹೋಗ್ ಹೋಗ್ ವಂದ್ ದೇಸ್ಕೆ ಹೋಯ್ತು. ಇದ್ಕೆ ಬಾರಿ ಹಸ್ವಾಯ್ತು. ಯೆಟ್ ಪರಾಯದ ಕನ್ಯೋ ಅದೇ ಪರಾಯದಾಗೆ ಇರಬೇಕು. ಅವ ಪರಾಯಕ್ ಬರೂವರ್ಗೆ. ಆವಾಗೆ ಯೇನ್ ಮಾಡ್ತು? ಹೋಯ್ತು. ವಳ್ಳ ಆಸ್ರಾಯ್ತು. ಹಸ್ವಾಯ್ತು. ವಂದ್ ಕಟ್ವದೆ, ಅಲ್ಲಿ ಕಟ್ಟಿ ಕಾಲ್ಗೆ ವಂದ್ ಆಲ್ದ ಬೇರು ತೂಗಾಡ್ತದೆ, ತೂಗಾಡೂ ಬೀಣ್ಗೆ ಜೋಕಾಲಿ ಕಟ್ತು. ಮನಗಿಸಿತು. "ಅವಗೆ ಹಣ್ ತಿಂದ್ಕಂಡಿ ಹಣ್ರಸ ತಂದ್ ಕುಡಿಸ್ಬೇಕು" ಹೇಳ್ಕಂಡಿ ಹೋಗಿ ಹಣ್ ತಿಂತು ರಸ ಕಟಕಂಡ್ತು. ಪಾರ್ವತಿ-ಪರಮೇಶ್ವರ ಸ್ವಾರಿಗ್ ಹೊಗ್‌ತಿರು. ಹೋಗ್ಬರಬೇಕಾದ್ರೆ, "ಆರಂಭ. ಅಡವಿಲಿ ನರಮನಸರ ಯಾತದೆ. ಹೋಗ್ ಬರ್ವನಿ" ಅಂತದೆ. ಗಂಡನ ಕೂಡೆ, "ಈ ಅಡವೀಲಿ ಯೆಲ್ ಮನಶರವ್ರೆ?"

ಮೇಲೆ ಕಟ್ದ ಜೇನು ಅವನ ಬಾಯ್ಗೆ ತೊಪ್ಪ ಬಿಡ್ತದೆ. ಹೆಂಗ್ಸು ರಸ ತಂದದ್ ಕಂಡ್ತು. ಬತ್ತದೆ ಬರವದರೆ ಅಲ್ಲಿ ನಾಕು ಬಳ್‌ಕಟ್ಟಿ ಬಟ್‌ಗೆಲ್ಲ ಅಮೃತ ತುಂಬದ್ರು. ಅವ್ ತೀಡ್ದಾಗೆ ಆ ಬೊಟ್ ಬಾಯ್ಗೆ ಕೊಟ್ರು ಬಟ್ಟ ಕಡ್ದ, ಅಮೃತ ತುಂಬಿ ವಂದ್ ಬಟ್ಟ ಬಾಯ್ಗೆ ಕೊಟ್ರು. ಮಲಗಿಸಿದರು. ಜೋಕಾಲಿಯಲಿ ಮೇನ್ ಇಟ್ ರಸ ಹಿಡ್ಕಂಡದೆ. ಮತ್ ಕೇಳ್ರು, "ಹನ್ನೆಯ್ಡು ವರ್ಸದ ಹುಡಗಿಗೆ ಹನ್ನೆಯ್ಡು ದಿನದ ಶಿಸು ತಂದಿ ನಗ್ನ ಮಾಡ್‌ಬಿಟ್ರು. ಏನ್ ಮಾಡಬೇಕಾಯ್ತು" ಅಂದಿ ಹೊಯ್ಕಂಡ್ತು. ಆವಾಗೆ, "ನೀನ್ ಯೇನ್ ಸಂದಾಯ ಬಿಡಬೇಡ. ಆರ್ ತಿಂಗಳ ಗಂಡು ಆರ್ ವರ್ಸನ ಗಂಡಾಗ್ತ, ಹನ್ನೆಯ್ಡು ವರ್ಸಾಗಿ ನಿನ್ನ ಮಗ್ಗಲಕ ಅವ ಬರೂವರ್ಗೆ ನೀನ್ ಯಾವ ಪರಾಯದಗಿದ್ದೆ ಅದೇ ಪರಾಯದಲ್ ನೀನಿರಬೇಕು." ಅದ್ಕೆ ಆಸರ್ವಾದ ಕೊಟ್ರು. ನೆಡ್ದ್ ಬಿಟ್ರು. ಅವನ ಬಾಯ್ಗೆ ವಂದ್ ಗುಟ್ಕ್ ಕೊಟ್ಕಂಡ್ತು, ನೆಡ್ದಬಿಡ್ತು.

ಹೋಗೂವರೆಗೆ ವಂದ್ ಮಡ್ವಾಳವ ಶೇರಿ ವಗಿತೆ ಇರತಿದ್ದ. ಆ ದಿನ ಸೂಟಿ. ಆ ದಿನ ಅವ ಬರಲೇ ಇಲ್ಲ. ವಗೂಕೆ ಮಡವಾಳ ಮುದ್ಕಿ ಅರಸೂಮನ್ಗೆ ಹೊಗ್ ಕೊಡ್ತಿತ್ತು. ಅದ್ರ ಹೆಸ್ರು ಹೂಗಾರ ನಿಂಗಮ್ಮ. ಮಲ್ಲವ್ವಿ ಹೇಳಿ ಇದು ಹೋಕಂಡಿ ಅದ್ನ ಅರಬಿಯ ವಗಿತ ಕೂತದೆ. ಬಂಗಾರ ಅರವಿಲ್ ಹಾಕದೆ. ಶಿಸವ ಇದ್ರ ಮೇನ್ ಮನಗ್ಸದೆ. ಅವ ಆಡ್ತೇ ಮನಗನೆ. ಇದು ಕೂದ್ಲ ಬಿಟ್ಕಂಡದೆ. "ಎಳ ಮಕ್ಕಳ ಚೌಡಮ್ಮ ಕೂತದೆ" ಅಂತದೆ. "ತನ್ಗೆ ಬೇಡ ಹೋಗು" ಹೇಳಿ ಕೋಣಿತದೆ. ಮುದ್ಕಿ ವೋಡೂಕ ತಯಾರಾಗದೆ.

ಹೇಳ್ತು ಅದು. "ಅವ್ವಾ ನಾನು ಚೌಡಮ್ಮನಲ್ಲ. ನರಮನಸತಿ. ಕೊಯ್ಕು ಹೂಗ. ನನ್ಗೆ ಕೊಡು. ತಾವ್ ತೋರ್ಸೆಯವ್ವಾ. ನಾನು ನಿನ್ ಬೆನ್ಗೆ ಬತ್ನವ್ವಾ" ಅಂತು. "ಅವ್ವಾ ನೀ ನರಮನಸ್ತಿಯಾದ್ರೆ ಬೆನ್ಗೆ ಬಾ" ಅಂತು. ಹೋಯ್ತು. ಆ ಮನಸತಿ ಅವ್ವ ಮನ್ಗೆ ಕರ್ಕಂಡ್

ಹೋಯ್ತು. ಅವಗೆ ಜೋಕಾಲಿ ಕಟ್ ಮನಿಸ್ತು. ಮೆತ್ ಹತ್ತತ್ತು. “ಅವ್ವಾ ಹುಡಗನ ಸಾಕಿ ಸಲ್ಗಿ ಸಂರಕ್ಸಣೆ ಮಾಡು. ಹೂಗ ಕೊವ್ಕೆ ಹೋಬೇಡ” ಹೊನ್ ಸರ ತೆಗ್ದಿ ಕೊಟ್ತು. ಅದ್ ಉಳಿತು. ಸರ ತಕಂಡ್ತು. “ದೊಡ್ ಸಾವಕಾರ ತನ್ ಊರಲ್ ಅವ್ನೆ” ಅಂದಿ ಹೋಯ್ತು.

“ನನಗೊಂದ್ ಯಮ್ಮಿ ತೆಗಿಸ್ ಕೊಡು” ಅಂತು ಸಲ್ಲುಹಣ ಸಲ್ಸತ್ತು. ಯಮ್ಮಿ ಹೊಡ್ಕ ಕಟ್ಕ ಬಂತು. ಯಲ್ಲಾ ಸಾಮಾನ್ ಸರಂಜಾಮಾಯ್ತು. ಮೇಲುಪ್ಪರಿಗೆ ಮೇನೆ ಉಳಿತು ಅದು. ಅನ್ನ-ಹಾಲು ಕೊಟ್ತು. ಆರು ತಿಂಗಳ ಗಂಡು ಆರ್ ವರ್ಸನ ಗಂಡಾದ. ಹೀಗೆ ಬೆಳಿತ್ ಬಂದ. ಹನ್ನೆರ್ಡ್ ವರ್ಸನ ಹೆಣ್ಣಾಗಿ ಅದೆ. ಹನ್ನೆರ್ಡ್ ವರ್ಸನ ಗಂಡಾದ ಹೇಳ್ದ ಯೇನಂದಿ? “ತಾನು ಕೇರಿಮೇನ್ ಹೋಬೇಕು. ಆಡೂಕೆ ತನಗೊಂದ್ ಬೊಗ್ರಿಯಾಬೇಕು” ಅಂದ. “ಬೊಗ್ರಿಯಾಬೇಕು” ಅಂಬೂತನವ ಆಗ ಬೊಗ್ರಿ ಮಾಡ್ ಕೊಟ್ತು. ಆಡ್ಕಂತೆ ಆಡ್ಕಂತ್ ಆಡ್ಕಂತಿ ಇಲ್ ವಂದ್ ಮನಿಗ್ ಅಲ್ ಬಂದು ದೊಡ್ಡ ಗಂಡಸು ಆದ. ಅಲ್ಯೇನಾಗದೆ? ಮಾದೊಡ್ ಸಾವ್ಕಾರ. ಅಲ್ಯೇನಾಗದೆ ಕೇಳ್ದ್ರೆ ನಾಯ್ಕಿಣಿ ಮನಿಯದೆ. ನಾಯ್ಕಿಣ್ಯ ಮಾದೊಡ್ ಸಾವ್ಕಾರ ಇಟ್ಕಂಡಿದ್ದ. ದಿನಾಗೂ ಇವ ಅದೇ ನಾಯ್ಕಿಣಿ ಅಂಗಳದಲ್ ಆಡತಿದ್ದ. ಆಡೂಕ್ ಹೋದ ಹುಡುಗನ ಕಂಡ್ಕಂಡಿ ನಾಯ್ಕಣಿಗೆ ಇವನ ಮೇನ್ ಮನಸಾಗಿ ಸಾವಕಾರ್ನೇ ದೂರ ಮಾಡೂಕ್ ಹಣ್ಕತು. ಸಾವಕಾರ್ನೇ ದೂರ್ ಮಾಡಿ ಅವಗೆ ತನ್ನ ಮನಿಗ್ ಬಂದ ಕೂಡ್ಲೆ ಕಿಸಗೆಡವದು ಕಳಸ್ಬಿಡೂದು. ಹುಡಗನ ಕರಕಂಡ್ ಪಗಡಿ ಆಡೂದು.

“ಹೊತ್ತಿಂದ ಹೊತ್ಗೆ ಊಟ್ಕೆ ಬರೂದಿಲ್ಲ” ಹೇಳಿ, ಮೊಮ್ಮಗಳ ಕೂಡೆ ಹೋಗಿ, “ನಾಯ್ಕಿಣಿ ಹತ್ರ ಪಗಡೆ ಆಡೂಕ್ ಕೂತನೆ ಅವ.” ಅದು, “ಹನ್ನೆರ್ಡ್ ದಿವಸನ ಗಂಡ, ಹನ್ನೆರ್ಡ್ ವರ್ಷನ ಹೆಣ್ಗೇ ಲಗ್ನ ಮಾಡದ್ರು. ತಾನು ಸಾಕ್ ಸಂರಕ್ಷಣೆ ಮಾಡ್ಕಂಡು ದೇಸಾಂತರ ಬಂದು ದೊಡ್ಡ ಮಾಡ್ಕಂಡನೆ. ನಿನ್ನ ಕಾಲ್ ಮಡನಲ್ಲಿ ಹಗ್ಗ ಹಾಕಂಡ್ ಜೀವ ಕೊಡ್ತೆ” ಅಂದಿ, ಚೀಟಿ ಬರ್ದಿ ಅಜ್ಜಿಕಲ್ ಕೊಟ್ತು. ಕೊಡವರಿಗೆ ಅದ್ ತಕಂಡ್ ಹೋಯ್ತು. ನಾಯ್ಕಿಣಿ ಕಲಿ ಚೀಟಿ ಕೊಟ್ತು. ಪಗಡಿ ಮುಗ್ಸಿ ಚೀಟಿವೋತ್ತು. ಆವಾಗ ಇವನ ಕಲ್ ಹೇಳ್ತು. “ಮತ್ತೆ ನಿಮ್ಗೆ ಹನ್ನೆರ್ಡ್ ದಿವಸನ ಶಿಸುಗೆ ಹನ್ನೆರ್ಡ್ ವರ್ಸನ ಹುಡ್ಗಿ ಲಗ್ನ ಮಾಡರೆ. ನಿನ್ ಬೆನ್ನು ಕಟ್ಕಬಂದ್ ಹಿಂಡ್ತಿ ಅದೆ, ಅಜ್ಜಿಮಲ್ಲಿ ಹನ್ನೆರ್ಡ್ ವರ್ಸನ ಲಗ್ನ ಮಾಡ್ದ ಹೆಂಡತಿ ಅದೆ.”

“ಇಂದ್ ಹೋದ್ದೋರ್ ನೀವು, 'ಯೇ ವಂದ್ ಚಂಬ್ ನೀರ್ ತಕಂಬಾ' ಹೇಳಬೇಕು. ನೀರ್ ಕೊಡ್ತದ್ಯೋ ನೋಡಿ, 'ನೀರ್ ಬೆರ್ಸಿ ಕೊಡು' ಅಂಬೇಕು. ತಂದ್ ಕೊಡ್ತದ್ಯೋ ನೋಡಬೇಕು. ನೀರ್ ಕಾಲ್ ತೊಳುಕ್ ಕೊಡ್ತದ್ಯೊ ನೋಡಬೇಕು. ನೀರ್ ಮಿಂದ್ಕ ಬಂದೋರು 'ಊಟಕ್ ಬಡ್ಸೆ' ಅಂಬೇಕು. ಅದು ಊಟಕ್ ಬಡ್ಸದ್ಯೋ ನೋಡಬೇಕು. ನೀವು ಈಗ ಮನಿಗ್ಹೋಗಿ” ಹೇಳ ಕಳಗಸತು. ಬಾಗ್ಲ ಹತ್ತೂವರಿಗೆ “ನೀರ್ ತಕಂಬಾರೆ” ಅಂದ, ದಡಗುಟ್ನ ಮೆತ್ ಇಳ್ದಿ ತಂದ್ಕೊಟ್ತು. ಹರವಿತೆಗ್ದಿ ನೀರ್ ಬೆರ್ಸ್ಕೊಟ್ತು ನೀರ್ ಮಿಂದ್ಕಬಂದ. ಬಂದವ, “ಯೇಗ್ ಊಟ್ಕೆ ಬಡ್ಸು” ಅಂದ. ಬಡಸ್ತು. “ಮಜ್ಗಿ ಹಾಲು ಯೆಲ್ಲ ತಯಾರ್ ಮಾಡಿಟ್ ಮೆತ್ ಹತ್ತು” ಅಂದ. ಸುಖ-ಸಂತೋಸದಲ್ ವಳದ್ರು.

● **ಕೆಲವು ಪದಗಳ ವಿವರಣೆ**

ತೆಕ್ಕ ಬಿಡವದು = ತೆಗೆದು ಆತ್ಮಹತ್ಯೆ ಮಾಡಿಕೊಂಡು ಜೀವ ಹಾನಿ ಮಾಡಿಕೊಳ್ಳುವುದು

ಮೆರಬಾನ್ = ಮೆಹರಬಾನ್, ಬಹಳ ಆದರೋಪಚಾರ

ಪೋಟು = ಫೋಟೊ

ಯೇಗ = ಈಗ

ಮಾಡ್ರೂ = ಮಾಡಿದರು

ನಿಂಗ = ಲಿಂಗ

ಮನಸತಿ = ಮನುಷ್ಯಳು

ನಾಯ್ಕಿಣಿ = ನಾಯಕಸಾನಿ, ಸೂಳೆ

ಬಳಚು = ಕೈಯಿಂದ ಬಳಸುವದು, ಸ್ಪರ್ಶಿಸುವುದು.

ತೊಪ್ಪ = ತುಪ್ಪ, ಇಲ್ಲಿ ಜೇನುತುಪ್ಪ.

■ ಹೇಳಿದವರು : **ದಿ. ಪರಮೇಶ್ವರಿ ಗಣಪಯ್ಯ ನಾಯ್ಕ,** ಸದ್ದನಮನೆ, ಹೆಗಡೆ ಊರು.
ದಿನಾಂಕ:- ೧೧-೪-೬೯

◆

# ನಿಧಿ ಲಕ್ಷ್ಮೀ ಭಾಗ್ಯಲಕ್ಷ್ಮಿ

ಅಕ್ಕ-ತಂಗಿ ವಂದಿವ್ಸೆ ಯೆಯ್ಡು ಜನ ಮಕ್ಳು ಸಾಲಿಗ್ ಹೋಗೀರಂತೆ. ಮಾಸ್ತರು, "ಭಾಗಿಲಕ್ಷ್ಮಿ ಬಲಕನ ತೊಡಿ ಮೇನ ಕುಳ್ಳು, ನಿಧಿಲಕ್ಷ್ಮಿ ಸತ್ತ ಗಂಡ್ನ ಮದಿಯಾಗ್ವೋಳು. ಯಡಕನ ತೊಡಿ ಮೇನ್ ಕುಳ್ಳು" ಅಂದ್ರು ಮಾಸ್ತರು. ಇದು ಹಂಬ್ಲು ಇಟ್ಕಂಡಿ ದಿನಾಕೂ ಹಾಗೇ ಹೇಳತ್ರು. ಹಂಬ್ಲನೇ ಆಗೂದೆಲ್ಲ ಅದ್ಕೆ ಮಾರದಿವ್ಸೆ ಮತ್ ಹೊದಾಗೂ ಹಾಂಗೇ ಹೇಳ್ ದ್ರು. ಆಗೂ ಹಂಬ್ಲನೇ ಇಲ್ಲ. ಮತ್ತೊಂದ್ ದಿವ್ಸೆ ಶೇರೀ ಉಟ್ಕಂಡ್ ಹೋಯ್ತು ಅದು. ಹಾಂಗೇ ಹೇಳೂರೊಳಗೂವ, "ಭಾಗ್ಯಲಕ್ಷ್ಮಿ ಬಲಕನ ತೊಡಿ ಮೇಲ್ ಕುಳ್ಳು, ನಿಧಿಲಕ್ಷ್ಮಿ ಸತ್ತ ಗಂಡ್ನ ಮದಿಯಾಗ್ವೊಳು ಯಡಕನ ತೊಡಿ ಮೇನ್ ಕುಳ್ಳು" ಅಂದ್ರು.

ಅದು ಶೇರಿ ಶರೀಗ್‌ಗೇಣ್ ಹಾಕತು ಹಂಬ್ಲಾನೇ ಇರೋದೆಲ್ಲ ಹೇಳಿ. ಬಂತು ಸಾಲಿಂದ ಮನಿಗೆ. ಬಂದಿ ಅದ್ಕೆ ಹಂಬಲೆಲ್ಲ. ಅವಿ ಅವ್ನ ತಂಗಿಗೆ ಅದಕೆ ನೀರ್ ಹೋಯ್ತು. ಹೊಯ್ಯು-ರೊಳಗುವ ಕಪಡ ಬಿಚ್ಚಿ ಶೇರಿ ಕಳ್ಚ್‌ತು. ಕಡಿಗೆ ತಂಗಿ, "ಇದೆಂತಾ ಗೆಣ್ಣೀ ಕೇಳ್ತು ಅವಿ." ಅದು, "ಅವ್ವಾ, ಆಗ್ ಮಾಸ್ತರ್ ದಿನಾಕೂವ ಭಾಗಿಲಕ್ಷ್ಮಿ ಬಲಕನ ತೊಡಿಮೇನ ಕುಳ್ಳು ನಿಧಿಲಕ್ಷ್ಮಿ ಸತ್ತ ಗಂಡ್ನ ಮದಿಯಾಗ್ವೋಳು ಯಡಕನ ತಡಿ ಮೇನೆ ಕುಳ್ಳು ಹೇಳತ್ರು" ಅಂತು ಅದು.

ಆಗೇ ಅದೇ ತಲಿ ತಕಂಡಿ ಉಳಿತು ಅವಿ ಗಂಡನ ಕಲ್ ಹೇಳ್ತು. ಗಂಡ್ನೂ ಅದೇ ತಲಿ ತಕಂಡ ತಕ್ಕಂಬೂರೊಳಗೂ ವಂದಿವ್ಸೆ ಯೇನ್ ಮಾಡ್ದ? ಕಡಿಗೆ ವಂದ ಬುತ್ತಿ ಕಟ್ಕಂಡಿ, ರೊಟ್ಟಿ ಸುಟ್ಕಂಡಿ, ಅದ್ರ ಕರುಕ ಹೋದ . "ಅಜ್ಜಿ ಮನಿಗ್ ಹೋಗ್ವನೆ" ಹೇಳಿ ಹೋಗ ಹೋಗ್ ಹೋಗ್ ಹೋಗಿ, "ಅಪ್ಪಾ ಇದು ಅಜ್ಜಿ ಮನಿಗ್ ಹೋಗೂ ದಾರ್ಯಲ್ಲ" ಅಂತು. ಅವ ಹೇಳ್ದ, "ನೀನು ಬರಲೆಲ್ಲ ರಾಶಿ ದಿವಸಾಯ್ತು ಬಂದೇಯ, ಇದೇ ದಾರ್ಯೇಯ" ಹೇಳಿ, ಅದೇ ದಾರೀಲಿ ಕರಕಹೋದ. ಅಡವೀಗ್ ಹೋದ ಅವ. ಕಡಿಗ್ ಹೋಗಿ ಹೋಗಿ ಕಟ್ಟೀಮೇನ್ ಹೋಗಿ ಕೂತ್ರು. ಅಪ್ಪ-ಮಗಳು ಆಗೆ ಬುತ್ತಿ ತಕಂಡ್ ಉಂಡ್ರೂ. ಮಗಳಿಟ್ಟು ಅಪ್ಪಿಟ್ಟು, ಅವ್ವನ ಬುತ್ತಿಯ ಹಾಗೇ ಇಟ್ಟ ಮಗಳಿಗೆ, ಅದು ಉಂಡ್ತು. ಕಡಿಗೆ ಉಂಡಕಂಡಿ ಮಗಳ ತಲಿಬಗೀತ್ ಕೂತ. ಕಾಲ ಮೇನ್ ಮನಿಸ್ಕಂಡಿ ಕಡಿಗ್ ಅಲ್ಲೇ ನೆದ್ರಿ ಬಂತು ಅದ್ಕೆ. ಆಗೆ ಅಲ್ಲೇ ಹಗೂರಕ್ ಕಾಲ್ ತಪ್ಸಕಂಡ. ಬುತ್ತಿ ತಲೆಬದಿಗಿಟ್ಟ, ಬಂದ್ ಬಿಟ್ಟ ಅವ. ಬರುರೊಳಗೂವ ಹಾಂಗೇ ಯಚರಾಯ್ತು ಆ ಮಗೂಗೆ. ಗೌಜಿ ಹೊಯ್ತದೆ ಅದು. "ನನ್ನಪ್ಪ ಯಾವ್ ಹೂಲಿ ಹಿಡ್ಕ ತಿಂತ?" ಹೇಳಿ, ಗೌಜಿ ಹೊಡಿತು ಅದು. ಆಗ್, "ಇನ್ನೇನ್ ಮಾಡ್ಬೇಕು?" ಅಂದ. ಹೇಳಿ ಅದು ಅಲ್ಲೇ ಕಟ್ಟಿಮೇನ್ ಉಳಿತು. ಹೋಬೇಕಾರೆ ಅವಿ ವಂದ್ಮಿದ್ದಕ್ಕಿ ಯಯ್ದು ಬಿಲ್ಲಿ ಕೊಟ್ಟಿತ್ತು. ಇದು ಅದ್ರ ಕಲೇ ಉಳಿದಿತ್ತು.

ವಂದ್ ಹೊಲಿರವ ವಂದ್ ಮಗಳ ಹೊಡ್ಕಂತ ಬಂದಿದ್ದ. ಅದು ತೀಡ್ಕಂತ ಬತ್ತದೆ. ಅವ ಜಪ್ತ ಬತ್ತ ಇದ್ಯೇನಂತು, "ನೀ ಅದ್ಕೆ ಯಂತಕ್ ಹೊಡಿತ್ಯೋ? ನಂಗಾರೂ ಕೊಡೂ ಮಗುನ ನಾ ಇಟ್ಕಂತೆ" ಅಂತು. "ನನ್ ಅವಿ ವಂದ್ ಶಿದ್ದಕ್ಕಿ ಯೆಯ್ದು ಬಿಲ್ಲಿ ಕೊಟ್ಟಿತ್ತು ಅದ್ನೇ ಕೊಡ್ತೆ" ಅಂತು. ಕೊಡ್ತು ಅದ್ಕೆ ಮಗು ಅದು ಉಳ್ಕಂಡ್ರು. ಇನ್ನೇನ್ ಮಾಡಬೇಕಾಯ್ತು? ಯೆಯ್ದೂ ಜನ ಉಳದ್ರು, "ನಾವು ಜೀವ ಸಂಸಾರ ಬಗ್ಗೆ ಬೇಡೂಕ್ ಹೋಗಬೇಕು" ಅಂದಿ ಬೇಡೋಕ್ ಹೋತು. ಆಗ್ ಬಂದ್ರು ಬರೂರೊಳಗೂವ ವಂದ್ ಗೊಟ್ಟಿಲ್ ಬಿಳಕ್ ಕಂಡ್ತು. ಇದೇನಂತು, "ನಿಧಿಲಕ್ಷ್ಮಿ, ಊರಬಂತು ಬೆಳಕ್ ಕಾಣ್ತದೆ" ಅಂತು. ಹಾಂಗೆ ಬಂದ್ರು ಬೆಳಕ್ ನೋಡಕಂಡು.

ಅದೇ ಕಟ್ಟೆ ಮೇಲಿದ್ದಲ್ಲೆ ಹೆಣ್ ಗಿಳಿ, ಗಂಡ್ ಗಿಳಿ ಇತ್ತು. ಹೆಣ್ ಗಿಳಿ ಶತ್ ಹೋಯ್ತು. ಅದ್ಯೇನ್ ಮಾಡ್ತು? ಹಿಂಡ್‌ದನ್ನ್‌ದ ಸೊಪ್ ಮುರೀತು. ಮೂಗ್ಗೆ ಬಾಯ್ಲ ಯೆಲ್ಲ ರಸ ಹಿಂಡತು. ಅದ್ಕೆ ಜೀಮ ಬಂತು. ರಸ ಹಿಂಡಿ ಜಡಕ ಮಗುನ್‌ದಲ್ಲೆ ಹೊತಾಕ್ತು. ಅದ್ರ ಮಗು ಹೆಕ್ಕಂತು ಇದು ಯೇನ್ ಮಾಡ್ತು? ಹಿಂಡನದ ನಾಕೆಯಲಿ ಕೊಯತು. ಹೆಗ್ಗಿನೂ ತುಮಕಿ ಯೇಯ್ದು ಕೊಯಕಂಡತು ಕಡಿಗ್ ಬಂದ್ರು.

ದೇವಸ್ತಾನಕ್ ಬಂದ್ರು ವಂದ್ ದೇಪ ಕಚ್ಸಿ ಇಟ್ಟರೆ. ಬೆಳಕ ನೋಡ್ಕಂತ್ ಬರುರೊಳಗೆ ಅಲ್ಲಿ ವಂದ್ ಹೆಣ ಮುಚ್ ಹಾಕಿಟ್ಟರೆ, ದೇಪ ಕಚ್ಸಿಟ್ಟರೆ. ಆ ಹೆಣ ಹೀಂಗ್ ಮುಚ್ಚತೆಗ್ದಿ ನೋಡ್ತು ನಿಧಿಲಕ್ಷ್ಮಿ. ಅದು ಕಾಲ್ಗೆ ಸೊಪ್ಪರಸಯೆಲ್ಲ ಹಿಂಡಿ ಅವ್ಗ್ ತಿಕ್ತು. ಬಾಯ್ಗೆಯಲ್ಲ ತಿಕ್ತು, ಅವಗೆ ಜೀವ ಬಂತು ಹೊಲಿರವ್ನ ಮಗು ತಲಿಬುಡ್ಕೀದು, ಇದು ಕಾಲ್ ಬುಡ್ಕ್ ಈದು, ಮೂಗ್ಗೆ ಸೊಪ್ಪ ವಾಸ್ನಿ ಕೊಟ್ಟು, ಜೀವ ಬಂತು. ಅವೇನಂದ? "ಯಾವ ತಾಯಿ ಹೊಟ್ಟಿಲ್ ಹುಟ್ದ ಮಗಳವ್ರ? ಜೀವ ತಕ್ಸದ್ದು? ತಲಿ ಬದಿ ಕೂತದ್ದೋ? ಕಾಲ ಬದಿ ಕೂತದೊ ಹೆಂಡ್ತಿ?" ಕೇಳ್ದ.

ಹೊಲೀರ್ ಮಗು, "ಕಾಲ ಬದಿ ಕೂತದ್ ಯಾಕ್ ಆಗೂದು? ತಲಿ ಬದಿ ಕೂತದ್ದೇ ಹಿಂಡ್ತಿ" ಹೇಳ್ತು. ನಿಧಿಲಕ್ಷ್ಮಿ, "ಆಯ್ತುಪ್ಪಾ. ನೀವಾರೂ ಗಂಡ ಹಿಂಡ್ತಿ ಆಕಂಡ್ ಉಳೀರಿ. ನಿಮ್ಮನಿ ಶಗಣಿ ತಗೂಕ್ ನಾ ಬಂದ್ರೆ ನಂಗ್ ಹೊಟ್ಟಿಗ್ ಹಾಕಿ; ನಂಗೊಂದ್ ಬಿಡಾರ ಕಟ್ ಕೊಡಬೇಕು. ಯೆಯ್ದ ಬೊಂಬಿ ಮಾಡ ಕೊಡಬೇಕು" ಅಂತು. ಕಡಿಗ್ ಅದ್ಕೆ ವಂದೆ ಹಳ್ಳದಾಚೆ ಬಿಡಾರ ಕಟ್ಕೊಟ್ರು. "ಆಗೂದು" ಹೇಳಿ ಯೆಯ್ದ ಗೊಂಬೀನೂ ಮಾಡ್ ಕೊಟ್ರು. ಇದು ಉಳ್ಕಂತು.

ದಿವಸಾಕೂ ಅವರ ಮನೆಗೆ ವಸ್ತ್ರ ಶಳೂಕೆ, ಸಗಣಿ ತಗೂಕೆ ಹೋತದೆ ಅದು. ಅವ್ರು ಇಟ್ ಅನ್ನ ಕೊಡತ್ರು. ಅನ್ನ ತಂದಿ ಹಳ್ಳದಾಗೆ ಬಿಡತದೆ, ಯೇನಂದ್ ಬಿಡ್ತದೆ? "ಸಾಕಸಲ್ಗೂ ಸಂಕ್ರ ತಂದೆ ನಿನ್ ಮೇನ್ ಬೇಜಾರಿಲ್ಲ ಅರಸೂ ಮಗ ಅರಿದೇ ಉಣ್ತ. ನಾನು ಅರತ್‌ಕಂಡಿ ಉಣನಾರೆ" ಹೇಳಿ, ಅದು ಹಳ್ಳದಾಗೆ ಬಿಡೂದು. ಕಡಿಗ್ ನಿಧಿಲಕ್ಷ್ಮಿ ಆ ಸೊಪ್ಪು ಹಿಂಡಿ ಯೆಯ್ದ ಬೊಂಬಿಗೆ ಯೆಯ್ದ ಜನ ಹುಡಗೀರ್ನ ಮಾಡ್ತು. ನಿಧಿಲಕ್ಷ್ಮಿ ಹನ್ನೈಯ್ದ ವರ್ಸನ ಹೆಣ್ಮಕಳ್ಳ ಮಾಡ್ತು ದಿವಸಾಕೂವ ಅದು ಕದ ಹಾಕಿ ಹೋದ್ರೆ ಕದ ತೆಗೂದೆಲ್ಲಾಗಿತ್ತು. ಅದು ಬಂದೇ ಕದ ತಗಿಬೇಕು.

"ಚಂದೂ ಚಂದಾಣದ ಗೊಂಬೆ ಬಾಗ್ಲ ತೆಗೀರಿ" ಅಂತು, "ಚಂದೂ ಚಂದಾಣದ ಗೊಂಬೆ ಕದ ತೆಗೀರಿ" ಅಂತು, ಕದ ತೆಗೀತು.

"ಕತಿ ಹೇಳು" ಅಂತದು ಅವ್ವಕಲ್ ಹೇಳ್‌ತ್ರು. ಅದು ಹೇಳ್ತದೆ. "ಹಿಂದಾದ ಸುದ್ದಿ ಹೇಳಬೇಕೋ? ಬರೂ ಸುದ್ದಿ ಹೇಳಬೇಕೋ?" ಕೇಳ್ತದೆ. "ನಾವು ನೀವು ಮುಂದಾಗೂ ಸುದ್ದಿ ನೋಡ್ತ್‌ರು ಹೋರ್ತು. ಹಿಂದ್ನ ಸುದ್ದಿ ಹೇಳು" ಅಂತ್ರು. ಆಗೆ ಇಲ್ ಆದ ಸುದ್ಯ ಅಟ್ಟೂ ಹೇಳ್ತು. ನಾಲಿಗೋದ್ದು ವಟ್ಟೂ ಹೇಳ್ತು; ಮುಗಿಸ್ತ್ಯು ಕತ್ಯ. ಅರಸೂಮಗ ಆಲಿಸ್ತೇ ವಳದ. ಕಡಿಗೆ ಯೇನ್ ಮಾಡ್ತ? ಹೋಲೀರ್ ಹುಡ್ಗಿ ಶಿಗದಿ ತೋಯ್ಣ ಹಾಕಿ ಮುಗ್ಸಿ ಬಂದ. ಇದೇ ಮದಿಯಾಕಂಡ್ ಉಳೀತ ಅವ.

- **ಕೆಲವು ಪದಗಳ ವಿವರಣೆ**

| | |
|---|---|
| ಶರಿ ಗೆಣ್ = ಸರಿಯಾಗಿ ಗಂಟು (ಹಾಕಿದಳು) | ಇಟ್ಟು = ಇಷ್ಟು |
| ಜೇವ = ಜೀವ | ಗೊಟ್ಟೆ = ಜಾಗ |
| ಕರಕ ಹೋದ = ಕರೆದುಕೊಂಡು ಹೋದನು | ಜಪ್ತ = ಹೊಡೆಯುತ್ತ ಬಡಿಯುತ್ತ |
| ಜರಕ = ಚರಟ | ಹೆಗ್ಲಿ = ಟೊಂಗೆ |
| ತುಮ್ಕೆ = ಎಲೆ ಗುಚ್ಛ | ಸಂಕ್ರತಂದೆ = ಧಾನ್ಯದೇವತೆ |

■ ಹೇಳಿದವರು: **ದಿ. ರಾಮಕೃಷ್ಣ ಬೆಳ್ಳಿ ನಾಯ್ಕ,** ಹೆಗಡೆ ಊರು.

# ಪುಣ್ಯದ ಫಲ, ಪಾಪದ ಫಲ

ರಾಜ-ಮಂತ್ರಿ ಇದ್ರು. ರಾಜನಿಗೆ ಒಂದ್ ಹುಡ್ಗ. ಮಂತ್ರಿಗೊಂದ್ ಹುಡ್ಗ. ರಾಜನ ಹುಡ್ಗ-ಮಂತ್ರಿ ಹುಡ್ಗಗೆ ಶಾಲೆಗೆ ಹಾಕಿದ್ರು. ಕೆರೆ ಬುಡ್ದಲ್ ದೊಡ್ ಕಟ್ಟೆಕಟ್ಟಿದ್ರು. ಊರಿನವರೆಲ್ಲ ಕೆರೆಗೆ ಬತ್ತಿದ್ರು, ನೀರ್ ತಕಹೋಗೂಕೆ ಮಣ್ ಪಾತ್ರ ತಕಂಡಿ. ರಾಜನ ಹುಡ್ಗ ಕಲ್ಗುಂಡ್ ತಕಂಡಿ ಮಣ್ ಪಾತ್ರಕ್ಕೆ ಹೊಡೂದು - ಕಣ್ಣಾಗೊತದೆ. ಮಂತ್ರಿ ಹುಡ್ಗ ವಂದ್ ಅಂಟಿನ ಮುದ್ದೆತಕಂಡ್ ಹೋಗೆಕೊಡತಿದ್ದ. ಅವ ಕಲ್ ಹೊಡ್ದ್ ಕನ್ನಾದಲ್ ಅಂಟಿನ ಮುದ್ದೆ ಕೂರ್ಸತಿದ್ದ.

ಹಾಗೆಯೇ ಅಪ್ಪ-ಅವಿ ಮದ್ವೆ ಮಾಡೂಕ್ ತಯಾರ್ ಮಾಡದ್ರು. ರಾಜನ ಹುಡ್ಗನಿಗೆ ಮಂತ್ರಿ ಹುಡ್ಗನಿಗೆ ಮದಿ ಮಾಡದ್ರು.

ಆ ಊರಲ್ಲೊಂದು ಪುರೋಹಿತ ಭಟ್ಟರ ಹುಡ್ಗಿ ಇತ್ತು. ಪುರೋಹಿತ ಭಟ್ಟರ ಹುಡ್ಗಿ ಶಾಲೆಗೆ ಹೋಗುತೊಟ್ಟು; ರಾಜನ ಹುಡ್ಗನಿಗೆ ಮದವ್ಯಾಬೇಕು ಹೇಳ್ತೇ ಇತ್ತು. ಅವಳಿಗೆ ಸುದ್ದಿಲ್ದೆ ರಾಜನ ಹುಡ್ಗನ ಮದುವೆಯಾಗಿ ಹೋಯ್ತು. ದಿನಾಲು ಕಟ್ಟೆಮೇನ್ ಹವಾ ತಕ್ಕಳ್ಳೂಕ್ ಹೋಗ್ತಿದ್ರು.

೧೨ ಗಂಟೆಗೆ ಊಟ ಮಾಡ್ಕಂಡಿ ಹೋಗ್ತಿದ್ರು. ಒಂದಿವ್ಸ ರಾಜನ ಹುಡ್ಗ ಹತ್ ಗಂಟೆಗೆಲ್ಲ ಊಟ ಮಾಡ್ಕಂಡ್ ನೆಡ್ದ. ಮಂತ್ರಿ ಹುಡಗನಿಗೆ ಊಟಾಗಿರಲಿಲ್ಲಾಗಿತ್ತು. ರಾಜನ ಹುಡ್ಗ "ಹೋಗ್ತೆ" ಹೇಳ್ ನೆಡ್ದ. ಮಂತ್ರಿ ಹುಡ್ಗ ಊಟ ಮಾಡ್ದ, ನಡ್ದ, ಅಣ್ಣನ ಬೆನ್ನಿಗೇಯ. ಕಟ್ಟೆಮೇನ್ ಕೂತ್ರು. ಹೊಟ್ಟೆಗ್ ಹಶ್ವಾಗೂಕ್ ಹಣ್ಕತು ಮಂತ್ರಿ ಹುಡಗನಿಗೆ. ತಮ್ಮ, "ತಾ ಊಟ ಮಾಡ್ಕಂಬತ್ತೆ, ಅಣ್ಣ ಏಳು" ಅಂದ. "ಇಲ್ಲ, ನೀ ಹೋಗಿ ಊಟ ಮಾಡ್ಕಂಬಾ" ಹೇಳ್ದ. "ತಾ ಇಲ್ಲೇ ಇರ್ತೆ" ಹೇಳ್ದ. "ತಾನು ಬರುವಲ್ಲೀವರೆಗೂ ಹಣಕಂಡ್ ಕುತ್ಗಿ ನೆಟ್ಟಗ್ ಮಾಡೂಕಿಲ್ಲ. ಬಾಶೆಕೊಟ್ ಹಾಕು" ಅಂದ. ಬಾಷೆ ತಕಂಡ್ ಊಟಕ್ ಹೋದ. ಊಟ ಮಾಡ್ಕಂಬರುವರ್ಗೆ ಪುರೋಹಿತ ಭಟ್ಟನ ಹುಡ್ಗಿ ನೀರ್ ತಕಂಡ್ ಹೋಗೂಕ್ ಬಂತು. ಆಚೀಚೆಯೆಲ್ಲ ನೋಡ್ತು. ಮಂತ್ರಿ ಹುಡ್ಗ ಇಲ್ಲ ಹೇಳ್ಕಂಡ್ ಹೇಳಿ ಕಟ್ಟೆಗ್ ಬಂತು. ರಾಜನ ಹುಡ್ಗನ್ನ ಕರೀತು. ಕರೆದರೂ ಮಾತಾಡ್ಲಿಲ್ಲ ರಾಜನ ಹುಡ್ಗ. "ನನ್ಗೆ ಸುದ್ದಿಲ್ದೆ ಮದುವೆಯಾದ ನಿನ್ನ ಕೈಲಿ ಮೂರ್ ಮಾತಾಡಿ ಹೋಬೇಕು ಹೇಳ್ ಬಂದಿದ್ದೆ" ಅಂತು.

ಇವ ಯೇನ್ ಮಾಡದ್ರೂ ಮಾತೇ ಆಡ್ಲಿಲ್ಲ. ಇಳಿದು ಕೆಳಗೆ ಹೋಯ್ತು. ಕೆರೆ ಹೊಕ್ಕಂಡಿ ಪಾತ್ರೆಲ್ಲಾ ಜರ್ಕಂಡು, ಬಳೆಗಿಳೆ ವಡ್ಕಂಡು, ಮೈಗೆ ಗಾಯ್ ಮಾಡ್ಕಂಡು, ಕೂದ್ಲ ಹರಡಿಕೊಂಡು ಮನೆಗ್ ಹೋಯ್ತು. ಅಡ್ಗಿ ಬಿಡ್ಗಿ ಯೇನೂ ಮಾಡ್ಲಿಲ್ಲ. ಅಪ್ಪ ಬಂದ. ಮನಿಕಂಬಿಟ್ಟದೆ. ಮಾತೂ ಆಡೂದಿಲ್ಲ. ಒಳಗೆ ಹೋಗಿ ಯಲ್ಲ ನೋಡ್ದ. ಯೆಲ್ಲೂ ಇಲ್ಲ.

ಕಡಿಗೆ ನಡುಮನೆಯೊಳಗೆ ಹೋಗಿ ನೋಡಿದ ಕೂಡ್ಲೆ ಮನಿಕಂಡದೆ. "ಇವತ್ ಯಂತ ಮನಿಕಂಡಿದ್ದೆ?" ಕೇಳ್ದ. ಅಪ್ಪನ ಕೈಲಿ ಹೇಳ್ತು ಹುಡಗಿ, "ನಾ ನೀರಿಗೆ ಹೋಗಿದ್ದೆ. ರಾಜನ ಹುಡ್ಗ ನನಗೆ ಹೀಗೆ ಮಾಡ್ದ. ನಾ ಅದ್ಕೆ ಬೇಜಾರಾಗಿ ಮನಿಕಂಡಿದ್ದೆ" ಅಂತು.

ಅಪ್ಪ ಹೇಳ್ದ, "ರಾಜನ ಹುಡ್ಗ ಹಾಗೆ ಮಾಡಲಿಕ್ಕಿಲ್ಲ. ಬಾ ಸುಳ್ಳೇ ಹೇಳ್ದೆ" ಅಂದ. "ಇಲ್ಲ, ನನಗೆ ದುರ್ದೆಶೆ ಮಾಡ್ದಂವ ರಾಜನ ಹುಡ್ಗನೆಯ" ಅಂತು. ಅಪ್ಪ ಯಂತ ಹೇಳ್ದ. ಹೇಳದರೆ, "ಅಡ್ಗೆ ಮಾಡು. ರಾಜನ ಮನೆಗೆ ಹೋಗ್ತೆ" ಹೇಳ್ದ. "ಇಲ್ಲ ತಾನೂ ಬತ್ತೆ" ಹೇಳ್ತು. ಹುಡ್ಗಿ ಅಪ್ಪ, "ನೀ ಬಂದ್ರೆ ತಾ ಹೋಗೂದಿಲ್ಲ. ನೀ ಇಲ್ಲೇ ಉಳಿದ್ರೆ ತಾ ಹೋಗಿ ಬತ್ತೆ" ಹೇಳ್ದ. "ಹೂ" ಅಂತು.

ಅಪ್ಪ ರಾಜನ್ ಮನೆಗ್ ಹೋದ. ರಾಜರು ಕೇಳಿದರು, "ಪುರೋಹಿತರೆ ಇಷ್ಟ್ ಬಿಸ್ಲಲ್ಲಿ ಏನ್ ಬಂದ್ರಿ?" ಕೇಳ್ದ ರಾಜ. "ಖಾಲಿ ಬಂದಿದ್ದೆ" ಹೇಳ್ದ. ರಾಜ ಹೇಳ್ದ, "ನೀವ್ ಖಾಲಿ ಬಂದೋರಲ್ಲ. ಏನೋ ಇರಬೇಕಾದ್ರೆ ಬಂದೀರಿ ನೀವು." ಹುಡ್ಗಿ ಆಗ ಹೋಗ್ ಬಿಟ್ತು, ರಾಜನ ಮನಿಕೂಡೆ. ಅಪ್ಪ ಹೇಳ್ದ. "ನಿಮ್ಮ ಮಗ ಈ ನಮ್ನಿ ಮಾಡ್ದ ನನ್ ಹುಡಗೀಗೆ." ರಾಜ ಹೇಳಿದನಂತೆ, "ಇಂತ ಹುಡ್ಗ ಇದ್ ಏನು? ಹೋದ್ರ ಏನು?" ಹೇಳಿ ಹುಡ್ಗನಿಗೆ ಬಯ್ದನಂತೆ.

ಪಾಶಿ ಕೊಡೂಕೆ ಆರ್ಡರ್ ಕೊಟ್ ಬಿಟ್ಟನಂತೆ. ಪೋಲೀಸರು ಬಂದರು. ಕಟ್ಟೆ ಬುಡ್ದಲ್ಲಿ ಆರ್ಡರ್ ತೋರಿಸಿದರು. ಕೂಡಲೆಯ ಮಂತ್ರಿ ಹುಡ್ಗ ಹೇಳ್ದ, "ಪಾಶಿ ಕೊಡೂಕ್ ಹುಕುಂ ಕೊಟ್‌ವ್ರ್ಯ? ಮನೆಗ್ ಹೋಗ್ ಬತ್ತೆ. ಮನೆಗೆ ಹೋಗ್ ಬರೂವರೆಗೂ ಪಾಶಿ ಕೊಟ್ರೆ ನಿಮಗೇ ಪಾಶಿ ಹುಕುಂ ಬರೂದು" ಅಂದ. ಮನೆಗೆ ಬಂದವ ಊಟ ಮಾಡಿ, ಬೇಕಾದಷ್ಟು ದುಡ್ ತಕ್ಕಂಡ ಕುದ್ರೆ ಸಾಲಿಗೆ ಹೋಗಿ ಗನಾ ಒಂದ್ ಕುದ್ರೆ ತಕ್ಕಂಡ.

ಹಾಗೇ, "ಅಣ್ಣನಿಗೆ ಪಾಶಿ ಹುಕುಂ ಕೊಟ್ಟನೆ ರಾಜ. ತಾನು ಇದ್ದರೇನು? ಇಲ್ದೇ ಇದ್ರೇನು? ಅವನ ಬೆನ್ನಿಗೆ ತಾನೂ ಹೋಗ್ತೆ" ಅಂದ. ಇಲ್ಲಿ ಅಣ್ಣನಿದ್ದಲ್ ಬಂದ. "ಪೋಲೀಸರ ಕೈಲಿ ಹೇಳು ಊರು ಬೇಡ ಏನೂ ಬೇಡ. ಬೆಟ್ಟ ಹೊನ್ನೆ ಮರ ಕಡಿದು, ಅದರ ರಕ್ತ ತಂದ್ ತೋರ್ಸಿ ಹೇಳ್ ಪೋಲೀಸರ ಹತ್ತರ ಹೇಳು" ಅಂದ. ಪೋಲೀಸರೂ ಬೆಟ್ಟ ಹೊನ್ನೆ ರಕ್ತ ತಂದ್ ರಾಜನಿಗೆ ತೋರಿಸಿದರು.

ಅಣ್ಣನ ಕುದ್ರೆ ಮೇನ್ ಕೂರಸಕಂಡ್ ನೆಡ್ದ. ಊರಬಿಟ್ಟ. ಒಂದು ರಾತ್ರೆ ಒಂದ್ ಹಗ್ಲು ಕುದ್ರೆ ಹಾರ್ಸಿಕಂಡ್ ಹೋದ. ಒಂದು ರಾಜಸ್ತನದಲ್ಲಿ ದೇವಸ್ಥಾನವಿತ್ತು. ಆ ದೇವಸ್ಥಾನದಲ್ಲಿ ಉಳಿದರಂತೆ. ಬೆಳಗಾದ ಕೂಡಲೇ ದೇವಸ್ಥಾನದ ಗೋಡೆ ಮೇನೆ ಆ ಊರ ರಾಜನ ಹುಡುಗಿ ಬರೆದಿಟ್ಟಿತ್ತಂತೆ.

ಹಾಗೇ ರಾಜನ ಹುಡಗ ತಮ್ಮನ ಕೈಲಿ ಹೇಳಿದ. "ಯಾರೋ ಈ ಗೋಡೆ ಮೇನೆ ಬರೆದಿಟ್ಟವರು?" ಕೇಳಿದ. "ಯಾರಾದರೇನು?" ಕೇಳಿದ. "ನಿನ್ನಷ್ಟೇ ನನಗ್ಗೊತ್ತು. ನನಗೆ

ಮತ್ತೇನು ಗೊತ್ತದೆ?" ಹೇಳ್ ಕೇಳ್ದ. ಹಾಗೇ ಬಂದ್ರು. ದೇವಸ್ಥಾನದ ಪೂಜಿಭಟ್ಟರು ಹಾದಿ ಮೇನ್ ಶಿಕ್ಕಿದ್ರು. ಅವರಿಗೇ ಕೇಲೂಕೆ ಹೊರಟರು. ಅವರಿಗೆ ಕಾಲಿಗೆ ಬಿದ್ರು. ಭಟ್ರು ದೇವಲೋಕದ ಜನರ ಹಾಗೆ ಕಂಡ್ರು ಹೇಳಿ, "ನಾವು ಈ ಲೋಕದವರೇ ದೇವಲೋಕದವರಲ್ಲ." "ವಳಿ" ಹೇಳಿ ಭಟ್ಟರು ವಳಿಸಿದರು. ಭಟ್ಟರು ಅವರ ಮನೆಗೆ ಕರಕಂಡ್ ಹೋದ್ರು. ಅಲ್ಲಿ ಮತ್ತೆ ಸುರುಮಾಡ್ದ ಭಟ್ರ ಕೈಲಿ ಕೇಳ್ತಾ ಮಂತ್ರಿ ಹುಡಗ, "ದೇವಸ್ಥಾನದಲ್ಲಿ ಬರೆದವರ್ಯಾರು" ಹೇಳಿ ಕೇಳ್ದ. ಭಟ್ಟರು, "ಈ ಊರಲ್ಲಿ ದೊಡ್ಡ ರಾಜರವರೆ. ಆ ರಾಜರ ಹುಡುಗಿ ಬರೆದಿಟ್ಟದ್ದು" ಹೇಳಿದ್ರು. ರಾಜನ ಹುಡಗ ಹೇಳೂಕ್ ಹಣಕದ. ಮಂತ್ರಿ ಹುಡಗನ ಕೈಲಿ, "ಮದಿ ಮಾಡಿಕೊಡಬೇಕು" ಮಂತ್ರಿ ಹುಡಗ.

"ನಮಗ್ಯೆಲ್ಲಿ ಕೊಡ್ತ್ರೋ? ಅವ್ರು ರಾಜನ ಹುಡುಗಿ" ಅಂದ. ಯಂತ ಮಾಡ್ತ್ರೋ ಕೇಳೂದಿಲ್ಲ ಇವ. ರಾಜನ ಹುಡಗನ ಕೈಲಿ ಹೇಳ್ದ, "ಮೂರ್ ಹಾದಿ ಕೂಡಿದಲ್ಲಿ ತಿರುಗಾಡತೇ ಉಳಿ" ಹೇಳಿ, ಮಂತ್ರಿ ಹುಡಗ ಋಷಿ ಆಕಾರವಾಗಿ ರಾಜನ ಹೂಗಿನ ತೋಟದಲ್ಲಿ ಕುಂತನಂತೆ. ದಾಸಿಗಳೆಲ್ಲ ಹೂಗ್ ಕೊಯ್ಯ್ಯಾಕ್ ಬಂದೋರು ಋಷಿ ನೋಡಿದ್ರು. ರಾಜಗ್ ಹೇಳಿದರು.

ರಾಜ ಹಾಲು, ಬಾಳೆಹಣ್ಣು ಎಲ್ಲಾ ತಕಂಡ್ ಬಂದು. ಋಷಿ ಬುಡಕ್ಕಿಟ್ಟ. ಬಾಳೆಹಣ್ಣು ಸಕ್ರೆಯೆಲ್ಲಿ, 'ತಾ ಮಾತಾಡುದಿಲ್ಲ' ಹೇಳ್ಕಂಡಿ ಬರೆದನಂತೆ. 'ಬಾಳೆಹಣ್ಣು ಯೇನೇನು ತಿನ್ನುದಿಲ್ಲ' ಹೇಳಿ ಬರೆದ. ರಾಜ ಹೇಳಿದ, "ನಮ್ಮನೆಗೆ ಬಂದಿ ಹಾಗೆ ಹೋಗಬೇಕು."

"ಬರುಕಡ್ಡಿಲ್ಲ. ಮುಟ್ಟಾಗೆ ಮೀವು ಹೆಂಗಸರು, ಬಳೆ ಶಬ್ದ ನನಗೆ ಕೇಳೂಕಾಗ. ಹೆಂಗಸರು ಕಣ್ಣೀಗ್ ಕಾಂಬೂಕಾಗ" ಹೇಳಿ, ಚೀಟಿ ಮೇನ್ ಬರೆದ ಇವ. "ಅದೆಲ್ಲಾ ತಾನ್ ವ್ಯವಸ್ಥೆ ಮಾಡ್ತೆ. ನೀವ್ ಬಂದ್ ನನ್ಮನೆಲ್ ಉಳ್ಕೊಬೇಕು" ಹೇಳ್ದ. ಋಷಿ ರಾಜನ ಮನೆಗೆ ಹೋದ.

ಮಂಚದ ಮೇಲೆ ಕುಳ್ಳಬೇಕು. ಮಾಡಿದ ಕೂಡ್ಲೇ, 'ಮದುವೆಯಾಗದ ಹುಡುಗಿಯವಳೆ. ಅದರಿಂದ ನಾನ್ ಕುಳ್ಳುದಿಲ್ಲ. ಹೋಗ್ತೆ' ಹೇಳಿ ಚೀಟಿ ಮೇನ್ ಬರೆದ. ರಾಜ, "ಯಂತಾ ಮಾಡ್ಬೇಕು" ಕೇಳ್ದ. 'ಯಾರು ಮೂರು ಹಾದಿ ಮೇನ್ ತಿರ್ಗತವರೆಯೋ ಅವರಿಗೆ ಈಗಿಂದೀಗ ದಾನ ಮಾಡಿ ಕೊಟ್ ಬಿಡಬೇಕು' ಹೇಳ್ ಬರ್ದ. ರಾಜ, "ಆಗೂದು" ಹೇಳ್ ಆಳೀಗೆ ಕಳಿಸದ. "ಯಾರ್ ಮೂರ್ ದಾರಿ ಕೂಡ್ದಲ್ಲಿ ತಿರ್ಗತವರೆಯೊ ಅವರಿಗೆ ಕರ್ಕಂಬಾ" ಹೇಳಿ ಕಳಿಸಿಕೊಟ್ಟ ರಾಜ ಆಳಿಗೆ. ರಾಜನ ಹುಡಗ ತಿರ್ಗಾಡ್ತೆ ಇದ್ದ. "ಈಗಿಂದೀಗ ನಿಮಗೆ ರಾಜರು ಬಂದೇ ಹೋಗು ಹೇಳಾರೆ" ಹೇಳ್ದ. ರಾಜನ ಹುಡ್ಗ ಕುದ್ರೆ ತಕಂಡೇ ಹೋದ. ರಾಜ ಕೇಳಿದ, "ನನ್ನ ಹುಡ್ಗಿ ನಿನಗೆ ಮದುವೆ ಮಾಡಿ ಕೊಡಬೇಕು. ಹೇಳ್ ಮಾಡಿದ್ದೆ. ಮದುವೆಯಾಗತೆಯೋ?" ಕೇಳಿದ. ಇವ, "ಆಗೂದು" ಹೇಳಿದ.

ಮರುದಿವಸ ಮದ್ವಿ ಮಾಡ್ ಕೊಟ್ಟ ಇವ್ನಿಗೆ. ಋಷಿ ದೇವಸ್ಥಾನದೊಳಗೆ ಹೋಗಿ ಕುಂತ. ರಾಜನ ಹುಡ್ಗ, "ಹೆಂಡ್ತಿ ಇಲ್ಲೇ ಇಟ್ ಹೋತೆ ನಾಕ್ ದಿನದ ಮೇನೆ ಕರ್ಕಂಡ್ ಹೋತೆ. ಇಲ್ಲೇ ಉಳೀಲಿ" ಅಂದ. ದೇವಸ್ಥಾನಕ್ ಹೋದ. ಮಂತ್ರಿ ಹುಡುಗ ಅವ ಬಿಟ್ಟಾಕಂಡಿ ಹೋದರು. ರಾಜನ ಹುಡುಗನ ಮೊದಲ ಮಾವನ ಮನೆಗೆ ಹೋದ್ರು.

ಅಲ್ಲಿ ರಾತ್ರಿ ಕಜ್ಜಾಯ ಯಲ್ಲಾ ಮಾಡಿದರು. ಊಟಾಯ್ತು. ಮನಿಕಂಡ್ರು. ರಾಜನ ಹುಡಗ ಒಳಗೆ ಮನಿಕಂಡ. ಮಂತ್ರಿ ಹುಡ್ಗ ಹೆರ್ಗೆ ಮನಿಕಂಡ. ರಾಜನ ಹುಡಗನ ಹೆಂಡ್ತಿ ರಾಜನ ಹುಡಗನಿಗೆ ನಿದ್ರೆ ಬಿದ್ದ ಕೂಡ್ಲೆ ಮಾಡಿದ ಕಜ್ಜಾಯ ತುಂಬಿಕೊಂಡ್ತು. ಒಂದ್ ಕೆಲಸಿ ಮನೆಗ್ ಹೋಯ್ತು. ಕೆಲಸಿ ಕೇಳಿದ, "ಇಷ್ಟ್ ರಾತ್ರೆ ಹ್ಯಾಗಾಯ್ತು" ಕೇಳಿದ. "ತನ್ನ ಗಂಡ ಯೆಲ್ಲ ಬಂದರು. ಹಾಗಾಗಿ ತಡವಾಯ್ತು" ಅಂದಳು. ಕೆಲಸಿ, "ತಾನು ಬೇಕೋ? ಗಂಡ ಬೇಕೋ?" ಕೇಳಿದನು. "ಈಗ ನಿನ್ನ ಕುತ್ಗಿ ಕಡಿಬೇಕೋ? ಗಂಡನ ಕುತ್ಗಿ ಕಡಿಬೇಕೋ?" ಕೇಳಿದ. ಗಂಡನ ಕುತ್ಗೀನೇ ಕಡಿ ಅಂತಂತೆ. ಮಂತ್ರಿ ಹುಡುಗ ಅದರ ಬೆನ್ನ ಹಿಂದೇ ಹೋಗಿದ್ದ. ಯಲ್ಲ ಕೇಳಿದ. ಬಂದು ಸುಮ್ಮನೆ ಮನಿಕಂಡ. ಕೆಲಸಿ ಬಂದಿ ರಾಜನ ಹುಡ್ಗನ ಕುತ್ಗಿ ಕಡಿದು ನಡೆದ.

ಅವನ ಮೇಲೇ ಬರುದು ಹೇಳಿ ಸುಮ್ಗೆ ಉಳ್ಕಂಡ. ಬೆಳಗಾದ ಕೂಡ್ಲೆ ಹೆಂಡ್ತಿ ಯತ್ತು, ಗಂಡ ಏಳಲೇ ಇಲ್ಲ. ಮಂತ್ರಿ ಹುಡಗನೇ ಗಂಡನ ಕುತ್ಗಿ ಕಡ್ದ್ ಹಾಕ್ದ ಹೇಳ್ ಹೇಳ್ತು. ಪೋಲೀಸರಿಗೆ ಆರ್ಡರ್ ಕೊಟ್ಟ ರಾಜ. ಮಂತ್ರಿ ಹುಡುಗನಿಗೆ ಫಾಶಿ ಕೊಡೂಕೆ ಪೋಲೀಸರೆಲ್ಲ ಬಂದರು.

"ಬಾ" ಅಂದರು. ಬಂದ. ರಾಜನಿಗೆ ಕರೆದ. ರಾಜ ಹೆರಗೆ ಬಂದ. "ನಿಮ್ಮ ಹುಡಗಿ ಕೇಳಿ ರಾತ್ರೆ ಯಂತ ನಡೀತು ಹೇಳಿ. ನನ್ನಿಂದೇ ಆಯ್ತು ಹೇಳಿ ತಿಳಿದೀರೋ?" ಹುಡಗಿ ಕೈಲಿ ಕೇಳಿದ. ಹುಡಗಿ ಮಾತೂ ಆಡೂದಿಲ್ಲ. ಮಂತ್ರಿ ಹುಡಗ ಹೇಳಿದ, "ನಿಮ್ಮ ಹುಡಗಿ ರಾತ್ರಿ ಒಬ್ಬ ಕೆಲಸಿ ಮನೆಗೋಗಿತ್ತು. ಕೆಲಸಿ, 'ನಿನ್ನ ಕುತ್ಗಿ ಕಡಿಬೇಕೋ ನಿನ್ನ ಗಂಡನ ಕುತ್ಗಿ ಕಡಿಬೇಕೋ' ಹೇಳ್ ಕೇಳ್ದ. ನಿನ್ನ ಹುಡಗಿ ಕೆಲಸಿ ಕೈಲಿ ಗಂಡನದೇ ಕುತ್ಗಿ ಕಡಿ ಹೇಳ್ ಹೇಳ್ತು." ರಾಜ ಕೇಳ್ದ ಹುಡುಗಿ ಕೈಲಿ. ಅದು ಮಾತೂ ಅಡ್ಲಿಲ್ಲ. ಹುಡ್ಗಿಗೆ ಫಾಶಿ ಕೊಡು ಹುಕುಂ ಕೊಟ್ಟ ರಾಜ. ಮಂತ್ರಿ ಹುಡುಗ ಹೇಳಿದ, "ನಾನವರೇ ಫಾಶಿ ಕೊಡಲಿಕೆ ನಿಮಗೆ ಅಧಿಕಾರವಿಲ್ಲ." ಅವಳ ಅಲ್ಲೇ ಬಿಟ್ಟ.

ರಾಜನ ಹುಡ್ಗನ ರುಂಡ ತಕಂಡಿ ತನ್ನ ಮಾವನ ಮನೆಗೆ ಹೊರಟ. ರುಂಡ ಹುಲ್ಲ ಗೋದ್ನಿ ಒಳ್ಗೆ ಸರಿ ಮಾಡಿ, ಇರ್ಸಿಕ್ಕಿ ಮುಚ್ಚಿ ಹೋಗ್ತ. ಕಜ್ಜಾಯ ಎಲ್ಲ ಮಾಡಿರು. ಅಲ್ಲಿ ಊಟ ಮಾಡಿ ಮನಿಕಂಡ್ರು. ಗಂಡನಿಗೆ ನಿದ್ರೆ ಬಂದಕೂಡ್ಲೆ ಮಂತ್ರಿ ಹುಡುಗನ ಹೆಂಡ್ತಿ ಕಡ್ಡಿ-ಕರ್ಪೂರ ಎಲ್ಲ ತಕಂಡಿ ದೇವರ ಮನೆಗೆ ಹೋಯ್ತು. ಹೋದ ಕುಡ್ಲೆ, "ನನ್ನ ಸತ್ಯ ಹೌದಾದರೆ ಬಾಗ್ಲು ತೆಗದು ಬೀಳಬೇಕು" ಹೇಳ್ತು. ಕದ ತೆಗದು ಬಿತ್ತು. ಬಾಳೆಹಣ್ಣು, ಕಡ್ಡಿ, ಕರ್ಪೂರ ತಕಂಡಿ ಪೂಜೆ ಮಾಡ್ತು. ಗಂಡ ಹಿಂದಬದಿ ಹೋಗಿದ್ದ . ದೇವರು, "ಯಂತ ವರ ಬೇಕು ಬೇಡ್ಕೊ" ಹೇಳ್ತು. ಅವಳು, "ವರು ಎಂತದು ಇಲ್ಲ" ಹೇಳೂರೆಗೆ ಅವ, "ಅದೆ" ಹೇಳ್ದ. "ಹುಳಿ ಮರ ಕಿಟ್ಟರೆ ಬತ್ತಾಗಬೇಕು. ಬತ್ತಮರ ಕಿಟ್ಟರೆ ಹಶಿಯಾಗಬೇಕು ಹೇಳ್ ವರ ಕೇಳು" ಅಂದ. ಮತ್ತೆ, "೧ ಸಮುದ್ರ, ೧ ಅಗ್ನಿ, ೧ ಬೆಟ್ಟ ಆಗುವಂಥ ಹಳ್ಳು ಬೇಡ್ಕೊ" ಹೇಳಿದ. ಹಾಗೆ, "ಇದ್ದದ್ದು ಇದ್ದಂಗೆ ಅಗೋಗ್ಲಿ' ಹೇಳ್ ಮತ್ತೊಂದು ಹಳ್ ಬೇಡ್ಕೊ" ಹೇಳ್ದ.

ಬಂದ್ರು ಎರಡೂ ಜನ. "ಹಶಿಮರ ಕಿಟ್ಟು" ಅಂದ ಹೆಂಡ್ತಿ ಕೈಲಿ. ಬತ್ತಾಗಿ ಹೋಯ್ತು ಹಶಿಮರ. "ಬತ್ತಮರ ಕಿಟ್ಟು" ಹೇಳ್ದ. ಹಶಿಯಾಗಿ ಹೋಯ್ತು. ಹಾಗೆ ಬಂದು ಮನೆಲಿ ಮನಿಕಂಡ್ರು.

ಬೆಳಗಾದ ಕೂಡ್ಲೆಯ ಮಾವನ ಮನೆಗೆ ಬಂದು, "ಹುಲ್ಲ ಗೋದ್ನಿಲಿ ಕೈ ಹಾಕು" ಹೇಳ್ದ. ಹಾಗೇಯಾ ಕೈ ಹಾಕಿದ ಕೂಡಲೆ ಅವಾಗ್ ಜೀವಾಗಿ ಬಂದ್ ಬಿಟ್ಟ ರಾಜನ ಮಗ. ಬೆಳಗಾದ ಕೂಡಲೆ ಎರಡೂ ಜನ ಪರತ್ ಊರಿಗೆ ಬಂದ್ರು. ರಾಜನ ಹುಡುಗ ಊರಿನ ಸಮೀಪ ಬಂದ ಕೂಡ್ಲೆ, "ಅಗ್ನಿಯಾಗಲಿ" ಹೇಳಿ ಒಂದ ಹಳ್ಳ ಬೀಸಿದರು. ಮತ್ತೊಂದ್ ಹಳ್ಳು "ಸಮುದ್ರಾಗ್ಲಿ" ಹೇಳಿ ಬೀಸಿದರು. ಮತ್ತೊಂದ್ "ಬೆಟ್ಟಾಗ್ಲಿ" ಹೇಳಿ ಬೀಸಿದರು.

ನಡುಮಧ್ಯೆ ಅಗ್ನಿಲಿ ಮಂತ್ರಿ ಹುಡುಗ, ಅವನ ಹೆಂಡ್ತಿ ಖುಷಿ ಆಕಾರಾಗಿ ಹೊಗ್ ಕೂತ್ರು. ನೋಡಿ ರಾಜ-ತಾಯಿ ಯೆಲ್ಲಾ ಬಂದ್ಕಂಡಿ ಅಗ್ನಿಲ್ ಹಾವುಕೆ ಬತ್ರು . ಅವರ ಕೈಲಿ ಅಗ್ನಿಲ್ ಬರುಕಾಗುದಿಲ್ಲ, "ಪಾಪ ಮಾಡಿದ್ದು ಪರಿಹಾರವಾಗಬೇಕು" ಹೇಳಿ ಬೇಡಿಕಳ್ತರು. "ನೀವು ಮಾಡಿದ ಪಾಪದ ಕೆಲಸ ನೀವೇ ತಿನ್ನಬೇಕು" ಹೇಳಿದರು ಅವ್ರು. "ನಿಮ್ಮ ಪ್ರಾಯಕ್ಕೆ ಬಂದ ಹುಡುಗರ್ನ ತೆಕ್ಕಂಡಿರಿ. ಆ ಪಾಪದ ಫಲ ನೀವೇ ತಿನ್ನಬೇಕು" ಹೇಳಿದರು. ಅವರು ಬೇಡಿ ಕಳ್ತ್ರು. "ನಮ್ಮ ಹುಡುಗರನ್ನ ನಾವು ಕಳಕಂಡರೂ ನಮ್ಮ ಹುಡುಗರು ನಮಗೆ ಬರಬೇಕು." ಆಗ ಇವರು ಹೇಳತಾರೆ, "ನಾಳೆ ೧೨ ಗಂಟೆಗೆ ಇದೇ ಅಗ್ನಿಂದೇ ಹೆರಬಿದ್ದು ಬತ್ರು ಅವ್ರು" ಹೇಳಿದರು.

ಹನ್ನೆರಡ್ ಗಂಟೆ ಕೂಡೆ ಪರತ್ ಬಂದು, ತಮ್ಮ ವೇಶನೇ ಹಾಕ್ಕಂಡು ಅಗ್ನಿಲೀ ಹೋಗ್ತ್ರು. ಅವರೆಲ್ಲ ಹೆರಬೀಳಬೇಕಾದ್ರೆ ಹಿಡ್ಕಂಡ್ ಹೊಗ್ತ್ರು. ಮನೆ ಹೋಗ್ಬೇಕಾರೆ "ಇದ್ದರ್ ಇದ್ದಾಂಗೆ ಆಗ್ಲಿ" ಹೇಳಿ ಹಳ್ಳು ಬೀಸ್ ಬಿಡ್ತ್ರು.

ಮನೆಗೆ ಬಂದರು. ಅಪ್ಪ-ಅವಿ ಹೇಳಿದರು, "ನಿಮ್ಮ ಹೆಂಡ್ತಿ ಕರ್ಕಂಬನ್ನಿ" ಹೇಳಿದರು. ಹಾಗೆ ಮಂತ್ರಿ ಹುಡ್ಗ ಮಾವನ ಮನೆಗ್ ಹೋಗಿ ಹೆಂಡ್ತಿ ಕರ್ಕಂಬತ್ತ. ರಾಜನ ಹುಡುಗ ಕಡೆಗೆ ಮದುವೆಯಾದ ಹೆಂಡ್ತಿ ಕರ್ಕಂಬತ್ತ. ಬರಬೇಕಾರೆ ಹೆರಿ ಹೆಂಡ್ತಿ ಹಾದಿ ಮೇಲೆ ಕುತ್ಗಿ ಕಡಿದ್ ಬತ್ತ. ಸುಖ-ಸಂತೋಷದಲ್ ವಳದ್ರು.

■ ಹೇಳಿದವರು: **ಶ್ರೀ ರಮೇಶ ಬೀರಪ್ಪ ನಾಯ್ಕ, ಹೊದ್ಕೆ**

◆

# ಬುರುಡೆ ಮಹಿಮೆ

ಅರಸು-ಅರಸು ಹಿಂಡ್ತಿ. ಅರಸು-ಅರಸು ಹಿಂಡ್ತಿ ಆದ್ರೆ ಅವ್ರ್ ಚಲೋ ರೀತಿಂದ ಉಳ್ದ್ರು ಮನೀಲಿ. ಆವಾಗೆ ಸಲ್ಪ ದಿವ್ಸದಾಗೆ ಹಿಂಡ್ತಿಗೆ ವಂದ್ ಹುಡ್ಗ ಹುಟ್ದ. ಹುಡ್ಗ ಹುಟ್ಟಿ ಆರ್ ತಿಂಗಳಾಯ್ತು. ಗಂಡ ಹಿಂಡತಿಗೆ ಯೇನೋ ವಂದ್ ತಕ್ರಾರಾಯ್ತು. ವಂದ್ ಸಣ್ ಜಗ್ಳದ್ ಹಾಗೆ. ಅಟ್ಟೇ ಜಗಳಕೇಯ ಅವ ಮನಿಬಿಟ್ ನೆಡ್ದ್ ಬಿಟ್ಟ. ಆವಾಗೆ ಅವ ಸೋಳಿ ಮನಿಗೆ ಹೋದ. ಸ್ವಲ್ಪ ದಿವ್ಸ ಉಳ್ದ ಸೋಳಿ ಮನಿಲ್ಲಿ. ಉಳಿತ ಉಳಿಬೇಕಾದ್ರೆ ವಂದ್ ಅಜ್ಜ್ ಮುದ್ಕಿ ಹೀಗೆ ಬೇಡ್ಕಂತ್ ಬೇಡ್ಕಂತ್ ರಾಜ್ನ ಮನಿಗೆ ಬಂತು. ಬೇಡ್ಕಂತ್ ಬರಬೇಕಾರೆ ಅದು ಬಿಕ್ಸೆ ಹಾಕ್ತು. ಬಿಕ್ಸ್ ಹಾಕಂಡಿ ರಾಣಿ, "ಅಜ್ಜವ್ವಾ, ಇಂದ್ ನಮ್ಮನೀಲೆ ಉಳ್ಕ ಬಿಡು ನೀನು ಹೋಗಬೇಡ'' ಅಂತು.

ಉಳೂರೊಳಗೂವ ರಾತ್ರಿಗೆ ಮನ್ಗವಾಗೆ, "ಮಗಳೇ, ಮತ್ ನಿನ್ ಗಂಡ ಯೆಲ್ ಹೋಗನೆ?" ಕೆಳ್ತು. ಆವಾಗ್ ಇದು ಹೇಳ್ತು ಇದ್ ಸಂಗ್ತಿಯೆಲ್ಲಾ "ಜಗಳಾಡ್ಕಂಡ್ ಹೋದ್ದಲ್ಲ. ಯೇನೋ ವಂದ್ ಮಾತ್ಗೆ ಹೀಗೆ ಹೊರ್ಗ್ ಬಿದ್ ನೆಡದ್ರು." "ಹಾಂಗೇ ಯೇನೂ ಕಾರಣ್ ಯಿಲ್ಲದಿದ್ದೇಯ ಯೆಲ್ಲಿ ಉಳ್ದನೇ ಹಗರೆ..? ರಾಜಗೆ ತಕ್ರಾರ್ ತಂದ್ ಹಾಕ್ತೆ. ನಾ ಹೇಳ್ದ ಕೊಡತ್ಯೋ?" ಕೇಳ್ತು. "ವಂದ್ ಮೂರ್ ಶಿದ್ ಕಡ್ಲೆ ವಂದ್ ಸಲ್ಪ ಹಲ್ಸನ ಬೇಳೆ ಕೊಟ್ರೆ ನಾ ತರ್ಸ್ ಕೊಡ್ತೆ ಅವ್ನ ತಾನು. ಮನಿಗೆ ತರ್‌ಸಿ ಕೊಡ್ತೆ'' ಹೇಳ್ತು. ಕಡೆಗಜ್ಜವ್ವ, "ನಿನ್ಗೆ ಮತ್ತಿನ್ಯೇನಾಗಬೇಕು?" ಕೇಳ್ತು. ಇದು, "ಮತ್ ವಂದ್ ಬೊಯ್ಡಿ ಬೇಕು ತನಗೆ." ಆವಾಗೆ ವಂದ್ ಬೊಯ್ಡಿ ಕೊಟ್ತು ಅದು.

ಆವಾಗೀ ಹಲ್ಸನ ಬೇಳೆ, ಮತ್ತೀ ಕಡ್ಲೆಯ ಕೊರ್ಸತು. ಇದು ಅಜ್ಜವಿ, ಕೊರ್ಸ್ಕಂಡ್ ತಿಂದ್ಕಂಡ್ ಮನಿಕಂಡ್ತು. ರಾತ್ರಿಗೆ ಅಜ್ಜವಿಗೆ ಯೇಕ್ ದಮ್ಮಿಗೆ ಹೂಶಿಕ್ ಶುರುವಾಯ್ತು. ಬಂದ್ ಬಂದ್ ಹೂಶ್ ಬೊಯ್ಡಿಲ್ ಹೊಡ್ದ್ ಜಡಕೆ ಹಾಕ್ ಬಿಡ್ತು. ಬೆಳಗಾಗುವರಿಗೆ ಕೋಳಿ ಶರಗೈವ್ ವಳ್ಗೆ ಅದೇ ಕೆಲ್ಸ ಮಾಡ್ತು. ಹೂಶ್ ಹೊಡ್ವದು ಬೊಯ್ಡಿಲ್ ತುಂಬ್ವದು ಜಡ್ಕೆ ಹಾಕೆ ಬಿಡ್ವದು.

ಕೋಳ್ ಶರ್ ಗೆವ್ ಸಮಿಲಿ ಬೆಳ್ ಬೆಳ್ಗಾಗೆ ಬೇಕಾರೆ ಆ ಸೋಳಿ ಮನಿಲ್ ರಾಜ ಮನಗೂ ಮಂಚದ ಅಡಿಗೆ ಹೋಗ್ ಹೊಕ್ತು ಇದು. ಆವಾಗ್ ಅದ್ರ್ ಬೂಚ್ ತೆಗಿತು ಆ ಬೊಯ್ಡಿದ. ಅದ್ ಪರಿಮಾಳ್ ಯೆದ್ ಹೋಯ್ತು. "ಹು ಹು ಹು ಹೂ. ಇದ್ ಶಾಯ್ಲಪ ಯೆಂತಾ ಸೋಳ್ಯಪ್ಪ. ಹೂಂಶ್ ಬಿಡ್ತೆ ನೀನು. ಹೂಂಶ್ ಬುಡ್ತೆ" ಅಂತಾ. "ತಾ ಹೂಶಲೆಲ್ಲ" ಅಂತು ಇದು.

ಆವಾಗೆ ಇದ್ಯೇನ್ ಮಾಡ್ತು? ಅವ್ರಟ್ಕೆ ತಂಡಾದ್ರು. ಗನಾಕೆ ತೆಗಿತು ಬೂಚ. ಆವಾಗ್ ರಾಜಗೆ ಸಿಟ್ ಬಂದ್ ಹೋಯ್ತು. "ನೀ ಶತ್ತೆ, ನೀನು ಹೂಶ್ ಬುರ್ಕಿ ರಂಡೆ. ಹೊಲಸ್ ವಾಶ್ನೆ ತಡೂಕಾಗುದಿಲ್ಲ" ಅಂದ್ ಬಯ್ದ್ ಬಿಟ್ಟ. ಅದ್ಕೆ ಆವಾಗ, "ಕೊಳಕ ರಂಡೆ, ಹೊಲಸ್ ಹೂಂಶ್

ಬಿಡ್ತದೆ..." ಅಂದ. ಆವಾಗ್ ಅದ್ ಹೇಳ್ತು, "ನಾನಲ್ಲ ಕೊಳ್ಕ್ ರಂಡೆ. ನಿಮ್ ಹಿಂಡ್ತಿ ಕೊಳ್ಕ್ ರಂಡೆ" ಅಂತು.

"ಎಹ್, ನನ್ ಹಿಂಡ್ತಿಗೆ ಕೊಳ್ಕ್ ರಂಡೆ ಅಂತ್ಯಾ ನೀನು? ಅದ್ ಯೆಷ್ಟ್ ಲಾಯ್ಕದೆ. ನೀ ಯೆಂತ ಹೂಂಶ್ ಬುರ್ಕಿ ರಂಡೆ" ಅಂದ. ಶಿಟ್ ಬಂದೆಹೋಯ್ತು. ಅವಗ್, "ನಿಮ್ ಹಿಂಡ್ತಿ ಹಗರೆ ಅಟ್ ಚಲೋ ಅದ್ಯೋ..?" ಕೇಳ್ತು. "ಎಹ್ ನನ್ ಹಿಂಡ್ತಿ ಯೆಷ್ಟ್ ಚಲೋ ಅದೆ...' "ಹಗರ್ ಚಲೋ ಯೆಲ್ದಿಗಿದ್ರೆ ನೀನ್ ಹಿಂತಿರ್ಗ್ಗ್ ನನ್ನ ಶಂತಿಗೆ ಬರ್ಬೇಕು..." ಅಂತು ಇದು. "ಶತ್ತೆ ನೀನು, ಹೂಂಶ್ ಬುರ್ಕಿ ರಂಡೆ. ನನ್ ಹಿಂಡ್ತಿ ಯೆಷ್ಟ್ ಚಲೋ ಅದೆ" ಹಾಂಗೇ ಹೇಳ್ತ.

ಇವ ಯೇನ್ ಹೇಳ್ತ? ಕೇಳದ್ರೆ- "ಅದೆ ಚಲೋ ಇದ್ರೆ ನೀನು ನಮ್ಮ ಮಲ್ ಕಪಡ ಶೆಳೂಕೆ ವಳಿಬೇಕು." ಆವಾಗ ಅದು, "ಅಡ್ಡೆಲ್ಲ" ಅಂತು.

ಇವಗೆ ಮನಿ ಬದಿ ಹಂಬಲ ಮರ್ತ್ ಹೋಗಿತ್ತು. ಇತ್ಲಾಗಜ್ಜವ್ವಿ ಬೇಗ್ ಬಂದ್ ಬಿಡ್ತು. ಈಗ ಇದ್ರ್ ಕೈಲೆ ಹೇಳ್ ಕೊಟ್ತು. "ಮಗನೆ, ಚಲೋ ಪಟ್ಟಿ ಶೇರಿ ಉಡಬೇಕು. ನೀನು ಬಂಗಾರ ಗಿಂಗಾರ ಅಷ್ಟೂ ಹಾಕಂಬೇಕು. ಮತ್ತೆ ಮಂಡಿಗಿಂಡಿ ಬಾಚ್ಕಂಡಿ, ಹುಡ್ಗರ ಕರಕಂಡಿ ಮೆತ್ನ ಮೇನೆ ನೆಡೀಬೇಕು. ಇಲ್ಲೆಲ್ಲೂ ಇರುಕೆಲ್ಲ. ನಾನು ಕರದ ಕೂಡ್ಲೆ ತೊಪ್ಪದ ಚಂಬಾ ಹಿಡ್ಕಂಡಿ ನೀನು ಬರಬೇಕು. ಕೆಳಗಿಳ್ದಿ ಅಟ್ ಹೊರತು ಬರೂಕಾಗ" ಹೇಳ್ ಬಿಡ್ತು.

ಆವಾಗ್ ಇತ್ಲಾಗೆ ಈ ಮುದ್ಕಿ ಯೇನ್ ಮಾಡ್ತು ಕೇಳ್ದ್ರೆ ಬಚ್ಲಕೆ ಬೆಂಕಿ ಮಾಡ್ತು. ನೀರ್ ಕಾಸ್ತು. ಚಲೋ ಅಡ್ಗಿ ಗಿಡ್ಗಿ ಮಾಡ್ಕಂಡಿ ಬಂದು, ಬೋಳಿ ರೂಪದಾಗೆ ಮುಸ್ಕೆ ಹಾಕಂಡ್ ಬಾಗ್ಲದಾಗೆ ಕೂತ್ಕಂಡ್ತು. ಆವಾಗ ಇವ ಸೋಳಿ ಕರ್ಕ್ ಬಂದ ಮನಿಗೆ. ಆಗ ಸೋಳಿ ಹಿಂದಾಗಿ ಇವ ಮುಂದಾಗಿ ಬಂದ್ರು. ಬಂದ್ ಬಾಗ್ಲಕೆ ಬಂದ್ರು. ಬಾಗ್ಲದಾಗೆ ಕೂತ್ಕಂಡದೆ ಇದು. ಆವಾಗ, "ಅಯ್ಯಯ್ಯೋ, ನೀವಿದ್ದೀರಿ? ನೀವ್ ಶತ್ ಹೋಗ್ ಬಿಟ್ರಿ ಹೇಳ್ ಮಾಡಿದ್ದೆ ನಾನು ಯೆಲ್ಲಾ ಚೊಕ್ ಮಾಡ್ಕಬಿಟ್ಟೆ. ತಾ ಮಂಡಿಗಿಂಡಿ ಯೆಲ್ಲಾ ತೆಗ್ದ ಬಿಟ್ಟೆ ನೀವ್ ಶತ್ ಹೋದ್ರಿ ಹೇಳಿ..."

ಆವಾಗ್, "ನೀನು ಚೊಕ್ಕಂತೂ ಮಾಡ್ಕಂಡೆ, ತಲಿಮಂಡಿ ಅಂತೂ ತೆಕ್ಕಂಡೆ. ಜೀವದಲ್ಲಿ ಈ ನಮೂನಿ ಬಡ್ವಾಗೆ ಹೋಗಿದ್ದೆ." ಆವಾಗ್, "ನೀವ್ ಶತ್ ಹೋದ್ರಿ ಹೇಳ್ ಯೆತಿಲಿ ಈ ನಮೂನಿ ಬಡ್ವಾಗ್ ಹೋದೆ." ಆವಾಗ್ ಈ ಸೋಳಿ ಹೇಳ್ತು, "ಇದೇಯ ನಿಮ್ ಹಿಂಡ್ತಿ? ಯೇಳಿ ಹೋಗ್ವನಿ..." ಅಂತು. ಮುಂದೆ ಹಿಂತಿರ್ಗೂಕೆ ತಯಾರಾದ್ರು. ಆವಾಗೀ ಮುದ್ಕಿ ಹೇಳ್ತು, "ಅಯ್ಯಯೋ ನೀವ್ ಬಂದಿರಿ. ಶಲ್ಪ ಊಟ ಮಾಡ್ಕಂಡ್ ಹೋಗಿ ಹಾಗೇ ಹೋಗಬೇಡಿ" ಅಂತು. ಆವಾಗ್ ಮೀವೂಕ್ ಹೋದ ಇವ. ಹಾಂಗೇ ವೋಟ ಮುಗ್ದ ಮೇನೆ ಹಾಂಗೇ ಹಿಂತಿರ್ಗಿ ಹೋಗಬೇಕು. ಹೇಳಿ ಮತೆ ಅದೇ ಹಂಬ್ಲದ ಮೇನೆ ಮೀವೂಕ್ ಹೋದ ಅವ ಯತಿ ಮಾಡ್ಕಂತಿ. ಆವಾಗ್ ಹ್ಯಾಂಗಾರೂ ಬಗೀಲ್ ಮಿಂದ್ಕಂಡ್ ಬಂದ.

ಆವಾಗ್ ಅದ್ಕೊಂದ್ ಬಾಳಿ ಅವಗೊಂದ್ ಬಾಳಿ ಇಟ್ಟಿ ಬಡ್ಸತು ಅದು. ಆವಾಗ್ ಇವ ಉಣ್ತಿ ಈಗ ಹೋಗಬೇಕಲ್ಲ ಸೋಳಿ ಸಂತಿಗೆ. ಅದೇ ಯತಿ ಮೇನೆ ಉಂಬೂಕೆ ಕುಂತ.

ಇವಗೆಲ್ ಅನ್ನಾ ಮೆಚ್ತದೆ? ಆವಾಗ್ ಇದ್ ಯದ್‌ಕಂತು. "ತಂಗೀ, ಮಗನೇ, ಆ ತೊಪ್ಪದ್ ಚಂಬ್ ಹಿಡ್ಕಂಡ್ ಬಾ" ಅಂತು.

ಆವಾಗ್ ಅದು ಮೆತ್ನ ಮೇಗಿದ್ ಇಳ್ದ್ ಬಂತು. ಇವಗ್ ಯೆಯ್ದ್ ಸೌಂಪ್ಟ್ ಹಾಕ್ತು. ಮತ್ ಸೋಳಿಗೆ ಯೆಯ್ದ್ ಸಂಪ್ಟ್ ಹಾಕ್ತು. ಆವಾಗ್ ಇವನ್ದ್ ವೋಟ್ ಮುಗಿತು. ಆವಾಗ್ ಮೊಕಗಿಕ ತೊಳ್ಕ ಬಂದ್ಕಂಡಿ ಮಂಚ್ದ ಮೇನೆ ಕೂತ. ಆವಾಗ್ ಹೇಳ್ದ ಸೋಳಿ ಕೈಲಿ. "ನೋಡದ್ಯ ನನ್ ಹಿಂದ್ತಿ" ಕೇಳ್ದ. ಆವಾಗ್ ಅದ್ ತಲಿ ಹಣ್ಕಸ್ತು. ಆವಾಗ್, "ನನ್ ಹಿಣ್ತಿ ವಸ್ತ್ರ ಶೆಳೂಕ್ ಉಳ್ಕಬಿಡು" ಅಂದ್ ಹೇಳ್ದ. ಆವಾಗ್ ಮಾತ್ನಂತೆ ಉಳಿಬೇಕಾಯ್ತುಲ್ವೋ ಅದು? ಅದ್ ಉಳ್ಕಂತು. ಆ ಮುದ್ಕಿನೂ ಇಲ್ಲೇ ಇಟ್ ಕಂಡ್ರು.

■ ಹೇಳಿದವರು: **ಸಾವಿತ್ರಿ ರಾಮ ನಾಯ್ಕ**, ತಾರಿ ಬಾಗಿಲ, ಹೆಗಡೆ ಊರು.

◆

# ಬುಸನಾಗಪ್ಪಾ

ಒಬ್ಬ ಅರಸಗೆ ಹುಡ್ಗ-ಹುಡ್ಗಿ ಇದ್ದರು. ಹುಡ್ಗ ಸಣ್ಣ, ಅರಸು ತೀರಿದ. ಬಡಸ್ಥಿತಿ ಬಂತು. ಬೇಡಹತ್ತಿದರು. ಹೊಟ್ಟೆಗೆ ಸಾಲದೆ ಹಾವು ಹರಣಿ ತಿನ್ನಹತ್ತಿದರು. ದೇವರ ಪೂಜೆ ಮಾಡುವಾಗ ಸರ್ಪ ಬಂತು. ಹಾವು ಬಂತು ಪದಾರ್ಥ ಮಾಡುವ ಬುಟ್ಟಿ ಮುಚ್ಚಿ ಹಾಕೆಂದ. ತೆಗೆದಾಗ ಬಂಗಾರದ ಗಟ್ಟಾಗಿತ್ತು. ಸಾವ್ಕಾರ ಮನೆಯಲ್ಲಿ ಬೆಲೆ ಕೊಟ್ಟಾರೆಂದು ಹೋತರು. ಮತ್ತೊಬ್ಬ ಅರಸು ಕಿಮ್ಮತ್ತಿಗೆ ತಕ್ಕೊಂಡ. ಅರಸ್‌ಗೆ ಅದೇ ದಿನ ಸ್ವಪ್ನ, ಅವ್‌ಗೆ ಏಳು ಜನ ಹೆಂಡಿರು. ಹುಡುಗರಿಲ್ಲ. ಯೇಳ್ ಜನ ಹೆಂಡ್ರೂ ದೇವಾಲಯ ಕಟ್ಟಿ ಶಿಲೆ ಮೇಲೆ ಕಲ್ಲಿಟ್ಟು, ಬೆಳ್ಳಿ ಹರಣಿ ಮಾಡಿ ದಿನಾ ಹಾಲು ಹೊಯ್ಯಬೇಕು.

ದಿನಾ ಒಬ್ರು ಹಾಲು ಹೊಯ್ಯುತ್ತಿದ್ದರು. ಯೇಳನೇ ಹೆಂಡ್ತಿ ಹಾಲು ಹೊಯ್ವಾಗ ವಂದು ಗಂಡು ಶಿಶು ಅಳುತಿತ್ತು. ಮೊಲೆಲಿ ಹಾಲು ಹಾರತದೆ. ಮೊಲೆ ಕೊಟ್ಟಳು. ಗಂಡ ಏಕೆ ಬಂದಿಲ್ಲೆಂದು ಆಳು ಕಳಿಸಿದ. ಇವಳು ಅಮ್ಮಿ ಕೊಡುತಿದ್ದಳು. ಕಾರಣ ಹೇಳಿದರು.

ಸ್ವಪ್ನದಲ್ಲಿ, 'ಹುಡ್ಗ ಹುಟ್ಟುವ ರತ್ನ ಎಂದು ಹೆಸರಿಡು' ಎಂದು ಸಪ್ನ. ಪ್ರಧಾನಿಗೂ ಹುಡುಗರಿದ್ದಿಲ್ಲ. ಅದೇ ದಿನ ಹುಡುಗಿ ಹುಟ್ಟಿದಳು. ರತ್ನಿ. ವಿದ್ಯೆ ಕಲಿಸಿದರು. ರತ್ನ-ರತ್ನಿಗೆ ಪ್ರೀತಿಯಿಂದ ವಿದ್ಯೆ ಕಲಿಸಿದರು. "ನೀನು ಅವಳೊಡನೆ ಯಾಕೆ ಹೋಗುವೆ? ಪ್ರಾಯಕ್ಕೆ ಬಂದಮೇಲೆ?" ಅವ್ರ ಜೊತೆ ತಪ್ಪಿಸಲಾಗಲಿಲ್ಲ.

ತಾಯಿ-ತಂದೆ ಸಂಗಡ ಮೂತ್ರ ಸುರಿವಾಗ ಹೋಗುತಾರೆ, ಹೊರಗೆ ಹೋಗುವಾಗ ಮಾತಾಡಿಕೊಂಡು, ಬೆಳಗಾಗುವಾಗ ದೂರ ಹೋಗಬೇಕೆಂದು ಮಾತಾಡಿಕೊಂಡರು. ಯಾರು ಮುಂದೆ ಬಂದರೂ ಕಟ್ಟೆ ಮೇಲೆ ಕೂಡಬೇಕೆಂದು ಮಾತು. ಇಬ್ಬರೂ ಗಂಡು ಡ್ರೆಸ್. ಪ್ರಧಾನಿ ಹುಡುಗಿ ಮುಂದೆ ಹೋಗಿದ್ದಳು. ಬೆಳಿಕುದ್ರೆ ಏರಿಕೊಂಡು ಮುಂದೆ ದೂರ ರಾಜ್ಯಕ್ಕೆ ಹೋದರು.

ಅಲ್ಲಿ ಒಬ್ಬ ರಾಜಕುಮಾರಿ, "ತನ್ನ ಮಿಂದ ನೀರು ದಾಟಿದವನ್ನ ಮದುವೆಯಾಗುವೆ" ಎಂದಳು. ಅವ ಮೊದಲು ದಾಟಿದ ಕುದುರೆ ಮೇಲೆ, "ತಾ ಲಗ್ನವಾಗುವೆ" ಎಂದಳು. ಡಂಗುರ ಸಾರಿ ಓಲೆ ಬರೆದು ಲಗ್ನ ಮಾಡಿದರು.

ರಾಜನಿಗೆ, "ಅಪ್ಪ, ನಾವಿಲ್ಲೇ ಉಳಿಯವು, ಮನೆ ಕೊಡು, ಜಮೀನಿಲ್ಲ" ಎಂದಳು. ಹಾಗೇ ಮಾಡಿದ. ರತ್ನಿಗೆ ಹೇಳಿದಳು ಅಜ್ಜವ್ವ, "ಅವನ ಹೆಸ್ರು ಬೇರೆ ಇದೆ. ರತ್ನನಲ್ಲ" ಎಂದಳು. ರತ್ನಿ "ಸುಳ್ಳೇ..." ಅಂದಳು. "ನೀ ಕೇಳು..." ಎಂದಳು ಅಜ್ಜಿ. ರತ್ನಿ ಹೆಣ್ಣುಡುಪು ಧರಿಸಿದ್ದಳು. ಒಂದು ದಿನ, "ರತ್ನ ನಿನ್ನ ಹೆಸರೇನು? ರತ್ನ ಅಲ್ಲ ಬೇರೆಯಂತೆ!" ಎಂದಳು. "ಈಗಲೇ ಹೇಳಲೋ? ಕೆಲಸವಿದೆ" ಎಂದ. "ಸಮುದ್ರ ದಂಡೆಗೆ ಹೋಗಿ ಹೇಳು." "ಹೇಳಿದರೆ ಸಿಕ್ಕಲಿಕ್ಕಿಲ್ಲ" ಎಂದ. "ಅಡ್ಡಿಯಿಲ್ಲೆಂ"ದಳು. ಹೋದರು.

ಮೊಳಕಾಲು ನೀರಲ್ಲಿ, "ಹೆಸರು ಹೇಳಲೋ?" ಕೇಳಿದ. "ಹೌದು." "ನಾಸಿಕ್ಕೆ?" "ಅಡ್ಡಿಯಿಲ್ಲ" ಎದೆಗಣ್ಣ ನೀರಲ್ಲೂ ಕೇಳಿದ. "ಮಹಾಶೇಷನ ಹೆಡೆಯ ಬುಸನಾಗಪ್ಪ" ಎಂದು ಹೇಳಿ ಕಾಣದಾದ. "ರತ್ನ..." ಎಂದು ಕೂಗಿದಳು. ಬ್ರಾಹ್ಮಣ ವೇಷದಿಂದ ಬಂದು ಹೇಳಿದ, "ಹೇಗಾಯಿತೆಂ"ದಳು. ಅವ, "ಹಾಲಿ ಸಿಕ್ಕವಾ, ರಾಜನ ಹತ್ರ ಕೇಳು ನಿದಾನವೇನು?" "ಕಟ್ಟಿಗೆ ಯೇಳ್ ಗಾಡಿ ಕುಂಕುಮ, ಯೇಳ್ ಗಾಡಿ ಲಿಂಬೆಹಣ್ಣು ಹಾಕ್ರೆ ಶೇಷ ಕಟ್ಟಿಗೆ ಬಂದು ಆನಂದಿಸುತಾನೆ. 'ಹೆಣ್ಣಾದರೆ ಎಡ ತೊಡೆ, ಗಂಡಾದರೆ ಬಲತೊಡೆಗೆ ಕೂಡಬೇಕು ನೀನು', 'ನಾಗೇಂದ್ರನ ಹೆಡೆಯ ಬುಸನಾಗಪ್ಪ ಬೇಕೆನ್ನು..." ಎಂದ. ರಾಜನ ಹತ್ರ ಹೇಳಿದಳು. "ಅಳಿಯ ಕಂತು ಹೋದ. ಬೊಬ್ಬೆಲಿ ಬ್ರಾಹ್ಮಣ ಹೀಗೆ ಹೇಳಿದ" ಅಂದಳು. "ಶೇಷನ ಬೇಡಿಕೋ" ಎಂದನು.

ಅರಸು ಬೇಕಾದ್ದು ತರಿಸಿದ. ಹರಡಿ ಮರೆಸಾರೆ ಕೂತಳು. ಮಹಾಶೇಷ ದಿನಾ ಸಂಜೆ ಬರುವ, ಕುಂಕುಮ, ಕಡ್ಡಿ, ಕರ್ಪೂರ ಹಚ್ಚಿಕೂತಿದ್ದಳು. "ಬಹಳಾನಂದ, ಹೆಣ್ಣಾದರೆ ಎಡತೊಡೆ, ಗಂಡಾದರೆ ಬಲತೊಡೆ ಕೂರು, ಬೇಕಾದ್ದನ್ ಕೊಡುವೆ" ಎಂದ.

ಎಡ ತೊಡೆಗೆ ಕೂತಳು. "ಹೆಡೆ ಬುಸನಾಗಪ್ಪ ಬೇಕೆಂ"ದಳು. "ಹಾಗಾದರೆ ಸಮುದ್ರದಾಚೆ ಬಾ" ಎಂದಿತು. ಶೇಷನ ಹೆಡೆಗೆ ಕುಂತಿ ಹೇಳಿತು. ಆಗ, "ಅಡ್ಡಿಯಿಲ್ಲ." "ಬಾವಿಯಿಂದ ತಂಬಿಗೆ ನೀರಾ ತಕಬಾ" ಶೇಷ ಹೇಳಿತು. ಆಗ. "ಅಡ್ಡಿಯಿಲ್ಲ" ಬಾವಿಂದ ತಂಬಿಗೆ ನೀರ ತಂದಿ ಆಚೆ ಕೊಂಡುಹೋದ. ಅಲ್ಲಿ ಮಹಾಶೇಷನಕ್ಕ ಮನುಷ್ಯ ರೂಪದಲ್ಲಿದ್ದಳು. "ದೇವರಪೂಜೆ ಮಾಡಿದರಡ್ಡಿಯಿಲ್ಲ" ಎಂದಳು. ಬಾವಿಲಿ ಕೈಹಾಕಿ ಹೊಗೆದಲ್ಲಿ ಕಂತಿಸುತ್ತದೆ.

ಹೋದಳು ಬುಸನಾಗಪ್ಪ, "ಬಾವಿ ಇಳಿಬೇಡ" ಎಂದು ಮನುಷ್ಯ ರೂಪದಲ್ಲಿ ಹೇಳಿದ. ಚಂಬಿಟ್ಟು ನೀರು ತಂದಳು. ಮೊಕ್ಕೊಂಡು ತಂದಳು. ದೇವರ ಪೂಜೆ ಮಾಡಿದಳು. "ಊಟಕೆ ವಿಷವನ್ನು ಬಡಿಸಿದರೆ ಉಣ್ಣಬೇಡ; ನಾ ಬರುವೆ ವಿಷ ತೆಗೆವೆ ಆಮೇಲೆ ಉಣ್ಣು" ಎಂದ. ಬಡಿಸಿದ್ದರು. ವಿಷ ಹೀರಿದ ಬುಸನಾಗಪ್ಪ. ಏನೂ ಆಗಲಿಲ್ಲ. "ಶೇಷ ಈಗ ಕರಕೊಂಡು ಹೋಗು" ಎಂದು ಆ ಅಕ್ಕ ಹೇಳಿದಳು. ಶೇಷ ಇಬ್ಬರನ್ನೂ ತಂದು ಕೊಟ್ಟು ಹೋಯಿತು. ರಾಜನ ಮನೆಗೆ ಬಂದರು. ಅರಸರ್ಗೆ ಹೇಳಿದರು, "ಮನೆಗೆ ಹೋಗುತ್ತೇವೆ ತಾಯಿ-ತಂದೆ ಇದ್ದಲ್ಲಿಗೆ." ತನ್ನ ಮಗ್ಳನ್ನೂ ಅವರ ಜೊತೆ ಕಳ್ಸಿಕೊಟ್ಟ. ತಾಯಿ-ತಂದೆ ಶೋಕದಿಂದ ಜೀವ ಹೋಗಲಾಗಿತ್ತು. ಪ್ರದಾನಿ ಪ್ರದಾನಿಯ ಹೆಂಡ್ತಿ ತಾಯ್ತಂದೆರ್ಗ್ ಸಹ ಹಾಗಾಗಿತ್ತು. ಸುಖದಿಂದುಳಿದಿರು.

■ ಹೇಳಿದವರು: **ಇಟ್ಟಪ್ಪ ಪಾಂಡು ನಾಯ್ಕ, ಕೂಜಳ್ಳಿ.**

◆

# ಬೆಳ್ಳಿ ಕಾಲಿನ ಬಿಳಿ ಹಂದಿ

ಏಳ್ ಜನ ಅಣಂದಿರು ಇದ್ರಂತೆ. ಒಬ್ಬಳು ಕಿರಿತಂಗಿ. ಬತ್ತ ಕಾವ್ಕೆ ಕೂತ್ತು, ತಲಿ ಬಾಚ್ಕಂತಿ. ವಂದ್ ಬೆಳಿಕಾಲಿನ ಬಿಳಿ ಹಂದಿ ಬಂತು. ಬಾಚಣಿಗಿಲಿ ಬೀಸಿ ಹೊಡೀತು ಅದು. ಅದರಾಗೆ ವಂದ್ ಬಾಚಣಗಿಯಂತಾ ಚೂರು ಉದ್ರಿಬಿತ್ತು. ಹಂದಿದು ಮಾಂಶ. ಆ ಮಾಂಶ ಹೆಕ್ಕಿ ಅದು ಅದ್ರ ಆಶಿ ಮಾಡಿ, ಇರ್ಸತು ಪದಾರ್ತ ಮಾಡಿ. ಅಣದಿರು ಬಂದ್ರು, "ತಂಗಿ ಬಡ್ಸು" ಅಂದ್ರು. ಬಡಸತು. ಅದು ಈ ಪದಾರ್ತ ಹಾಕ್ತು. "ಇದ್ಯೆಂತಾ ಪದಾರ್ತ?" "ಅಣ್ಣಿ, ನಾನು ಬತ್ತ ಕಾಯ್ತ ಕೂತಿದ್ದೆ. ಬತ್ತ ತಿಂಬೂಕೆ ಬೆಳಿಕಾಲ್ನ ಹಂದಿ ಬಂತು. ಬಾಚಣಿಗಿಲಿ ಬೀಸಿ ಹೊಡೆದೆ. ಚೂರಿನಂತ ಮಾಂಶ ಉದ್ರ ಬಿತ್ತು. ಆಶಿ ಮಾಡಿಟ್ಟೆ. ಉಂಡ್ರಿ" ಅಂತು. "ಹ್ಯಾಗಿತ್ತು?" ಕೇಳ್ದ್ರು. "ದೊಡ್ಡದೊಡ್ಡ ಅಡವಿಲಿರಾದು" ಅಂತು.

ಅವರು, "ಅದ್ರ ಹೊಡದಿ ಬರವ" ಹೇಳಿ ಹೊರಟರು. "ಯೋಳ ಕೋವಿ ಮಾಡ್ಸಕಂಬಾ ಆಚಾರಿ ಮನೆಗ್ಹೋಗಿ" ಹೇಳಿ ತಂಗಿಕಲೇ ಹೇಳ್ದ್ರು. ಯೇಳ್ ಜನ್ಕೆ, ಆಗ ಏಳೂ ಜನ್ರೂ ಹೋದ್ರು. ಕೋವಿ ಮಾಡ್ಸಕ ಬಂದ್ ಕೊಟ್ಟತನೆಯ ದೊಡ್ಡ ಅಡವಿಗೆ ಹೋದ್ರು. ಹಂದಿ ಅಲ್ಲೇರೂದು. ದೊಡ್ಡ ಅಡವಿಲ್ ಉಳಿತು. ಇವರು ಹೋಗಿ ಹೊಡೆದರು. ತಾಗಲೆಲ್ಲ. ಅದು ಏಳೂ ಜನ್ರ ನುಂಗೆ ಬಿಡ್ತು. ಅವರು ಹೋಬೇಕಾರೆ ಹೇಳಾಕ್ ಹೋಗಿರು. ಮತ್, "ಏಳದಿವಸ ನಮ್ ಬರ ನೋಡು. ಕಡೀಗೆ ನೋಡಬೇಡ" ಹೇಳೀರು.

ಯೇಳ ದಿವಸಕ್ಕೆ ಬರಲಿಲ್ಲ ಅವ್ರು. ಆಗೆ ಇದು ಹತ್ತ ದಿವಸಾಯ್ತು. ಆದ್ರೂ ಬರಲಿಲ್ಲ.

ಆಗೆ ಇದು ತೀಡ್ಕಂತ್ ಕೂತಿತ್ತು. ಆಗೆ ತಂಗೀ ಕೆಮಿಲಿ ವಂದ್ ಕೃಷ್ಣ ಹುಟ್ಟ (ಗಂಡ ಯಾರೋ ನಂಗೊತ್ತಿಲ್ಲ. ಮಾಯಾಗಿ ಹುಟ್ಟ.) ಮಾಯಾಗಿ ಹುಟ್ಟ. "ಏನಾಯ್ತಮ್ಮ?" ಕೇಳ್ದ. "ಹಂದ್ ಬಂದಿತ್ತು. ನಿನ್ ಮಾವದಿರು ಹಂದಿ ಹೊಡುಕೋಗಿರು. ಮಾವದಿರಿಗೆ ಅಶಿ ಮಾಡ್ ಹಾಕಿದ್ದೆ. ಯೇಳ್ ಕೋವಿ ಮಾಡ್ಸಕ್ ಬಂದ್ ಕೊಟ್ಟಿದ್ದೆ. ಬರಲೆಲ್ಲ" ಅಂತು.

"ತೀಡ್ ಬೇಡ. ಕೋವಿ ಮಾಡ್ಸಕಬಾ ನನ್ ಹೇಳಕೀಲಿ" ಹೇಳ್ದ. "ಹೂಂ" ಅಂತು. ವಂದ್ ಕೋವಿ ಮಾಡ್ಸಕಬಂದ್ ಕೊಟ್ಟು. ಹೋದ. ಹೋಗ್ ಹೋಗ್ ಹೋಗಿ ಮಾಯದಿಂದಿ ಆ ಹಂದಿ ಹೊಡ್ದ. ಅದ್ ಮೊದ್ಲೇ ನೂರಾರ್ ಜನ ತಿಂದಿತ್ತು. ಆಗ್ಯೆಲ್ಲ. ಕೊಯ್ದು ಕೊಯ್ದು ಕೊಯ್ದಿ ಬಗತಿ ಮಾಡ್ಹಾಕ್ದ. ಹತ್-ಹನ್ನೈಯ್ದ್ ಬಗ್ತಿ ಮಾಡ್ದ. ಬಗ್ತಿ ಮಾಡುರೊಳಗೂವ ನುಂಗಿದ್ದು ವಬ್ರೂ ಸಾಯಲಿಲ್ಲ. ನೂರಾರ್ ಜನ ಹೆರಬಿದ್ರು. ಅವರಿಗ್ಯೆಲ್ಲ ವನಂದ್ ಪಾಲ ಕೊಟ್ಟ. ಯೇಳ್ ಜನ ಮಾವದಿರಿಗೆ ಎಳ್ ಪಾಲ ಕೊಟ್ಟ. ಅಣ್ಣದಿರಿಗೆ ಅಳಿಯ ಹೇಳಿ ಗುತ್ತೆಲ್ಲ. ಅವಗ್ ಗುತ್ತು ಮಾವದಿರು ಹೇಳಿ. ಅವ ಅವು ಜೊತೆ ಅರ್ದ ಹಾದಿಗೆ ಬಂದ. ಬರೂರೊಳ್ಗ ಮಾಯಾಗೆ ನೆಡ್ದ ಬಿಟ್ಟ.

- **ಕೆಲವು ಪದಗಳ ವಿವರಣೆ**

ಬಗತಿ = ಸೀಳು    ಹೆಳಕೆಲಿ = ಸಲುವಾಗಿ    ಆಶಿ = ಮೇಲೋಗರ

■ ಹೇಳಿದವರು: **ದಿ. ರಾಮಕೃಷ್ಣ ಬೆಳ್ಳಿ ನಾಯ್ಕ,** ಹೆಗಡೆ ಊರು. ದಿನಾಂಕ: ೨೮-೨-೯೯.

◆

# ನೆರೆಹೊರೆ

ವಂದ್ ಗಂಡ-ಹಿಂಡ್ತಿ ಇದ್ದಿದ್ರು. ಅಲ್ ನೆರೆ ಹೊರ್ಯೊರು ಕೇಳುಕ್ ಬತ್ರು. "ಯೆಲ್ಲೋದ್ರೂ ಪಾಲ್ ಕೊಡ್ಬೇಕಾತದೆ. ತಾವು ನೆರೆ ಹೊರಿಲಿ ಇರ್ವದೆ ಬೇಡ. ಅಡ್ವಿಗ್ ಹೋಗ್ ಮನಿಕಟ್ಕ ಬಿಡ್ವ. ಅಲ್ ಹೋಗ್ ಮನಿಕಟ್ಕ ಇದ್ರೆ ನಾವ್ ಹೊಡ್ದ ಕಡು ಮಿಗ ಪೂರಾ ನಮ್ಗೇ ಅಯ್ತಲ್ವೊ?" ಅಂತು. ಹಿಂಡ್ತಿ ಮಾತ್ ಕೇಳಿ ಅಡ್ವಿಲ್ ಹೋಗ್ ಮನಿಕಟ್ದ. ವಂದಿವ್ಸ ಕಡ ಹೊಡ್ಕಂಡ್ ಬಂದ. ಇಬ್ರೇ ತಿಂದ್ರು. ವಂದಿವ್ಸ ಮಿಗ ಹೊಡ್ಕಂಡ್ ಬಂದ. ಇವ್ರೇ ತಿಂದ್ರು. ಉಳ್ದ್ರು ವಂದ್ ತಿಂಗ್ಳ ಹದ್ನೈದ್ ದಿವ್ಸ.

ಇದ್ ಗರ್ಬಿಣಿ ಇತ್ತು. ಅವ ದೊಡ್ಡ ಈಡ್ಗಾರನಾಗಿತ್ತಲ್ವೊ? ವಂದ್ ಊರಲ್ಲಿ ದೂರ್ನ ಕರಿಬಂದ್ ಹೋಯ್ತು ಅವಗೆ. "ಈ ಊರಲ್ಲಿ ಜೀವಾದಿ ರಾಸಿ. ನೀ ಬಂದ್ ಹೊಡೀಬೇಕು. ಪಗಾರ ಕೊಡೂರಪ. ಹತ್ ರೂಪಾಯಾರೂ ಕೊಡೂರು. ಜೀವಾತ್ಮ ಹೊಡ್ವವ" ರಾತ್ರಿಲ್

ಹೋದ. "ನೀ ಮನಿ ಬದೀಗ್ ಹುಸಾರಿ ಮೇನ್ ಉಳಿ. ರಾತ್ರಿಗ್ ಕದ ಹಾಕ ಮನಿಕೊ. ನಾ ಬೆಳಿಗ್ಗೆ ಬತ್ತೆ" ಹೇಳ ಹೋದ. ಆವಾಗಿದ್ ಉಳಿತು. ಇದ್ ಗರ್ಬಿಣಿ ಇತ್ತು. ಇದ್ಕ್ ಜನ್ಯಾಗು ಸಂಗ್ಟ ಸುರ್ವಾಗ್ ಹೋಯ್ತು ರಾತ್ರೆ. ಯಾರ್ಯಾರೂ ಇಲ್ಲ. ಆವಾಗ್ ಯೇನ್ ಮಾಡ್ತದೆ? "ಯೇ ದೇವ್ರೆ, ಯಾರಾರೂ ಬನ್ರೋ, ತನ್ಗ್ ಜೀವ್ದಲ್ ಬಾಳ್ ಸಂಗ್ಟಾಗ್ತದೆ" ಹೇಳ್ ಬೊಬ್ಬಿ ಹೊಡಿತು. ಆವಾಗಲ್ ಯಾರ್ ಬತ್ರು?

ಇದ್ರ್ ತಾಯಿ ಮನಿತ್ತು. "ಯೇ ಅವ್ವಾ, ಯೆಲ್ಲಿದ್ಯೇ? ಯೇ ಅವ್ವಾ, ಬಾರೇ ಬಗಿಲಿ. ಯೆಲ್ಲಿದ್ಯೇ?" ಅಂದ್ ಕೂಗ್ತದೆ. ಆವಾಗ ಅಡ್ವಿಯಾಗಿತ್ತಲ್ಲಾ? ವಂದ್ ಹುಲಿ ಕೇಳ್ ಬಿಡ್ತು ಇದ್ರ್ ಸಬ್ದಾವ. ಬಂದ್ ಬಿಡ್ತು ಇದಿದ್ದಲ್ಲಿ. ಇದ್ರ್ ಹತ್ರೆ ಯೆದ್ದಿ ವಂದ್ ದೀಪ ಕತ್ಸೂಕ್ ಆಗೂದೆಲ್ಲ. ಗೋರ್‌ಗತ್ಲೆ. ಹುಲಿ ಬಂದಿ ಇದ್ರ್ ಬುಡ್ಕೆ, (ಆಗ್ಯೆಲ್ಲಾ ಜಿವಾದಿಗೆ ಮಾತ್ ಬತ್ತಿತಂತೆ.) ಆಗ ಅವ್ವ, "ಬಂದೆ ಮಗನೇ, ಹೆದ್ರ್ ಬೇಡ" ಅಂತು. ಅವಾಗಿದ್ ಅದ್ರ ಹೋಗ್ ಹಿಡ್ದ ಬಿಡ್ತು. ಜೀವದ್ ಕಮಗೇಡ್ಗೆ (ಹೆದ್ರಕೆ) ಹುಲ್ಯ ಹಿಡುರಟಿಕೆ ಹುಲಿ ಅದ್ರ್ ಹಿಡಿತು. ಮೈಯೆಲ್ಲಾ ಬರ್ಕೆತ್ನೆ. "ಯೇ ಅವ್ವಾ, ನಿನ್ ಉಗ್ರೆಲ್ಲಾ ಯೆಂತಕ್ ಹೀಂಗ್ ಬಂದದ್ಯೇ?" ಅಂತು. "ಮಗನೇ, ನಿನ್ ಅಪ್ಪದಿರ್ ಸತ್ತ ಮೇನ್ ನಾ ಉಗ್ರೇ ತೆಗಿಲಿಲ್ಲಾ" ಅದ್ರ್ ಬಾಯ್ ವಾಸ್ಣ. ಹುಲಿಗೆ, "ಅವ್ವಾ ನೀ ಮಾತಾಡ್ಬೇಕಿದ್ರೆ ಯೆಂತಕ್ ಇಂತಾ ವಾಸ್ಣ ಬತ್ತದ್ಯೆ?" ಅಂತು. "ಮಗನೇ, ನಿಮ್ ಅಪ್ಪದಿರ್ ಸತ್ ಮೇನ್ ವಂದ್ ಕವ್ಳಾ ಹಾಕಲಿಲ್ಲಾ. ಹಲ್ಬೋಟ್ಲಯಾಗಿತ್ತು ತನ್ಗೆ. ಬಾಯ್ ವಾಸ್ಣ" ಅಂತು.

ಆವಾಗ, "ಅವ್ವಾ, ನಿನ್ ಮೈಯೆಲ್ಲಾ ಯೆಂತಕ್ ಹೀಂಗ್ ರೊಣ್ಯೇ? ರೊಣಿ ರೊಣಿ ಸಿಕ್ತದ್ಯೆಲ್ಲೇ ಕೈಗೆ? ಹೀಂಗ್ ಯೆಂತಕೆ?" ಅಂತು. "ನಿನ್ನ ಅಪ್ಪದಿರ್ ಸತ್ ಮೇನೆ ಯೆಣ್ಣಿ ಹಾಕಲೆಲ್ಲ. ಮಂಡೆ ಬಾಚಲೆಲ್ಲ. ಅದ್ಕೆ ತನ್ಗ್ ಹೀಗ್ಯೆಲ್ಲಾ ಆಗದೆ" ಅಂತು. ಹಾಂಗ್ ಹೇಳ್ತಾ ಹೇಳ್ತಾ ಇರ್ಬೇಕಾರೆ ಜೆನ್ಯಾಗ್ ವಂದ್ ಹುಡ್ಗ ಹುಟ್ದ. ಹುಡ್ಗ ಹುಟ್ದ ತಾಸಿಗ್ ಯೇನಾಯ್ತು? ತೆಳ್ಕಂಡ್ತು. ಹುಲಿ ಬರ್ಗೆದ್ದೂ ಶಿಸ್ವ. ಅವ ಕೂಗ್ದ.

ಇದು ಅವಿಕಲಿ ದೀಪ ಕಳ್ಗ ಅಂತು. (ಇಲ್ಲಿ ದೀಪ ಕಚ್ಚು, ದೀಪ ಹಚ್ಚು ಎಂದಿರಬೇಕು). ಅದ್ ಹೇಳ್ತು. "ಇದ್ ಅಡವಿ ರಾಜ್ಯ. ಜೀವಾತ್ಮ ಬಂದ್ ಹೊಕ್ ಬಿಟ್ರೆ ಯೇನ ಮಾಡ್ತೆ ನೀನು? ದೀಪ ಬೇಡ. ತಾಯೆಲ್ಲ ಮಾಡ್ತೆ ಈ ಕೆಲ್ಸವ" ಅಂತು. ಆವಾಗೆ ಮಲೆತು ಬಿತ್ತು. ವಟ್ಟೊ ಬರ್ಗೆತು ಹುಲಿ.

ಈ ಹೆಂಗ್ಸು ಯೇನ್ ಮಾಡ್ಬಿಟ್ತು? ಆಶಿಸ ಹಗೂರಕ ತನ್ಬದಿ ಬರಿಕಂಡ್ತು. ಬಾಳಂತಿ ಶಿಸಾ ತಕಂಡ್ತೋ ಇಲಾ? ತಾಯ್ನ ಹತ್ರ, "ಇದೆಲ್ಲಾ ಮಲೆತ್ ಗಿಲೆತ್ ಯೆಲ್ಲಾ ತಕಂಡ್ ಹೋಗಿ ವಂದ್ ಬಾಳಿಕುಪ್ಪೀಲಿ ಹುಗ್ದ್ ಬಾ" ಅಂತು. ಕಡೀಗ್ ದೀಪ ಕತ್ಸಿ ನಿರ್‌ಗೀರ್ ಕಾಸು ಅಂತು. ಆವಾಗ್ ಅದ್ಯೇನ್ ಮಾಡ್ತು? ಯೆಲ್ಲಾ ಬರಿಕಂತು. ಬಾಳಿಕುಪ್ಪಿಲ್ ಹೋಗ್ ಕೂತ್ಕಂಡ್ ತಿಂತದೆ. ಬೇಜಾರ ಸುರವಾದಾಗ ಜೀವ್ದ್ ಗಾಬ್ರಿಗೆ ಹೆಂಗ್ಸೂಗೆ ತೆಳಿಲೆ ಇಲ್ಲ. ಯಾರಾದ್ರೂ ಬಂದ್ರ್ ಸಾಕಾಗಿತ್ತು. ಬಾಳಿಕುಪ್ಪಿಲ್ ಹೋಗ್ ಕೂರ್ವಟ್ನಗೆ ಶಿಸ ಅಪ್ಪಿಡಕಂತು.

ಹೀಂಗ್ ಹೋಗಿ ಇದ್ ಯೇನ್ ಮಾಡ್ತದೆ ಹೇಳದ್ರೆ ಅರ್ಗ್ ನೋಡ್ತು. ಅರ್ಗ್ ನೋಡ್ಬೇಕಿದ್ರೆ ಇದ್ ಹುಲಿ ಮಲತ್ ತಿಂದ್ ವಳ್ಗ್ ಬರೂಕ ತಯಾರಾಗದೆ.

ವಳ್ಗೆ ಕಲ್ನ್ ಕದಾಗಿತ್ತು. ಕದ ತೆಗಿತು. ವಳ್ಗ್ ಹೊಕ್ಕಂತು. ಕದಹಾಕ್ದ್ ಮೇನೆ ಅಟ್ಟದ ಮೇನೆ ಕದಹಾಕ ಹೋಗಿ ಕೂತುಬಿಟ್ತು. ಅವಾಗಿದ ಮಲೆತು ತಿಂದ್ಗಿಂದ್ಕ ಬಂತು ಮತ್ತೆ ಇಲ್ಲಿ ಬಂದ್ಕಂಡಿ, "ಮಗನೇ... ಮಗನೇ... ಮಗನೇ" ಅಂತದೆ ಹುಲಿ.

ಇದ್ಯೆಲ್ ಮಾತಾಡ್ತದೆ? ವಂದ್ ಬದಿಗೆ ಕದ ಹಾಕಿ ಅಡಿಕ ಕುಂತ ಬಿಡ್ತದೆ. ಹುಲಿಕೈಲ್ ಕದ ತೆಗೂಕಾಗ್ಲೇ ಇಲ್ಲ. ಬಾಳಟ್ ಹೇಳ್ತು, "ಯೇ ಮಗಳೇ, ತನ್ ಉಗ್ರ್ ನೋಡ್ಕಂಡ್ ಹೆದ್ರ್ದ್ಯಾ? ತನ್ ಮೈ ನೋಡ್ಕಂಡ್ ಹೆದ್ರ್ದ್ಯಾ? ಯೆಲ್ ಹೋದೆ? ಬಾ. ತಾ ಯಾರು ಹೇಳ್ ಮಾಡ್ದೆ? ನಿನ್ ತಾಯೇಯ ನಾನು ಮತ್ ಬಾ ಮಗನೇ ದೀಪ ಕಶ್ತಿ" ಅಂದ್ ಬಾಳ್ ಹೇಳ್ತದೆ.

"ಬಾಲಿ ವಂದ್ ಮೀಸ್ ಚೊಕ್ಮಾಡ್ಸು, ಹುಟ್ದ ಬಾಲಿ ಹಾಂಗೇ ಇರ್ಸೂಕಾಗ" ಅಂತದೆ. ಯೇನ್ ಹೇಳದ್ರೂ ಇದ್ ಕದ ತೆಗ್ವದೆಲ್ಲ.

"ಕದತೆಗಿ ಮಗನೆ, ನಿನ್ ಅವ್ವಿ ನಾನು" ರಾಶಿ ಬಾಳ ಬಾಳ ಹೇಳ್ತು. ಯೇನ್ ಮಾಡ್ರು ಇದ್ ಬರ್ಲಿಲ್ಲ. ಬೆಳ್ಗಾಗ್ ಬಂದ್ ಹೋಯ್ತು. ಹುಲಿ, "ನೀನ್ ಈ ನಮೂನಿ ವಳ್ಗ್ ಹೊಕ್ಕಂಡ್ ಕದ ಹಾಕಂತೆ ಹೇಳ್ ಗುತ್ತಿದ್ರೆ ನಾ ಆವಾಗೆ ನಿನ್ ತಿಂದ್ ಬಿಡ್ತಿದೆ" ಅಂತು. ಬೆಳಗಾತ್ಲೆ ಹೇಳ್ತು. "ಈಗ ನೀನು ನನ್ ಕೈಲ್ ಪರಾಮಶಿಲ್ ತಪ್ ಹೋದೆ. ಮತ್ತೆ ನೀನು ಸರ್ತ ನೋಡು ತನ್ನಾ. ನೀ ಹೆಂಗೂ ಇಲ್ಲೇ ಇರ್ತೆ. ಮೂರ್ ದಿವ್ಸವಳ್ಗೆ ಯಾವ್ ಹೊತ್ನಲ್ಲಾರೂ ಯಾವ್ ಪಾಯನಲ್ಲಾರೂ ಬಂದ್ ನಿನ್ನ, ನಿನ್ ಬಾಲ್ಯ ತಿಂದೇ ತೀರ್ತೆ" ಅಂತು. ಅಟ್ ಹೇಳ್ತು ಬೆಳಕಾಯ್ತು ಹೇಳ್ ನೆಡ್ದೆ ಬಿಡ್ತು.

ಆವಾಗಿದು ಕೂತಲಿದ್ದ ಯೆಳ್ಳೆಲ್ಲ. ಕದನೇ ತೆಗಿಲೆಲ್ಲ. ಸುಮಾರ್ ಯೆಂಟ್ ಗೆಂಟ್ಯಾಯ್ತು. ಗಂಡ ಅಲ್ಲಿ ಹೋದವ, 'ತನ್ ಹಿಂಡ್ತಿ ಗರ್ಬಿಣಿತ್ತು. ಯಾವ್ ನಮೂನ್ಯಾಯ್ತೊ?' ಹೇಳು ಜಾನ್ದಲ್ ಬಂದೇ ಬಿಟ್ಟ. ಬಂದ್ಕ ಮನಿ ಬಂದ್ ನೋಡುವರಿಗೇಯ ಅವ ವಂದ್ಸಲವಾ ಕಣ್ಮೊರೆ ಕತ್ಲೆಯಾಕಂಡ್ ಬಿದ್ ಬಿಟ್ಟ.

ಯೆಲ್ಲಾ ಗಲಿಜು ಹೊಳ್ಳಿ ಮೇಲೆಲ್ಲಾವಾ. 'ಯೇನೊ ತನ್ ಹಿಂಡ್ತಿ ತಿಂದ್ಕಂಡ್ ಹೋಯ್ತು' ಹೇಳ್ ಮಾಡ್ದ. ಮೂರ್ಚೆಯಾಗ್ ಬಿದ್ ಬಿಟ್ಟ. ಕಡಿಗ್ ಯೆಚರಾಗ್ ಹಿಂಡ್ತಿ ಕರ್ದ. ಕರದ್ರಾ ಹಿಂಡ್ತಿ ಹುಲಿನೇಯ ಅಂದ್ ಹೆದ್ರ್ ಬಿಟ್ಟದೆ. ಕದನೇ ತೆಗುದಿಲ್ಲ. ಆವಾಗೆ ಹೇಂಗಾದ್ರೂ ತನ್ ಹಿಂಡ್ತಿ ಹುಲಿ ಜೀವಾತ್ಮಾ ತಿಂದ್ಕ ಹೋಯ್ತೊ ಹೇಳಿ ಹಾರೆಲಿ ಕಲ್ ಕದ ವಡ್ದಾ. ವಡ್ದ್ ವಳ್ಗ್ ಹೋದ. ಯೆಲ್ಲೂ ಯೆಲ್ಲಾ. ಆಗ್ ಅಟ್ಟ ಹತ್ತೂವರಿಗೆ ಯೆದ್ದು ನೋಡ್ಕಂಡಿ. "ತಾನು ಇಲ್ಲೇ ಇದ್ದೆ. ಹೊಡೂ ಮಾತಾಡ್ಬೇಡಿ" ಹೇಳ್ ಕೈಸನ್ನೆ ಮಾಡ್ತದೆ. ಆವಾಗ್, "ಯೇನಾಯ್ತು?" ಕೇಳ್ದ. ಆವಾಗ್ ಹೇಳ್ತು. "ಯೇನಾದ್ರೂವ ತಾನು ಹೇಳ್ತೆ. ಈಗ ಹೇಳೂಕೆ ಸಾದ್ದಿಲ್ಲ. ನಾವ್ ನೆರೆ ಹೊರಿ ಇದ್ದಲ್, ಮೊದ್ಲ್ ಇದ್ದಲ್ ಹೋಗ್ವನಿ ಕಡಿಗೆ ಹೇಳ್ತೆ" ಅಂತು.

"ನೀನು ಇಲ್ ಬರ್ಬೇಕು" ಅಂದೆ. "ನಾ ಬಂದೆ." "ಈಗ ಮತ್ ನೆರೆಹೊರಿದ್ದಲ್ಲಿ ಹೋದ್ರೆ ಹೆಂಗಾತದೆ?" ಅಂದ ಅವ. "ನೆರೆಹೊರ್ಯೋರ್ಗೆ ಪಾಲ್ ಕೊಟ್ರೂ ಅಡ್ಡಿಲ್ಲ. ಅವ್ರ್ ಯೇನಾದ್ರೂ ಕಡ ತಕಂಡ್ ಹೋದ್ರ ಅಡ್ಡಿಲ್ಲ. ಮಿಕನ ತಕಂಡ್ ಹೋದ್ರೂ ಅಡ್ಡೆಲ್ಲ. ನೆರ್ ಹೊರಿದ್ದಲ್ಲೆ ಹೋಗ್ವ. ಆತು ಹೆದ್ರಬೇಡ ಹೇಳು" ಅಂದ್ ಹೇಳಿ, ಕೆಳ್ಗೆ ಕರ್ಕ ಬತ್ತ ಅವ. ಆವಾಗ್ ಹೇಳ್ತು. ರಾತ್ರಿ ತನ್ಗ್ ಬೇಜಾರ್ ಸುರ್ವಾಯ್ತು. ಯಾರೂ ಯೆಲ್ಲದೆ ಅವ್ವಿ ನನ್ನ ಬಿಟ್ಟೆ. 'ಅವ್ವಾ, ಅವ್ವ' ಅಂದಿ ಅವ್ವಿ ಕರಿಬೇಕಿದ್ರೆ ವಂದ್ ಹುಲಿ ಬಂದ್ಕಂಡಿ ಕರ್ದ ಬಿಡ್ತು. ತಾನು ತಾಯಿ ಅಂದೆ ಮಾಡ್ಕಂಬಿಟ್ಟೆ. ತಾ ಹೋಗ್ ಅದ್ರ ಹಿಡ್ದ್ ಬಿಟ್ಟೆ. ಆವಾಗದು ನನ್ ಹಿಡಿತ್ನೆ ತನ್ನ ಮೈಲೆಲ್ಲಾ ಶಿಗ್ದ ಶಿಗ್ದ ಹೋಗದೆ ತಾ ಕೇಳ್ತೆ (ತಾನು ಮತ್ತು ಹುಲಿಯು ಮಾತಾಡಿದ್ದನ್ನು ಹೇಳಿದಳು.).

ಶರ್ತ ಇಟ್ ಹೋಯ್ತು. "ಈಗ ತಪದ್ರೂ ಮೂರ್ ದಿನದಾಗೆ ನಿನ್ನ ನಿನ್ನ ಬಾಲಿಯ ಮುರ್ದ್ ತಿಂದ್ ಹೋಗ್ವೆ. ಈ ನಮೂನಿ ನೀ ವಳ್ಗ್ ಹೊಕ್ಕತೆ ಹೇಳಿದ್ರೆ ನಿನ್ನ ಮುಂಚೆ ತಿಂತಿದ್ದೆ" ಅಂದ್ ಹೇಳ್ ಹೋಗದೆ. "ಅದ್ರ ಸಲ್ವಾಗೆ ಯಾರ ಕಡ ಬೇಡೂಕ್ ಅವ್ರ್ ಬರ್ಲಿ, ಯೇನೆ ಮಾಡ್ಲಿ ನೆರೆ ಹೊರಿದ್ದಲ್ ತಕಂಡ್ ಹೋಗ್ ಹಾಕು ಬೆಟ್ಟದ ಬುಡ್ಕೆ" ಅಂತದೆ. ಅದೆಲ್ ಗಂಡ ಕೇಳ್ಕಂಡಿ ಶಿಟ್ನಿಂದ್ ಕರ್ಕ ಬತ್ತ. ನಂತ್ರದಲ್ಲವ್ರು, ನೆರೆಹೊರೆಯೋರ್ ಜೊತೆ ಕೂಡಾಡ್ಕಂಡಿ ಸುಖಸಂತೋಶದಾಗ್ ವಳದ್ರು.

- **ಕೆಲವು ಪದಗಳ ವಿವರಣೆ**

ಜೀವಾದಿ, ಜೀವಾತ್ಮ = ಪ್ರಾಣ

ಬಗಿಲಿ = ಸ್ವಲ್ಪ

ಮಲೆತು = ಕರುಳಬಳ್ಳಿ

ಬಗ್ಗಿ = ಬಾಗಿ

ಸರ್ತ = ಶರ್ತ , ಪ್ರತಿಜ್ಞೆ

ಶಿಗ್ದು = ಸೀಳಿ

ಬಾಳ = ಬಹಳ ಪ್ರೀತಿಯವರು ಎಂದು ತಿಳಿಯಬೇಕು.

ಪೋಟ್ಲ = ಕುರ, ರಸಿಗೆ ಪೊಟ್ಟಣ

ಬರ್ಕತ್ನೆ = ಬರಗಿಕೊಳ್ಳುತ್ತ, ಕೈಯಿಂದ ಸವರು

ಅರ್ಗ್ = ಎರಗಿ

ಪರಾಮಶಿ = ತಿಳಿಯದೇ ಆದ ತಪ್ಪು

ಪಾಯ = ಉಪಾಯ

■ ಹೇಳಿದವರು : **ಸೌ| ಮಾಸ್ತಿ ಕೊಂ. ರಾಮ ನಾಯ್ಕ,** ಮುರೂರು.

# ಮಾಟಗಾತಿ ರಾಕ್ಷಸಿ

ಒಂದೂರ್ನಲ್ಲಿ ಒಂದು ಹೆಂಗ್ಸಿತ್ತು. ದಿನಾ ಆಕ್ಳ, ಆಕ್ಳ ಕರುನ ಮೇಶ್ವಕೆ ಹೊಗತಿತ್ತು. ಒಂದ್ ದಿನ ಆಕ್ಳ ಮೇಶ್ವಕ್ ಹೋಯ್ತು. ಅರ್ದ್ ಬಂದ್ ಕೂಡ್ಲೇ ಆಕ್ಳ, ಆಕ್ಳ ಕರ ಅಲ್ಲೇ ಮೇಯ್ತಾ ಉಳಿತು. ಅಲ್ಲೊಂದು ಹುಲಿ ಮರಿ ಹಾಕೀತು. ಹುಲಿ ಬೆಟ್ಟ ಬಿದ್ ಹೋಯ್ತು. ಆಕ್ಳ್ ಇತ್ಲಾಗ್ ಊರ್ ಬದಿ ಸೇರ್ತುರ್. ಆಕ್ಳಕರ, ಹುಲಿಕರ ವಂದ್ ಜ್ಯೋಂಟಾಯ್ತು. ಆದ್ ಕೂಡ್ಲೇಯ "ನೀ ಅಣ್ಣ, ನಾ ತಮ್ಮ" ಹೇಳಾಡ್ರು. ಆವಾಗೆ ಹುಲಿ ಮರಿ ಯೇನ ಮಾಡ್ತೂ? ಆಕ್ಳಕರನೂ ದೊಡ್ಡಾಯ್ತು. ಹುಲಿ ಮರಿನೂ, "ಅಣ್ಣಾ ನನ್ ಅಬ್ಬಿ ಬಂದ್ರೆ ನಿನ್ ತಿಂದ್ ಬಿಡ್ತದೆ. ಈಗ ಯೇನ್ ಮಾಡ್ಬೇಕಾಯ್ತು? ತನ್ನಬ್ಬಿ ವಂದ್ ಕೊಂದೇ ಬಿಡಬೇಕು. ಆವಾಗೆ ತಾನು ತನ್ನಬ್ಬಿ ವಂದ್ ಕೊಂದ್ ಬತ್ತೆ. ನಾನು ನೀನು ಲಾಯ್ಕಾಗೆ ಉಳುಕಾಯ್ತು" ಅಂತದೆ. ಆವಾಗೆ ಇದು ಅಬ್ಬಿ ಕೈಲ್ ಹೋಕಂಡ್ ಹೇಳ್ತು. "ನೀನು ಅತ್ಲಾಗ್ ಉಳಿತೆ. ನಾನು ಹೀಗೆ ಇತ್ಲಾಗ್ ಉಳಿತೆ. ನೀನು ನನ್ನ ಅಬ್ಬಿ. ನನ್ಗ್ ಹೆಂಗ್ ಕಲಿಸ್ತೆ? ನಾನು ಹೊಟ್ಟೆಗ್ ಆಯಾರ ತಿಂಬೂದ್ಯೆಂತದು? ಯಾವ್ ನಮೂನಿ ಮಾಂಸಾಹಾರ ತಿಂದ್ಕಂಡ್ ನಾ ದೊಡ್ಡಾಗ್‌ಬೇಕು? ಕಲಿಸು ನೀ ನನ್ಗೆ" ಅಂತು. ಅಂಬೂದಟ್ಕೆ ಇದ್ ಯೇನ್ ಮಾಡ್ಬಿಡ್ತು? ಈಚ್ ಹಾರ್ವದೊ ಆಚ್ ಹಾರ್ವದೊ ಹಾರಾಡಿ ಇದ್ಕ್ ಕಲಿಸ್ತು. ಆವಾಗ್, "ಯೇನ್ ಹಗರ್ ತಾನು ಯಲ್ಲಾರೂ ವಂದ್ ಆಯಾರ ಶಿಕ್ ಬಿಟ್ರೆ ನಾ ಬಾಯ್ ಹಾಕ್ ಮುರ್ವದೆಯೆಲ್ಲಾಯ್ತು" ಕೇಳ್ತು. ಆವಾಗ್ ಇದ್ಯೇನಂತು? ಇದ್ ಕುಸ್ತಿ ಮಾಡಿ, ಮರಿ ಕುತ್ಗಿ ಮ್ಯಾಳೆಗೆ (ಮ್ಯಾಳಿ) ಬಾಯ್ ಹಾಕಿ, "ಮುರಿದ್ ತಿನ್ಬೇಕು" ಹೇಳಿ ಮರಿಗ್ ಹೇಳ್ತು. ಮರಿಯೇನ್ ಹೇಳ್ತು? "ನೋಡ್ವ ಹಂಗರ್, ನೀ ಕೂತ್ಕ, ನಾನು ಮುರ್ವದ್ ಹ್ಯಾಂಗೆ ಹೇಳ್ ನಾ ಮಾಡ್ತೆ ನೀನು ತೋರ್ಸಿಕೊಡ್ಲಕ್ಕೂ ಹಾಗಲ್ಲದಿದ್ರೆ" ಅಂತು.

ಅಬ್ಬಿ ಮರಿ ಕುಸ್ತಿ ಮಾಡ್ತು. ಈಚ್ ಹಾರೂದು ಆಚ್ ಹಾರೂದು ಕುತ್ಗಿ ಮೇನ್ ಕುಳ್ಳೂದು ಹೀಗ್ ಮಾಡ್ತು. ಆವಾಗೆ ಅಬ್ಬೆ ಕುಸ್ತಿ ಮಾಡ್ತ ಇರಬೇಕಾರೆ ಬಂದ್ ಬಂದ ಮೇನೆ ಅಬ್ಬಿ ಕುತ್ಗಿ ಮ್ಯಾಳಿಗೆ ಬಾಯಿ ಹಾಕಿ ಮುರ್ದೆ ಬಿಡ್ತು. ಅಬ್ಬೆ ಶತ್ ಹೋಯ್ತು. ಅಬ್ಬೆ ಶತ್ ಹೋಗುರಟ್ಕೆ ಇದೂ ಆಕ್ಳ ಕರುದ ಹತ್ರ ಬಂತು ಹುಲಿಮರಿ.

"ಯೇನ್ ಇಷ್ಟೊತ್ತಾಯ್ತು?" "ಅಬ್ಬಿ ಅಂತೂ ಕೊಂದ್ ಹಾಕ್ ಬಂದ್ ಬಿಟ್ಟೆ. ಯೇನ್ ನಾನೂ ನೀನೂವ ಯೆಲ್ಲಾದ್ರೂ ವಂದ್ ಊರ್ ಸೇರ್ ಬೇಕಾಯ್ತಲ. ನಮ್ಗ್ ಹೊಟ್ಟೆಗ್ ಬೇಕು" ಅಂದೇಳಿ, "ನೀನೇ ಅಣ್ಣ (ಹುಲಿಮರಿ) ಆಕ್ಳಮರಿ ತಮ್ಮ" ಅಂದ್ ಹೇಳ್ ಮಾಡ್ಕಂಡ್ ವಂದ್ ದಾರಿ ಹಿಡ್ಕಂಡ್ ಹೋದ್ರು ಅವ್ರು. ಹೋಗಿ ನೆಡ್ದಿ ನೆಡ್ದಿ ಸಾಕಾಗೋಯ್ತು. ಆಕ್ಳ ಸೊಪ್ಪುಸದೆ ತಿಂದ್ಕಂತ್ ಹೋತದೆ. ಹುಲಿಗೇನೂ ಆಯಾರಿಲ್ಲ. ವಂದ್ ಸುಮಾರ್ದ್ ಅಡವೀಲಿ ವಂದ್ ಅರ್ಧ ಕೊಡಪಾನ ನೀರ್ ವಂದ್ ಹೊಂಡ್ದಗದೆ. ಆವಾಗ್ಗೇನೆ ಹುಲಿ ಮೊದ್ಲು ಕುಡಿದ್ರೆ ಬಾಕಿ ಇದ್ರೆ ಆಕ್ಳ ಕರ ಕುಡ್ದ್ರೆ ಆಕ್ಳ ಕರ ಸತ್ ಹೋತದೆ. ಹುಲಿ ಮೀಸೆ ಇಸವಂತೆ ಆಯ್ತು.

ಆಕ್ಳ ಕುಡ್ದ್ರೆ ಅದ್ರ ಮೋರ್ ಬಿಡ್ತದೆ. ಹುಲಿಗಿಲ್ಲ ನೀರು. ಹೀಗೆ ಹೇಳಾಡ್ತಾ ಹೇಳಾಡ್ತಾ ನಿತ್ರು. ವಂದ್ ತಾಸ್ ನಿತ್ರು. ಆವಾಗಿನ್ನ, "ಯೇನೂ ಆಕಂಡ ಹೋಕಳ್ಳಿ ನಾವ್ ವಂದಂದ್

ಗುಟ್ಕ್ ಕುಡ್ವ" ಅಂದ್ ಹೇಳ್ ಯೆಯ್ಡೂ ಜನ ಬಾಯ್ ಹಾಕ್ರು ಆ ಹೊಂಡಕೆ. ಅದ ಕುಡೀತೇ ಇದ್ರು. ಕುಡಿತ್ರು. ಇದು ಯೆಯ್ಡೂ ಕುಡ್ದ್ ಕೂಡ್ಲೇ ಯೆಯ್ಡೂ ಸಾಪ್ ಮನ್ಸರಾಗ್ ಹೋದ್ರು. "ಪರಮಾತ್ಮ ನಮ್ಗ್ ಯೇನ್ ಈ ಮನ್ಸರ್ ಜನ್ಮಕ್ ಹಾಕನೆ. ಈವಾಗಿಂದ ನಾವ್ ಹೇಗಾದ್ರೂವ ಯೆಲ್ಲಾರೂ ಊರ ಮೇನ್ ಸೇರಬೇಕು" ಹೇಳಿ ದಾರಿ ಹಿಡ್ದ್ ಹೋದ್ರು.

ಅಲ್ಲೊಂದ್ ರಶ್ತಿ ಶಿಕತು.ಆ ರಶ್ತಿ ಹಿಡ್ಕಂಡ್ ಹೋಬೇಕು. ಅದ್‌ಕೆ ಅಲ್ಲೊಂದು ಇಲ್ಲೊಂದು ಯೆಯ್ಡ ಕವರಾಗೀತು. ಆಗ, "ತಮ್ಮಾ" ಅಂತು. ಅವ್ "ಹೂಂ" ಹಾಕ್ದ. "ನಾವ್ ಯೆಯ್ಡೂ ಜನ ಪರದಾರೀಲ್ ಹೋದ್ರೂ. ನಮ್ಗೆ ಯಾವ್ದೂ ಕಾಂಬೂದೆಲ್ಲ. ನಾನು ಈ ದಾರಿಲ್ ಹೋತೆ, ನೀನು ಆ ದಾರಿಲ್ ಹೋಗು. ನಂದು ನಿಂದು ಋಣ ಇದ್ರೆ ಯಾವ್ ಕಾಲ್ಕೂ ನಾವ್ ಸಿಕ್ಕೂರು. ಆವಾಗ್ ನೀ ವಂದ್ ರಾಜಿದಾಗ್ ನಾ ವಂದ್ ರಾಜಿದಾಗ್ ಉಳಿದ್ರೆ ನಂಗ್ಯೇನಾರೂ ಆದ್ರೆ ನಿಂಗ್ ತೆಳೂದ್ ಹೇಗೆ? ನಿಂಗೇನಾರೂ ಆದ್ರೆ ನಂಗ್ ತೆಳ್ವದ್ ಹೇಗೆ?"

"ನೀನು ವಂದ್ ತೊಳ್ಚಿಗಿಡ ನೆಡಬೇಕು. ನನ್ ಹೆಸ್ರನ ಮೇನೆ. ನಿನ್ನ ಹೆಸ್ರನ ಮೇನೆ ನಾ ವಂದ್ ತೊಳ್ಚಿ ಗಿಡ ನೆಟ್ಕಂತೆ. ನಾ ಇದ್ದಲ್ಲಿ ನನ್ಗ್ ಯೆಂತಾರೂ ಆದ್ರೆ ನೀ ನೆಟ್ಟದ್ದು ಆ ತೊಳ್ಚಿಗಿಡ ಬಾಡ್ತದೆ. ನಿನ್ಗೆ ಯೇನಾರೂ ಆದ್ರೆ ನಾ ನೆಟ್ ತೊಳ್ಚಿಗಿಡ ಬಾಡ್ತದೆ. ಆವಾಗ ನಮ್ಗ್ ತೆಳಿಬೇಕಾಯ್ತು" ಅಣ್ಣ-ತಮ್ಮ ಮಾತಾಡ್ಕಂಡ್ರು.

ಅಣ್ಣ ವಂದ್ ದಾರಿಲಿ, ತಮ್ಮ ವಂದ್ ದಾರಿಲಿ ಹೋದ್ರು. ಅಣ್ಗೆ ವಂದ್ ರಾಜಿದಲ್ ವಂದ್ ಅರ್ಸುಮನ್ ಸಿಕ್ ಗನಾ ರಾಜ್ಯ ಆಳ್ಕೋತ್ ವಳ್ಕಂಬಿಟ್ಟ. ತಮ್ಗೂ ಹಾಂಗೇ ಆಗ್ ಹೋಯ್ತು. ವಂದ್ ರಾಜಸ್ತನ್ ಸಿಕ್ಕಿ ಮನೆ ಮಾಡ್ಕಂಡ್ ಹಿಂಡ್ರು ಮಕ್ಕ ಮಾಡ್ಕಂಡ್ ವಳ್ಕಂ ಬಿಟ್ಟ.

ತಮ್ ಯೇನ್ ಮಾಡ್ಬಿಟ್ಟ ಇತ್ಲಾಗಿ? ತಾನು ವಂದ್ ರಾಜಿಗ್ ಹೋಗ್ ಬರೂ ಕೆಲ್ಸ ಹೋಗಬೇಕು ಹೇಳಿ ವಂದ್ ಕಡ್ಗ್ ಹೋದ. ಅಲ್ ಅವ ಹೋಗಿ ಸುಮಾರ್ಕೆ ಹೋಗುತವಾ ವಂದ್ ಕೆಪ್ ಶಿಕ್ದ. ಅವ ಯೇನ್ ಹೇಳ್ದ? "ಸ್ವಾಮಿ ನೀವ್ ಯೆಲ್ ಹೋತ್ರಿ? ನಿಮ್ ನೋಡ್ರೆ ಬಾಳ್ ಶಿಂಗಾರ್ತನ ಕಾಣ್ತದೆ. ಅಲ್ಲಿ ನೀವ್ ವಂದೂವರೆ ಮೈಲ್ ಹೋದ ಕೂಡ್ಲೆಯ ವಂದ್ ಕಟ್ವದೆ. ಕಟ್ವೆಲಿ ವಂದ್ ಮುರ್ಗದೆ. ನಾವೀ ದಾರೀಲಿ ಹೋದ್ದೋರಿಗೆ ಯೆಟ್ ಜನ ಕಂಡಿರೋ ಯೇನೋ. ಹಿಂತಿರ್ಗಿ ಬಂದರ್ ಯಾರೂ ನಾವ್ ಕಾಣ್ಣಿಲ್ಲ. ಹೋದ್ದೋರ್ ಬಾಳ ರಾಕಸ್ತಿ ಆ ಕಟ್ಟಿಲ್ ಅದೆ. ಅದು ದಾರಿ ಬದೀಕೆ ಮುರ್ಗೆ ಹಾಗೆ ಮೇಯ್ತದೆ. ಈಗೀ ದಾರಿಲ್ ಹೋದರು, ಅವ್ರ ಹೊಡುಕ್ ಹೋದ್ ಕೂಡ್ಲೆಯ ಯೇನ್ ಮಾಡ್ರೂ ಹೊಡೂಕ್ ಶಿಕ್ಕೂದಿಲ್ಲ. ಅದು ಸರ್ಗುಟ್ಕಂಡ್ ಹೋಗಿ ಕಟ್ಟಿ ಹತ್ ಬಿಡ್ತದೆ. ಹತ್ದ್ ಕೂಡ್ಲೇ ಇವ್ರ ಅದ್ರ ಹೊಡೂಕ್ ಹೋಗತ್ರೋ ಇಲ್ಲಾ? ಕಟ್ಟಿಗ್ ಮೇಲ್ ತಕಂಡು ಕಟ್ಟಿನ್‌ವಳ್ಗೆ ಶೇರ್ ಬಿಡ್ತದೆ. ಅದೇ ನಮೂನಿ ಮಾಡಿ ನೂರ್ ಜನ ಅದ್ರ ವಸ ಮಾಡ್ಕಂ ಬಿಟ್ಟದೆ. ತಿಂಬೂದೆಲ್ಲ." ಕುಡ್ಗ ಮುಂದೆ ಹೋದ. ಹೊಗೂರೊಳ್ಗ ಒಬ್ಬ ಕುರ್ದ ಶಿಕ್ದ. ಅವ್ನೂ ಹಾಂಗೇ ಹೇಳ್ದ. ಆವಾಗೆ ಆದ್ರೂ

ಮುಂದೆ ಹೋದ. ಮುರ್ಗನ್ ಹೊಡೂಕ್ ತಯಾರ್ ಮಾಡ್ದ. ಅದ್ ಕಟ್ಟಿ ಹತ್ಕ ಬಿಡ್ತು. ಇವ್ನ ಹೋಗ್ ಕಟ್ಟಿ ಹತ್ದ ಇವ್ನ ವಗ್ದಿ ಕಟ್ಟಿನ್ ವಳ್ಗ ಶೇರ್ಸ ಬಿಡ್ತು.

ಅಣ್ಣ-ತಮ್ಮ ಹಳ್ಳೀಲಿ ಹೆಸ್ರೇಳಿ ತೊಳ್ಚಿಗಿಡ ನೆಟ್ಟಿದ್ರು. ತಮ್ಮನ್ ತೊಳ್ಚಿಗಿಡ ಬಾಡ್ ಹೋಯ್ತು. ಅವಂಗ್ ತರಾಸ್ ಬಂತು ಹೇಳಿ ಅಣ್ಣಂಗ್ ಗುತ್ತಾಯ್ತು. ಆವಾಗೆ ಬೆಳ್ಗಾಗ್ಯೆದ್ದಿ ನೋಡ್ದ. "ಹೇ ನನ್ ತಮ್ಗ ಮೋಸಾಯ್ತು" ಅಂದ. ಅವನ್ ಕೈಲ್ ವಂದ್ ಮಾಯದ ಬೆತ್ತ ಇತ್ತು. ಅವನೇ ಮಾಡಿದ್ದ. ಅದ್ರ ವಂದ್ ಹಿಡ್ಕಂದ್ ಸೀದಾ ದಾರಿ ಹಿಡ್ದ. ವಂದ್ ಕರ್ವನಲ್ ಯೆಯ್ಡ್ ಜನ ತಿರ್ಗ ಹೋಗಿರು, ನೋಡಿ ಅಲ್ ಬಂದಿ, ಅಲ್ ತಮ್ ಹೋದ್ ದಾರಿ ಹಿಡ್ಕ ಹೋದ. ಆಗ ಕೆಪ್ಪ ಅಲ್ ಶಿಕ್ದ ಅವಗೆ. ಕೆಪ್ಪ ಆಗ್ ಹೇಳ್ಕೆ ಹೇಳ್ತ. "ಇಟ್ ಹೊತ್ನಲ್ಲೆ ನಿಮ್ಮ ಕಂಡಂಗೇ ಕಾಣ್ತ. ಹೋಗಿದ್ದ. ಬರಲೆಲ್ಲ. ಹೀಗಿಗ್ ಹೀಗೆ ಮುರ್ಗ ಮಾಡ್ತದೆ" ಹೇಳಿ ಕೆಪ್ಪ ಹೇಳಿ ಮುಂದೆ ಹೋಗುರೊಳ್ಗೆ ಕುರ್ಡನೂ ಹೇಳ್ದ.

ಆವಾಗಿವ ಹೋದ ಮುಂದೆ. ವೋ ಅಟ್ ದೂರ ಕಟ್ಟದೆ ಅಂಬಾಗೆ ಮೇಯ್ತದೆ ಅಟ್ ಚಂದ ಮುರ್ಗ ಯಾರೂ ಹೋದ್ರು ನೋಡ್ವ ಅಂಬಾಗ್ ಕಾಣ್ತದೆ. ಆವಾಗ್ ಹೋಗುತನಾ ಅದ್ಕೆ ಬಾಳ್ ಬೆರ್ಸದ, ಆದ್ರ ಹೊಡಿಬೇಕು ಹೇಳಿ ಮಾಡಿದ್ರೆ ಹೋಗ್ ಹೋಗ್ ಹೋಗಿ ಆ ಕಟ್ಟಿ ಹತ್ ಬಿಡ್ತು ಅದು. ಇವ ಕಟಿ ಹತತದೆ ಅಂಬೂತಾನ ಯೆಕ್ದಂ ಕಾಲ್ ಮೇನ್ ಬಡ ಬಡ ಬಡ ಬಡ ಕೊಟ್ಟ. ಅವಾಗಿದ್ರ ಜುಟ್ಟ ಹಿಡ್ದ್ ಕೊಯ್ದ. "ದಮ್ಮಯ್ಯ, ಯೆ ನರ ಮನಸ್ಯ ದಮ್ಮಯ್ಯಾಗೋದು ನನ್ ಜಲ್ಮ ವಂದ್ ಬಿಟ್ ಕೊಡು" ಅಂತದೆ. ಆವಾಗ, "ನಾ ನಿನ್ ಬಿಟ್ ಕೊಡ್ತೆ ನಿನ್ಗೆ ಯೇನೂ ಮಾಡೂದಿಲ್ಲ. ನೀನು ಇಲ್ಲಿ ಯೆಟ್ ಜನ್ರ ನಿನ್ ವಸ ಮಾಡಿದ್ದೆ ಅಟ್ಟೂ ಜನ್ರ್ನೂ ಬಿಟ್ ಬಿಡ್ಬೇಕು" ಅಂದ. ಆವಾಗ ಬಿಟ್ತು. ಯೆಲ್ಲಾರೂ ಗಡ್ಡ ಬಂದಿ ಹೆರ್ಗ ಬಿದ್ರು, ಕಡಿಗೀ ತಮ್ ಹೆರ್ಗ ಬಿದ್ದ. ಆವಾಗಿವ ತಡ ಮಾಡ್ಲೆಲ್ಲ, ಆದ್ರ ಮೂಗು ಕೊಯ್ದಿ, ಅದ್ರ ಚಂಡ್ಕಿ ಕೊಯ್ದಿ ಅದ್ರ ಕೊಂದೇ ಬಿಟ್ಟ. ಕೊಂದಿ ಯೆಲ್ಲರೂ ಅವ್ರವ್ರ್ ದೇಸ್ಕ ಹೋದ್ರು. ತಮ್ಮನ ಕರಕಂಡ ಬಂದ. ಅವ್ನ ಹತ್ರ ದುಡ್ ಯೇನೂ ಯೆಲ್ಲ.

"ತಮ್ಮ ನೀನು ನನ್ ರಾಜಿ ನೋಡ್ಕ ಬರ್‌ಲಕು ತಾನಿದ್ದಲ್ಲೇಯ" ಅಂದ. ಕರ್ಕಂಡ ಹೋದ ಅಣ್ಣನ ಹಿಂಡ್ತಿ ಮನಿಲಿದ್ಯಲ್ಲ. ಅದ್ಯೇನ ಅಸ್ರ ಹಣ್ಣು ತಂದ್ಕಂಡಿ ಇತ್ಲಾಗ ಗಂಡ್ಯಾರು ಮತ್ತೊಬ್ರ್ ಯಾರು ಹೇಳಿ ಪರ್‌ಸಕ್ಸಿ ಹಿಡುಕಾಗುದೆಲ್ಲ. ಯೆಯ್ಡ್ ಜನ್ರೂ ವಂದೇ ನಮೂನಿ, ಆವಾಗ ಗಂಡ ಹೇಳ್ದ, "ನನ್ ತಮ್ಮ ಅವ ಅವಂಗ್ ಕೊಡು" ಅಂದ ಹೇಳಿ ತೋರ್ಸ್‌ಕೊಟ್ಟ. ತಮ್ಗ ವಂದ ಅಸ್ರ ಕೊಟ್ತು. ಅಣ್ಗೆ ವಂದ್ ಆಸ್ರ ಕೊಟ್ತು. ಅಣ್ಣ ತಮ್ಮ ಅಸ್ರ ಕೊಂಡ್ಕಂಡಿ ಆ ದಿವ್ಸ ಅಲ್ಲೇ ಉಳ್ದ್ರು.

"ಅಣ್ಣಾ ನಾನಿನ್ ರಾಜಿ ತಾ ನೋಡ್ದೆ, ನನ್ ರಾಜಿಕ್ ಹೋತೆ. ನನ್ನ ರಾಜಿಕ ಹೋಗ್ವ" ಕರ್ಕಂಡ ಹೋದ ತಮ್ಮನ ಮನಿಗೆ.

ಅಲ್ಲೂ ಹಾಂಗೇಯ ಅದ್ಕೂ ಗುರ್ತು ಶಿಕ್ಕೂದೆಲ್ಲ. ಆವಾಗ ತಮ್ಮ ಹೇಳ್ದ, "ಅವ ತನ್

ಅಣ್ಣ ಅವಗ ಅಸ್ರ ಕೊಡು" ಕೊಟ್ತು. ಅಣ್ಣ ವಂದ್ ದಿವ್ಸ ಉಳ್ಕಂಡಿ, ಅಣ್ಣ ಅಣ್ಣ ಮನಿಲ್ ಬಂದ. ತಮ್ಮ ತನ್ ಮನಿದ್ ಉಳ್ದ. ಸುಖ-ಸಂತೋಶದಾಗೆ ವಳದ್ರು.

- **ಕೆಲವು ಪದಗಳ ವಿವರಣೆ**

ಮೃಗ = ಚಿಗರೆ

ತೊಳ್ಚಿ = ತುಳಸಿ

ಕರ್ವ್ = ಟಿಸಿಲು

ಜಲ್ಮ = ಜನ್ಮ ಜೀವ

ಪರಸಕ್ತಿ = ಪರೀಕ್ಷೆ

ರಾಜಿ = ರಾಜ್ಯ

ಹೋಗುತನಾ = ಹೋಗುವತನಕ, ಹೋಗುವಷ್ಟರಲ್ಲಿ

■ ಹೇಳಿದವರು: **ಸೌ| ಮಾಸ್ತಿ ಕೋಂ ರಾಮ ನಾಯ್ಕ,** ಮೂರೂರು.

◆

# ಮೀನಿನ ಹುಡುಗಿ

ಒಬ್ಬ ಅಂಬೀರವ ಇದ್ದ. ಚಿಕ್ಕ ಮೀನು ಹಿಡಿತಿದ್ದ ಯೆಯ್ಡ್ ಶಿದ್ದಕ್ಕಿ ಮೀನ ಹಿಡಿತಿದ್ದ ಹಿಡದ್ರೆ ಅಟ್ಟೊ ವಡಿಯಾನ (ಸಾವಕಾರ) ಮನೆಗೆ ಕೊಟ ಹಾಕಿ ಯೆಯ್ಡ್ ಶಿದ್ದಕ್ಕಿ ತಕಂಡ್ ಹೋಕಂಡಿ ಸಂಸಾರ ಮಾಡೂದು. "ನಮ್ಮ ನಶೀಬ್ದದಲ್ಲಿ ವಂದ ಬೆಳಗಾಗೆ ಕೂತ್ರೂ ವಂದ ಕೊಳಗಕ್ಕಿ ಶಿಕ್ಕೂದಿಲ್ಲಲ" ಹೇಳಿ ಹೇಳ್ದ. "ನಾಳಿಗ್ ವಂದಿನ್ ಬೇಕು ಅಂದ್ರೆ ನಮ್ಮ ನಶಿಬ್ದಲ್ಲಿ ಶಿಕ್ಕೂದಿಲ್ಲಲ. ಮನೆಲೆ ಕೂತ್ರೆ ಉಪಾಸೇಯ. ನಮ್ಮ ನಶೀಬ ಯೆಂತಾ ಹೇಳೂದು? ವಂದೆನ ಆಗಿಲ್ಲ ಅಂದ್ರ ಕೈಕಾಲ್ ಜಪ್ಕಂಬ್ದೂ ಜೀವ ಕೊಡುದೆಯ" ಅಂದ.

ವಂದಿನ ದೊಡ್ಡ ಮೀನ ಹಿಡ್ದ. ಯೆಯ್ಡ ಕೊಳಗಕ್ಕಿ ಮೀನ ಯೆಯ್ಡು ಕೊಳಗಕ್ಕಿಗ್ ಕೊಟ್ಟಾರ್ ಬರ್ತೆ. ಆ ಮೀನ ಕೊರದಾಗೆ ಅದರಲ್ಲಿ ಸಣ್ಣ ಶಿಶು ಈತು, ದೊಡ್ಡಾಯ್ತು. ಇಲ್ಲೇಯ ವಂದ್ ಪೆಟ್ಗಿಲ ಹಾಕಿ ಇಡತ್ರು ಸಾವಕಾರ್ರು. ಸಮುದ್ರದ ತಡಿಗೆ ಬಿಟ್ರು. ಅದು ಅವನಿಗೇ ಶಿಕ್ಲೆ ಅಂದಿ.

ಆ ದಿನ ಅತ್ಲಾಗೆ ಪೆಟ್ಗೆ ದೂಡ್ ಹಾಕದ್ ಅವನ ಹತ್ರೆ ಬತ್ತದೆ. ಮಾರನೆ ದಿನ ಅವನ ಬದಿಗೆ ಹೋಗ್ತದೆ. ಬದೀಗ್ ಹೋಗುಕೇಯ ಪೆಟ್ಗಿ ಮೇನ ಕೂತ್ಕಂಡಿ, 'ಗುಂಡೀಲೆ ಹೋಗಿ ಮೀನ ಹಿಡಿಬೇಕು' ಅಂದ್ಕಂಡಿ ಅಲ್ ಹೋಗಿ ಗಾಳ ಹಾಕ್ದ. ಆ ದಿನ ಯೆಯ್ಡು ಕೊಳಗಕ್ಕಿ ಮೀನು ಶಿಕ್ತು. ವಡಿನ ಮನೆಗೆ ಕೊಟ್ಟಿ ಯೆಯ್ಡ್ ಕೊಳಗಕ್ಕಿ ತಕಂಡ ಬಂದ. ಪೆಟ್ಗಿ ಮನಿಲ್

ತಕೊಂಡೋಗಿ ಇಟ್ಟಿದ್ದ. ೧೬ ವರ್ಸದ ಮಗು ಆಯ್ತು. ಇದು ಯೆಯ್ದು ಮೂರ್ ದಿನ ಅವ ಗಾಳ ಹಾಕ್ಕಂಡ ಬರುತನ್ಕ ಅಡ್ಗಿ ಮಾಡಿಟ್ತು, ಪೆಟ್ಗಿಲ್ ಹೊಕ್ಕಂಡ್ತು. "ಅಬ, ಇದ್ಯಾರೊ ಪೆಟ್ಗಿಲ್ ಹೊಕ್ಕಂಡದ್ಯೋ ಆರ್ಬಲ" ಹೇಳಿ ಬೀಗ ತೆಗದಿ, "ಯಂತಾ ಕೊಟ್ಟಾನೊ ವಡಿಯಾ ನೋಡ್ತೆ" ಅಂದೇಳಿ ಬೀಗ ತೆಗೆದ ಹದ್ನಾರು ವರ್ಸದ ಮಗು ಅದೆ. ಹದಾ ಹೆಂಗಸು. ಗಂಡ ಹಿಂಡ್ತಿ ಮಾಡ್ಕಂಡ್ರು. ದಿನಾ ಮೀನ ಹಿಡ್ದ. ಯೆಯ್ದುಕೊಳಗನ್ದು, ಮೂರ ಕೊಳಗನ್ದು, ನಾಕಕೊಳಗನ್ದು ಅಟ್ ಮೀನ ಶಿಕ್ಕದೆ. ಅಷ್ಟಕ್ಕಿ ಕೊಡತ್ರು ಅವ್ರು ತಕ್ಕಂಡ ಬಂದ್ಕಂಡ ಉಳ್‌ದ್ರು.

"ನಿಮ್ಮ ಮನೆಲ್ ವಂದ್ ಹೆಣ್ ಅದ್ಯಂತಲೋ?" ಕೇಳ್ದ ವಡಿಯಾ. "ನಮ್ಮ ಮನೆಲಿಲ್ಲಪ್ಪ, ವಂದ ಹಾಸ್ಗಂತಾ ಪೆಟ್ಗಿದ್ದಿತ್ತು. ಅದ್ರ ಮೇನ್ ಕುತ್ಕಂಡಿ, ನಾನು ಸಮುದ್ರದ ಅಂಚಿಗೆ ಕೂತ್ಕಂಡಿ ಗಾಳ ಹಾಕಿದ್ದೆ. ನನ್ನ ನಶೀಬ್ದಲ್ಲಿ ಬಗೆಲ್ ಕೈ ಕೂಡ ಬಂತು."

"ನಿಮ್ಮನೆಲ್ ಹೆಣ್ ಅದೆ ಅಂದಿ ಯೆಲ್ಲೋರು ಹೇಳವ್ರಲ" "ಇಲ್ರಾ ಹೇಣ್ಣಿಲ್ಲ ಗಿಣ್ಣಿಲ್ಲ ನಾನೇ ಬೆಯ್ಸಿ ಕಂಡ ತಿನ್ನಬೇಕು" "ಬಂದು ಸುಳ್ಳೇ ಹೇಳತ್ಯೋ ನೀನು. ಆಗೆ ಯೆಯ್ದು ಶಿದ್ದಕ್ಕಿ ಮೀನ ಹಿಡಿತಿದ್ದೆ. ಈಗ ನಾಕ ಕೊಳ್ಗಕ್ಕಿ ಮೀನ ಹಿಡಿತೆ ನೀನು. ಯಲ್ಲೋರಿಗೂ ಕೊಡ್ತೆ. ನಮ್ಮನಿಗೂ ಕೊಡ್ತೆ. ಸೊಲ್ಗಕ್ಕಿ ಹೆಚ್ಚಾಗುದಿಲ್ಲಾಗಿತ್ತು. ಈಗ ಅಟ್ಟೆಲ್ಲಾ ಹಿಡಿತೆ. ನಾಕು ಕೊಳ್ಗ ದಿನಾ ಉತ್ಪನ್ನ ಮಾಡ್ತೆ. ಈಗ ಯಾವ ನಮೂನ್ಯಾಯ್ತು."

"ಪೆಟ್ಗಿಲ್ ಯಂತಾ ಇದ್ದಿತ್ತು?" ಕೇಳ್ತ. "ಯಂತದೂ ಇಲ್ಲಾಗಿತು" ಅಂದ. "ಸುಳ್ಳೇಯಾ." "ವಂದ ಹದ್ನಾರ್ ವರ್ಸನ ಮಗು ಅದ್ರಲ್ಲಿದ್ದಿತು." "ಸುಳ್ಳೇಯ. ನಮ್ಮನೆಗ್ ಬಂದ್ ನೋಡ್ರೆ ಕಾಂಬೂದಿಲ್ವೋ?" ಕೇಳ್ದ. ಇವ್ರು ಹೋಗತ್ರು. ವಡಿಯಾ ಹೋಗ್ತ. ಮಗು ಕಂಡ್ತು. "ನೀ ಯಾರು?" ಕೇಳ್ದ. "ನನಗ ದೂರಾಯ್ತು. ಹೊನ್ನವರ ಒಡೆಯಾ ನನ್ಗೆ. ನಾ ಹೀಗೆ ಬಂದಿದೆ" ಅಂತು. "ಮದಿ ಆಗೆದು ಅಂತ್ರಲ" ಅಂದ. "ನಾ ಮೇಲ್ ಜಾತಿದು. ಅಂಬಿರ ಮನೆಲುಳಿತೆ. ನನ್ನದು ಇದು ಮನ್ಯಲ್ಲ" ಅಂತು. ಕಡೆಲಿ ಆಚೇಚೆ ಮನ್ಯೋರ್ ಹೇಳದ್ರು, "ಮಗು ಪೆಟ್ಗೆಲಿದಿತ್ತು" ಅಂದರು.

"ನಿನ್ ಗಂಡನ ಕೂಡೆ ಬಾ ಅಂದೆ ಹೇಳು" ಹೇಳಿ ಕರ್ಯ ಬಂತು. "ಬರುಕಡ್ಡಿಲ್ಲ. ಬತ್ತೆ ನಾನು. ಯೆಂತಕೆ?" "ಯೆಂತಕಿಲ್ಲ, ಹೀಗೆ ಕೇಳಬೇಕು ಹೇಳಿ." ಸಾವಕಾರನ ಮನೆ ದಿವಾಳಿ ತೆಗೂಕೆ ಬಂತು.

"ಅವ್ರು ಬರೂದಿಲ್ಲ. ಕೆಲಸಕೆ ಹೋಗತ್ರು." "ನಮಗೆ ಮೀನು ಬೇಡ ಇದೆ" ಹಾಗೇ ಉಣ್‌ತ್ರು. "ಅವ್ರು ಹೋಗೂದಿಲ್ಲ ಸಮುದ್ರಕ್ಕೆ" ಅಂತು. "ಈಗ್ ಹೇಂಗೆ ಉಣತ್ರು?" "ನಾವು ಏನಾರೂ ಮಾಡೂದು" ಅಂತು. "ಯೆಂತ ಮಾಡ್‌ತ್ರಿ?" "ಹಾಗಲ ಬಳ್ಳಿ ಸಂಸಾರಲ್ಲ, ಯಂತಾ ಮಾಡೂಕೆ. ನನ್ ಮೈಮೇಲೆ ಕೈಹಾಕ್ ನೋಡು" ಅಂತು. ನಾಕೈದ್ ರೂಪಾಯಿ ಕಳಸದ. "ಯೆಯ್ಡೂ ಜನ ಬಾ ಅಂದ್ ಹೇಳು." "ನಾ ಬರೂದಿಲ್ಲ."

"ತಾನು ಹೋಗಬೇಕು. ಬೇಗೆ ಬರೂದಿಲ್ಲ. ಮಸಣ ಹೋಗಬೇಕು ಅಲ್ಲಿ ಆ ಲೋಕಕೆ

ಹೋಗ್ತೆ ನಾನು. ಬರೂಕೆ ತಡ, ಯೆಯ್ದು ಮೂರ ತಿಂಗಳ ತಡ, ಅಲ್ಲಿ ಬರೇ ಚೆನ್ನವೇಯ" ಅಂದ. "ಅಲ್ಲಿಗ್ ಹೋದೂರ ಬರೂದಿಲ್ಲಲ. ಹೋದ್ರೆ ಹೋಗ್ಲಿ" ಅಂದ.

"ಅವ ಹೋಗನೆ" ಅಂದ ಹೇಳಿ, ಅವರ ಮನೆಕೂಡೆ ಹೋದ್ರು. ಆಟ್ ಚೆಂದದ ಹೆಂಡ್ತಿ ಕದ ಬಿದ ಹಾಕೀತು. ಶಿರಬಾಳ್ತು ಇದ್ದಿತ್ತು. "ನಿಮ್ಗೆ ಇಲ್ ಬರೂ ಕೆಲ್ಸಿಲ್ಲ. ಅವ್ರು ದೂರ ಹೋಗಾರೆ. ಕಾಲ್ ಹಾಕೂಕಾಗ. ಜೆಡಿಮನೆ ಕಾಲ ಹಾಕೂಕಿಲ್ಲ ನೀವು" ಅಂತು. "ಗಂಡಸರಿಲ್ಲ" ಅಂತು.

ಗಂಡವ್ನೆ ಮನೇದಲ್ಲೇ. ಯೆಲ್ಲೀಗ್ ಹೋಗಲಿಲ್ಲ, ವಳಗೇ ಅವನೆ. ಇವ ಬಂದ ಮೂರ ತಿಂಗಳಾಗೋಯ್ತು ಇಡೀ ಮೈಯೆಲ್ಲ ಬೂದಿ ಬಡ್ಕಂಡನೆ. "ಮಸಣದಿಂದ ಬಂದಾನೆ" ಅಂದ ಹೇಳೂಕೆ ವಡಯ್ನ ಮನೆ ಕೂಡೆ ಬಂದ. "ವಡಿಯಾ ಮೂರು ತಿಂಗಳಾಯ್ತು. ನಾ ಹೋಗಿ ಅಲ್ಲಿ ಬರೀ ಚೆನ್ನ ತಿಂಬೂಕ ಉಂಬೂಕೆ ಬರಗಾಲಿಲ್ಲ" ಅಂದಿ ಹೇಳ್ದ. "ಇದೇ ನಮೂನ್ಯಾಗ್ತದೆ. ಮಸಣದ ವಳಗೆ ಹೋದ್ದು ದೇವ್ರೇಯ ಆ ಲೋಕ್ದಲ್ ಕೊಡ್ತು" ಅಂದ. "ದೇವ್ರೆ ಚೆನ್ನಮಾಡ್ತೂ."

"ತಾನ್ ಹೋಗ್ಲಾ?" "ಹೋಗಿ ವಡ್ಯಾ ವಂದ್ ತಿಂಗ್ಳಲೆ ಬಂದ್ರು ಅಡ್ಡಿಲ್ಲ" ಅಂದ. ಹೆಂಡ್ತಿ ಹೇಳ್ತು, "ನೀವ್ ಹೋಗಿ. ಅಂಬಿರವ ಮಸಣಕ ಹೋಗಿನಂತೆ. ಹೆಂಡ್ತಿಗೆ ಚಿನ್ನದ ರಾಶಿ, ವಾಚು-ಗೀಚು ಯೆಲ್ಲಾ ಅದ್ಯಲ್ಲ" ಅವ್ನಿಗೆ ಹೇಳ್ತು.

ಅವ ಹೋದ ಮಸಣಕೆ ಹೋದ. 'ಸಾವಕಾರ್ ಹೋಗ್ ಬತ್ರು.' ಇವ ಯೆರೆಡ್ ಸೌದಿಕೊಳ್ಳಿ ಹಾಕ್ದ. ಸುಟ್ ಬೂದಿ ಮಾಡ ಹಾಕ್ದ. ದೊಡ್ಡ ವಂದಾಳ ಉಪ್ರ ಹೊಂಡ್ ಮಾಡ್ಕಂಡ್ ಬಂದಿದ್ದ. ಸೌದಿಕೊಳ್ಳಿ ಹಾಕ್ದ ಬೆಂಕಿಹಾಕ್ದ ಸುಟ್ಕೊಂಡ ಬಂದ.

ಬಂದ್ಕಂಡಿ ಇವರ ಮನೆಕೂಡೆ ಬಂದ. "ಅವ್ರು ಯಾವಾಗ ಬರೂರು?" "ಯೆಯ್ದು ತಿಂಗಳಲ್ಲಿ ಬರೂರು, ಅಲ್ಲಿ ಅವ್ರಿಗ್ ಲೈಕಾಗ್ತದೆ" ಅಂದ. "ಯೆಯ್ದು ತಿಂಗಳಲ್ ಬರೂರು ಹೌದೆ? ಮತ್ತೂ ವಂದ ತಿಂಗಳಾಯ್ತು ಬರಲಿಲ್ಲ" ಕೇಳ್ತು.

"ನಿನ್ ಗಂಡ ಸತ್ ಬೂದ್ಯಾಗ್ ಹೋದ. ವೊಳ್ಕೆ ಅವ್ಕ್ಯಂಡ್ ಕೂಡ್ರು, ನಾನ್ ಆಟ್ ಸತಿವಂತಾಗಿದ್ದೆ ಬಂದೆ. ನಿವ್ ಪಾಪದೋರು" ಅಂದ. "ನೀವ್ಯೇನೆನ್ ಪಾಪ ಮಾಡಿರೋ" ಅಂದ. ಅವರಿಗೆ ಏನೇನು ಇಲ್ಲಾಗಿ ಇವ್ನೇ ಉಂಬೂಕ್ ಕೊಡ್ತ.

■ ಹೇಳಿದವರು: **ದಿ. ಶಿವಮ್ಮ ಮಾಸ್ತಿ ನಾಯ್ಕ,** ಹೆಗ್ಗಡೆ ಊರು.
ದಿನಾಂಕ: ೧೫-೧೦-೧೯೭೦

# ಮೊದಲು ನಗೆ ತುದಿಗೆ ಹೊಗೆ

ವಂದೂರಲ್ಲಿ ವಂದ್ ರಾಜ ವಂದ್ ಪರದಾನಿ ಹೇಳಿದ್ರು. ಆಗ ಯೆಷ್ಟೊ ದಿವಸ ಕಳದಿ ಪರದಾನಿ ರಾಜ ಹೀಗೆ ಮಾತಾಡ್ತಾ ಇರಬೇಕಾದ್ರೆ, ಈ ಪರದಾನಿ ಹತ್ರ ಈ ರಾಜ ಯೇನ ಹೇಳತಾನೆ ಹೇಳದ್ರೆ, "ಮೊದಾಲೆ ನೆಗೆ ಬರಬೇಕು; ಕಡೀಗೆ ದುಕ್ಕ ಬರಬೇಕು ಇಂತಾದೊಂದು ಕತೆ ನೀನು ಹೇಳಬೇಕು" ಹೇಳಿ ರಾಜ ಹೇಳತಾನೆ. "ಈ ಕತೆ ನೀ ಹೇಳದಿದ್ರೆ ನಿನಗೆ ಸ್ವಲ್ಪ ದಿವಸದಲ್ಲಿ ಶಿಕ್ಷೆ ನಾನು ಕೊಡತೇನೆ" ಅಂದಿ ಪರದಾನಿ ಹತ್ರ ರಾಜ ಹೇಳ್ದ. ಪರದಾನಿ ಮನಿಗ್ ಹೋಗಿ, ಸ್ವಲ್ಪ ದುಕ್ಕನಲ್ಲಿ ಕಂಬಳಿ ಹೊದಕಂಡಿ ಮನಿವಳಗ ಹೋಗ್ ಮಲಿಕಂಡ. ಆವಾಗ ಯೆಲ್ಲವ್ರು ಊಟಕ್ಕೆ ಯೋಳಸಿದರು. ಯೇಳುದಿಲ್ಲ ಇವ. ಪರದಾನಿದು ಒಂದು ಹುಡುಗಿತ್ತು. ಆವಾಗೆ ಬಂದಿ ಅಪ್ಪನಿಗೆ "ಯೇನಪ್ಪ? ಯೇನು ದುಕ್ಕದಲ್ ಮಲಗಿದ್ದೆ ನೀನು? ಯೇನಾಯ್ತುಪ್ಪ?" ಹೇಳಿ ಯೇಳಸಿತು ಅಪ್ಪನಿಗೆ. ಆವಾಗೆ ಅಪ್ಪ ಯೆದ್ದಿ ಕುಂತ. ಆವಾಗೆ ಅಪ್ಪನ ಕಣ್ಣಲ್ಲಿ ನೀರು ಸುರಿತದೆ. "ಯೇನಾಯ್ತುಪ್ಪ? ನನ್ನ ಹತ್ರ ಹೇಳು, ನೀನು. ನಾ ಹೇಳ್ತೇನೆ ನಿನ್ಗೆ ಉದಾರಣೆ" ಅಂತು.

ಅಪ್ಪ ಹೇಳತಾನೆ ತೀಡತೇ ಹೆಳತಾನೆ. "ರಾಜನೂ ಮತ್ತು ನಾನು ಇಷ್ಟ ವರ್ಷ ಕಾಲ ಕಳಿತಿದ್ರು ಮಗಾ. ಈಗ ನನಗೆ ರಾಜ ವಂದು ದುಕ್ಕದ ಗುರಿ" ಹೇಳ್ದ. ಆವಾಗ ಹುಡುಗಿ ಹೇಳ್ತಾಳೆ, "ಅಪ್ಪ ಅಲ್ಲ, ಈ ದುಕ್ಕದಲ್ಲಿದ್ದದ್ದು ನೀನು? ನೀನು ಮಿಂದಿ ಊಟ ಮಾಡು ಹೋಗಿ. 'ವಂದು ಲಕ್ಷ ರೂಪಾಯಿ ಬೇಕು ಹೇಳು.' 'ಕತೆ ನಾನ್ ಹೇಳ್ದರಾಗುದು? ಇಲ್ಲಾ ನಮ್ಮ ಹುಡಗಿ ಇದ್ದಾಳೆ, ಅದು ಹೇಳದರಾಗೂದು' ಹೇಳ್ ಸ್ವಲ್ಪ ಕೇಳು" ಅಂತು. ಹಾಗೆ ಪರದಾನಿ ಹಾಂಗೇಯ ರಾಜನ ಮನೆಗೆ ಹೋದಾನು. ಹೋಗಿ, "ನಾನ್ ಹೇಳ್ವದು ಯೇನು? ರಾಜರೇ, ನನ್ನ ಮನೀಲಿ ವಂದು ಹುಡ್ಗಿ ಇದ್ದಾಳೆ. ಅವ್ಳ ಹೇಳತಾಳೆ ಕತೆ, ಅವ್ಳ ಹೇಳದ್ರೆ ಆಗೂದೋ ಹೇಗೆ?" ಕೇಳ್ದ. ರಾಜನು, "ಅಡ್ಡಿಲ್ಲ" ಹೇಳಿದಾನು. ಆಗೆ ವಂದು ಲಕ್ಷ ರೂಪಾಯಿ ತಕ್ಕಂಡು ಪರದಾನಿ ಮನಿಗೆ ಬಂದಾನು. ಆ ಹುಡುಗಿ ಹತ್ರ, "ರುಪಾಯಿ ತಂದಿದ್ದೆ" ಹೇಳಿ ಹೇಳಿದನು. ಆವಾಗ್ಲೆ ರಾಜರ ಮನಿಲಿ ಹೇಗೆ ಮೆತ್ನಮೇಲಿಂದ ಕಾಣವಾಂಗೆ ವಂದು ಬಿಡಿಂಗ್ ಅಪ್ಪನ ಹತ್ರೆ ಕಟ್ಸಿದಾಳು. ಈ ಹುಡುಗೀನೇ ರಾಜ ಕುಳ್ವ ಮೆತ್ತಿಗೆ ಸರ್‌ಯಾಗಿ ವಂದ ಮೆತ್ತು ಕಟ್ಸಿದಾಳು. ಆ ಮೆತ್ತಿನ ಮೇಲೆ ಹುಡುಗಿ ಅಲ್ಲಿ ಕುಂತಾಳು. ಆವಾಗೆ ವಂದು ದಿವಸ ಹೀಗೇ ರಾಜ – ಆ ಬಿಡಿಂಗ್ನ್ ಮೇಲೆ ನೋಡಿದಾನು ರಾಜ. ಆ ಹುಡಗಿ ಮೇಲೆ ಈ ರಾಜನ ಸ್ವಲ್ಪ ನದ್ರ ಬಿದ್ದಿತು. ಈ ರಾಜರ್‌ದು ಏಳೆಂಟ ಜನ ಪೊಲೀಸರು ಇದ್ದಿದ್ರು. ಆವಾಗೆ ವಂದಲ್ಲ ವಂದು ದಿವಸ ವಂದು ಪೊಲೀಸಂಗೆ ಆ ಬಿಡಿಂಗಿಗೆ ರಾಜನು ಕಳಿಸಿದಾನು. "ಯೇಂತ್ಕೇಳಿ?" ರಾಜನು ಹೇಳತಾನೆ. 'ರಾಜರು ಬರಲೋ ಹೇಳಿ ಕೇಳಕಂಡ ಬಾ' ಹೇಳಿ ಆವಾಗ ಈ ಪೊಲೀಸರವ ಆ ಬಿಡಿಂಗಿಗೆ ಹೋದವ ಈ ಹುಡಗಿದ್ದಲ್ಲಿ, "ನಾನೇ ಬರಲೋ ಹೇಗೆ?" ಹೇಳಿ ಕೇಳತಾನು. ಆ ಹುಡುಗಿ "ಯೆಂಟು ಗಂಟೆ ರಾತ್ರಿಗೆ ನೀನು ಬಾ" ಅಂದಿ ಹೇಳದಾಳು. ಆವಾಗ ಆ ಪೊಲೀಸರವ ಬರಲಿಲ್ಲಾ ಹೇಳಿ ಇನ್ನೊಂದು ಪೊಲೀಸರವನಿಗೆ ಕಳ್ಸಿದಾನು. ಈ

ಪೊಲೀಸರವ ಹೋಗಿ ಆ ಹುಡುಗಿ ಹತ್ರ, "ನಾನೇ ಬರಲೋ ಹೇಗೆ? ಹೇಳ್" ಕೇಳತಾನು. ಆವಾಗ, "ಅಡ್ಡಿಲ್ಲ" ಹೇಳತಾಳೆ. ಆ ಹುಡುಗಿ, "ಯೆಂಟೂವರೆ ಗಂಟೆಗೆ ನೀನು ಬರಬೇಕು" ಹೇಳತಾಳೆ. ಹಾಂಗೇ ಪುನಃ ಮತ್ತೆ ಈ ಪೋಲಿಸರವನೂ ಬರಲಿಲ್ಲ ಹೇಳಿ ಮತ್ತೊಂದು ಪೋಲೀಸನಿಗೆ ಕಳ್ಸಿದಾನು. ಈ ಪೋಲೀಸಿರವ ಹೋಗಿ, "ತಾನೇ ಬರಲೋ ಹೇಗೆ?" ಹೇಳಿ ಕೇಳುತಾನೆ ಆ ಹುಡುಗಿ ಹತ್ರ ಮತ್ತು ಆ ಹುಡುಗೀನು, "ವಂಬತ್ತಗೆಂಟೆಗೆ ಬಾ ನೀನು" ಹೇಳತಾಳೆ. ಹೀಗೆ ಮಾಡಿ ಯೆಂಟೂ ಜನ್ನಿಗೆ ಪೊಲೀಸರಿಗೆ ಕಳ್ಸಿದಾನು. ಆ ಜಾಗಕೆ ಯೆಂಟೂ ಜನನು ಹೋಗಿ ಅಲ್ಲಿ ತಾನೇ ಬರಲ್ಲೋ? ಕೇಳಿದ್ದೇ ವಿನಾ 'ರಾಜರು ಬರಲೊ?' ಕೇಳಿದ್ದಿಲ್ಲ. ಆವಾಗೆ ಯೇನಾಯ್ತು ಹೇಳಿದ್ರೆ ಆ ಹುಡ್ಗಿಗೆ ನೋಡಿ ರಾಜರ ಹತ್ರೆ ನಿಲ್ಲಲ್ಲಿಕ್ಕಾಗುದಿಲ್ಲ. ಆಗಲೇ ಈ ಪೊಲೀಸರ್‌ಯೆಲ್ಲಾ ಬರುಕೆ ಸುರು ಮಾಡದ್ರು ಈ ಹುಡ್ಗಿ ಇದ್ದಲ್ಲಿ ಬಂದ್‌ರು. ಅಲ್ಲಿ ವಂದು ಸಣ್ಣ ಕಟ್ಟೆ ಮಾಡಿ, ಸಣ್ಣ ದೀಪ ಮಾಡಿ, ಪಾತ್ರದಲ್ಲಿಟ್ಟಿ ವಂದ ಕೋಣೆಲಿ ಇಟ್ಟು. ಪೊಲೀಸರು ಬಾ ಹೇಳ್ದ ಟೈಂನಲ್ಲಿ ಎಲ್ಲವರು ಬಂದಾರು. ಯಲ್ಲವ್ರಿಗೂ ತಕಂಡ ಹೋಗಿ ಕೋಣೆಲಿ ಸಾಲ್ದಲ್ಲಿ ನಿಲ್ಸಾಳು. ಆಗಲೇ ರಾಜಾನೂ ಬಂದ್ ಬಿಟ್ಟಿದ್ದಾನೆ. ಆವಗ ರಾಜಗೆ ಆರಾಮ ಕುರ್ಚೆ ಕೊಟ್ಟಿ, "ಸಲ್ಪ ನೀವು ಕುಳ್ಳಬೇಕು" ಬಂದ ಶಣ್ತಿ, "ನೀವ್ ಸ್ವಲ್ಪ ಕುಳ್ಳಿ" ಹೇಳಿ ಸ್ವಲ್ಪ ಹಾಲು ಬೀಲು ಯೆಲ್ಲಾ ಕೊಟ್ಟಾಳು. ಆಗಲೇ ಈ ಪೊಲೀಸರವ್ರಿಗೆಲ್ಲ ಯೇನಾಯ್ತು? ಕೇಳದ್ರೆ ರಾಜರು ಬರುದರೊಳಗೆ ಹೆದರಿ ಕಂಗಾಲಾಗಿ ಆ ಕೋಣೆವಳಗೆ ಇದ್ರು. ಈ ಹುಡುಗಿ ಹೋಗಿ ಅವರ ಮೈಮೇಲಿದ್ದ ವಶ್ತ್ರಯೆಲ್ಲಾ ತೆಗಿಸ್ದಾಳು. ಪೂರಾಜನಕೆ ವಸ್ತ್ರ ಬಟ್ಟೆಯೇನು ಇಲ್ಲ, ತೆಗಿಸ್ದಾಳು ದುಂಡಗೆ ನಿಲ್ಸಿದಳು ಅವರಿಗೆ ಮೈಮೇಲೆ ಅರಿವಿಬಿರಿವಿಯೆನಿಲ್ಲ.

ಆವಾಗೆ ರಾಜರ ಹತ್ರೆ ಬಂದಿ ಕೇಳಿತಾಳು, "ಯೇನು ಬಂದ್ರಿ ನಮ್ಮನಿಗೆ ನೀವು?" "ನೀ ಇದ್ದಲ್ಲಿ ನಾನು ಬರಬೇಕು ಹೇಳಿ ಬಂದಿದೇನೆ" ಅಂದಿ ಹೇಳಿದಾನೆ ರಾಜ. "ಹಾಗಾದ್ರೆ ಅಡ್ಡಿಲ್ಲ" ಹೇಳಿ ಹೇಳಿದಾಳೆ ಹುಡಗಿ. ಆವಗೆ ವಂದು ಚಂಬು ನೀರು ಕಯ್ಯೊಳಗೆ ಹಿಡ್ಕಂಡಾಳು ಹುಡಗಿ. ಆವಗಲೆ ಈ ರಾಜನಿಗೆ ಈ ಪೊಲೀಸ್ರು ನಿಂತಕಂಡ್ ಜಾಗದಲ್ಲಿ ಆ ದೀಪವಿದ್ದಲ್ಲಿ ಕರ್‌ಕಂಡು ಹೋಗಿದಾಳು. ಅಲ್ಲಿ ಸ್ವಲ್ಪ ಕಪ್ಪು. ಆವಾಗ ರಾಜನಿಗೆ ವಳಗೆ ಹೋಗಿ ಯೆಲ್ಲಾ ತೋರ್‌ಸಿದಾಳು.

ಈ ದೀಪ ನೇಂದಿಸಲಿಕ್ಕೆ ಕೊಡಬಾರದು, ನಾನು ಬೇಗ ಬರ್‌ತೇನೆ, ಆವಾಗ ಅವರ ತೋರ್ಸಿ ಇದೇ "ನೀಮ್ ಅವ್ರ ತಿರಗಿಸಬೇಕು" ಹೇಳಿ, ಯೆಲ್ಲರಿಗೂ ಹಿಡದಿ ತಿರಗಿಸಿ ತೋರ್‌ಸತು. "ಹೀಗೆ ದೀಪ ತಿರಗಿಸ್ತೇ ಇದ್ರೆ ಈ ದೀಪ ನಂದೆ ಹೋಗುದಿಲ್ಲ ತಿರಗಸ್ತೇ ಉಳಿಬೇಕು ನೀವು" ಹೇಳಿ ತೋರ್ಸತು ಆವಾಗೆ ಪೊಲೀಸ್ರದಲ್ಲೇಯ ವಬ್ಬ ಮುದ್ಕನಂತವ ಇದ್ದನು. ಈ ಹುಡುಗಿ, ವಂದು ಚಂಬು ನೀರು ತಕಂಡಿ, ರಾಜನಯೇನ ಮಾಡತಾನೆ? ಹೇಳಿ ನೋಡ್ತೆ ಇದ್ದಳು. ಈ ಮುದ್ಕನಂತೆ ಇದ್ದವ "ಹುಂ ಹುಂ" ಅಂದಬಿಟ್ಟಾನು. ಅವನಿಗೆ ನೋವ ಹೆಚ್ಚಾಗ್‌ಹೋಯ್ತು 'ಹೂಂ' "ಹಾಂ' ಹೇಳ್ದಕ್ಕೆ ಈ ರಾಜನು ಮನಿಗೆ ಒಡಿ ಹೋದಾನು. ಅವಾಗೆ ಆ ಪೊಲೀಸ್ರು ಈ ರಾಜ್ರ ಮನ್ಗೆ ವಬ್ಬಬ್ರೇ ಒಡ ಹೋಗಿ ರಾಜರಿಗೆ, 'ಅವ್ಳ, ಪಿಶಾತಿ' ಹೇಳಿ, ಅವ್ಳ ಮನೀಗ್ ಹೋಗ್ ಬಂದ್ ರಾಜ ಬಿದ್ ಬಿಟ್ಟಿದ್ದಾನು. ಆಗಲೇ ಮರದಿವ್ಸ ಈ ಹುಡುಗಿ ಹೇಳ್ತಾಳೆ.

ಅಪ್ಪನು ಈ ಬಿಡಿಂಗ್‌ನಲ್ಲಿ ಈ ಹುಡ್ಗಿದ್ದಲ್ಲಿ ಬಂದಾನು, “ಮಗಳೆ ನಾಳೆ ವಾಯ್ದೆ ಬಂತು ರಾಜರದು. ಕತೆ ಹೇಳೂದು” ಹೇಳಿ ಹೋದ. “ಹೇಳಬೇಕು ನಾಳೆ” ಹೇಳತಾನ. “ನೀನೇನ ಹೆದ್ರಬೇಡ. ಅವನ ಮನಿಗೆ ಹೋಗೂಣ. ನಾನ್ ಹೇಳ್ತನೆ ಕತೆ” ಹೇಳಿ, ಇಲ್ಲಿ ಆರೂಪಯೆಲ್ಲಾ ಬಿಚ್ಚಿ, ಮೊದಲಿದ್ದ ರೂಪದಲ್ಲಿ ಬೇರೆದು ಬಟ್ಟೆ ಹಾಕಿ, ಸಾಮಾನ್ಯ ಹೆಣ್ಣ ರೂಪದಲ್ಲಿ ಆ ರಾಜನ ಮನಿಗೆ ಹೋಗಿತು ಈ ಹುಡುಗಿ. ಅವಾಗೆ ಈ ರಾಜನ ಹತ್ರೆ ಈ ಹುಡುಗಿ ಕತೆ ಹೇಳತಾಳೆ. “ವಂದೂರಲ್ಲಿ ವಂದ ರಾಜ ವಂದ ಪರದಾನಿ ಹೇಳ್ ಇದ್ರಂತೆ. ಆವಾಗೆ ಪರದಾನಿ ಹತ್ರೆ ರಾಜ ಹೇಳಿದಾನಂತೆ, ‘ವಂದ್ ಕಲೆ’ ಮೊದ್ಲು ನೆಗೆ ಬರಬೇಕು, ಕಡಿಗೆ ದುಕ್ಕಾ ಬರಬೇಕು ಅಂತ ಕತೆ ಹೇಳು’ ಹೇಳಿದಾನಂತೆ. ಅ ಪರದಾನಿ ಹೇಳಿದನಂತೆ, ‘ನಮ್ಮನೆಯ ಸಣ್ಣ ಹುಡುಗಿ ಹೇಳಿದರೆ ಅಗುದೋ?’ ಹೇಳಿ ಕೇಳಿದಾನಂತೆ. ಆವಗೆ ‘ಅಡ್ಡಿಲ್ಲ’ ಹೇಳಿ ರಾಜ ಹೇಳಿದಾನಂತೆ. ಅ ರಾಜರ ಮನೆ ಮೆತ್ತಿಗೆ ಸರಿಯಾಗಿ ವಂದ ಬಿಡಿಂಗ್ ಅದೆಯಂತೆ. ಅಲ್ಲೊಂದು ಹುಡುಗಿ ಇದ್ದಳಂತೆ. ಆ ರಾಜರಿಗೆ ಆ ಹುಡುಗಿ ಮೇಲೆ ಮನಸಾಯ್ತು, ಆ ರಾಜರ ಮನ್ಯಲ್ಲಿ ಯಂಟು ಜನ ಪೊಲೀಸರಿದ್ದರಂತೆ. ಆ ರಾಜನು ಹುಡುಗಿ ಇದ್ದಲ್ಲಿ ಒಬ್ಬೊಬ್ಬರಾಗಿ ಕಳ್ಸಿದಾನಂತೆ. ‘ಆ ರಾಜರು ಬರಲೋ’ ಹೇಳಿ ಕೇಳಕಂಬಾ ಹೇಳಿ ಕಳ್ಸಿದಾನಂತೆ. ಈ ಪೊಲೀಸರು ಅಲ್ ಹೋದವ್ರು, ‘ನಾನೇ ಬರಲೊ ಹೇಗೆ?’ ಅಂತ ಅ ಹುಡುಗಿ ಹತ್ರ ಕೇಳಿದರಂತೆ. ಅವರಿಗೆ ಸ್ವಲ್ಪಸ್ವಲ್ಪ ತಡದಿ ಬರುಕೆ ಈ ಹುಡುಗಿ ಹೇಳಿದಳು. ಈ ಅವಗೆ ಅದ್ರ ತಡಕಾಗದೇಯ ಇದೇ ರಾಜನು ಆ ಹುಡುಗಿ ಬಿಡಿಂಗಿಗೆ ಹೋಗಿದಾನಂತೆ. ಇವರೇ ಕಳಿಸದ ಪೊಲೀಸರೆಲ್ಲವ್ರಿಗೆ, ಯೆಂಟೂ ಜನ್ರಿಗೆ ದುಂಡಗೆ ನಿಲ್ಸಿದಾಳು. ಆವಗೆ ಹುಡ್ಗಿ ಹತ್ರೆ ರಾಜಸ್ವತಾ ಹೋಗಿ ಕೇಳಿದಾನು. ಹುಡಗಿ ರಾಜರ ಹತ್ರ ಕೇಳತ್ತಾಳೆ, ‘ಯೇನ್ ಬಂದ್ರಿ ರಾಜರೇ ನಮ್ಮನೆಗೆ ನೀವು?’ ‘ತಾನು ನಿನ್ನಿದ್ದಲ್ಲಿ ಬಂದಿದೇನೆ’ ಹೇಳಿ ರಾಜನು ಹೇಳತಾನೆ. ಅವಾಗೆ ಹುಡುಗೀನು ‘ಅಡ್ಡಿಲ್ಲ ಸಲ್ಪ ನೀವು ಕೂತ್ಕಳ್ಳಿ’ ಹೇಳಿದಾಳು. ಈ ರಾಜನ ಪೋಲಿಸರು ಅಳಲೆಲ್ಲಾ. ಹೋಗಿ ನಿಂತ್ತಲ್ಲಿ ಕೋಣೆವಳಗೆ ಕಪ್‌ನಲ್ಲಿ ಈ ರಾಜನಿಗೆ ತಕಂಡ ಹೋಗಿ ನಿಲ್ಸಿದಾಳು. ‘ಇದ್ದೆಲ್ಲಾ ತಿರಗಿಸಬೇಕು ನೀವು’ ಹೇಳಿ ರಾಜನಿಗೆ ಯೆಲ್ಲಾ ತೋರ್‌ಸಿದಳು. ‘ಇಲ್ಲಾದ್ರೆ ಈ ದೀಪ ನಂದಿ ಹೋಗುತದೆ ನಾನಿಲ್ಲೇ ಹೋರಗೆ ಹೋಗಿ ಬರುತ್ತೇನೆ’ ಹೇಳಿ ಹೋಗಿದ್ದಾಳು ಹೆರ್ಗೆ ಬಂದಿ ನಿತ್ತದಾಳು ಬಾಗ್ಲದಲ್ಲಿ. ಅದ್ರಲ್ಲಿ ವಬ್ಬ ಮುದ್ಕನಂತೆ ಇದ್ದವ ‘ಹೂಂ’ ಹೇಳಿ ಬಿಟ್ಟಿದ್ದಿನಂತೆ. ಅವಾಗ ಅ ರಾಜ ಹೋಗಿದ್ದಾನಂತೆ. ದುಃಖದಲ್ಲಿ ಮನಗಿ ಬಿಟ್ಟಿದ್ದಾನಂತೆ ಮನೆಕೂಡೇ. ಅದರ ಮನಿಲಿದ್ದಾ ಪೊಲೀಸರ ಇದೆಲ್ಲ ರಾಜನು ತಿರಗಿಸಿ ಬಿಟ್ಟಿದಾನಂತೆ” ಹೇಳಿ ಹುಡಗಿ ಕತೆ ಹೇಳುದ್ರೋಳಗೇಯ ಈ ರಾಜನು ಥಂಡಾಗಿ ಬಾಳ ದುಕ್ಕದಲ್ಲಿ ಮನಗಿ ಬಿಟ್ಟಿದ್ದಾನಂತೆ.

■ ಹೇಳಿದವರು: **ದೇವಪ್ಪ ಅಣ್ಣಪ್ಪ ನಾಯ್ಕ**, ಹೊದಕೆ

ದಿನಾಂಕ: ೧೫-೧೨-೧೯-೭೦

◆

# ವಶಮದ್ದು

ವಂದ್ ರಾಜದಾಗೆ ಐದ್ ಜನ ಗಂಡ ಮಕ್ಳು ಹುಟ್ರು. ಮತ್ತೊಂದ್ ರಾಜದಾಗೆ ಐದುಜನ ಹೆಣ್ ಮಕ್ಳು ಹುಟ್ರು. ಆಗೆ ವಂದ್ ಗಂಡ ಮಕ್ಳು ದೊಡ್ಡಾಗಿ ಮದಿಗ್ ನೆರದ್ರು. ಆಗೆ ಕೊಡ್ಲೆಯ ಅಪ್ಪ ಕೇಳ್ದ, "ತಮ್ಮ ಯೇಗೆ ನಿನ್ನ ನಗ್ನ ಮಾಡಬೇಕು, ಆಗೂದೋ?" ಹೇಳಿ ಹೆರಿಹುಡ್ಗನ ಕೇಳ್ದ. "ನಮ್ಗೆ ಅಟ್ಟೂ ಜನಕೂ ನೀನು ವಂದೆ ತಾಯ್ಗೆ ಐಜನ ಹೆಣ್ಮಕ್ಳು ಹುಟ್ಟಿರರ ತಂದ್ರೆ ಮಾತ್ರ ನಾವು ಮದಿಯಾತ್ರು ಯೆಲ್ದಿದ್ರೆ ಮದಿಯಾಗೂದೆಲ್ಲ" ಹೇಳ್ದ.

ಆ ರಾಜನೂ ಮಗಳ ಮದಿ ನೆರೂರೊಳ್ಗೆ ಕೇಳ್ದ. "ತಂಗಿ, ನಿನ್ನ ನಗ್ನ ಮಾಡ್ಬೇಕಲೆ?" ಕೇಳ್ದ. ಅದು ಹೇಳ್ತು, "ನಾವು ಐದ್ ಜನರೂ ವಂದೇ ಮನಿಗೆ ಕೊಡಬೇಕು. ವಂದೆ ತಾಯ್ಗೆ ಹುಟ್ದ ಮಕ್ಕಳ್ಗೆ" ಹೇಳ್ತು. "ಯಿಲದಿರೆ ನಾವು ಮದಿಯೇ ಆಗೂದೆಲ್ಲ" ಹೇಳ್ತು ಹುಡಗಿ. ಈ ಅರಸು ಇನ್ನೇನ ಮಾಡ್ಬೇಕಾಯ್ತು ಹೇಳಿ ಗಂಡನ ಮನಿ ಅರಸುಕೆ ಹೋತ. "ಯಾರ್‌ಗೆ ಅಂತ ಗಂಡೀದೂ?" ಹೇಳ್ ಹುಡ್ಕೂಕೆ ಹೋದ.

ವಂದ ಕಟ್ಟಿಮೇನೆ ಗಂಡಿನವ ಹೋಗಿ ಕೂತ. ಕುಳ್ಳುರೊಳಗೂವ ಇವ್ನೂ ಅಲ್ಲೇ ಬಂದ. ಅವರವರೊಳಗೆ ಮಾತಾಯ್ತು. "ನೀ ಯಂತಕ್ ಬಂದಿದೆ?" "ನನ್ನ ಹೆರಿಹುಡುಗಿ ಮದಿಗ್ ನೆರದಿತು. ನಾ ಕೇಳಿದೆ ಆದ್ರ ಕೂಡ ಅದು ಹೇಳ್ತು 'ಐದೂ ಜನರ ಮದಿ ಮಾಡೂದಾರೆ ಅಂತದೇ ಗಂಡಮಕ್ಕಳಬೇಕು, ಯೆಲ್ಲದಿರೆ ಮದಿಯಾಗೂದಿಲ್ಲ' ಹೇಳ್ತದೆ." "ಹಂಗಾರೆ ನನಗೂವ ಐದು ಜನ ಗಂಡ ಮಕ್ಳು ಹುಟ್ಟಿರು. ಹೆರಿಹುಡ್ಗನ ಕೈಲಿ ಕೇಳ್ದೆ ಅವನೂ, "ಐದು ಜನ್ರಿಗೂ ಒಬ್ಬೇತಾಯ್ ಹೊಟ್ಟೆಲ್ ಹುಟ್ದ ಹೆಣ್ ಮಕ್ಳು ಮದಿಮಾಡಿರ್ ಮಾತ್ರ ಅಡ್ಡಿಲ್ಲ, ಯಿಲ್ಲದಿದ್ರೆ ನನಗ ಮದಿನೇ ಬೇಡ ಹೇಳ್ದ" ಅಂತ. "ಮದಿ ಮಾಡೂದಾರೆ, ಐದೂ ಜನ್ರ ಮದಿ ಮಾಡಬೇಕು."

"ನನ್ನ ಹೆಣ್ಣ ಕೊಡ್ತೆ. ಹೆಣ್ ನೋಡ್ಕ ಬರೂಕೆ ಬರಬೇಕು" ಅಂದ. ಅರಸು ಹೋದ, ವಂದಿವ್ಸ ಉಳ್ದ. ಮಾರ್‌ನೆ ದಿವ್ಸ ಆ ಅರಸೂ ಕರ್ಕಬಂದ. "ನಮ್ಮ ಗಂಡ ನೋಡುಕೆ" ಹೇಳಿ. ಅವ ಗಂಡಿನ ಮನೆಲಿ ವಂದಿವ್ಸ ಉಳ್ದ. "ಆಗೂದು" ಹೇಳಿ ಹೋದ್ರು. ಇಂತಾ ದಿವ್ಸಗೆ ದೆಬ್ಬಣ ಬರಬೇಕು. "ನೀವು ನಾಳಿಕೆ ದೆಬ್ಬಣ ತಕಬರಬೇಕು" ಹೇಳ್ದ. ಆಗೆ ಅಂತೂ ಮದಿಮಾಡ್ರು ಅಟ್ಟೂ ಜನ್ರ.

ಹೆರಿಮಗಳ ಕೈಲಿ ಅವಿ ಹೇಳ್ತು, "ಮತ್ ನಿನ್ ತಂಗಿ ಶಣ್ಣದು, ಅದು ಅದ್ಕೆ ಹೊಟ್ಟಿ ಶರಯಾಗಿ ಹಾಕಿ, ತಲಬಾಚಿ, ಹೇನ ಗೀನ್ ನೋಡ್ ಕೊಡಿ" ಅಂತು. ಇವರು ಮಾತಾಡ್ದೆ ಸುಮ್ನೆ ಬಂದ್ರು. ಕಿರಿ ಹುಡ್ಗ ಸಣ್ಣ ಹುಡ್ಗ. ಆಗೆ ಅವ್ನು ದಿನಾಕೂ ಅಲ್ಲೇ ಮಲ್ಲೇ ಉಳ್ದ ಗೆವ್ಕೆ ಹೋಕ ಆಲಿಲ್ಲ ಅವ್ಗೆ. ವಂದಿವ್‌ಶಾನೂ ಅದ್ಕೆ ಕಿರಿತಂಗಿಗೆ ಶರಿಯಾಗ್ ಹೊಟ್ಟಿಗ್ ಹಾಕೂದೆಲ್ಲ. ತಲೆಗಿಲೆ ಚೊಕ್ಕಿಲ್ಲ. ಅದು ಅಡ್ಕಂತ ಉಳ್ಕಂಡಿ ಅಸ್ರಾಯ್ತುಲ್ಯೊ. ವಳ್ಗೆ ದನಗೆ

ದೂಳ್ ಅಕ್ಕಚ್ ಮಾಡಿಟ್ಟಿರು. ಅದು ಗೈಟಿಲಿ ಮುಕ್ಕ ಕುಡ್ದಬಿಟ್ತು. ಈ ಹುಡ್ಗ ಕಿರ್‌ಯುವ ಹಿಂಡ್ತಿ ಮೊಕ್ಕಕುಡದ್ದ ನೋಡ್ದ. ನೋಡ್ಕಂಡಿ ಇನ್ನೇನ ಮಾಡಬೇಕು?

ಅಜ್ಜಿಕೈಲ್ ಹೇಳ್ದ. "ಅಜ್ಜವ್ವ ನನ್ ಹಿಂಡ್ತಿಗೆ ಶರಿಯಾಗಿ ಹೊಟ್ಟಿಗ್ ಹಾಕೂದೆಲ್ಲ. ನಂಗೆ ಈ ಊರೇ ಬೇಡ. ನಾ ಯತ್ಲಗಾರೂ ನೆಡ್ದ ಬಿಡ್ತೆ" ಹೇಳ್ದ. ಅಜ್ಜೇನಂತು ಅದು ಮಗೂನ್ ಕೈಲ್ ಹೇಳ್ಕೊಟ್ತು. "ನಿನ್ ಗಂಡ ಕೊದ್ರಿ ಮೇನ್ ಕೂತ್ಕ ಹೋತ. ನೀ ಅವ್ನ ಬಿಟ್ಕ ಇರಬೇಡ. ಮಾವ ನಾ ಬತ್ತೆ ಅನ್ನು" ಅಂತು. "ಯೇ ಮಾವ ನಾಬತ್ನೋ" ಅಂದ ಹೇಳಿ, ಅವ್ನ ಬೇನ್ಗೆ ಹೋಯ್ತು. ಅವ ಕೊದ್ರಿ ಇಳ್ದಿ ವಂದ್ ಅಜ್ಜಿ ಕೈಲಿ ಹೇಳ್ದ. "ಮತ್ತೆ ಅಜ್ಜವ್ವಾ ನಾನು ಸಾಬು ಗೀಬು ಯಲ್ಲ ತಂದ ಕೊಡ್ತೆ. ನೀನು ಚೊಕ್ ಮಾಡಿ ಅದ್ರ ಮೀಸಬೇಕು" ಅಂದ. "ಯೆಣ್ಣಿನೂ ತಂದಕೊಡ್ತೆ ಎಣ್ಣಿಹಾಕಿ ತಲಿಬಾಚಿ ಅದ್ರ ಹೇನ್ನೆಲ್ಲಾ ತೆಗಿಬೇಕು. ನಿನ್ಗೆ ಯೇನಾರೂ ಕೊಡ್ತೆ" ಹೇಳ್ದ ಅವ. ಅದು ಯೇನ ಮಾಡ್ತು? ಮಗುನ ತಕಹೋಗಿ ಚೊಕ್ ಮಾಡಿ ಮೀಸ್ತು. ಶಬಕಾರಯಲ್ಲಾ ಹಾಕಿ ಚೊಕ್ ಮಾಡ್ತು ಅದ್ರ. ಅವ ಯೆಣ್ಣಿ ತಂದ್ ಕೊಟ್ಟ. ಯೆಣ್ಣಿ ಹಾಕಿ ತಲಿ ಬಾಚ್ತು. ಅವ್ರ ವಂದಿವ್ಸ ಅಲ್ಲಿ ಉಳ್ಕಂಡ್ರು ಅಜ್ಜಿಮಲ್ಲಿ. ತಲಿಗಿಲಿ ಬಾಚಿ ಹೇನಗೀನಟೂ ತೆಗ್ದಿ ಚೊಕ್ ಮಾಡಕೊಟ್ತು.

ಅವ ಅದ್ರ ಕೊದ್ರಿಮೇನ್ ಕೂರ್ಸ್‌ಕಂಡ ವಂದಲ್ಲಾ ವಂದ್ ದೇಸ್ಕೆ ಹೋದ್ರು. ಮುಂದೆ ಹೋಗುರೊಳಗೂವ ಶಣ್ಣ ಗುಬ್ಬಿ ಕಟ್ಕಂಡಿ ಉಳಕಂತ್ರು. ಇವ ಸೋಳಿ ಮನಿಗೆ ಹೋತ ಬತ್ತ. ಉಂಡ್ಕಂತ ಹೋದ ಸೋಳಿಮನಿಗೆ. ಹಿಂಡ್ತಿಕಲ್ ಮಾತಾಡೂದಿಲ್ಲ. ರಾತ್ರಿಗೂ ಮಾತಾಡೂದಿಲ್ಲ, ಹಗಲಕೂ ಮಾತಾಡೂದಿಲ್ಲ. ಅಡಗಿ ಶಾಮಾನೆಲ್ಲ ತಂದ ಕೊಡ್ತ. ಅದ್ ಮಾಡ್ಕ ಉಣ್ತು. ಹಾಗೆಯ ವಂದ (ಮತ್ತೊಂದ್) ಅಜ್ಜಿ ಕೇಳ್ತು, "ತಂಗಿ ನಿನ್ನ ಗಂಡ ಮಾತಾಡ್ತ್ನಾ ನಿಂಕೈಲಿ?" ಕೇಳ್ತು.

"ಇಲ್ಲ ಅಜ್ಜವ್ವ, ನಾವು ಇಲ್ ಬಂದಲಾಗಾಯ್ತುವ ಇನ್ನೂವರಿಗೂ ಮಾತಾಡ್ಲಿಲ್ಲ" ಅಂತು. "ಕಡಿಗೆ ನೀರ್ ಗನ್ನಾ ಕಾಸಿ ಇರ್ಸು. ಅವ ನೀರ್ ಬೆರ್‌ಸು ಹೇಳ್ತ್ನೊ ಯಲ್ಲವೋ ನೋಡ್ವ." ಉಕ್ಕತ್‌ಬಿದ್ದದೆ. ಕೊಡಪಾನ ಮನಿದಲ್ ಇಟ್ ಬಿಟದೆ. ಇವ ಅಡಕಲಕ್ಕೆ ಪಂಜಿ ಅದ್ಸಕಂಡ. ಹಿಂಡ್ದಹಾಗೆ ಮಾಡ್ಕಂಡಿ ಬಂದು, ಉಂಡ ನೆಡ್ದ ಬಿಟ್ಟ. ಅಜ್ಜಿ, "ನಿನ್ನೆಗೆ ಹೇಳ್ದ ಮಾಡಿದ್ಯೋ" ಕೇಳ್ತು. "ಹೌದು ಅಜ್ಜವ್ವ ಮಾಡಿದ್ದೆ ಪಂಜಿಲದ್ಸಕಂಡಿ ಹಾಯ್ಕಂಡ ಉದ್ದಕಂಡಿ ಹೋದ್ರು ಮಾತಾಡ್ತಿಲ್ಲ."

"ಪದಾರ್ತ ಉಪ್ ಮಾಡೆ ಮಾಡು" ಅಂತು ಮಾಡ್ತು. ಅವ ವಂದ್ ತುತ್ ಬಾಯ್ಲ ಹಾಕಿದ್ದ ಮತ್ತಂದ್ ತುತ್ ನೆಗ್ದ. ಉಪ್ಪಾಯ್ತು, ಉಪ್‌ಶಿಂಗ್ಯಾ, ಅನ್ನ ಇಟ್ಟ ಬಾಯಿ ತೊಳ್ಕಹೋದ. ಆಗೆ ಅಜ್ಜಿ ಕೇಳ್ತು ಮಾರನೆ ದಿವ್ಸ, "ನಾ ಹೇಳ್ದ ಮಾಡದ್ಯೋ?" "ಮಾಡಿದ್ದೆ ವಂದ್ ತುತ್ ಉಂಡ್ರು. ಹಾಗೇ ಬಾಯ್ ತೊಳ್ಕಹೋದ್ರು" ಹೇಳ್ತು.

ಅಜ್ಜಿ, "ಅಮೃತದ ಸೊಪ್ಪತಂದಿ ನಾಕೊಡ್ತೆ. ಆ ಸೊಪ್ಪ ಜಪ್ಪಿ ರಸತೆಗ್ದಿ ಅವ ಬಟ್ಲಕ್ ಬರೂರೊಳ್ಗ ಹಾಕು. ಉಣ್ತ ನಿನ್ನ ಮ್ಯಾಗೆ ಅವಗ್ ಪ್ರೀತ್ಯಾತದೆ. ಅವ ಇಲ್ಲೇ ಉಳಿತ"

ಹೇಳ್ತು. ಅಮ್ಮೈತದ ಸೊಪ್ ತಂದಿಕೊಟ್ಟು, ಪೇಟೆಲಿತ್ತು. ರಸ ತೆಗೆದು ಬಟ್ಲಕ್ ಹಾಕ್ಲೆಲ್ಲ. ಉಂಬೂಕ್ ಬಂದ, ಉಂಡಕಂಡ ನೆಡ್ದಬಿಟ್ಟ. ಅದ್ಕೆ ಹಂಬ್ಲೇ ಇಲ್ಲ ಅವ ಹೋದ.

ಆಗೆ ಕಡಿಗೆ ದೇಪ ನಂದ್ಸಬೇಕಾರೆ ಆಗೆ ಕಂಡ್ತು, "ಹಾಕ್ಲೇ ಇಲ್ಲ" ಅಂದಿ ಹೆರಗೆ ತೆಗದ್ ತೋಕ್ ಬಿಟ್ತು ರಸವ. ವಂದ್ ಮಾಶೇಶ ಹೋಡಿ ತಿಂಬೂಕ ಬತ್ತಿತ್ತು. ಮಾಶೇಶ್ನ ಮೂಗ್ ವಳಗ ಹೋಗಿ ರಸ ಅವನ ವಳಗೆ ಹೊಕ್ ಬಿಟ್ತು. ಮೂಗ್ಗ್ ಹೋಗುರೊಳಗೂವ ಅದ್ಕೆ ಸಂತೋಶಾಗೋಯ್ತು. ಅದೇ ದಿವ್ಸೆ ಮನ್ಗೂರೊಳಗೂವ ಅದ ಬಂತು ಇದ್ರದಲ್ಲಿ (ಇವ್ನವೇಶಲ್ಲ) ಗಂಡೇಸ ತಾಳ್ಕಂಡಿ. ರಾತ್ರಿಗೆ ಗಂಡಾ ಹೇಳಿಮಾಡ್ತು, ಈ ಹುಡ್ಗಿ ಗರ್ಬಿಣಿಯಾಯ್ತು.

ಮಾಶೇಶ ದಿವಸಾಕು ಬತ್ತದೆ. ಅದು ಗರ್ಭಿಣಿಯಾಯ್ತು. "ಮತ್ತೆ ಮುದ್ಕಿ ಮತ್ತೆ ನೀ ಗರ್ಬಿಣಿಯಾದೆ ಬಯಕೆ ಬೇಡ್ಸು, ರೊಟ್ಟಿ ಸುಟ್ವಾಕೂ ಜಾಜ ಮಾಡಬೇಕು." ಗಂಡನ ಕೈಲಿ ಹೇಳು ಅಂತು ಅಜ್ಜಿ. ಆಗೆ ಇದು ಗಂಡನ ಕೈಲಿ ಹೇಳ್ತು, ಅವ ಒಂದು ಮಾತು ಹೇಳ್ದ, "ರಾತ್ರಿ ಹೇಳು. ಈಗ ಹೇಳಬೇಡ" ಹೇಳ್ಕಂಡ ನೆಡ್ದ ಬಿಟ್ಟ ಅವ. ರಾತ್ರಿಗೆ ಮಾಶೇಶ ಬರೂರೊಳ್ಗೆ ಹೇಳ್ತು ಇದು. "ಅಜ್ಜಿ ಹೇಳ್ತದೆ ಬಯಕಿ ಜಾಜಗೆ ಕಪಡ ಉಡ್ಸಕಂಡಿ ರೊಟ್ಟಿ ಸುಟ್ ಹಾಕಬೇಕಂತೆ" ಅಂತು. ಮಾಶೇಶ ಮಾರ್ನೆದಿವ್ಸೆ ಬಂಗಾರದ ಶೇರಿಗೀರಿ ತಂದ್ಕಂಡಿ ರೊಟ್ಟಿ ಸುಟ್ ಹಾಕು ತಯಾರಿ ಮಾಡ್ತು. ರೊಟ್ಟಿ ಸುಟ್ ಹಾಕೂ ಜಾಜ ಮಾಡ್ರು. ಅವ್ರು ರೊಟ್ಟಿ ಸುಟ್ ಹಾಕ್ದ್ರು.

ಆಗೆ, ಹುಡಗಿಗೆ ವಂದ್ ಹುಡ್ಗ ಹುಟ್ದ. ದಿವಸಾಕೂ ಮುಂದ್ ಆಡ್ಸತೆ ಉಳಿತು. ಚೆನ್ನ, ಚೆನ್ನದ ಸರ, ಚೆನ್ನದ ಕಾಲಸರಪಳಿ ಯೆಲ್ಲ ಮಾಶೇಶ್ನೆ ಮಾಡ್ಸಹಾಕ್ತು.

ವಂದಿವ್ಸೆ ಇವ್ನ ನೋಳಿ ಇವನ ಕೈಲಿ ಯೇನಂತು? "ನಿನ್ ಹಿಂಡ್ತಿ ಕಪ್ಡ ನನ್ಗೆ ಬಗೆಲ್ ಕೊಡು, ವಂದೆ ದಿವಸದ ಮಾತ್ಗೆಕೊಡು, ಕಾರಿದ್ ಮನೆಗ್ ಹೋಗ್‌ಬತ್ತೆ" ಅಂತು. "ಅದ್ರ ಕೈಲೆ ಕಪ್ಡದ ಸುದ್ದಿಕೇಳು; ತನ್ನಕೂಡ ಕೇಳಬೇಡ" ಅಂದ.

ನೋಳಿ ನಿನ್ನ ಕಪ್ಡವ ವಂದ್ ದಿವ್ಸದ ಮಾತಿಗ್ ಕೂಡು ಅಂತು. ಹುಡ್ಗಿ ಅವರ ಕೈಲಿ ಕೇಳ್ ನೋಡ್ಕ ಹೇಳ್ತೆ ಅಂತು. ದಾತ್ರಿಗ್ ಬರೂವರೆಗೂ (ಮಾಶ್ನೇಶ್ನ ಕೈಲೇ ಗಂಡ ಹೇಳೇ ಕೇಳ್ತದೆ.)

ಅವ, "ಅದ್ರು ಕೊಡುಕಡ್ಡಿಲ್ಲ ನೀ ಹೀಗ್ ಹೇಳಬೇಕು, ಕಪ್ಡ ಕೊಡ್ತೆ, ಕಪ್ಡಕೆ ಯೇನಾರೂ ಆದ್ರೆ ಬರಕೊಡಬೇಕು. ಯೇನಂದಿ? 'ನಿನ್ನ ತೋಟ, ದನಕರ, ನಿನ್ನ ಆಶ್ತಿ, ಸಾಮಾನು ಅಟ್ಟೂ ಬರಕೊಡಬೇಕು ನನ್ಗೆ. ಜೀವ ಸಮೇತ ಬರಕೊಡಬೇಕು' ಎಂದಿ ಹೇಳು" ಅಂದ ಮಾಶೇಶ.

"ಅಟ್ ಮಾಡ್ಕಂಡ್ ಕೊಡು" ಅಂದ.

ಮಾರನೆದಿವ್ಸೆ ನೋಳಿಕೇಳ್ತು, "ಕೇಳ್ದ್ಯೋ? ಹೇಳು" ಅಂತ. ಅದು, "ಕೇಳ್ದೆ. ಕೊಡುಕಡ್ದೆಲ್ಲ ಕಷ್ಟ ಯೇನಾದ್ರೂ ಆದ್ರೆ ದನಕರ, ತೋಟ, ಮನೆ, ನಿನ್ನ ಆಸ್ತಿ ಯೇನದ್ಯೋ ಅಟ್ಟೂ ಬರಕೊಡಬೇಕು ಅನ್ನು" ಅಂದ.

ನೋಳಿ ಅದು, "ಅಡ್ಡೆಲ್ಲ" ಅಂತು. ಆಗ್ ಅದ್ ಯೇನ್ ಮಾಡ್ತು? ಕಷ್ಟ ತಂದ್ ಕೊಟ್ತು. 'ಇಂದೇ ತಂದ್ ಕೊಡಬೇಕು' ಹೇಳಿ ಬರಸ್ ಕಂಡ್ತು. ಜೀವ ಸಮೇತ ಯಲ್ಲ ಬರಕಂಡಿ ಕೊಟ್ತು. 'ಇಂದೇ ತಂದ್ ಕೊಡಬೇಕು' ಹೇಳಿ ಬರಸಕಂಡ್ತು. ಕಡಿಗೆ ಕಾರಿದ ಮನಿಗ್ ಹೋಗೂದು ಶಂಜ್ ಆಗ್ ಹೋಯ್ತು. 'ನಾಳಿಕ್ ಕೊಡೂಕಾಯ್ತು. ನಾನೇನ ವೋಡ್ ಹೋತ್ನೋ? ಅದೇನ್ ವೋಡ್ ಹೋಯ್ತದ್ಯೋ?'

ಬಿಡಸಿಟ್ತು ಬೆಳಿಗ್ಗೆ ನೋಡುರೊಳ್ಗೆ ಪೂರಾ ತುಂಡ್ ತುಂಡ್ ಆಗಿಹೋಗದೆ. ಹೊಡ್ ಹೊಡಿ. ಮತ್ತೆ ಬಂದ್ ಹೇಳ್ತು.

"ನನ್ನ ಜೀವ ವಂದ್ ಬಿಟಕೊಡು, ಬೇರೆ ರಾಜಿಕ್ ಹೋತೆ" ಅಂತು. 'ಬೇರೆ ರಾಜಿಕ್ ಹೋತೆ' ಹೇಳಿ ಬರೆಸಿಕಂಡು. ಜೀವ ವಂದ್ ಬಿಟ್ಕಂಡು ಬಾಕಿ ಸಾಮಾನು ಆಶ್ತಿಯೆಲ್ಲ ತಕಂಡ್ತು, ನೊಳೆ ಹೋಯ್ತು.

ಗಂಡ ಇದ್ರದಲ್ಲೇ ಬರೂಕ ಹಣಕದ. ವಂದಿವ್ಸೆ ಗಂಡ ಹಿಂಡ್ತಿ ಮನಗರೆ ಮಾಶೇಶ ಬಂದಿ ನೋಡ್ತು. ಮಾಯದ ಕುಂಚ ಅವಗೆ ಯೆಳಿತು ಅವ್ಗೆ ಮಾಯಿನ ನೆದ್ರಿ ಬಿದ್ ಹೋಯ್ತು. ಹಾಗೇಯ ಅದು ಅಲೋಚ್ನೆ ಮಾಡ್ತು, 'ಇವನ ಕೊಂದ್ತೂ, ನಾನು ರಂಡಿ ಸಾವಾಸ ಮಾಡಬೇಕಾಯ್ತು' ಅಂದ ಹೇಳಿ ಆಲೋಚ್ನೆ ಮಾಡ್ತು ಇವ್ನ ಕೊಲ್ಲುದೆಲ್ಲ.

ಅದ್ರ ಕೈಲಿ ಹೇಳ್ತು, "ನಿನ್ನ ಇಲ್ಲಿವರಗೂ ನಂಬ್ಕ ವಳ್ಕಂಡಿ" ಹೇಳಿ ಮಗನ ನೆಕ್ಕಂಡ್ ಮುದ್ದಾಡ್ತು. ಹುಡಗಗೆ ಆಚಿ ಕೈಲಿ ವಂದ್ ಈಚಿಕೈಲ್ ವಂದು ನಾಣ್ಣೆ ಕೊಟ್ತು. ಮುದ್ದಾಡಿಸ್ತು ಇದ್ರ ಕಲ್ ಹೇಳ್ತು. "ನಾನು ಬಾಗಿಲದಾಗೆ ನೆಲಜಪ್ಕಂಡಿ ಸಾಯ್ತೆ ನಿಮನಿ ಬಾಗಿಲದಲ್ಲಿ. ಗಂಡನಕೈಲ್ ಹೇಳಬೇಕು. ಇದ್ರ ತಕಂಡ್ ಹೋಗಿ ಗಂದದ ಚಕ್ಕಿ ಹಾಕಿ ಸುಟ್ಟಿ, ಬೂದಿ ತಕಹೋಗಿ ಸಮುದ್ರದಲ್ ಬಿಡಬೇಕು" ಅಂದ್ ಹೇಳ್ತು ಮಾಶೇಶ.

ಮಾತಾಡ್ಲೆಲ್ಲ ಸುಮ್ಗೆ ಉಳ್ಕಂಡ್ತು. ಮಾಶೇಶ ಇದರ ಮನಿ ಬಾಗಿಲದಾಗಿ ಸತ್ ಬಿಡ್ತು ಹೆಡೆಜಪ್ಕಂಡಿ. ತಕಹೋಗಿ ಗಂಡನ ಕೈಲಿ ಹೇಳ್ತು, "ಗಂದದ ಚಕ್ಕಿಯೆಲ್ಲಾ ಹಾಕ್ ಸುಡು. ಸುಟ್ಟಿ ಬೂದಿನ ತಕಹೋಗಿ ಸಮುದ್ರದಗೆ ಬಿಟ್ ಬಾ" ಅವ ಹಾಗೆ ತಕ ಹೋಗಿ ಸಮುದ್ರದಲ್ ಬಳ್‌ಬಿಟ್ಟ. ಗಂಡ ಹಿಣ್ತಿ ಗನಕಾಗಿ ಉಳಕಂಡ್ರು.

- **ಕೆಲವು ಪದಗಳ ವಿವರಣೆ**

ಜಪ್ಕಂಡಿ = ಬಡಿದುಕೊಂಡು

ಬಳ್ ಬಿಟ್ಟ = ನೀರಲ್ಲಿ ಹೋಗುವಂತೆ ಬಿಟ್ಟ

■ ಹೇಳಿದವರು: **ರಾಮಕೃಷ್ಣ ಬೆಳ್ಳ ನಾಯ್ಕ** (ಕುರುಡ), ದಿನಾಂಕ: ೧೬-೦೩-೧೯೬೯.

# ಶಂಖ - ಚಕ್ರ

ಅಣ್ಣ-ತಂಗಿ. ತಾಯಿ ಸತ್ ಹೋಗೆ ಬಿಟ್ತು. ಯೆಯ್ಯೊ ಜನಕೂ ಸಾಕೌರಿಲ್ಲ. ಏನ್ ಮಾಡಬೇಕಾಯ್ತು? ನಿಮ್ಮಂತರ ಕೈಲಿ ಚಿಪ್ಪಕ್ಕಿ ಬೇಡ್ಕ್ ತಿಂಬ್ದು. ನಿಮ್ ತಾಯಿ ಯೇನ್ ಹೇಳ್ತು? "ಶಿದ್ದಕ್ಕೆ ತಕಂಡಿ ಬೇಯ್ಸಕ ತಿಲ್ಲಕ್ಕಿ" ಹೇಳ್ತು. ಹುಡಗರು ದೊಡ್ಡಾಗಿ ಅಂಗಳ್ದ್ ಸದಿ-ಕಸ ಗುಡ್ಸುವ ಹಾಗ್ ಆದ್ರು. "ತಮ್ಮ ಜಿಗ್ ತಂದಾಕು. ಬಚ್ಚಲಕಾಯ್ತು. ಚಿಪ್ಪಕ್ಕಿ ಕೂಡೆತ್ರು. ಬೇಯ್ಸ್ ತಿನ್ನಿ" ಅಂತು. ತಂಗಿಕಲ್ ಯಸರ ಯೆತ್ ಕೊಟ್ಟ ಹೋದ ಬೆಟ್ಟಕ್ಕೆ.

ಅಕ್ಕಿ ಕೊದಿ ಬಂತು. ನೆಲದ ಮೇಲಿದ್ದದ್ ಬಂತು, "ಏ ಅಣ್ಣ ಇಲ್ ಬಾರೋ" ಅಂತದೆ. ಕೆಮಿಗ್ ಬಿತ್ತು ಓಡ್ ಬಂದ. "ನೆಲದ ಮೇಲಿದ್ದದ ಬಂದ್ಕಂಡ್, ವಲಿ ಬೊಡ್ತ ಬಿದ್ದದೆ" ಅಂತು. "ಮುಟ್ಟಿ ಮುಚ್ ಹಾಕಬೇಕಾಗಿತ್ತು" ಅಂದ. ಮುಟ್ಟಿ ಮುಚ್ ಹಾಕ್ದ. ತಂಗ್ಯ ನಿಮ್ಮನಿಗ್ ಕಳಸಕೊಟ್ಟ. "ಅಮ್ಮನ ಕಲಿ ಯೆಯ್ದಿ ಬಿಲ್ಲಿ ಹಾಲ್ ಬೇಡ್ಕಬಾ. ನಮ್ಮತ್ರ್ ವಂದ್ ಜೀವಾತ್ಮ ಬಂದದೆ. ನರಮನಸ ಹೇಳು" ಅಂದ, ನಿಮ್ಮ ತಾಯಿ ಹಾಲ ಕೊಟ್ ಕಳಗತು. ಮೂರ್ ದಿವಸಿ ಬಿಡದೆ ಹಾಲ್ ಹೊಯ್ದ. ನಾಕನೆ ದಿವಸಕ್ಕೆ ಮರೆತ್ ಹೋಯ್ತು. ಸೌದಿಗೆ ಹಣಕದಲ್ ಹಂಬಲಾಯ್ತು.

ಸೌದಿ ಕೊಲೆಲ ಮಾಡ್ಕಂಡ್ ನಿಮ್ಮಂತರ ಮನಿಗೆ ಹೊತಾಕಿ ಹಾಲ ಬೇಡ್ಕಂಡಿ ಮನಿಗೆ ಬಂದ ಮುಟ್ಟಿ ಮುಚ್ಚದೆ. ತೆಗೂಕೆ ನೋಡ್ದ ಹಾಲ್ ಹಾಕಬೇಕು ಹೇಳಿ. ಅದರಲ್ ವಳಗೆಲ್ಲದೆ; ಅದ್ರ ಮೇನ್ ಮಾಡ್ದ ಅದು ಕಲ್ ಹರಳಾಗೀತು. ಹಾಗೆ ಇಟ್ಟ, "ತಂಗಿ ಇದು ನಮ್ಗೆ ಯಂತಕ್ಕೆ?" ಕೈ ಚೀಲದಾಗ ಹೊತಾಯ್ಕಂಡೆ ಹೋತ್ ಹೇಳಿ ಚೀಲದಾಗ ಹಾಕಂಡಿ ಕುಮಟಿ ಪೇಟಿಗ್ ಹೋದ. "ಕಲ್ ಬೇಕ್ರೋ?" ಕೇಳ್ದ. "ತಕಬಾ" ಅಂದ್ರು. ಅಂಗಡಿಕಾರ್ರು, "ಸೇರಾಗುದೆಲ್ಲ, ಪಾವಾಗುದೆಲ್ಲ ಅರಸೂಗೆ ಮಕ್ಕಳೆಲ್ಲ ಅವ ತಕಂತ ಕಲ್ಲ" ಹೇಳ್ ತೋರ್‌ಕೊಟ್ರು, ಅರಸೂಮನಿಗೆ ತಕಹೋದ.

ಅಲ್ಲಿ ಪಾಗಾರಂಚಿಗ್ ನಿತ್ಕಂಡ, "ಕಲ್ ಬೇಕ್ರೋ ಕಲ್ ಬೇಕ್ರೋ?" ಕೇಳ್ದ. ಕಲ್ ನೋಡೂವರೆಗ್ ಅರಸೂ ಹಿಂಡ್ತಿಗೆ ಆನಂದಾಯ್ತು. ನಾಕ್ಕೊಳಗಕ್ಕಿ, ಕಾಯಿ, ಮೆಣಸು ಸಂಬಾರ ಕೊಟ್ಟ ಕಳಸತು. ಹಂಡಿಲ ಹಾಕಿ ಕಲ್ಲ ಮುಚ್ಚಿಟ್ತು. ಯೆಂಟ್ ಹತ್ ದೆನ್ದ ಮೇನ್ ಗಂಡ ಹಿಂಡ್ತಿ ಆಡ್ತ ಕೂತಿರು ಪಗಡಿಯ. "ನಿಮ್ಮ ಕೈಲಿ ನಾ ಕೇಳ್ಳೇ ಯೆಲ್ಲ ತಡಿರಿ. ಬದ್ಕ್ ಹಂಡಿಲ ಹಾಕಿದೆ" ಹೇಳಿ ಹೋಯ್ತು. ಮುಚ್ಲ ತೆಗಿತು. ಕೊಡ್ಲೆಯ ಐದ್ ವರ್ಸ ಹುಡ್ಗ ಯದ್ ನಿತ್ ಹಂಡಿವಳಗೆ. ಗಂಡನ ಕೈಲಿ ನೆಕ್ಕಬಂದ್ ಕೊಟ್ತು ಆನಂದಾಯ್ತು. "ನಿನ್ ಹೊಟ್ಟಿಲ್ ಹುಡ್ಗರೆಲ್ಲ. ನೀನೆ ಉದ್ರದೆಲ್ ಇದೇ ಬಿದ್ದದ್ದು ಹೇಳಿ ಸಾಕು" ಹೇಳಿ ಹಿಂಡ್ತಿ ಕೈಲ್ ಕೊಟ್ಟ. ತನ್ ಮಕ್ಕಳಂತೆ ಮಾಡಿ ಸಾಕಂಡ್ತು. ಐದ್ ಆರ್ ಯೆಂಟ್ ವರ್ಸಾಯ್ತ ಆ ಹುಡ್ಗನಿಗೆ ಆದ ಕೊಡ್ಲೆಯ, "ಅವ್ವಾ ನಾನು ಸಾಲಿಗ ಹೋಬೇಕು" ಅಂದ. ಪರದಾನಿಗೆ ವಂದ ಹುಡಗಿಯಾಗಿತ್ತು. ಅದೂ ಒಬ್ಬೇಯಾ ಎರಡೂ ಜೊತಿಮಾಡಿ ಸಾಲಿಗ ಹಾಕ್ರು.

ಅವ ಹೋದಲ್ ಇದು, ಇದು ಹೋದಲ್ ಅವ, ಯೆಂಟ್ ಹತ್ ವರ್ಸಾದ ಮೇಲೆ ಉರಾಗೆ ಅಪವಾದಿ ಹೊರ್ಸ್‌ಬಿಟ್ರು ಅವರಿಗೆ. 'ಹೋತ್ರು ಇವರು ದೇಸಾಂತರ ಗತಿಯಾಗಿ' ಅಂದಿ ಅಪಾವಾದಿ ಹಾಕು. ಹೇಳುವರಿಗೆ ತಾಯ್‌ತಂದಿ ಬಾಳ ಸಣ್ಣಾದ್ರು ಮಗನ ಕೈಲ್ ಹೇಳದ್ರು, "ನೀವು ಇನ್ನೆ ಸಾಲಿಗ್ ಹೋಬೇಡಿ ಮಗನೇ, ಮಲ್ಲೇ ಉಳ್ಕಣಿ" ಪರದಾನಿನೂ ಹಾಗೇ ಹೇಳ್ದ ಮಗಳಿಗೆ. ಮುಸಕಲ ಹಾಕ ಮನಿಕಬಿಟ್ರು ತಂತಮ್ ಮೆತ್ನಮೇನೆ. ಈ ತರದಲ್ ಮನಿಕಂಡ್ರೆ ಹೇಗಾಗೂದು? "ಊಟ ಮಾಡಿ ಸಾಲಿಗ್ ಹೋಗಿ" ಮಗನ ಕೈಲಿ ಕಳಿಸಿದರು. ತಂಗಿ ಕೈಲಿ ಕಳಿಸಿದರು. ತಂಗಿ ಕೈಲಿಯೇ ನಂದ್? "ಯೇನ್ ತಂಗಿ ಇನ್ನು ನಾವು ಈ ಊರಾಗ್ ಇರ್ವದಲ್ಲ, ದೇಸಾಂತರ ಗತಿಯಾಗಿ ಬಿಡವ" ಅಂದ ಬಂದ್ರು. ಉಂಡ ಉಳದ್ರು.

ಮರದಿವ್ಸೆ, "ತಾ ಸಾಲಿಗೋತೆ" ಅಂದಿ, ಇಬ್ಬರೂ ಬೇಕಾದದ್ದ ಕಟ್ಕಂಡಿ ದೇಸಾಂತರ ನಡೆದ್ರು. ಹೋಗಿ ವಂದ ದೇಸಕ್ ನೆಡದ್ರು ಹೋಗಿ ಅಲ್ಲಿ ಯೇನಾಗದೆ? ಅರಸೂ ಹುಡಗಿ ಮೇಲುಪ್ಪರಗಿ ಮೇಲೆ ಕೂತದೆ, "ಅಪಯ್ಯಾ ನನ್ನ ಮೇಚ್ಚಿನ ಗಂಡ ಬತ್ತ ಕರಸಿ ನಗ್ನಾತೆ" ಅಂತು.

ಕರಸಿದ, "ಹುಡಗಿ ನಗ್ನ ಮಾಡಕೊಡ್ತೆ ಅರ್ದ ಊರ ಕೊಡ್ತೆ" ಅಂದ. "ಆಯ್ತು. ಲಗ್ನ ಮಾಡೂಕೆ ಅಡ್ಡೆಲ್ಲ" ಅಂದ. ಲಗ್ನಕ ತಯಾರಾಯ್ತು. ಪರದಾನಿ ಹುಡಗಿ ಗೋಳೋ ಅಂತ ಹೇಳಿತೀಡ್ತು. "ನೀ ಲಗ್ನಾತೆ, ನನಗೆ ಮುಂದಿನ ಗತಿ ಯಾವದು?" "ನೀನು ಲಗ್ನ ನೀರು ಬೀಳಬೇಕಾರೆ ವೋಡ್ ಬಂದು ನನ್ನ ಬಲಕನ ಬುಜ ಹಿಡಿ. ತೊಳಚಿ ನೀರ್ ಹಾಕತ್ರು" ಅಂದ. ಬಲಕನ ಬುಜ ಹಿಡ್ದಿ ದಾರಿ ನೀರ್ ಕೈಮೇನ್ ಹಾಕಂಡ್ತು, ಹಿಂಡತಿಯಾಯ್ತು. ಇಬ್ಬರು ಹೆಂಡ್ರಾದ್ರು.

ಮಾವನ ಕೈಲ್ ಯೇನಂದ? "ಅಜ್ಜ, ಮುತ್ತಜ್ಜ ಹೇಗೆ ಅವರೆಯೋ ಯೇನೋ? ಇವರು ಇರ್ಲಿ" ಹೇಳಿ ತನ್ನೂರಿಗ ಹೋಕ್ಕೆ ರಮಾಣ್ಯಾದ. ಅದ ತಂಗಿ ಯೇನಂತು? "ಅಣ್ಣ ತಾ ಮಾತ್ರೆ ಇಲ್ಲಿರುದೆಲ್ಲ. ನಾ ನಿನ್ ಸಂತಿಗೇ ಬತ್ತೆ" "ತಂಗೀ ಅವರು ಯೇನು ಹೇಳತ್ರು ಕೇಳ್ಕಂಡಿ ಮೆತ್ನ ಮೇನಿರು" ಅಂದ. ಇದು ಏನ್ ಹೇಳ್ರೂ ಕೇಳ್ಳಲ್ಲ. "ಅಣ್ಣಾ ನಾನೂ ಬತ್ತೆ" ತೀಡ್ತದೆ ಅವ್ನ ಸಂತೀಗೇ ಹೋಯ್ತು.

ಸಮುದ್ರದ ತುದಿಗೆ ಹೋದ್ರು ಅಲ್ ವಂದ್ ಕಣಕಾಲ ನೀರ್ಗೆ ಹೋದ. ಅದೂ ಹೋಯ್ತು. ಹೋಗ್ ನಿತತು. ಅಣ್ಣ-ತಂಗಿ ನಿಲ್ಲೂವರಿಗೆ ಯೇನಾಯ್ತಲ್ಲಿ? "ಅಣ್ಣ ನೀ ಹೋಗ್ವದಾರ್ ಹೋಗು. ನಿನ್ ಹೆಸ್ರ ಹೇಳ್ ಕೊಟ್ಟಾಕ್ ಹೋಗು" ಅಂತು ಕೈ ಮುಗೀತು.

"ನನ್ ಹೆಸ್ರ ಕೇಳ್ಬೇಡ" ಅಂದ. ಕೇಳೂದೆಲ್ಲ. ಅಲ ಹೋಗ ನಿತ್ಕಂಡ, "ನನ್ನ ಹೆಸ್ರ ಸಂಕಚಕ್ರ ಗದಾ" ಹೇಳಿ, ಯೆಪ್ಪತ್ತೇಳ ಹೆಡಿ ತೆಗೆದ ತೋರ್ಸದ. ಮುಳ್ಕ ಹೋಗಿ ಅಟ್ ದೂರ ಹೋದ. ಇದು ಹೋಗಿ ಗುಡ್ಡಿಮೇನೆ ಹೊಳ್ತದೆ. ಅವ ದೋರೆ ಹೋಗಿ ಸನ್ನೇಸಿಯಾಕ್ಕಂಡ್

ಬಂದ. ಮತ್ ಕೇಳ್ದ, "ಅವ್ವಾ ಯಾಕೆ ಹೊಳ್ತಿ? ಯಾಕ್ ಸಮುದ್ರದ ತುದಿಗೆ ಬಂದಿದ್ದೆ?" ಕೇಳ್ದ. "ನಾನು, ತಾಯಿಗೆ ವಂದ್ ಹುಡಗಿ ಹುಟ್ಟಿದ್ದೆ. ಅರಸುಮಗ ತನ್‌ತಂದಿ ಅನಾದ್ರಿ ಮಾಡಿ ತೋರ್ಸದ. ಹೆಸ್ರು ಕೇಳ್ದೆ, 'ಶಂಕಚಕ್ರ ಗದಾ' ಹೇಳಿ ಯೆಪ್ಪತ್ತೇಳ ಹೆಡಿ ತೋರ್ಸ ಹೋದ."

ಹೇಳ್ದ, "ಗಂಡ ಸಿಕಬೇಕಾರೆ ಕಟ್ಯ ನೀ ಸಾರ್ಸಬೇಕು. ದೊಡ್ಡ ರಂಗವಲ್ಲಿ ಗೈಯಬೇಕು. ಕಟ್ಟಿ ಮೇನೆ ಸಾರ್ಸಿ ನೀ ಹೋಗಿ ಅರಸೂಗೆ ತೆಳಿಸು. ಸನ್ನೇಸಿ ಹೇಳನೆ ಹೇಳು. ಊರ ಮುಂದನ ಕಟ್ಟಿದಲ್ಲಿ 'ಸಾವ್ರ ಬಾಳಿ ಹಣ್ಣು, ವಂದ ಮಣ ಕುಂಕೂಮ, ವಂದ ಸಾವ್ರ ಕೋಳಿಮೊಟ್ಟೆ, ವಂದ್ ಕೊಪ್ಪರಿಗೆ ಹಾಲು ತಂದ್ ಕೊಡು" ಹೇಳು.

"ಅವಗೆ ಸಣ್ಣರು ದೊಡ್ಡರು ಯೆಲ್ಲ ಬರಬೇಕು" ಹೇಳು. ಅಜ್ಜಜ್ಜಿ, ಮುತ್ತಜ್ಜಿ, ಪುಟ್ಟಜ್ಜಿ, ಬಿಜ್ಜಜ್ಜಿನೂ ಕರ್ಕಬತ್ತ. ಬಂದಿ ಸುತ್ತೂವ ರಂಗವಲ್ಲಿ ಹೊಯ್ಕಂಡಿ, ಕುಂಕುಮೆಲ್ಲ ತುಂಬ್ ಹಯಿಡಿ, ಕೊಪ್ಪರಿಕಿ ಹಾಲ್ಗೆ ಕೋಳಿಮೊಟ್ಟೆ ಕನ್ ಮಾಡಿ ಹಾಕಿ ಇಡತರೆ. "ಇಲ್ಲೆಲ್ಲ ಇಡು" ಎಂದೇ ಹೇಳಬೇಕು. ಊದಬತ್ತಿ ಹಚ್ಚಿ ಸುತ್ತೂ ಇದರ್ದೆ ಹೊಗಿ ಹಾಕಿ-

ಮೊದಲು ಮುತ್ತಜ್ಜ, ಬಿಜ್ಜಜ್ಜ, ಅಜ್ಜ-ಅಜ್ಜಿ, ಅಪ್ಪ-ಅವ್ವಿ ಯೆಲ್ಲ ಬತ್ರು. ಅವರ್‌ಯೆಲ್ಲಾ ಸಂಗಳಸ ಕಂಡಿ, "ಯಾವ ತಾಯ ಹೊಟ್ಟಿಲ ಹುಟ್ದ ಮಗಳಪ್ಪಾ! ಹೆಣ್ಣಾದ್ರೆ ಬಲಕನ ತೊಡಿಮೇನೆ; ಗಂಡಾದ್ರೆ ಯಡಕಿನ ತೊಡಿ ಮೇಲೆ ಕೂತ್ಕ" ಹೇಳತ್ರು. ನೀ ಕೆಳಗೆ ಇಳೂಕೆಲ್ಲ. ಕಡಿಕೆ ಮುತ್ತಜ್ಜ ಬರ್ತಯ. ಸಂಗಳಸಕಂಡಿ ಹೇಳಬೇಕಾರೆ, "ಎನ್ ಯಾವ ತಾಯಿ ಹಡಿದ ಹುಡುಗಿಯೋ? ಬಲಕಿನ ತೊಡಿ ಮೇನೆ ನೀಕೂರು ಐಶ್ವರಿಯೇ ಅದೆ" "ಕಿರಿ ಮೊಮ್ಮಗ ನನ್ ಗಂಡ. ಅವನೊಂದ ಬಿಟ್ ಕೊಡಪ್ಪ ಹೇಳು" ಹೇಳ್ದ. "ಹೀಗೆ ನೋಡು" ಹೇಳಿ ನೋಡುವರಿಗೆ ನಡೆದ ಎತ್ಲಾಗ ಹೋದ್ನೋ.

ಇದು ಹಾಗೇಯ ಕೇಳ್ಕಂಡ್ ಅರಸೂ ಮನಿಗೆ ಹೋಯ್ತು. ಅರಸು, "ಯೆಲ್ಲ ಹೋಗಿದ್ದೆ? ಯೇನತಾನ?" ಕೇಳ್ದ. ಅಪ್ಪಯ್ಯ, "ನಮ ಗಂಡಸರು ಕೈಲಿ ಸಿಕ್ಕೂದೆಲ್ಲ. ವಂದ್ ಕೊಪ್ಪರಿಗಿ ಹಾಲು, ಸಾವಿರ ಬಾಳಿಹಣ್ಣು, ಸಾವ್ರ ಕೋಳಿಮೊಟ್ಟೆ, ವಂದ ಮಣ ಕುಂಕುಮ ತಂದ್ ಕೊಟ್ರೆ ಅಳಿಯನ ಕೈಗೆ ತಂದಕೊಡ್ತಿ" ಅಂತು. ಅವ ಅಟ್ಟೂ ತರಿಸಿದ. ತಕ ಹೋಗಿ ಊರ ಮುಂದಿನ ಕಟ್ಟಿಮೇನೆ ಇಟಕೊಟ್ರು. ಸಾರಸರು, ಕೊಪ್ಪರಿಗೆ ಹಾಲ್ಗೆ ಕೋಳಿಮೊಟ್ಟೆ ಕನ್ ಮಾಡ್ ಕೂಡಸ್ತು. ತಾಸು ಮೂರ ತಾಸು ರಾತ್ರಿವರಿಗೂ ಜನ ಬತ್ತೆ ವಳದ್ರು. ಈ ಹುಡಗ ಬೋರ್ ಬೋರ್ ಬೋರ್ ಬಂದು ಕೋಳಿಮೊಟ್ಟೆ ಹಾಕಿದ. ಹಾಲು ಮೋರಿಕೊಂಡ. "ಹೆಣ್ಣಾದ್ರೆ ಬಲಕೆ ಬಂದ್ ಕೂಡ್ಲಿ, ಗಂಡಾದ್ರೆ ಯಡಕೆ ಬಂದ್ ಕೂಡ್ಲಿ" ಹೇಳ್ದ ಅಜ್ಜ. ಬಲಕನ ತೊಡಿಗ ಕೂತ್ತು. "ಅಜ್ಜಯ್ಯ ನೀ ಕೊಟ ಐಶ್ವರ್ಯ ತನಗದೆ" ಅಂತು. "ನಿನ್ನ ಮೊಮ್ಮಗ್ನ ಗಂಡ" ಅಂತು, "ಯಾವ ಜನ್ಮದಲ್ ಹುಟ್ದವನೂ" ಅಂದಿ ಬಿಟ್‌ನೆಡ್ಡ ಅಜ್ಜ.

ಬೆಳಗಾಯಿತು. ಗಂಡ-ಹೆಂಡ್ತಿ ಅರಸೂಮನಿಗೆ ಬಂದ್ರು. ಸಾನಕ್ಕೆ ಬೇಕಾದ ತಂದ ಕೊಟ್ರು. ಅರಸೂ ಮಗಳು ಗಂಡ ಬಂದ ಅಂದಿ ಬೇಕಾದ ಉಪಚಾರ ಮಾಡ್ತು. ಐದ್ ದಿನ

ಉಳಿದರು. ಆರ್‌ನೆ ದಿನಕ್ಕೆ- "ತನ್ನ ಊರ್‌ಗೆ ಹೋತೆ" ಅಂದ. "ನೀ ಹೋಕಡ್ಡೆಲ್ಲ. ಬೇಕಾದ ಐಶಿರಿ ತಕಂಡ ಕೊದ್ರಿಮೇನ್ ಹೇರ್ಕಂಡಿ ನಡ್ಯಾಪಾ" ಅಂದ ಅರಸು. ಬೇಕಾದ ಬಳವಳಿ, ಬಂಗಾರ ಅಟ್ಟೂ ಸೆಟ್ಟ ಹೇರಿ ಈ ಮಗಳು ಆ ಮಗಳು ಕುಳ್ಸಿ ಮನಿಗ್ ಕಳಿಸಿದ.

ಪರದಾನಿ ಹುಡಗಿ ಪರದಾನಿ ಮನಿಗ್ ಹೋಯ್ತು. ಅವ ಮನಿಗ್ ಬಂದ. "ಯೆಲ್ ಹೋಗಿರಿ? ಊರಲ್ ಬದ್ನಾಮಿ ಬಂದದೆ" ಅಂತು ಅವ್ವ. "ನನ್ ಮೈಮೆ ತೋರಬೇಕೋ ಅಪ್ಪಾ?" ಕೇಳ್ತ. "ಬೇಡ ಬಂದದ್ದೇ ಸಾಕು" ಅಂತ, ಸುಖ - ಸಂತೋಸದಲ್ ಉಳದ್ರು.

- **ಕೆಲವು ಪದಗಳ ವಿವರಣೆ**

ಬತ್ತವಳದ್ರು = ಬರುತ್ತಲೇ ಉಳಿದರು        ಸಾನ = ಸ್ನಾನ

■ ಹೇಳಿದವರು: **ದಿ. ಪರಮೇಶ್ವರಿ ಗಣಪಯ್ಯ ನಾಯ್ಕ,** ಹೆಗಡೆ ಊರು
ದಿನಾಂಕ:೦೮-೦೪-೧೯೬೦

◆

# ಸಣ್ಣ ಗಂಗಿ

ಸುಕ್ರನು, ಬೆಳ್ಳನು, ಚಂದ್ರನು, ಸೂರ್ಯನು ಊರ ಸಂಚಾರಣೆಗೆ ಹೋದರು. ವಂದೇ ತಂಗಿ ಅಪ್ಪಿಲ್ಲ. ಅವಿ ವಂದ್ ಉಳಿತದೆ. ಬರ್ಮದೇವರು, "ತಂಗಿ ಕೊಡು" ಅಂದ್ ಹೇಳಿ ಬತ್ರು.

ಅಣ್ಣದಿರ ಬಂದ್ರು. ಸಣ್ಣಗಂಗೆ ಹೋಗಿ ಅವರಿಗೆ ದಣವಾಗುದು ಹೇಳಿ, ಹಣ್ಣು ಹಂಪ್ಲಿ ಯೆಲ್ಲ ತಂದಿಟ್ಟು. ಆಗ ಅವರು ಬಂದಕಂಡಿ, "ವಂದ್ ಹಣ್ ತಿನ್ನು ತಂಗಿ" ಹೇಳದ್ರು. "ವಂದ್ ಗುಟಕಿ ಹಾಲ್ ಕುಡಿ ತಂಗಿ" ಅಂದ್ರು. "ತನ್ಗೆ ಬೇಡ್ ತನ್ಗ ದಣುದಾವ್ತಿ ಆಗ್ಲಿಲ್ಲ. ಹೊಲಕೆ ಹೋಗಿ ನಿಮ್ಗೆ ದಣುದಾವತಿ ಆಗದೆ ನೀವೇ ತಿನ್ನಿ" ಅಂತು. ಆಗೆ ತಿಂದ್ರು. ಸಣ್ಣ ಗಂಗಿ ತಕಂಡ್ ಹೋಗಿ ಮೀಸಿ ಬಿಟ್ರು.

ಸುಕ್ರ, ಬೆಳ್ಳ, ಚಂದ್ರ, ಯೆಲ್ಲ ಕಡಿಗೆ ಮಿಂದ್ಕಂಡಿ ಶಿವಪೂಜೆ ಮಾಡದ್ರು. ಶಿವಪೂಜೆ ಮಾಡ್ಕಂಡಿ ತಂಗಿಗ ವಂತುತ್ ಉಣ್ಸರು, ಉಣ್ಸಿ ಮೊಕ ತೊಳಸಿ, ತಾವೂ ಉಂಡ್ರು ಮತ್ತು ನಾಳೆ ಮಜ್ಜಾನಕೆ ಉರಸಂಚಾರಣೆಗೆ ನಡೆದ್ರು.

ಸಂಚಾರಣೆ ಹೋಗುಕೇಯ ಇದು ಅವ್ರ್ ಹೋಗರೆ ಅಂದಿ ಚಂಬ್ನಲ್ ಹಾಲು, ತಟ್ಟೆ ಬಾಳಿಹಣ್ಣು ಯೆಲ್ಲ ತಂದಿಟ್ಟೆ - ಪಟ್ಟೆ ಮಂಚ ಕುಡಗಿ ಹಾಸಿಟ್ಟು. ಬಂದ್ರು ತೋಡೇಮೇನೆ ತಕಂಡ್ ಕುಂತ್ರು. "ತಂಗಿ ವಂದ್ ಹಣ್ ತಿನ್ನು, ಇಷ್ಟ್ ಹಾಲ್ ಕುಡಿ" ಅಂದ್ ತಿನ್ಸಿ, ಕುಡ್ಸಿದರು.

ಕುಡ್ಕಂಡಿ ಉಳಿತು. ಸಣಗಂಗೆ ಮೀಸ್ ಹಾಕ್ ಹೋಗಿ, ಮಿಂದ್ಕಂಡಿ, ವಳಗ ಹೋಯ್ಕಂಡಿ, ಅಣದಿರ್ ತಿಂದ್ರು.

ಹಾಂಗೇಯ ಹೋಗುಕೇಯ ತಾಯಿಕೈಲಿ, "ದೊಡ್ಡ ಅಟ್ಟಕೆ ದೊಡ್ಡಯೇಣಿ, ಸಣ್ಣ ಅಟ್ಕೆ ಸಣ್ಣ ಯೇಣಿ ಚಾಚಿಡು. ಬರ್ಮದೇವರ ಬತ್ರು" ಹೇಳಿದ್ರು. "ಸಣ್ಣಗಂಗೀನ, ಬೆಂಕಿಗ್ ಕಳ್ಗಬೇಡ, ನೀರಿಗೆ ಕಳ್ಗಬೇಡ" ಹೇಳ್ ಊರ ಸಂಚಾರಣಿಗೆ ಹೋದ್ರು.

ಬರ್ಮದೇವರ ಕಡೆಗೆ ಪತ್ರಬಂತು. ಮುದ್ಕಿ ಕೂಡೆ, "ತನ್ಗ ಕೊಡಬೇಕು. ಸಣ್ಣ ಗಂಗೆ" ಅಂದ್ ಹೇಳಿ. ಆಗ ಅಣ್ಣದಿರ್ ಬಂದ್ರು. ಬರುಕೇಯ ಪಟ್ಟೆಮಂಚ ಕುಡ್ಗ ಹಾಸ್ತು. ಹಾಲು-ನೀರು ಯೆಲ್ಲ ತಂದಿ ಇಟ್ತು.

ಉಂಬೂಕ್ ಕೂತಾಗ ತಾಯಿ ಹೇಳ್ತು. "ಬರ್ಮದೇವ್ರ ಪತ್ರ ಬಂದದೆ ತಂಗಿ ತನ್ಗ ಕೊಡಬೇಕು" ಅಂದ್ ಹೇಳಿ. ಆಗೆ ಅಣ್ಣದಿರು ಯೆಂತಾ ಅಂದ್ರು? "ಬೆನ್ನಸುಳಿ ಬೆಳಿಲಿಲ್ಲ. ನೆತ್ತಿ ತುಂಬಲಿಲ್ಲ. ನೂರೊಂದ ಬಟ್ಲ ನನ್ ತಂಗಿ ತಿಕನಾರ ಬರ್ಮ ದೇವರಿಗೆ ಕೊಡುಕಾಗುದಿಲ್ಲ, ಅಂದ್ ಹೇಳಿ ಪತ್ರ ಹಾಕು ಬರ್ಮದೇವ್ರಿಗೆ."

ಬರ್ಮದೇವರಿಗೆ ಸಿಟ್ ಬಂದ್ ಹೋಯ್ತು. "ಬೆಳಗಾಗುತಕ ದೊಡ್ ಕೆರಿ ಆಗ ಬೇಕು ಅವರ ಮನಿ ಬಾಗ್ಲ ಮುಂದೆ. ಅಬ್ಬಿ ಹೊಂಗ ಆಗಬೇಕು. ತೆರೆಹೊಂಗು (ತಾವರೆ)" ಅಂದ್ರು. ಬೆಳಗಾಗು ತಕ ಕೆರೆ ಆಗಿ ಆ ಹೊಂಗ್ ತುಂಬ್ ಬಿದ್ ಹೋಗದೆ. ಯೇನ್ ಹೇಳರೆ? ಊರ್ನ ಕೇರ್ಯ ನೆರೆ ಕೂಡೆ ಹೇಳರೆ. "ವಂದಂಗ್ ಹೂಂಗೆ ಕಿಟ್ಟೂಕಾಗ ನೆರೆಯವ್ರೆ ನಾನು ಬೂಮಿಸಾಪ ಇಡ್ತೆ" ಅಂದ್ರು.

ಬೆಳಗಾಗೂಕೇಯ ಹೊಂಗ್ ತುಂಬ್ ಹೋಗದೆ. ಹೊಂಗಾಯ್ತಲ್ಲ? ಆಗುಕೇಯ ಇವ್ರ ನೋಡದ್ರು. "ತಂಗಿ ಯೆಲ್ಲೆಲ್ಲೂ ಕಳ್ಗಬೇಡ; ಬೆಂಕಿಗೂ ಕಳ್ಗ್‌ಬೇಡ ನೀರಿಗೂ ಕಳ್ಗ್‌ಬೇಡ ಅಟ್ಟಕೆ ಸಣ್ಣ ಯೇಣಿ ಚಾಚು. ಅಟ್ಟದ ಮೇನ್ ಕುಳ್ಸು" ಅಂದಿ, ತಂಗಿ ಕೂಡ್ (ಸಣ್ಣಗಂಗೆ) ಹೇಳ ಹೋಗರೆ ಸುಕ್ರ, ಬೆಳ್ಳ, ಚಂದ್ರ, ಸೂರ್ಯ ಊರ ಸಂಚಾರಣೆಗೆ ಹೋದ್ರು.

ಇದೇ ಬಂತು. ಬಂದ್ಕಂಡಿ ಕೆರೆಲ್ ಮೊಕತೊಳಿತು. ಮೊಕ ತೊಳ್ಕಂಡ್ ಅಟ್ಟೂ ಹೂಂಗೂ ಕೊಕಂಡಿ, ಮಡ್ಲಗೆ, ಹಾಯ್ಕಂಡ ಮನಿಗ್ ಬಂತು. ಬಂದ್ಕಂಡಿ ಹೂಂಗ್ ಕಟ್ತು, ಮೆಟ್ತು. ತಾಯಿ ಕೂಡೆ "ಮಂಡೆಬಾಚು" ಅಂತು. ಆಗ ತಾಯಿ ಬಂದು ಮಂಡೆ ಕಟ್ತು. ಹೂಂಗ್ ಮುಡಿಸ್ತು. ಆಚೀಚೆ ಕೇರ್‌ಯರು, "ನಂಗ್ ವಂದ್ ಹೊಂಗ್ ಕೊಡು." "ಯೆಲ್ಲರೂ ವನಂದ್ ಯೆಸ್ಸ ಮುಡಿತ್ರು" ಅಂತ್ರು. ಆ ಕೇರಿ ಜನ್ರು ದಾಡರು, ಗೌಡಿರು, ಗಾಮೊಕ್ಲು ಯೆಲ್ಲಾವ. ತಾಯಿ ಮಂಡೆ ಬಾಚೂಕೇಯ, ಹೂಂಗ ಮುಡ್ದೇಯ ಸಣ್ಣಗಂಗೆ ಯೇಳ ತಿಂಗಳ ಬಸರಿ. ಆಗೆ ಸಣ್ಣಗಂಗೆ ಅಸ್ರನೂ ಇಡಲಲ್ಲ ಪಟ್ಟೆ ಮಂಚನೂ ಕುಡ್ಗೆ ಹಾಕ್ಲಲ್ಲ. ಅಟ್ಟದ ಮೇನೆ ಹೋಗಿ ಮನ್ ಕಂಡ್ತು. ಆಗ ಅಣ್ಣದಿರು ವಳಗ್ ಹೋದ್ರು. ಸುಕ್ರ, ಬೆಳ್ಳ, ಚಂದ್ರ, ಸೂರ್ಯ- "ಯಂತ ತಾಯೀ ಮನಿಕಂಡದ್ದೇ?" "ಯೇನಿಲ್ಲ ಬರ್ಮದೇವ್ರ ಪತ್ರ ಬಂದಿತ್ತು. ಬೆನ್ನ ಬೆಳಿಲಿಲ್ಲ, ನೆತ್ತಿ ತುಂಬಲಿಲ್ಲ, ಅಂದ ಹೇಳಿದ್ಯಲ್ಲೊ ಮಗನೇ, ಈಗೆ ಯೇಳ ತಿಂಗಳ ಬಸರಿ. ಅಡವಿ ಅರಣದಲ್ ಬಿಟ್ ಹಾಕ್ ಬರಬೇಕಲ್ಲಾ" ಅಂದ್ ಹೇಳಿ ತೀಡ್ತು.

ಕಡೇಗ್ ತಂಗಿಗ್ ಹಗೂರಕೆ ಹೆರಗೆ ತಕ್ಕಂಡ ಬಂದ್ರು. ಮೀಸದ್ರು. "ಇಟ್ಟು ಉಣ್ಣು" ಅಂದರು. ಉಣ್ಸರು. ಇವ್ರ್ ತೀಡ್ತ ಬಿದ್ದರೆ, "ಯೇನಲ್ಲ ವಂದ್ ಅಕ್ಕ ಇದ್ದಿತ್ತು. ಅಕ್ಕನಿಗೆ ತೋಲ ಸಂಗಟ. ಅಕ್ಕನಿಗೆ ನೊಡೂಕೆ ಹೋತ್ರು."

"ಹಂಗಾರೆ ತಾನೂ ಬತ್ತಿ ಅಣ್ಣ" ಅಂತು. "ನೀ ಬರುದ್ ಬೇಡ ನಾವ್ ಕಣ್ಣಿಂದ ನೋಡ್ಕಂಡ ಬರತ್ರು. ಮಂಡೆ ಬಾಚ್ಕೊ, ಚಂದಣ ಶೀರೆ ಉಡು, ಚೆನ್ನ ಹಾಕ್ಕೊ" ಅಂದ್ರು. "ಅದು, ಯೆಂತದೂ ಬೇಡ" ಅಂತು.

"ಹಾಲ ತಕ್ಕೊ ಅಣ್ಣ, ಬತ್ತಿ ತಕ್ಕೊ ನಾ ಬರುದೇಯ, ಅಕ್ಕನಿಗ್ ನೋಡೂಕೇಯ." ಸುಕ್ರ, ಬೆಳ್ಳ, ಚಂದ್ರು, ಸೂರ್ಯ ನಾಕೂ ಜನ ಕರಕಂಡ್ ಹೋದ್ರು. ಅಡವಿಗೆ ತಕಂಡ್ ಹೋಕಂಡಿ, "ಹಾಲು ಕುಡಿ, ಬುತ್ತಿ ತಿನ್ನು. ಬಾರಿ ದೂರ ಆದ್ರ ಮನೆ" ಅಂದ್ರು. "ಹಾಲ ಕುಡಿತಂಗಿ ಕುಡಿ" ಅಂದದ್ಕೆ ಇಟ್‌ಕುಡಿತು. "ನಾಕೂಜನ ಕಾಲ ನೀಡಿ, ತಾನು ಕಾಲಮೇನ್ ಮನೀಕಂತೆ" ಅಂತು. ನಿದ್ರಿ ಬಂತು. ನಾಕೂಜನ ಅಂಗಿ ತಗದಿ, ಅಂಗಿ ಮೇನ್ ನ ಮಣ್ಣು ಕಲ್ಲು ಹಗೂರಕೆ ತಗದಿ, ಮನ್ಸ ಹಾಕಹೋದ್ರು. (ಮಿಂದೀ ಮದಿಯಾಗದಿರೆ ಬೆಟ್ಟದಾಗೆ ಬಿಡತಿದ್ರು ಯೆಲ್ಲ ಜಾತಿಲೂವ)

ಯೆಚ್ರಾಕಂಡ್ ನೋಡದ್ರೆ ಅಣ್ಣ ಇಲ್ಲ. ಯಾರೂ ಇಲ್ಲ ತೀಡ್ತ ಬಿದ್ದದೆ. ಪರಮೇಸ್ರ - ಪಾರ್ವತಿ ಊರ ಸಂಚಾರಣೆಗೆ ಬಂದಿದ್ರು. ಪರಮೇಸ್ರ-ಪಾರ್ವತಿ, ಪಾರ್ವತಿ ಅಣ್ಣ ಬರಮದೇವರು, "ಯೆಂತ ತೀಡ್ತೆ? ಬೆಟ್ಟದಲ್ಲಿ? ನಿನ್ನ ಅವಿಹೇಳಿತ್ತು, ನೆತ್ತಿ ತುಂಬಲಿಲ್ಲ, ಬೆನ್ನು ಬೆಳಿಲಿಲ್ಲ. ಹೇಳಿ" ಹೇಳ್ತು. "ಈಗ ಯೇಳ ತಿಂಗಳ ಬಸ್ರಿ, ಹೇಗಾದೆ? ನೀನು ನೆತ್ತಿ ತುಂಬದಿದ್ದು? ಬೆನ್ನ ಬೆಳೆದಿದ್ದು?" ಅಂದ ಹೇಳ್ದರು ಮೂರ್ ಗುಳಗಿ ಹೊತಾಕ್ರು. ವಂದ್ ಹೂತಾಕ್ತು. ಯೇಳ ಉಪ್ಪರಗಿ ಮನಿಯಾಯ್ತು. ಆಯ್ತಲ್ಲಾ. ದಾದ್ಯರು ಗೌಡರು ಯೇಲ್ಲಾ ಆದ್ರು ಮೂರುಗುಳಗೇಲಿ ಉಂಬೂಕೆ ತಿಂಬುಕೆ ಅಟ್ಟೂ ಆಗ್ ಹೋಯ್ತು. ದಾದೆರು ಗೌಡಿರಿಗೆ, "ಕೆಲ್ಸಕ್ ಉಳಿರಿ" ಅಂತು.

"ಅಕ್ಕಿ-ಬಿಕ್ಕಿ, ಧಣಿಹಾಲ ಕರದ್ ಕೊಡುವುದು ಮಾಡೂದು." "ಕೆಲಸ ಮಾಡುಕಾಗ ಅಂದಿರು ನಿನ್ ಅಣ್ಣದಿರು. ತೀಡ್ತೆಯಂತಾಕೆ?" ಅಂದ ಹೇಳಿ ಹೋದ್ರು-ತಿಂಗಳ ತುಂಬ್ತು.

ಪಾರ್ವತಿ ಪರಮೇಸ್ರ, "ತಮಗ್ ಸುದ್ದಿ ಹೇಳಿ" ಅಂದೆ ಹೋದ್ರು. ತಿಂಗಳ ತುಂಬುಕೇಯ ಬೀಜಗ್ತಿ ಕರ್ಕಂಡ್ ಬಂದ್ರು. ಮೂಗನ್ ದಾರೆ ಬಾಲೆ ಬಿತ್ತು. ಆಗ ಯೇನಂದ್ರು ಪರಮೇಸ್ರ ದೇವರು, "ಮೂಗನ ದಾರ ಬಿದ್ದದೆ ಹೇಳಿ ತಪ್ಸಬೇಡಿ. ಯಯ್ಯೊ ಹೊತ್ತು ಮೀಸಿ, ಕೈಕಾಲ ತೊಳಿಸಬೇಕು, ತಪ್ಸಬೇಡಿ" ಹೇಳ್ರು. "ನಾಕನೆ ದಿನಕೆ ಅನ್ನದ ಮುದ್ದೆ ಕಾಯಿವಡಿದ್ ಪೂಜಿ ಮಾಡಿ ನೇವೇದಿ ಮಾಡಬೇಕು." ಮಲತ್ ಹೊಂಡಕೆ ಹಾಕ್ರು. ಬಾಲೆ ಮೀಸೂದು, ಹನ್ನೆರಡನೆ ದಿನ ಹೊಂಡ ತುಂಬ್‌ತ್ರು.

ಶೆಟ್ಟಿ ಮಾಡೂದು ಆರದಿನಕ್ಕೆ ಶೆಟ್ಟಿ(ಷಷ್ಠಿ) ಚೆನ್ನ ಹಾಕಬೇಕು. ಕರಿಮಣಿ ಯೆಲ್ಲ ಹಾಕತ್ರು ಒಂದ ಕಾಯಿಗೆ ಕರಿಮಣಿ ಸಂಡಿ ಅದೆ. ಚಂಬ್ನಮೇನೆ ಕಾಯಿ ಇಟ್ಟಿ ಅದಕ್ಕೆ ಕಟ್ಟತ್ರು. ಕರಿಮಣಿ

ಹಾಕಬೇಕು. ಕುಂಕುಮ ಹಾಕಬೇಕು, ಕಪ್ ಹಚ್ಚಬೇಕು ಯೆಲ್ಲ ಹಚ್ಚಿ ಪೂಜಿ ಮಾಡಬೇಕು. ಕಿಚಡಿ ಯಲಿ ಬೀಚಗ್ಗಿಗೆ. ಅದ್ರ ನೋಡುಕಿಲ್ಲ ಬಾಳಂತಿ. ಅತ್ತ ಮೊಕ ಹಾಕಂಡಿ ಉಳಿಬೇಕು. ಬೆಳಗಾಗುತನಕ ಚೆನ್ನವನ್ನ ತೆಗ್ದಕೊಟ್ ಹಾಕಿ ತಕಂಡ್ ಹೋದ್ರಾಯ್ತು. ಆಗ್ ಹನ್ನೆರಡನೆ ದಿನ ಬಂದ್ಕಂಡಿ ಪಾರ್ವತಿ-ಪರಮೇಸ್ರ ಮೇನ್ ದಾರೆ ತೊಟ್ಲ ಬಿಟ್ರು. ಚಿನ್ನಂದೇ ಬಳ್ಳಿ, ಚಿನ್ನಂದೇ ತೊಟ್ಲ.

ಬೆಳಗಾಗು ಮುಂಚೆ ಐದ್ ಜನ ದಾದ್ಯರ್ ಕರಕಬಂದ್ಕಂಡು, ಶಾಶೆ ತುಂಬಿ ಬಾಲೆಗೆ (ಗಂಡು) 'ಕೇಸವ ಕೇಸವ' ಅಂದಿ ಹೆಸ್ರ ಇಟ್ಟು, 'ವಜ್ರಾಯುಸ ಆಕಂಡಿ ವಳಿ' ಅಂದಿ ಹರಕೆ ಹೇಳಿ ಹೋದ್ರು.

ಆಗೆ ತರಗಾ ಬರಗಾ (ತನ್ನಟ್ಟಕೆ) ದೊಡ್ಡದಾದ ಇಂದ್ ನೋಡದ್ರೆ ಯರಡ ವರ್ಸನ ಹುಡಗಾ. ನಾಳೆ ನೋಡದ್ರೆ ಮೂರ್ ವರ್ಸನ ಹುಡಗಾ. ಆಗೆ, "ಅವ್ವಾ, ನನ್ಗೆ ಹಾಣಿ, ಚಂಡು ಮಾಡ್ಕೊಡು" "ತಾಯೆಲ್ಲಿ ಮಾಡ್ಕೊಡ್ಲಿ" ಹೇಳಿ ತೀಡ್ತು ಸಣ್ಣಗಂಗೆ. ಮೂರ್ ತಿಂಗಳ ವರೆಗೆ ಮೀಸರೆ ಗೌಡಿರು.

ಆರನೇ ದಿನ್ಕೆ ಪೂಜೆ ಮಾಡ್ಕಂಡಿ, ಮೆಣಸನ ಕಾಳ ಗುಳಗಿ ಹಿಟ್ಟು ಮಾಡಿ ಕೊಟ್ಟರು. ಹುಡ್ಗ ತೀಡೂಕೇಯ ಬೆಳಗಾಗುತನಕ ಯೆಯ್ಡು ಗೆಂಟೆ, ವಂದ್ ಪಟ ಮಾಡಿ, ತಲದಿಕ್ಕದ ಇಟ್ಟರೆ ಪಾರ್ವತಿ-ಪರಮೇಸ್ರು. ಬೆಳಗಾದ ಪಟಿಗೆ ಅದ್ರ ತಕ್ಕಂಡ್ ಬಂದಿ, ಹುಡ್ಗ ಆಡ್ತ ಆಗ್ಲೆ. ಮತ್ತೊಂದ್ ದಿನ ಮಕ್ಕಳು ಚಂಡ ತಕಂಡಿ ಬಂದ್ರು. "ನನ್ಗೆ ಚೆಂಡ್ ವಂದಕೊಡು ಅವ್ವಾ" ಅಂದ ತೀಡ್ತನೆ. ಆಗ, "ನಾಯೆಲ್ಲಿಂದ್ ಚೆಂಡ್ ತರ್‌ಲಿ?" ಹೇಳ್ ತೀಡ್ತು. ಬೆಳಗಾಗುತಕ ಚಂಡ ತಂಡಿಕ್ಕೇ ಬಂದ್ ಬಿಟ್ರು. ಚಂಡು, ಪಾಟಿ, ಹಾನೆಗಂಡೆ ಯಲ್ಲ ತಕಂಡ್ ಕೇಸವ ಆಡ್ತೇ ಹೋದ ಹುಡುಗರ ಸಂಗತಿಗೆ.

ಆಗೆ ಹುಡುಗ ಅಂದ್ರೆ ಸೂರಿಚಂದ್ರ ಬರ್ಮರಾಯನ ಮಗ. ದನಯೆಲ್ಲ ಮೇಯದೆಯ ಹುಡುಗನಿಗೆ ನೋಡ್ತೆ ಬಿದ್ದರೆ ಜೀರಾಗುವೆ. ಹೊಟ್ಯೆಲ್ಲಾ ಬಿದ್ ಹೋಗದೆ. ಹುಲ್ಲ ತೆಕಂಡ್ ದನ ಇದ್ದಿತಲ್ಲಾ ಅದ್ಕೆ ಪುಕ್ಳೆಲ್ಲಿ ಇಟ್ ಹಾಕ್ರು, ಬಾಯ್ಲಿ ಇಟ್ ಹಾಕ್ರು ದನಕಾವು ಮಕ್ಕಳು. "ಯಂತಕ್ ಹಾಕ್‌ತ್ರಿ?" ಕೇಳ್ರು ಬರಮದೇವ್ರು. ವಡ್ಯಾ ಸೂರಿಚಂದ್ರಂತಾ ಹುಡ್ಗ ಬತ್ತ. ಆಡ್ವ ದನ ನೋಡ್ಕಂಡಿ ಉಣ್ಣದೆ ತಿನ್ನದೆ ಇರತದೆ. "ನಾವ್ ಯೇನ್ ಮಾಡ್ಲಿ?" ಕೇಳ್ರು.

ಆಗ ಬರ್ಮದೇವರ ಅಂಗಳಲ್ಲಿ ಆಡ್ತೆ ಹೋದ. ಹೋಕಂಡಿ ಅಪ್ಪಳಿಸ ಕಂಡಿ (ಅಪ್ಪು ಹಾಕಿ, ಆಲಂಗಿಸಿ) ಬಿಟ್ರು. ತೊಡೆಮೇನ್ ಕೂಡ್ಸಕಂಡಿ ಯರಡ ಲಾಡ್ ಕೊಟ್ರು. ತಿನಲೆ ಇಲ್ಲ. ಅವಿ, "ಯೆಂತಾ ಕೊಟ್ರೂ ತಿನಬೇಡ" ಅಂದ ಹೇಳಿತ್ತು ಹುಡುಗನ ಕೂಡ. "ಯಾರ್ ನೋಡೂರು ನಿನ್ಗೆ? ನಾವ್ ಯೆಯ್ಡು ಜನ ಇದ್ದೊರು" ಹೇಳಿತ್ತು. ಲಾಡ ತಕಂಡ ಬರ್ಮದೇವ್ರು ಆಳ್ನಕೂಡ "ಮನೆಗ್ ಕಳ್ಸ್‌ಬಾ" ಅಂದ್ರು. ತಾಯಿ ಕೂಡ ಹೇಳ್ದ, "ಬರ್ಮದೇವ್ರು ಕೊಟ್ರೆದ್ರು. ಕರ್ಕಂಡ್ ಹೋಗಿರು" ಅಂದ. ತಾಯಿ, "ತಿನ್ನು" ಅಂತು. ಮತ್ತೊಂದ್ ದಿನ್ಲೆ ಹೋದ ಬರ್ಮದೇವ್ರು, "ನೀನ್ ತಾಯಿ ಕೂಡೆ ಬರ್ಮದೇವರ ಬತ್ತ ಅಂದ್ ಹೇಳರೆ ಸಂಜಿ ಕೂಡೆ ಹೇಳು" ಅಂದ್ರು.

"ಆಗುದು" ಅಂದ ಹುಡ್ಗ. ಆಗ ಬಂದ್ಕಂಡಿ ಅವಿಕೂಡೆ ಹೇಳ್ದ, "ಅವ್ವಾ ಬರ್ಮದೇವರು ಬತ್ತೆ ಅಂದ ಹೇಳರೆ" ಅಂದ. ಪಟ್ಟಿಮಂಚ ಕುಡ್ಗ ಹಾಸ್ತು. ಬೆಳ್ಳಿ ತಟ್ಟಿಲ್ (ಹರವಣದಲ್ಲಿ)ಹಾಲು, ಬೆಳ್ಳಿ ಚೆಂಬ್ನಲ್ ನೀರು ತಂದಿಟ್ಟು.

ಬರ್ಮದೇವರು ಹೋಕಂಡ್ ಕಾಲತೊಳಕಂಡೆ ಕೂತ್ರು ಹುಡುಗನ ಕೂಡೆ. "ಈ ಹರವಣ ತಕ್ಕಂಡ್ ಹೋಗು" ಹೇಳಿ. ಅವಿ ಹೇಳ್ತು, "ನೀನು ತಕಂಡ ಬರುದ್ ಬೇಡ, ತಾಯಿನೇ ತಕಂಡ್ ಬರ್‌ಲಿ" ಹೇಳದ್ರು, ಬರ್ಮದೇವ್ರು ಇದ್ ತಕಂಡ್ ಬರಲಿಲ್ಲ ಕೂತಿಕೂತಿ ಸಾಕಾಯ್ತು. ಆಗೆ ತಕಂಡ್ ಬಂತು. ಮದರಾತ್ರಿ ಕೂಡೆ. ಹರವಣ ತಕಂಡ ಬರುಕೂಡೆ ಪಾರ್ವತಿ-ಪರಮೇಸ್ರ ಬಂದ್ಕಂಡಿ ಅದ್ಕ ವಂದ್ ಮಾಲಿ ಹಾಕಸ್ರು, ಅದು ವಂದ್ ಮಾಲಿ ಹಾಕ್ತು ಬರ್ಮದೇವರಿಗೆ. "ಚಂದದಿಂದ ಉಳಿರಿ" ಹೇಳಿ ಪಾರ್ವತಿ-ಪರಮೇಸ್ರ ಹೇಳ ಹೋದ್ರು. ಅವ್ರು ರಾತ್ರಿ ಅಲ್ ಉಳೂದಿಲ್ಲ, ಅವಿ ಬರೂದಿಲ್ಲ, ಅಣ್ಣಂದಿರೂ ಬರೂದಿಲ್ಲ.

■ ಹೇಳಿದವರು: **ದಿ. ಮಾಣುಮನೆ ಅಮ್ಮ ಸೋಮು, ಕೊಂ ಮಾಸ್ತಿ ನಾಯ್ಕ,** ಹೆಗಡೆ ಊರು.
ದಿನಾಂಕ: ೨೩-೧೧-೧೯೭೧

◆

# ಸರ್ಪ-ಶಿಶು

ಯೆಯ್ಡ ಶಿದ್ದಕ್ಕಿ ಬಟ್ಟ ಬೇಡ್ಕಂಡ ಬರೂದು ಅವ್ನ ಹಿಂಡ್ತಿ, "ಯೆಯ್ಡ್ ಹೊರೆ ಸೌದೆ ತಂದ್ ಹಾಕಿ, ನಾಡದಿಗೆ ಮಾವನ ತಿಥಿ ವಂದ್ ರೂಪಾಯನಂದು" ಅಂತು. ಬಳ್ಳಿ ತಕಂಡ್ ಹೋಗೂಕೆ ಹಂಬಲಿಲ್ಲ ಪಾಪ ಕಂಡ್ಕಂಡಿ ಹೆಬ್ಬಾವಾಗಿತ್ತು. ಬಳ್ಳಿಯಾ ಕಂಡ್ ಬಿದ್ಕಂಡ್ ಬಿಟದೆ. ಬಳ್ಳಿ ತೆಗ್ದಿ ಸೌದಿ ಹೊರೆಗೆ ಕಟ್ದ. ಹೊತ್ಕಂಡ ಬಂದ. ತಕಂಡ ಹೋದ ದೊಡ್ಡರ ಮನಿಗೆ. ತಕ್ಕಂಡೆ ಹೋದ, "ವಡಿರೆ ಕಟ್ಗಿ ಹೊರಿ ಬೇಕೇ?" "ತಂದ ಹಾಕಾ" ಅಂದಿ ವಂದ್‌ರೂಪ್ಯೆ ಕೊಟ್ರು. ಮುಂಚಿನ ದಿನ ರಾಜನ ಮನಿಲೆ ಹಾಕಿದ್ದ. ಯೆಯ್ಡ ರೂಪಾಯಾಯ್ತು. "ತಿತಿಗೆ ಯಯ್ಡ ಶಿದ್ದಕ್ಕಿ ಹಾಕಿ ಅನ್ನ, ನಾಕ್ ಶಿದ್ದಕ್ಕಿ ಹಾಕಿ ಪಾಯ್ಸ, ಯಯ್ಡ ದಮಡಿ ಬಟ್ಟಕೊಳಿಗೆ ದಕ್ಷಿಣಿ ಕೊಡಬೇಕು" ಹೇಳಿ, "ಮಾಡಗೂಡಿಲ್ ಇಡು" ಹೇಳ್ದ್ರ. ಇಟ್ಟು.

ಬಟ್ಟಕ್ಕೊಳು, "ಬೇಡೂ ಬಟ್ಟ ಯಟ್ ಹೊತ್ನಕೂಳೋ ಯೇನೊ ಉಂಡಬಿಡ್ವೊ" ಅಲಿದು ಯೆಯ್ಡ ಜನ ಹೇಳಾರೆ, "ತಡ ಆದ್ರ ಆಗ್ಲೀ." "ಅವರಿಗ ದಗ ಮಾಡೂಕಾಗ" ಅಂದ ಮತ್ತೊಬ್ಬ.

ಉಂಬೂಕ್ ಹೋದ್ರು. ಅನ್ನ, ಬೇಕಾದ ಪದಾರ್ತ. ಯೆಯ್ಡ ಶಿದ್ದಕ್ಕಿ ಅನ್ನ ಮಡ್ಕೆ ತುಂಬಾ ಆಗದೆ ಬೇಕಟ್ಟುಂಡ್ರು ಮತ್ತು ಇಟ್ ಅನ್ನದೆ. "ನಿನ್ ಕೂಡ್ ಕೊಟ್ಟ ದುಡ್ಡ ತಂದ್

ಕೊಡು" ಅಂದ. ತಂದ್ರು ಅನಮಾನ ಮಾಡ್ಕಂಡ್ರಿ. ಯೆಯ್ದ ನಾಣ್ಯಾಯ್ತು. ಅವ್ರಗೆ ನೆಗೆ. ಉಂಬೂಕಿಲ್ಲಾದ್ರೂ ನಾಣಿನೆ ಕೊಟ್ರು. ತಕಂಡ್ ಹೋದ್ರು. ಮನಿಗ್ ಹೋಕಂಡ್ ಬಟಕ್ಕೊಳು ನಾಣಿಕೊಟ್ರು ಯಯ್ದ ಜನ್ರಿಗೂವ. "ಗನಾ ಕಜ್ಜಾಯ ಮಾಡರೆ" ಹೇಳ್ ಮಾತಾಡ್ರು. ಸಂಜಿ ಉಂಡ್ರು. ಬೆಳಗಾಮುಂಚೆ ಸೌದಿಗ್ ಹೋಗಬೇಕು. ಬಳ್ಳಿ ಚಿನ್ನದ ಗಟ್ಯಾಗ ಹೋಗದೆ.

ರಾಜನ ಮನೆಲ್ ಕೊಟ್ಟಾಕಿ, "ಥೋಡೆರೂಪಾಯ ತಕಂಡ್ ಬನಿ" ಅಂತು. ಹಿಂಡ್ತಿ ತಕಂಡೋಗಿ, "ಥೋಡೆ ರೂಪಾಯಿ ಕೊಡಿ" ಅಂದ. ಅರಸು, "ಗಾಡಿಮೇನ್ ಕಳಸತೆ. ಈಗ ಹತ್ತು ರೂಪಾಯಿ,ಐದ್ ಕಾಯಿ, ನಾಕ್ ಕೊಳ್ಗ ಅಕ್ಕಿ ತಕಂಡ್ ಹೋಗು. ಬಾಕಿ ಗಾಡಿಮೇನ ಕಳಸತೆ" ಅಂದ ರಾಜ.

ನಾಕ್‌ಕೊಳ್ಗಕ್ಕಿ, ಐದ್ ಕಾಯಿ, ಹತ್ ರೂಪಾಯಿ ತಕಂಡ್ ಬಂದ. ರಾಜ - ರಾಣಿ ಚಿನ್ನದ ಗಟ್ಯಾ ತಕಂಡ್ ಹೋಗಿ ಕಲ್ಬಿಲಿ ಹಾಕಿ ಇಟ್ರು. ದೊಡ್ಡ ಸರವೇ ಆಯ್ತು. ರಾಣಿ ಕುತ್ಗಿಲ್ ಹಾಕಂಡ್ತು. ರಾತ್ರೆ ಬಾದಿ ಅಂದ್ ಹೇಳಿ ಪೆಟ್ಗೇಲ್ ಹಾಕತು. ಮಕ್ಕಳಿಲ್ಲ. ಬೆಳಗಾಗ ಮುಂಚೆ ಮಿಂದಿ ಮಾಡ್ಕಂಡಿ ಕುತ್ಗೆಲ್ ಹಾಕವಾ ಅಂದ್ರೆ ಗನಾ ಶಿಶು ಆಗಿತ್ತು.

ಗಂಡನಿಗೆ ತಂದು ತೋರಸತು. "ಮಕ್ಕಿಲ್ಲಾಗಿತ್ತು. ದೇವರೆ ಕೊಟ್ಟ" ಅಂದ ರಾಜ. ಹಾಲು, ತುಪ್ಪಾ ಹಾಕಿ ಸಾಕಿ ಇಟ್ಕಂಡ್ರು. ದಿನಾ ಬೆಳೆತಾ ಹೋಗ್ತ. ಇಂದು ಯೆಯ್ದ ಐದ್ ವರ್ಸನ ಹುಡ್ಗ. ಆಚೆ ನಾಡ್ದು ಐದ್ ವರ್ಸನ ಹುಡ್ಗ. ಬೆಳಿತೆ ಬಂದ ಇಪ್ಪತ್ತೊಂದ್ ವರ್ಸಾಯ್ತು.

"ಮದ್ವೆ ಮಾಡಬೇಕು" ಅಂದಿ ಹುಡ್ಗನಿಗೆ ಮದ್ವೆ ಮಾಡ್ದ್ರು. ಮದ್ವೆ ಮಾಡುಕೆಯ ಗಂಡ ಹಿಂಡ್ತಿ ವಳಗೆ ಮನಿಕಂಡಿರು. ಮದಿವೆಯಾಗಿ ವಂದ್ ವರ್ಸಾಗದೆ. ಇದು, "ವಂದ್ ಕತೆ ಹೇಳಿ" ಅಂದ್ ಹೇಳ್ತು. "ಯಂತಾದ್ರು ವಂದ್ ಕತೆ ಹೇಳಿ" ಅಂತು. "ಈಗ ಆದ್ದ್ ಹೇಳಬೇಕೋ? ಮುಂದಾಗೂದೋ? ಅದ್ದೇ ಹೇಳಿ" ಅಂತು. ಯೆಲ್ಲಾ ಹೇಳ್ ಬಿಟ್ಟ. ರಾತ್ರೋರಾತ್ರಿ ಬುರ್‍ರನೆ ಮಾಶೇಸಾಗ್ ಹೆರ್ಗೆ ಹೋದ. ಬೆಟ್ಕೆ ಹೋದ.

ಬೆಳಗಾಗ ಅಪ್ಪ-ಅವಿ ಯೆಲ್ಲಾ ನೋಡದ್ರು ಮಗನೇ ಇಲ್ಲ, ಅದ್ಕೆ ಹೆದರಿಸ್‌ದ್ರು, ಹೊಡೂಕೆ ಹೋದ್ರು. "ಯೇನ ಮಾಡ್ದೆ" ಹೇಳಿ.

ಬಟ್ನ ಕೂಡೆ, "ಹೀಗೆಯೆ ಹೋಗಿ ನೀವು ಮಗಿಲ್ಲಂತೆ, ಸೂಸೆನ್ ಹೊಡೂಕ್ ಹೋಗ್ತ್ರಿ. ನೋಡಿ ಯೆಂತಾ ಆಯ್ತು ಹೇಳಿ" ಅಂತು ಹಿಂಡ್ತಿ.

"ಬಂದ ಮಗ ಕಾಣ್ಯಾಗನೆ" ಹೇಳ್ತ್ರು. ಬುಡಗುಟ್ಕಂಡಿ ಬಟ್ಟ ಹೋದ. ಬಟ್ ಬಂದ್ಕಂಡ್ ಹೇಳ್ದ, "ಅರ್ದ ರಾಜ್ಯ ಕೊಡ್ತೆ ನಿನ್ಗೆ" ಹೇಳ್ದ ರಾಜ. ರಾಜ್ನ ಮಗನ ಗರಸೂಕ್ ಹೋದ ಹೋಗೂಕೆಯ ವಂದ್ ಅಕ್ಕ ಶಿಕ್ತು.

"ಬಟ್ರೆ ಯೆಲ್ಗೆ ಹೋತ್ರಿ?" "ರಾಜ್ನ ಹುಡ್ಗ ರಾತ್ರೆ ಮನಗದವ್ನೇ ಇಲ್ವಂತೆ. ಅದು ಹುಡ್ಕಕೊಟ್ರೆ ಅರ್ದರಾಜ್ಯ ಕೊಡ್ತೆ ಹೇಳರೆ" ಅಂದ. "ನೀ ಹೋಗ್ವಾಗ ಅವ್ನ ಹಿಂಡ್ತಿಗೆ ಕರಕಂಡ ಹೋಗಬೇಕು" ಅಂತು ಆಕ್ಕ. ಪಾತಾಳಲೋಕಕ್ಕೆ ಅದ್ರ ತಕಂಡ್ ಹೋಬೇಕು. "ಕರ್ಕಂಡ್

ಹೋಗು" ಅಂತು ಹಿಂದೆ ಬಂದ ಬಟ್ಟ. "ಸೊಸೆ ಕಳಗಿಸಕೊಡಿ" ಅಂದ ರಾಜಂಗೆ. ಸೊಸೆ ತಕಂಡ ಬಂದ, ಪಾತಾಳ ಲೋಕಕ್ಕೆ ಹೋದ.

ಹುಲಿ ಕರಡಿ ಶಿಕ್ತದೆ. "ತಿಂಬೂಕ ಕೊಡಬೇಕು" ಹೇಳ್ತದೆ. "ಇಲ್ಲ ಮುಂದ ಹೋಗೂಕೆ ಕೊಡುದಿಲ್ಲ" ಹೇಳ್ತ್ರು. ಬಟ್ಟ ಹೇಳ್ತ ಪಾತಾಳ ಲೋಕಕ್ ರಾಜ್ನ ಮಗ್ನ ಅರಸೂಕ ಹೊಪೇಕು. "ಹೋಗಿ, ಮಾತಾಡಬೇಡ. ಬೋರೆ ಬೋರ್ ಮಾಡ್ಕಂಡೆ ಬರೂದು, ಕೊಂದ್ ತೆಗದ್ರೂ ಮಾತಾಡಬೇಡ. ಅವನ ತಲೆ ಮೇಲಾಗಿರೂದು. ಬಾಕಿಯೋರ್ ತಲೆ ಕೆಳಗಾಗೂದು. ಹೆಂಡ್ತಿ, ಅವನ ಅಪ್ಪ ಹಾಕಳ ಬೇಕು" ಹೇಳ್ತ. ಹೆಂಡ್ತಿ ಅಪ್ಪ ಹಾಕೊಕೆಯ ಮನಸ್‌ರೂಪಾಗ್ತಾನೆ. "ನೀನು ಮನೆಗ ಹೋಗು. ಯೇನಬೇಕು? ತಕಂಡ್ ಹೋಗು" ಅಂದಿ ಬಾಕಿಯೋರು ಹೇಳತ್ರು. 'ಮಾಣಿಕ ಬೇಕು' ಹೇಳಿ ತಕಂಡ್ ಹೋಗತ. ಸೊಸೆಗೆ ಕರಕಂಡ್ ಹೋದ. ಬಟ್ಟಗೆ ಅರ್ದರಾಜ್ಯ ಕೊಡತ್ರು.

■ ಹೇಳಿದವರು: **ಮಾಣುಮನೆ ಅಮ್ಮ ಸೋಮ, ಕೊಂ ಮಾಸ್ತಿ ನಾಯ್ಕ,** ಹೆಗಡೆ ಊರು
ದಿನಾಂಕ: ೮-೬-೧೯೭೦

◆

# ಹಗಳಮ್ಮ

ವಂದರಸು ಮಗು ಪರದಾನಿ ಮಗು ಯೆಯ್ಡ ಜನ ಹುಡಗೀರು (ಹಗಳಮ್ಮ, ಜಗಳಮ್ಮ) ಇದ್ರು.

ಇಬ್ರೂ ಹುಡಗೀರು ಮೆಟ್ಟ್ನೇಣಿ ಹತ್ತಿ ಜಾಜಿ ಹೂ ಕೊಯ್ಕಂಡ್ ಬರುವಾಗೆ ಒಂದು ಮದಗದನ ಮದ್ದಾನ್ ಬಂದಿ ಒಬ್ಳ ಹೊತ್ಕ ನೆಡ್ದ ಬಿಡ್ತು. ಒಬ್ಬಳನ್ನೇ ಹಗಳಮ್ಮನ ತಕಹೋಯ್ತು. ಜಗಳಮ್ಮ ಓಡ್ ಬಂತು. "ಅಪ್ಪ... ಅಪ್ಪ... ಅಕ್ಕನ ಹೊತ್ಕಂಡೇ ಹೋಯ್ತು, ಮದಗದನ ಮದ್ದಾನೆ ಬಂದಿ. ನಾವ್ ಹೂಗಾರ್ಸುತ ಕೂತಿರು. ಹೊತ್ಕಂಡೇ ಹೋಯ್ತು ಅದು" ಅಂತು.

ಕೇಳು ಊರಾಗ ಡಂಗ್ರ ಸಾರ್ದ. ಕೇಳದಿದ್ ಮನೆಗ್ ವಾಲಿಬರ್ದ. ಯಂತಾಂದ ಬರ್ದ 'ನನ್ನ ಮಗಳ ಯಾರ್ ತಂದ್ ಕೊಟ್ರೇ ಅವರ್ಗ ಮದಿ ಮಾಡ್ತೆ. ಅರ್ದ ರಾಜ್ಯ, ಕೊಳ್ಗತುಂಬ ಹೊನ್ನು, ಬದಕ್ ಬಂಡಾರ ಯೆಲ್ಲ ಕೂಟ್ ನಗ್ನ ಮಾಡೆಸ್ತೆ' ಹೇಳಿ ವಾಲಿ ಬರದ.

ಮತ್ತೊಂದು ರಾಜದಾಗ, ವಂದ ಅರಸು ಹುಡ್ಗ ವಂದ ಪರದಾನಿ ಹುಡ್ಗ ಇದ್ರು. ಇರೂರೊಳಗೂವ ಅವರು ಏನಂದ್ರು, "ಇಂತಾಗುಟ್ಟೆ ವಂದ್ ಹುಡ್ಗಿ ಕಾಣ್ಯಾಗ್

ಹೋಗದ್ಯಂತೆ. ನಾನೂ ನೀನು ಕೂಡಿ ಹುಡ್ಕೊಕ್ ಹೋಗ್ವ ಏನೂ ಆಗ್ಲಿ" ಹೇಳಿ ಎದ್ರು. ತಯಾರಾದ್ರು. ಹಾಂಗೇ ಹೋದ್ರು. ಹೋಗ್ ಹೋಗ್ ಹೋಗಿ ಮಾದೊಡ್ ಆಲದ ಮರದ ಹತ್ರ ಹೋದ್ರು. ಆ ಮರಾನ ಮೇನೆ ವಂದ್ ತಿಂಗಳ ಹತ್ತೂಕೆ, ವಂದ್ ತಿಂಗಳ ಇಳೂಕೆ ಆತದೆ. ಅರಸು ಹುಡ್ಗ ನಾನು, "ಇಲ್ಲಿ ಈದು ನೀನು ನೋಡ್ತೆ ಇದ್ದುದ್ ಹೌದಾದ್ರೆ, ನಾನು ಪಂಜಿ ಕೆಳಗೆ ಬಿಡ್ತೆ, ನೀನು ಈ ಮರನ್ ತುಂಡ ಕಟ್ ಕೊಡಬೇಕು" ಅಂದ್ ಹೇಳ್ದ. ಆಗೆ ಪರದಾನಿ ಹುಡ್ಗ, "ಆಗೂದು" ಹೇಳ್ದ. ಹತ್ ಹತ್ ಹತ್ತಿ ನೋಡ್ದ. ಅದು ಮಗುನ ಮೈಮೇನೆ ಕೂರ್ಸ್‌ಕಂಡಿ (ನಾಕೈದ್ ವರ್ಸದ ಮಗ) ಮನಿಕಂಡಿತ್ತು. ಸುಮ್ಮಗ್ ಹೋದ. ನೋಡ್ಕಂಡಿ ಪಂಜಿ ಕೆಳಗ್ ಬಿಟ್ಟ. (ಎಟ್ಟ್‌ದೊಡ್ ಪಂಜಾಗಿತ್ತೊ ಏನೋ ಅದು) ಅವ ಮರನ್ ತುಂಡ್ ಕಟ್ಟಿ ಬಿಟ್ಟ. ಅರಸು ಹುಡ್ಗ ಮೇಲ್ ವಕ್ಕಂಡ. ಹಗೂರಕೆ ತುಂಡ ಬಿಡಸಿ. ಹಗೂರಕೆ ನೆಗದಿ ಆನಿ ಮೈಮೇನ್ ಹೇರ್ದ. ಅದರ ಕೈಲಿ ಏನಂದ? "ಮರನ್ ಜೋತಾಕ್" ಅಂದ.

ಹೆಗ್ಗಿ ಜೋತಾಕಂತು. ಇವ ಪಂಜಿ ಕಟ್ಟೆಕೆಳಗೆ ಬಿಟ್ಟ ಹುಡ್ಗ್ಯ. ಆಗ ಕೆಳಗೆ ಇಳಿದು ಬಂದ. ವಂದ್ ತಿಂಗಳ ಬೇಕಾಯ್ತು.

ಅಣ್ಣ-ತಮ್ಮ, ಹುಡ್ಗಿ ಮೂರೂ ಜನ ಬಂದು ವಂದ್ ಕಟ್ಟೆಮೇನೆ ಕೂತ್ರು. "ತಮ್ಮ ನನ್ಗೆ ಹತ್ತೂಕ್ ವಂದ್ ತಿಂಗಳಾಯ್ತು. ಇಳೂಕ್ ವಂದ್ ತಿಂಗಳ ಆಯ್ತು. ನಾನು ಶಲ್ಪ ನೆದ್ರಿ ಮಾಡ್ತೆ. ಬಾಳ ಕಣ್ ತೂಗ್ತದೆ ನನ್ಗೆ. ನೀನು ಬಗಿಲಿ ಉಳಿ" ಅಂದ. ಅವ "ಹೂಂ" ಅಂದ ಪರ್ದಾನಿ ಹುಡ್ಗ.

ಇವ ಮನಿಕಂಡ. ಅವನೂ ಇವಗ್ ಯಾವಾಗ್ ನೆದ್ರಿ ಬಂತೊ ಅವನೂ ಮನಿಕಬಿಟ್. ಅವನ್ಗೂ ನೆದ್ರಿ ಬಿದ್ ನೆಡಿತು. ಈ ಮಗು ವಂದ್ ಎಚ್ಚರ್‌ಕಿಯಾಗಿ ವಳಿತು. ಉಳುರೊಳ್ಗುವ ಮೂರ್ ಜನ ರಾಕಸರು ಬೇಡಕಂತ ಬಂದರು. ಕಟ್ಟಿಮೇನ್ ಕೂತ್ಕಂಡದೆ ಇದು. "ಹಾ... ಹಾ... ಹಾ... ಹಾ ಇದ್ಯೆಂತಾ ಹೆಣ್ಣು! ಈ ಹೆಣ್ ತಕಂಡೇ ಹೋಬೇಕು" ಅಂದ ವಬ್ಬ. ಮತ್ತೊಬ್ಬ, "ಬೇಡ ಅವ್ರು ಯೆಲ್ಲಿಂದ ತಂದಿರೊ ಏನೊ? ಅವರು ನಮಗೆ ಬಾಳ ಶಾಪ ಹಾಕೂರು" ಅಂದ. ಮತ್ತೊಬ್ಬ, "ಬ್ಯಾಡಾ ಅವರು ಕಂಡಾ ಬಟ್ಟೆ ಮಾಡೂರು" ಅಂದ. ಮೊದಲ್ ಹೇಳ್ದವ್, "ತಕ್ಕಂಡೆ ಹೋಬೇಕು" ಅಂದ. ಅಂತೂ ತಕ್ಕಂಡ್ ಹೋದ್ರು. ಅದು ಹಗಳಮ್ಮ ಕೊಳ್ಳಗೆ ಹಗಳ ಇತ್ತು. ಚೆನ್ನದ್ದು ಹಗಳ (ಗುಂಡು) ಅದು ಅದ್ರ ಹುಸಿತು. ಹುಸಿದಿ ತಾ ಕುಳ್ವಲ್ಲಿ ಮೂರ್ ಇರಸತು. ಮೆಟ್ಟಿಗ್ ವಂದವಂದ್ ಕಡೆ ಇಟ್ಟ ಹೋಯ್ತು. ಹೋಗ್ ಹೋಗ್ ಹೋಗಿ ಕಂಡಾ ಬಟ್ಟೆದೂರ ಹೋಯ್ತು. ಅವಾಗ ಪಾತಾಳಕೆ ಕಂಚಿನ ಏಣಿ ಹಾಕಿ ಕೆಳಗಿಳಿಸ್ತೀರು, ಆಗ್ಗೆ ಅಲ್ಲಿ ಮೂರ ಇರಸತು. ಇಳಿಸಕಂಡ ಕೆಳಗೆ ಹೋದ್ರು ಪಾತಾಳಕೆ. ಆಗ್ಗೆ ಇವರಿಗೆ ಎಚ್ಚರಾಯ್ತು, ಆಗ ಇವರಿವರೊಳ್ಗೆ ನ್ಯಾಯ. "ನಾನು, ನಿದ್ರಿಲ್ದೆ ಹತ್ತೂಕ್ ವಂದ್ ತಿಂಗಳ, ಇಳುಕ್ ವಂದ್ ತಿಂಗಳ ಆಯ್ತು, ನೀನು ಮನಿಕ ಬಿಟ್ಯಲ್ಲ" ಅಂತ ರಾಜನ ಹುಡ್ಗ.

"ಎಲ್ ಹೋಗ್ ಹುಡ್ಕಬೇಕಾಯ್ತು? ಸಾಯ್ಲಿ ನೋಡ್ವ" ಅಂದ. ಹೇಳ್ಕಂಡಿ, "ಈ ಹಗಳವ ನಾವು ಹೆಕ್ಕಾಂತ ಹೋಗ್ವ" ಹೇಳಿ ಹೆಕ್ಕಂತ ಹೋದ್ರು. ಆಗೆ ಹೆಕ್ಕಂತ ಹೋಗುರೊಳಗೂವ

ಅಲ್ಲಿ ಮೆಟ್ನ ಇಳವಲ್ಲಿ ನೋಡ್ಕಂಡಿ ಹೆಕ್ಕಂತೆ ಯೆಯ್ದು ಜನ್ರು ಹ್ವಾದ್ರು. ಅರಸಕಂತಿ ಆಗೆ ಅವ ಹೇಳ್ದ ಏನಂದಿ? ಅರಸು ಹುಡುಗ, "ನೀನು ನನ್ನ ಈ ಪಂಜಿ ಕಟ್ಟಿ ಕಟ್ಟೆ ಕೆಳಗೆ ಬಿಡಬೇಕು" ಹೇಳ್ದ. "ಹೂಂ" ಅಂದ ಪರದಾನಿ ಹುಡ್ಗ. ಅವನ ಪಂಜಿ ಕಟ್ಟಿ ಕೆಳಗೆ ಬಿಟ್ಟ. "ನೀನು ಅಲ್ಲದೆ, ಪಂಜಿ ಬಿಟ್ಕಂಡೆ ಇರು. ನಾನು ಹುಡ್ಗಿ ಹತ್ಸ ಕೊಡ್ತೆ. ಕಡಿಗೆ ನೀ ಮತ್ತೆ ಪಂಜಿ ಬಿಡಬೇಕು" ಹೇಳ್ದ ಅವ. ಕೆಳಗೆ ಹೋಕಂಡಿ ಹೀಂಗೆ ಅಡ್ಡ ನೋಡ್ದ ಅರಸು ಹುಡಗ. ಅಲ್ಲಿ ರಾಕಸರು ರಾಶಿ ಜನ ಹೆಣ್ಣ ನೆಡುವ್ ಕುಳ್ಸಕಂಡಾರೆ. ಸುತ್ತಲು ಕೂತು ಪಗಡಿ ಆಡ್ತವ್ರೆ. ಅಲ್ಲಿ ಬಹಳ ಬಹಳ ಹೇಳ್ದ. "ದಮ್ಮಯ್ಯಾಗೂದು ದತ್ತಯ್ಯಾಗೂದು, ಕಾಲ್ಗೆ ಬೀಳ್ತೆ. ನಿಮಗೆ" ಅಂದಿ ಕೈಮುಗದ. "ಕಾಲ್ಗೆ ಬೀಳ್ತೆ ಹೆಣ್ ಬಿಟ್‌ಕೊಡಿ" ಹೇಳ್ದ. ಅವನ ದೂಕಿ, "ಆ ಹೆಣ್ಣ ಕೊಡಿ" ಅಂದ್ರು ರಾಕೇಸರು. ಪಂಜಿ ಎಳದವ ಹುಡ್ಗಿ ಪಂಜಿಗ್ ಕಟ್ದ. ಪರದಾನಿ ಹುಡ್ಗ ಮೇಲೆ ಹುಡ್ಗಿ ತಕಂಡ; ಪಂಜಿ ಮತ್ತೆ ಬಿಡಲಿಲ್ಲ.

ತಕಬಂದ. ಅರಸೂಮನಿಗೂ ಬಂದ. "ನೀನೆ ತಕ ಬಂದ್ಯಾ? ಹುಡಗಿಯಾ?" ಅರಸು ಕೇಳ್ದ. ಇದು, "ನನಗೆ ಮದಿ ಮಾಡುಕೆ ಇನ್ ವಂದ್ ತೆಂಗ್ಳು ತಡ." "ತಿಂಗ್ಳ ಮೇನ ಹೊರ್ತು ನಗ್ನ ಮಾಡೂದ ಬೇಡ" ಹೇಳ್ತು. ಆಗೆ ರಾಜನ ಮಗ ಅಲ್ ರಾಕೇಸರ ಹತ್ರ ಹೋಕಂಡಿ, "ದಮ್ಮಯ್ಯಾ, ದತ್ತಯ್ಯಾ, ನನ್ನ ವಂದ ಮೇಲ್ ಹತ್ಸಿ ಹಾಕಿ" ಹೇಳ್ದ, "ದೂಕ ಹಾಕ್ರಪ್ಪ." "ಕಂಚಿನ ಏಣಿಗೆ ಹಾಕಿ ಮೇನ್ ಹತ್ಸಾಕಿ" ಹೇಳದ್ರು. ಮೇನ್ ಹತ್ಸ್ ಹಾಕ್ದ ಕೂಡ್ಲೇಯ ಬಂದು ವಂದ್ ಮುದ್ಕಿ ಮಲ್ಲಿ ಉಳ್ದ.

"ಅಜ್ಜಮ್ಮ ನಿಮ್ಮ ಕಡೆಗ ಯೇನ್ ಸುದ್ದಿ?" ಕೇಳ್ದ. "ಪರದಾನಿ ಹುಡ್ಗ ಹೆಣ್ ತಕಬಂದನೆ ಕೈತೊಳಕ ಕಿಟಬೇಕು. ನಾಕೈದ್ ದಿವಸಕ್ ಮದಿ" ಅಂದಳು. "ಆಗ್ಲಿ ತಂದನ್ಯಲ್ಲ" ಅಂದ. ದಿವಸಾಕೂ ಅಜ್ಜಿ ಅದ್ಕೆ ಹೂ ಕಟ್ ಕೊಡತಿತ್ತು. ಕೊಟ್ರೆ ವಂದಿವ್ಸೆ ಅವ ಕಟ್ ಕೊಟ್ಟ ತಕ ಹೋಯ್ತು ಅದು. ಅರಸು ಹುಡ್ಗಿ, "ಅಜ್ಜವ್ವ ಯಾರ ಕಟ್ಟರೆ?" ಕೇಳ್ತು. "ನಮ್ಮನಿ ಮೊಮ್ಮಗ ಕಟ್ಟಿದ್ದ" ಅಂತು ಕೊಜ್ಜಕ್ಕಿ ಕೊಡತಿತ್ತು. ಶೇರು ಸಣ್ಣಕ್ಕಿ, ಬೆಲ್ಲ ಯೆಲ್ಲ ಕೊಟ್ಟು. "ಅಜ್ಜಮ್ಮ ನಾನೇ ಕಟ್ ಕೊಡ್ತೆ" ಅಂದ. ಸಣ್ಣಕ್ಕಿ ಕೊಟ್ರು ಅಂತು; ಹೂ ಕಟ್ದ. ವಂದ ಶಣ್ಣ ಚೀಟಿ ಬರದಿ ಹಿಂದಾದ ಸಂಗ್ತಿ ಅಟ್ಟು ಬರೆದಿ ಚೀಟಿ ಹಾಕ್ ಕಟ್‌ದ ದಂಡಿಯ. "ಹೀಗೆ ಮುಡ್ಸಕ ತಕಹೋಗು. ಬಗಿಲ್ಕಿ ಕುಡಿಕ ಮುಡಿ ಹೇಳು, ಸದಿ ಬಿದ್ದದೆ" ಅಂದ. ತಕ ಹೋಯ್ತು, "ಮೊಮ್ಮಗ ಕುಡಿಕ ಮುಡಿ ಹೇಳನೆ ಹೊಯ್ಗಿಗಿಯ್ಗಿ ತಾಗದೆ." ಕುಡಿ ಕಂಡ್ತು. ಚೀಟಿ ಬಿದ್ದದ್ದ ಹೆಕ್ಕಿ ವೋದ್ ನೋಡ್ತು. ಆದ ಶಂಗ್ತಿ ಅಟ್ಟು ಬರದನೆ. ತುಪ್ಪ, ಸಣ್ಣಕ್ಕಿ, ಕಾಯಿಗೀಯಿ ಕೊಟ್ಟು, "ಮೊಮ್ಮಗಗೆ ಪಾಯ್ಸ್ ಮಾಡಿ ಬಡ್ಸು. ನಾಳಿಕೆ ನಗ್ನ, ಮೊಮ್ಮಗನ ಕರಕಂಡಿ ನೀನು ಬರಬೇಕು" ಅಂತು.

"ಮಗನೆ ಇಂದು ತುಪ್ಪ ಗಿಪ್ಪ ಕಾಯಿ ಅಟ್ಟೂ ಕೊಟ್ಟದೆ. ನಾಳೆ ನಗ್ನಂತೆ. ನಿಂಕಲಿ ನಂಕಲಿ ಬಾ ಹೇಳದೆ" ಅಂತು. ಮುದ್ಕಿ ಪಾಶ ಮಾಡಿ ಉಡ್ಕಂಡಿ ಹೋದ್ರು. ಇವರು ಮುಡೀಕ ಕೂತ್ಕಂಡ್ರು.

ನಗ್ನಕೆ ತಯಾರು ಮಾಡತ್ರು. ಹೂಗನ ಮಾಲ್ಕಿ ಹಾಕೂಕೆ ಹೆಣ್ಣನೆಕ್ಕ ಬಂದ್ರು. ರಾಶಿ ಜನ ನೆರೆದರೆ. ನೆರದರೊಳಗುವ ಹೂಗಿನ ಮಾಲಿ ತಂತಂತಂದಿ ಅಜ್ಜಿ ಮುದ್ಕಿ ಮೊಮ್ಮಗಂಗ್ ಹಾಕ್ ಬಿಡ್ತು. ಆಗೆ ಯೆಲ್ಲರೂ ಗೌಜಿ ಕೊಟ್ರು. ಯೆಲ್ಲರೂ ನೆಗ್ಗಿ ಹೊಡೆದ್ರು. ವಳ್ಳೇ ಜನರು, "ನಿಮಗೆ ಏನು ಗೊತ್ತು? ಆದ ಶಂಗ್ತಿ ಆದಾಗೆ ಹೇಳಿ" "ಏನ್ ಹೇಳೂದಿಗೆ?" ಅಂದಿ ಎಲ್ಲ ಶಂಗ್ತಿ ವೋದ್ ಹೇಳ್ತು. ನಗ್ನಾಗೋಯ್ತು ನಗ್ನಾಗಿ ಸುಕ-ಸಂತೋಸ್ದಲ್ ವಳ್ಕಂಡ್ರು.

■ ಹೇಳಿದವರು: **ದಿ. ರಾಮಕೃಷ್ಣ ಬೆಳ್ಳಿ ನಾಯ್ಕ**, ಹೆಗಡೆ ಊರು
ದಿನಾಂಕ: ೨೬-೦೩-೧೯೬೯

◆

# ಹುಡುಗೀಯ ನಸೀಬ

ವಂದ ತಾಯಿ-ತಂದಿಗೆ ವಂದ್ ಹುಡ್ಗಿ. ವಂದ್ ಹುಡ್ಗಿಯಾದ್ರೆ ಅವ್ರ ಸಾಲಿಗೆ ಹಾಕದ್ರು. ಅದು ಬಾಳ ಬರಕುಲಕೆ ಮುಂದೆ ಬಂದ್‌ದ ಹೋಯ್ತು. ಆವಾಗ ವಂದಿವ್ಸೆ ಸಾಲಿಲಿ, "ಅಬ್ಬಬ್ಬಬ್ಬ! ಹುಡ್ಗಿ ಬಾಳ ಬರ ಕಲಿತದೆ. ಇದ್ರ ನಸೀಬ್ದಾಗೆ ಯೇನ್ ಬರ್‌ಕಬಂದದೆ ಇದು?" ಅಂದ್ ಹೇಳಿ ಹೇಳ್‌ದ್ರು. ಆ ಹುಡ್ಗಿ ಯೇನ್ ಮಾಡ್ತು? ತಾಯ್ ಕೈಲೆ ಹೇಳದ್ಲು. "ಹೀಗ್ ಯೆಂತಕ್ ಹೇಳದ್ರೂ ತನ್ಗೆ ಸಾಲಲಿ?" ಅಂದ್ ಹೇಳ್ತು. ಆವಾಗ ತಾಯಿ ಗಂಡ ಬತ್ತೆವ ಗಂಡ್ನ ಕೈಲ್ ಹೇಳ್ತು. "ನಮ್ ಹುಡ್ಗಿಗ್ ಹೀಂಗ್ ಹೇಳದ್ರಂತೆ ಸಾಲಿಲಿ."

ಅಪ್ಪ ಯೇನ್ ಮಾಡ್ದ? "ನಾ ಕೇಳ್ಕಂಡ್ ಬಂದ್ ಬಿಡ್ತೆ ಯೆಂತಕ್ ಹೇಳದ್ರು? ಹೇಳಿ" ಹೇಳ್ಕಂಡ್ ಬಂದ. ಸಾಲಿಗ್ ಬಂದ್ಕಂಡಿ ಕೇಳ್ದ, "ನೀವ್ ಸಾಲಿಲಿ ಹೀಂಗ್ ಹೇಳದ್ರಂತೆ ನಮ್ ಹುಡ್ಗಿಗೆ ಯೆಂತಕ್ ಹೇಳದ್ರಿ?" ಹೇಳ್ಕಂಡ್ ಕೇಳ್ದ. ಅವ್ರ ಯೇನ್ ಹೇಳ್ ಬಿಟ್ರು. "ಯೆಂತಕ್ ಹೇಳದ್ರು ಹೇಳ್ ಈಗ ಹೇಳೂಕ್ ತೆಳುದಿಲ್ಲ. ನೀವು ವಂದ್ ಕೆಲ್ಸ ಮಾಡಿ ಹುಡ್ಗಿ ನೆಶೀಬ್ದಲ್ ಯೇನ್ ಬರ್‌ದದೆ ಹೇಳ ತಿಳಿತದೆ. ತೆಳ್ಕಂಬೂಕೆ ಆ ಹುಡ್ಗಿ ಕರ್ಕಂಡಿ, ತಿಂಬೂಕ ಉಂಬೂಕ ಸಾಮಾನ ಯೆಟ್ ಬೇಕಾತದೆ ಆಟ್ ತಕಂಡಿ, ಹುಡ್ಗಿ ಕರ್ಕಂಡ ಹೋಗಿ. ಆ ಸಾಮಾನ್ ಕರ್ಚಾಗುವರಿಗೂ ತಿರ್ಗಿ. ನಿಮ್ಗ್ ತೆಳಿತದೆ" ಅಂದ್ರು.

ಅವಾಗಿವ್ರ ಬಂದ್ರು. ಯೆಯ್ದ್ ಜನ ಹೊರುಕೆ ಯೆಟ್ ಬೇಕಾತದೆ ನೋಡಿ, ಈ ತಿಂಬೂ ಸಾಮಾನ್, ಅಡ್ಗಿ ಸಾಮಾನ ಯೆಲ್ಲ ಕಟ್‌ದ್ರು ಕಟ್ಕಂಡಿ ಗಂಡ ಹಿಣ್ತಿ ಬೆಳಗಾಗೆದ್ ಹುಡ್ಗಿ ಕರ್ಕಂಡ್ ಹೋದ್ರು. ಯೆಟ್ ಹೊತ್ಗೆ ಆಸ್ರಿ ಕುಡಿಬೇಕೋ, ಯೆಟ್ ಹೊತ್ಗೆ ಊಟ ಮಾಡ್ಬೇಕು ಮಾಡ್ಕಂತಿ ಹೋದ್ರು. ಹೋಗ್ ಹೋಗ್ ಹೋಗ್ತಾ ಇದ್ರೆ ತಕಂಡು ಬಂದದ್ದು ಅಟ್ಟೂ

ಕರ್ಚಾಗೋಯ್ತು. ಹುಡ್ಗಿ, “ತನ್ಗೆ ತಿಂಬೂಕ ಕೊಡು” ಅಂತದೆ. “ಅಸ್ರಕೆ ಕೊಡು” ಅಂತದೆ; “ತನ್ಗ್ ಹಸ್ವಾತದೆ ಊಟ ಬಡ್ಸು” ಅಂತದೆ. ಆ ಅಡವಿಲಿ ಯೆಲ್ಲಿ ಊಟ ಕೊಡತ್ರು? ಯೆಲ್ಲಿ ಆಸ್ರಿ ಕೊಡ್‌ತ್ರು? ತೀಡ್ತದೆ ಹುಡ್ಗಿ ಹಸ್ವಾಗಿ ಆಸ್ರಾಗಿ ಗಂಡ-ಹಿಣತಿ ಮಗ್ಳ ಕರ್ಕಂಡ್ ಹೋಗರೆ.

ಆವಾಗ ಇನ್ಯೇನ್ ಮಾಡ್ಬೇಕಾಯ್ತು? ಇವ್ರಗೆ ಸೋಕ್ ಬಂದಿ ತೀಡತ್ರು. ಸಾಕ್ ಸಾಕಾಗ್ ಹೋಗ್, ಅವ್ರೆ ಕುಂತ್ರು ವಂದ್ ಕಡ್ಗೆ. ಅಲ್ ವಂದ ರಸಬಾಳಿ ಹಣ್ಣು ಕೊನ್ಯಾಗಿ ಅಲ್ಲಿ ಇವ್ರ ಕಣ್ಗೆ ಕಾಣ್ತದೆ. ತಾಯ್ ಕಂಡ್‌ಬಿಡ್ತು. “ಯೇದೇವ್ರೆ ತನ್ ಮಗ್ಳ ಹಸ್ವಾಗ್ ಮಿಡ್ಕತದೆ ಯೆಯ್ದ್ ಹಣ್ ತಂದ್ ತನ್ ಮಗ್ಳಗ್ ಕೊಡ್ಬೇಕು” ಅಂದೇಳ್ ಹೋಯ್ತು. ಅದ್ ಹೋದ್ ಕೂಡ್ಲೆ ಅದ್‌ಕಿಂದೂ ಅಂದಾಕಾರ ಮೇನ್ ಹೋಯ್ತು. ಕೈ ಮುಟ್ಟೂದೆಲ್ಲ, ಮೇನ್ಕನಡಿತು. ಅಟರೊಳ್ಗ ಹೋದ್ರೂ. ಬಿಟ್ ಬಂದ್ ಬಿಡ್ತು. ಮತ್ ಕೆಳ್ಗ ಬಂತು ಅದು ಕೊನೆ. ಅಪ್ಪ, “ತಾನಾರೂ ಯೆಯ್ದ್ ತೆಕ್ಕ ಬತ್ತೆ” ಅಂದೇಳ ಹೋದ, ಅಪ ಹೋಗುರಟ್ಕ ಹಾಗೇ ಆಯ್ತು. ಮತ ಕೊನ್ ಮೇನ್ ನೆಡಿತು. ಅಪ್ಪೂ ಬಂದ್ ಹಿಂದೇ ಕೂತ.

ಮಗ್ಳಕೈಲ್ ಯೇನ್ ಹೇಳದ್ರು? “ಮಗನೇ ನಿಂಗಾರೂ ನೆಶೀಬ್ ಅದ್ಯೋ ಅರ್ ಬಲ. ನೀನಾರೂ ಹೋಗು” ಅಂದ್ರು. ಮಗ್ಳ ಹೋಯ್ತು. ಮಗ್ಳ ಹೋಗೆ ಬಾಲಿ ಕೊನಿ ಹಿಡೀತು ಮಗಳ ಕೆಳ್ಗೆ ನೆಡಿತುಳಿತು, ಪಾತಾಳ್ಕ. ಯೆಲ್ಲೂ ಯೆಲ್ಲ. ಇಲ್ಯೇನ್ ತಾಯಿ-ತಂದೆ ಅಡ್ವಿಲ್ ಹೊಡ್ಯಾಡ್ತ ಬಿದ್ ಬಿಟ್ಟರೆ. “ಹುಟ್ಟಿದ್‌ವಂದ್ ಮಗ್ಳ ಕರ್‌ಕಂಡ್ ಈ ಆರಂಬಡ್ವಿಲ್ ಕಣ್ಣಾಗ ಕಾಣ್ದಿದ್ ಹಾಂಗ್ ಆಯ್ತಲೊ” ಅಂತ್ರು. ಯೇನ್ ಹೊಡ್ಯಾಡ್‌ತ್ರು. ಆಗಿನ್ಯೇನ್ ಮಾಡ್ಬೇಕು? ‘ತಾವಿನ್ನೆ ಬಂದ್ ಹಾದಿ ಹಿಡ್ಕಂಡ್ ಹೋಗಬೇಕು. ಯಾವೂರಾರೂ ಸೇರ ಕಂಬಾ’ ಅಂದ್ ಹೇಳ್ತ್ ಹಿಂದೇ ಬಂದ್ರು ಅವ್ರು ಇತ್ಲಾಗಿ.

ಇತ್ಲಾಗ್ ಮಗ್ಳ ಅವಸ್ತ ಯೇನಾಯ್ತು? ಅಡ್ವಿಗ್ ಹೋದದ್ದು ಪಾತಾಳ್ಕ ಹೋದ್ದು. ಅಲ್ ಹೋಯ್ಕಂಡ್ ಅಚೇಚ್ಯೆಲ್ಲಾ ನೋಡ್ತದೆ. ಸುತ್ಲನ್ ದಿಕ್ಕೂ ನೋಡ್ತದೆ. ಯಾರೂ ಕಾಂಬ್ಕದೆಲ್ಲ ವಂದಜ್ ಮುದ್ಕಿ ಬಂತು. ಬಂದ್ಕಂಡ್ ಯೇನಂತು? “ಯೇ ಮಗ್ನೆ ನಿಂಗ್ ಯೆಲ್ಲಾಯ್ತು? ಗನಾ ಹುಡಗಿ ನನ್ ಸಂಗ್ತಿಗೆ ಬಾ” ಅಂದೇಳ್ ವಂದ್ ಅರಸೂ ಮನಿಗ್ ಕರ್ಕಂಡ್ ಹೋಯ್ತು. ಅಲ್ಲಿ ವಂದರ್ ಸೂಗೆ ವಂದ್ ಹುಡ್ಗಿದ್ದ ಆ ಹುಡ್ಗನ್ ಕಾಲ್ಗೆ ವಂದ್ಕ ಯೆಯ್ದು ಮುಳ್ ಹೆಟ್ಟದೆ. ಅದ್ ನಲ್ವತ್ತೊಂದ್ ದಿವ್ಸಕ್ ಬಿದ್ ಹೋಗು ಮುಳ್ಳ. ಅಟ್ ಹೊರ್‌ತು ಬೀಳುದಿಲ್ಲ. ಅವ್ಗೆ ಈ ಬದಿ ಬೋದ್ಯೇ ಇಲ್ಲ. ಎಚ್ರಕ್ಯೇ ಇಲ್ಲ. ಆ ಮುದ್ಕ ಯೇನ್ ಮಾಡ್ತು “ಮಗನೇ ನೀನು ಇವ್ನ್ ತಲಿಬದಿಗ್ ಕುಳ್ಳ್ ಬೇಕು. ಅವ್ಗೆ ನಾಲ್ವತ್ತೊಂದ್ ದಿವ್ಸಕೆ ಆ ಮುಳ್ ಬಿದ್ದಹೋಗ್ತದೆ. ಅವ್ನ ಯೆದ್ದ್ ಕುಂತ ಕೊಡ್ಲೆವ ನೀನು ಈ ಹೊಂಗ್ನ ಮಾಲಿ ಹಾಕಬಿಡು. ಅವದಿ ತೀರ ಬರೂಕಾಗೋಗದೆ. ಆಯ್ತು. ತೆಂಗ್ಯಾಗೂಕಾಯ್ತು. ಹೊಂಗ್ನ ಮಾಲಿ ಬಿಡುಕ್ಕಿಲ್ಲ.” ಇದ್ಯೇನ್ ಹೇಳ್ತು ಅಜ್ಜಿಕೈಲಿ? “ಅಜ್ಜೀ, ನಾ ವಬ್ಳ್ಳೇಯ. ನೀ ಇನ್ ಯೆಲ್ಗ್ ಹೋತೋ ಯೇನೊ? ನಾ ವಬ್ಬೇ ಕುಂತ್ಕೊಬೇಕಾಯ್ತು” ಅಂತು. “ಯೆಲ್ಲ ಮಗನೇ ಬತ್ತೆ ನಾನು ಬೇಗ ಬತ್ತೆ” ಅಂದ್ ಹೇಳಾಕೆ ಹೋಯ್ತು.

ಹೋಗುತನ ಅಲ್ ವಂದ್ ದಾರೀಲಿ ವಂದ್ ಚಮಗಾರ ಹುಡ್ಗಿ ಶಿಕ್ತು. "ಯೇ ಹುಡ್ಗಿ, ನನ್ ಮೊಮ್ಮಗ್ಳ ವಬ್ಬೇ ಅದೆ. ಅದ್ರ ಸಂತಿಗೆ ನೀನೂ ಕೂತ್ಕ" ಅಂತು. (ಹಿಂದಕ್ ಹೀಗೆ ಬೇದ್ ಇರುದೆಲ್ಲಾಗಿತ್ತೊ ಯಾರ್ಗ್ ಗುತ್ತು? ಮೇಲೆ ಜಾತಿ ಕೀಳ ಜಾತಿ ಬೇದ್ ಆಗೂ ಇರಲಕ್ಕು ಯಾರ್ಗ್ ಗುತ್ತು? ಕತಿಲ್ ಇದ್ದದ್ದೇ ಹಾಗೆ.) ಅವಾಗ್ ಚಮಗಾರ ಹುಡ್ಗಿ ಬಂದ್ ಕೂತ್ಕಂತು ಈ ಹುಡ್ಗಿ ಯೇನಂತು? "ನಾನು ಬಗಿಲಿ ಮೈನೀರ ಹೊಯ್ಕ ಬತ್ತೆ. ನೀ ಇಲ್ಲೇ ಕುಳ್ಳು" ಅಂತು. ಹೂಂಗ್ನ್ ಮಾಲೆ ಅಲ್ಲೇ ಇಟ್ಟಾಕ್ ಹೋಯ್ತು. ಅದ್ ಹೋದ್ ಬರಾಬರಿ ಇವ್ನ ಕಾಲನ ಮುಳ ಬಿದ್ ಹೋಯ್ತು. ಇವ್ ಯೆದ್ ಕೂತೇ ಬಿಟ್ಟ. ಚಮ್ಗಾರ್ ಹುಡ್ಗಿ ಯೇಕ್ದಂ ಯೆತ್ತು. ಅ ಮಾಲಿತೆಗ್ದ ಅವ್ಗ್ ಹಾಕೇ ಬಿಟ್ತು ಗಂಡ ಹೆಣ್ತಿ ಅಗೇ ಬಿಟ್ರು.

ಈಗೀ ಹುಡ್ಗಿ? ಈ ಹುಡ್ಗಿಗೆ ಹೆಸ್ರ ಹಾಕಂಡ ಯೇನೇಳಿ? 'ಹಾದಿ' ಹೇಳ್ ಹೆಸ್ರ ಹಾಕಂಡ. ಅದು ಇವ್ರ ಮನಿಲ್ ಕೆಲಸಕ್ಕುಳಿತು. ಚಮಗಾರ ಹುಡ್ಗಿ ಅಡ್ಗಿ ಮಾಡೂದು, ಅರಸೂ ಹುಡುಗ್ಗ್ ಬಡ್ಸೂದು, ತಾ ಉಂಬೂದು. ಇದ್ಕ್ ವಂದ್ ಆಳೇರ್ಗ್ ಮಾಡ್ದಂತಾ ಊಟ ಕೊಡುದು. ಇದ್ಯೇನ್ ಮಾಡ್ತದೆ? ಪಾತ್ರ ನೆಕ್ಕಂಡ್ ಹೋಗೂದು, ಹಳ್ಳಕ್ ತಕ್ಕಂಡ್ ಹೋಗೂದು. ಇದ್ಕ್ ಅವ್ನದ್ ಆಸಿನೇ ಇಲ್ಲ. ಹೊಟ್ಟೆಗ್ ಹಸ್ವೇ ಇಲ್ಲ. ಬಟ್ಟು ಹಳ್ಳದಗ್ ಆಡ್ಸವದು, ಪಾತ್ರ ತಿಕ್ವದು. ಚೊಕ್ ಮಾಡ್ಕ ಬಂದ್ ಇಲ್ ಕೊಡೂದು. ಅವ್ರ ಹೇಳ್ದ ಕೆಲ್ಸ ಮಾಡೂದು ಇರ್ವದು, ಊಟದ್ದೂ ಆಸ್ರಿದೂ ಹೊಟ್ಟಿಗ್ ಹಸ್ವೇ ಇಲ್ಲ.

ಆವಾಗ್ ವಂದಿವ್ಸೆ ಅರಸು ಯೇನ್ ಹೇಳ್ದ? ಚಮಗಾರ್ ಹುಡ್ಗಿಗೆ ಲಕ್ಷ್ಮೀ ಹೇಳ್ ಹೆಸ್ರೆ ಹಾಕಂಡನೆ. "ಲಕ್ಷ್ಮೀ, ತಾನು ಗೋಕಣ್ ಶಿವರಾತ್ರಿಗೆ ಹೋಗಬತ್ತೆ. ನಿನ್ಗ ಯೇನ್ ತರಬೇಕು?" ಕೇಳ್ದ ಹಿಂಡ್ತಿ ಕೈಲಿ. "ನಂಗ್ ಯೆಂತಾ ಆಸೀನೂ ಇಲ್ಲ. ವಂದ್ ನಿಜ್ಜಗಳ ತನಿ" ಅಂತು. (ನಿಜ್ಜಗಳ ಹವಿಕ್ರು ಹಾಕ್ವದೆ ಜಾಸ್ತ್ಯಾಗಿತ್ತು. ಬಳಿಗೆ ಕಟ್ಗೆ ಹಗಳ ಸೇರ್ಸುದು. ಇದಕ್ಕೆ ಹವಳ ಕಟ್ಟು ಅಂತಾರೆ.) "ತನ್ಗ್ ಮತ್ಯೇನೂ ಬೇಡ" ಅಂತು. ಇದ್ರ್ ಕರ್ದ. "ದಾದಿ ನಿಂಗ್ಯೇನ ತರಬೇಕು?" ಕೇಳ್ದ, "ತನ್ಗ ಯೇನೂ ಬೇಡ. ತನ್ಗ ವಂದ್ ಬೊಂಬಿ ತಕಂಡ್ ಬನಿ" ಅಂತು. ಆವಾಗಿವ ಹೋದ. ಹೋದವ ಯೆಲ್ಲ ನೋಡ್ಕಂಡ ಸಾಮಾನ್ ತಕ ಬಂದ.

ತಂದ್ ಅವ್ರವ್ಗೆ ಕೊಟ್ಟ. ಅವಾಗಿದ್ಯೆಲ್ಲಾ ಕೆಲ್ಸ ಗಿಲ್ಸ ಮಾಡಾಯ್ತು. ಅವ್ರೆಲ್ಲಾ ಉಂಡ್ಕಂಡ್ ಮನಿಕಂಡ್ರು. ಇದೂ ಮನ್ಗತು, ಬೊಂಬಿಕೈಲ್ ಇದ್ ಹೇಳ್ತದೆ. ಹಿಂದ್ನದ ಲಿಟ್ಬೂ ಹೇಳ್ತದೆ. ಬೊಂಬ್ಗೆ, 'ಪುಂಗಾ' ಹೇಳ್ ಹೇಸ್ರ ಹಾಕ್ತದೆ. "ಕೇಳೆ ಪುಂಗಾ, ನನ್ ನೆಸಿಬ್ಬ, ನಮನಿಗೇ ಬರೂದ್ ಕಾಡಿಗೆ" ಯೆಲ್ಲ ಹೇಳ್ತು. "ಈಗ್ಯೇನಾಗದೆ ಪುಂಗ ಕೇಳದ್ರೆ ನಮ್ ನೆಸೀಬ್. ಅರಸು ಹುಡ್ಗಗೆ ಚಮಗಾರ ಹುಡ್ಗಿ ಬಂದ್ ಅವಗೆ ತಾನ್ ವೈನೀರ್ ಹೊಗ್ ಬರೂತನ ಮಾಲಿ ಹಾಕದೆ. ತಾನಾಗಿತು ಮಾಲಿ ಹಾಕುದು. ಚಮ್ಗಾರ್ ಹುಡ್ಗಿ ಹಾಕ್ತು ನನ್ ನೆಸೀಬ ಕೇಳು" ಹಾಂಗ್ ಹೇಳ್ತಾ ಬೊಂಬಿಜಪ್ತದೆ. ಮೇಲೆ ಅರಸು ಹುಡ್ಗಗ್ ಎಚ್ರಕ್ಯಾಗೀ ಇತ್ತು. ಯೆಲ್ಲಾ ಕೇಳ್ದ. "ಹರಹರಾ ತಾ ಇಲ್ ಬಪ್ಪವರಿಗೂ ನೀರ್ ಮುಟ್ಲಿಲ್ಲ. ತಕಂಡ ಹೋಗೂದು ಹೆರೆಕ್

ಹೊತ್ತು ಪಾತ್ರ ತಿಕ್ಕ ಬಂದ ಕೊಡೂದು. ಆರ್‌ಸು ಹುಡ್ಗ ಚಮಗಾರ ಹುಡ್ಗಿ ಕೈಲ್ ಊಟ ಮಾಡ್ತವ್ನೆ. ನನ್ ನೆಸೀಬ" ಹೇಳುದೂ ಬೊಂಬಿ ಜಪ್ವದು.

ಇದ್ನೆಲ್ಲಾ ಕೇಳ್ಕಂಡ ಅರಸೂ ಹುಡ್ಗೆ ಮತಿ ಹಿಡ್ದಹೋಯ್ತು. ಇವ ಅಜ್ಜಿ ಮುದ್ಕಿಯ ತಲಾಸ್ ಮಾಡಿ, ಅಜ್ ಮುದ್ಕಿ ತಂದು ಕೇಳ್ದ, ಚಮಗಾರ ಹುಡ್ಗಿ ತೊರಸಿಕಂಡಿ, "ತಾ ತಂದ ಇಟ್ಟ ಈ ಹುಡ್ಗಿ ಇದಲ್ಲಾಗಿತ್ತು" ಅಂತದೆ.

ಆವಾಗೆ ಆರ್‌ಸು ಹುಡ್ಗ ಬೆಳಗ್ಗೆದ್ದಿ ಗೋಕರ್ಣಕೋಗಿ ಸುದ್ದಾಕಂಡ್ ಬಂದ್, ತನ್ಗ ಮಡಿ ಅಟ್ಟು ತೆಗ್ದ.

ಮನೆಮಾರೆಲ್ಲ ಚೂಕ್ ಮಾಡಿ, ತೀರ್ತ-ಪರಸಾದ ಹಾಕಂಡಿ ಚಮಗಾರ ಹುಡ್ಗೀಯ ಹೆರಗ್ ಹಾಕ್ದ. ಈ ಹುಡಗ್ಯ ತಕಂಡೋಗ್ ವಳ್ಗೆ ಇಟ್ಕಂಡ.

(ಅಪ್ಪ-ಆವಿ ಸುದ್ದಿ ಯೆಲ್ಲೂ ಇಲ್ಲ)

■ ಹೇಳಿದವರು: **ಸೌ| ಮಾಸ್ತಿ ರಾಮನಾಯ್ಕ,** ಮೂರೂರು, ಹಾಲಿವಸ್ತ್ರಿ, ಹೆಗಡೆ ಊರು.
ದಿನಾಂಕ: ೨೧-೦೨-೧೯೭೩

◆

# ಹೆಣ್ಣು ಯಾರಿಗೆ?

ವಂದ್ ಅಪ್ಪ-ಅವಿ, ಅಣ್ಣ-ತಂಗಿ ಇದ್ರು. ಕರಿಯಣ್ಣ ಮನೆಲಿ ಅಗೆ ತಂಗಿ ನೆರಿತು. ಆಚೆಚ್ಯೊರೆಲ್ಲಾ ನೆಗ್ಯಾಡದ್ರು ನೆಗ್ಯಾಡದ್ರು. "ನಿಮ್ ಮಗಳು ಇಟ್ ದೊಡ್ಡಾಯ್ತು ಇನ್ನೂ ಯಾಕ್ ಮದ್ವಿ ಮಾಡ್ಲಿಲ್ಲಾ?" ಹೇಳ್ ಕೇಳಿದ್ರು.

ಅಣ್ಣಗೂ ಸಿಟ್ ಬಂತು. ಅಪ್ಪವಿಗೂ ಸಿಟ್ ಬಂತು. ಕಡಿಗವ್ರು ಮೂರು ಜನ ಅದ್ಕ್ ಗಂಡನ ಆರ್‌ಸಬೇಕು ಹೇಳಿ ಮೂರ್ ಊರ್‌ಗ್ ಹೋದ್ರು. ಅಪ್ಪ ವಂದ್ ಊರ್‌ಗ್ ಹೋಗಿ ವಂದ್ ಗಂಡ್ನ ಆರ್ಸದ. ಅವ್ವ ವಂದ್ ಊರ್‌ಗ ಹೋಗಿ ಗಂಡ್ನ ಅರಸ್ತು. ಅಣ್ಣ ವಂದ್ ಊರ್‌ಗ ಹೋಗಿ ತಂಗಿಗ್ ಗಂಡ್ನ ಆರ್ಸ್‌ದ. ಅವ್ರು, 'ಕಲ್ ಸುಕ್ರಾರ ದಿನ ನಗ್ನ, ದೆಬ್ಣ ತಕ ಬನ್ನಿ' ಅಂದ ಹೇಳಾಕ ಬಂದ್ರು.

ಕಡಿಗೆ ಮೊದ್ಲೆ ಬಂದು ಅಪ್ಪ-ಅವಿ-ಅಣ್ಣ ಚಪ್ರಜಾಪ್ಡಿ ಯೆಲ್ಲಾ ಹಾಕ್ರು. ಹಾಕಾತ್ನೆ ಮಗು ಯೇನಂತು? "ಅಣ್ಣಾ ನಿಮ್ಮಲ್ ಚಪ್ರ ಚಾಪ್ಡಿ ಹಾಕಿರು ಯಂತ ಕಾರಿ?" ಹೇಲ್ ಕೇಳ್ತು. ಅಣ್ಣ ಯೇನಂದ್? "ಯೇನೋ ತಂಗಿ ನಂಗೊತ್ತೆಲ್ಲ ಅಪ್ಗೇ ಗೊತ್ತು." ಅಪ್ನ ಕಲ್ ಹೋಗ್ ಕೇಳ್ತು.

ಅಪ್ಪ ಕಲ್ ಹೋಗ್ ಕೇಳ್ತು ಅದು, "ನಂಗ್ಯೇನೂ ಗುತ್ತಿಲ್ಲ. ಮಗನೇ. ನಿನ್ ಅವ್‌ಗೆ ಗುತ್ತು" ಹೇಳ್ದ. ಕಡಿಕೆ ಮಗು ಸುಮ್ನೆ ಉಳಿತು. ಸುಕ್ರ್ರಾರ ದಿನ ದೆಬ್ಬ ಬಂತು. ಯೆಲ್ ಬಂತು? ಅವರ ಮನೆ ಸಮ ಬಂತು. ಮೂರು ದೆಬ್ಬ ವಟ್ಟಾಕಂಬರೊಳಗೆ ಅವ್ರು ದೆಬ್ಬ ಜನ್ರೆ ಕೇಳಾಡದ್ರು, "ನಿಮ್ಮ ದೆಬ್ಬ ಯೆಲ್ ಹೋತದೆ?" ಮೂರ್ ಸಾರೆ ಕೇಳ್ದ್ರು. ಇವ್ರು ಕೇಳ್ರು, ಆವ್ರ್ ಇವ್ರ್ ಕಲೆ ಕೇಳ್ರು.

ಹೀಗೆ ಇರುತಲ್ಲಿ- "ಹೆಣ್ಣ ಮದಿ ಮಾಡ್ಕಂಬೂಕೆ ಬರು ಬರೂಕ್ ಹೇಳವ್ರೆ" ಅಂದಿ ಅವ್ರೇ ಮನ್ಸ್‌ನಲ್ ತೆಳ್ಕಂಡ್ರು.

ಆಗ ಮೂರೂ ದೆಬ್ಬವೂ ಕರಿಯಣ್ಣ ಮನಿಗ್ ಬಂತು. ಮೂರು ದೆಬ್ಬ ವಳ್ಗ ತೆಕಂಡ್ರು. ಮಂಚ್ದ್ ಮೇನ್ ಬಂದ್ ಕೂತ್ರು. ಮೂರು ಜನ ಮದಮಕ್ಕಳು ಆಗೆ ಇವರಿವರೊಳಗೆ ಹೇಳಾಡೂಕ ಸುರು ಮಾಡ್‌ದ್ರು. ಇವರಿವರೊಳಗೇ ಗುಬಗಾಡೂಕ್ ಹಣ್ಕಿದ್ರು, ಮಗ ಕೇಳ್ದ, "ಅವೀ, ನೀ ಯಾವ್ ಊರ್‌ಗ್ ಹೋಗ್ ಗಂಡ್ನ ಕೇಳ್ಕಂಡ ಬಂದಿದೆ?" ಅದ್ರಂತೆ ಅಪ್ಪನ್ನೂ ಕೇಳ್ದ ಮಗ. "ಅಪ್ಪ ನೀನೂ ಯಾವ ಊರ್‌ಗ ಹೋಗಿ ಗಂಡ್ನ ಕೇಳ್ಕಂಡ ಬಂದಿದೆ?" ಹೇಳದ್ರು ಮಗನಿಗೆ.

"ನಮ್ಮ ಮಾನ ಕುಂದ್ಸಿ ಬಿಟ್ರು" ಅಂದಿ ಮೂರು ಜನ ಗಂಡ್ನರು ಜಗ್ಳ ಮಾಡೂಕ ಹಣ್ಕರು. ಮದವಳ್ತ್ ಮಗು ಅಂಬುದು ಯೇನು ಮಾಡ್ತು? 'ಮೂರು ಜನ ಜಗಳಾಡ್ರು' ಅಂದ್‌ಹೇಳಿ, ಮದವಾಳ್ತಿ ಮುಂದೆ ಬಂದಕಂಡು ರೊಂಡ ಕಡದ್ ತುಂಡ್ ಮಾಡಿ, ಕೆಂಡ ಮಾಡ್ದಲ್ಲಿ ಹೋಗ್ ಮುದ್ದಾಂಬಿತ್ತು. ಆ ಹೆದ್ರಕೀಗೆ ಅಲ್ ಮೂರ್ ಮದಮಕ್ಕಳಲ್ಲಿ ಯೆಲ್ಲ ಜನ ಯೆದ್ ವೋಡ್ ಹೋದ್ರು. ವಬ್ ಕೂತಲ್ಲೇ ವಳ್ದ. ವೋಡ್ ಹೋದವ್ರು ತಮ್ ಮನಿಗೋದ್ರು. ಮತ್ತೊಬ್ ಬಡಾ ಬಟ್ರಾಗಿತ್ತು. ನಾಕ ಮನೆ ಬೇಡ್ ದಿನಾ ವಂದ್ ಆಳ್ ಅಕ್ಕಿ ತಂದ್ಕಂಡಿ ತಿಂಬೋದು ಅವನಿಗೆ.

ಅವನಿಗೆ ಗಿರಾಕಿ ಬಹಳ. "ವಂದ್ ದಿನವೂ ಜನ್ರು ಬರದಿದ್ದೆಲ್ಲ. ಮನೆ ಸುತ್ತಲೂ ಯಾರೂ ಬರದಿದ್ದಿ ಹಾಂಗೆ ಬೇಲಿ ಕಟ್ತೆ" ಅಂದ. ಬೇಲಿ ಕಟ್ತೇ ಇರವಾಗೇ ಬಾಶಿಂಗ್ ಕಟ್‌ಕಂಡ್ ಓಡ್ ಹೋದವ ಬೇಲಿ ಮುರಕಂಡು ಅವರ ಮನಿಗ್ ಹೋದ.

ಬೇಲಿ ಕಟ್ದ ಬಟ್ಗೆ ಶಿಟ್ ಬಂದ್ ಹೋಯ್ತು. ಶಿಟ್ ಬಂದಿ ಬಟ್ನೊ ಮನಿಗ್ ಹೋದ. ಅಲ್ಲಿ ಹಿಂಡ್ತಿ ಕಲಿ, "ವೋಟ ತಯಾರಾದ್ರೆ ಬಡ್ಸು" ಅಂದ. ಅವಗ್ ವಂದ್ ಮಾಣಿತ್ತು. ಮಾಣಿ ತೀಡ್ದ, ತೀಡ್ದ, ತಿಡ್ದ, ತೀಡ್ದ.... ಶಿಟ್ ಬಂದಿ ಅವಂಗೆ ಕಣ್ಣಿಲ್ಲ ಅಂದಿ, ಆಗ ಬಟ್ಯೇನಂದ? ಶಿಟ್ ಬಂದು ತಡುಕಾಗ್ದೇಯ, "ಮಾಣಿ ಕುತ್ತಿ ಮುರ್ದಿ ವಲೆಲಿ ಬೆಂಕಲಿ ಹುಗಿ" ಅಂದ.

ಕಡಿಗೆ ವೋಟ ಗೀಟ ಯೆಲ್ಲ ಆಯ್ತು. ಅವ್ನ ಶಿಟ್ ತಣೀತು. ವೋಟಾಕಂಡೆ ಬಂದ್ ನಿಂತ್ಕಂಡಿ ಹಲಗಿ ಮೇನ್ ತೇರ್ತ ತಂದ. ಗಿಂಡೀದು ತೇರ್ತ ತಕಂಡೋಗಿ, "ವಲಿಲಿದ್ದಿ ಮಾಣಿ ನೆಕ್ಕ ಬಾ" ಅಂದ. ಆಗ ಮಾಣಿ ನೆಕ್ಕಂಡೆ ಬಂತು. ಬಟ್ನ ಹಿಂಡ್ತಿ ತೇರ್ತ ಶಿಮರಿಸಿ

ಮಾಣಿಗ್ ಜೀವ ಬಂತು. ಓಡ್ ಹೋದವ ಉಂಡ್ಕಂಡಿ ಸುಮ್ನೆ ಕೂತನೆ. ಆಗ ಬಟ್ಟ ಹಿಂತ್ತಿ ಅತ್ಲಾಗೆ ಹೊದ್ದೇಯ, ಅದ್ರ ಕಣ್ ಮರಸಿ ತೇರ್ತದ ಗಿಂಡಿ ತಕಂಡ. ತಕಂಡಿ ಬಂದ. ಯೆಲ್ ಬಂದಾ? ದೆಬ್ಣ ಯೆಲ್ಲಾ ಬಂದಿತ್ತು. ಕರಿಯಣ್ಣ ಮಲ್ಲಿ ಅಲ್ಗ್ ಬಂದ. ಬಂದಿ ಆ ಕೊಂಡದಾಗೆ ಆ ತೇರ್ತ ತಂದಿ ಶಿಮರ್ಸ್‌ದಾ. ಆ ಹೆಣ್ ಯದ್ ಬಂತು. ಯೇಗ ಕೂತವ್ ಕೂತಲ್ಲೆ ಈವ. ಯೇಗ್ ಅವಗಾಯ್ತೊ ಹೆಣ್ಣು? ಜೀವ ಮಾಡ್ದವ್ಗ್ ಆಯ್ತೋ? ಮದವಾಳ್ತಿ ಬಾಶಿಂಗ್ ಕಟ್ಕ್ ಕುಂತವ್ಗೆ ತಕಹೋಗ್ ಮಾಲಿ ಹಾಕ್ತು. ಆಗ ಜೀವ ತಂದವ ಅಪ್ಪ. ಅವನಿಗೆ ಮಾಲಿ ಹಾಕಲಿಲ್ಲ.

■ ಹೇಳಿದವರು: **ಲಕ್ಷ್ಮೀ ಯೇರಯ್ಯ ನಾಯ್ಕ**, ಹೆಗಡೆ ಊರು.

◆

ಮಿತ್ರಮಾಧ್ಯಮ

ನೋಂದಾಯಿತ ಟ್ರಸ್ಟ್

ಮುಕ್ತ ಮಾಹಿತಿಗೆ ಪುಟ್ಟ ಹೆಜ್ಜೆ

mitramaadhyama.riverthoughts.com

beluru@beluru.com

# ಮಿತ್ರಮಾಧ್ಯಮದ ಸಾಮಾಜಿಕ ಚಟುವಟಿಕೆಗಳು

MITRAMAADHYAMA

## ಈಗ ನಡೆಯುತ್ತಿರುವ ಚಟುವಟಿಕೆಗಳು

- **ಮಿತ್ರಮಾಧ್ಯಮದ ಟ್ರಸ್ಟೀ ಶ್ರೀ ಬೇಳೂರು ಸುದರ್ಶನ ಅವರಿಂದ ಕರ್ನಾಟಕ ಸರ್ಕಾರದ ಜಾಲತಾಣಗಳಲ್ಲಿ ಕನ್ನಡ ಬಳಕೆ, ಏಕರೂಪತೆ ಸುಲಭಗ್ರಾಹ್ಯತೆ ಕುರಿತಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಮಗ್ರ ವರದಿ ಸಲ್ಲಿಕೆ (2017). ಈ ವರದಿಯ ಆಧಾರದಲ್ಲಿ ಸರ್ಕಾರವು ಸರ್ಕಾರದ ಏಕೀಕೃತ ವೆಬ್ ಮಾಹಿತಿ ಸಂಗ್ರಹಣಾ ವ್ಯವಸ್ಥೆಯನ್ನು ರೂಪಿಸಿದೆ (2019)**
- **ಕನ್ನಡವೂ ಸೇರಿದಂತೆ ಭಾರತೀಯ ಭಾಷೆಗಳ ತಂತ್ರಾಂಶಗಳನ್ನು ಕಡ್ಡಾಯವಾಗಿ ಭಾರತೀಯ ಮಾರುಕಟ್ಟೆಗೆ ಬರುವ ಮೊಬೈಲ್ ಸಹಿತ ಎಲ್ಲಾ ಐಟಿ ಸಾಧನಗಳಲ್ಲಿ ಮಾರಾಟಕ್ಕೆ ಮುಂಚಿತವಾಗಿಯೇ ಅಳವಡಿಸುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿ ಸಹಿ ಸಂಗ್ರಹ, ಮನವಿ ಸಲ್ಲಿಕೆ. (2016)**
- ಸಿದ್ಧ ಪೊಟ್ಟಣಗಳ ಮೇಲೆ ಭಾರತೀಯ ಭಾಷೆಗಳಲ್ಲಿ ಉತ್ಪನ್ನದ ಶೀರ್ಷಿಕೆ, ಮಾಹಿತಿ ಮುದ್ರಿಸಲು ಒತ್ತಾಯಿಸಿ ಅಭಿಯಾನ. (2016)
- ಕನ್ನಡದ ಓಸಿಆರ್‌ನ್ನು ಮುಕ್ತ ತಂತ್ರಾಂಶವಾಗಿ ಬಿಡುಗಡೆ ಮಾಡುವಂತೆ ಭಾರತೀಯ ವಿಜ್ಞಾನ ಸಂಸ್ಥೆಗೆ ಸೂಚಿಸಲು ಕೇಂದ್ರ ಸರ್ಕಾರಕ್ಕೆ ಒತ್ತಾಯ (2016)
- ಕನ್ನಡವೂ ಸೇರಿದಂತೆ ಕೇಂದ್ರ ಸರ್ಕಾರದ ಐಟಿ ಇಲಾಖೆಯಿಂದ ರೂಪಿಸಿರುವ ವಿವಿಧ ತಂತ್ರಾಂಶಗಳನ್ನು ಸಮಕಾಲೀನಗೊಳಿಸಿ ಮುಕ್ತ ತಂತ್ರಾಂಶಗಳಾಗಿ ಬಿಡುಗಡೆ ಮಾಡಲು ಒತ್ತಾಯ (2016)

## ಈವರೆಗೆ ಕೈಗೊಂಡ ಚಟುವಟಿಕೆಗಳು

- ವಿವಿಧ ಸೇವಾಕಾರ್ಯಗಳಿಗೆ ಧನಸಹಾಯ (2016,2018)
- ರಾಜ್ಯ ಸರ್ಕಾರಕ್ಕೆ ಮಾಹಿತಿ ನೀಡಲು ಓಸಿಆರ್ ಕುರಿತು ಒಂದು ದಿನದ ಕಾರ್ಯಾಗಾರ ಸಂಘಟನೆ (2015)
- **ಕ್ರಿಯೇಟಿವ್ ಕಾಮನ್ಸ್ ಎಂಬ ಮುಕ್ತ ಹಕ್ಕುಸ್ವಾಮ್ಯದಡಿ ಕನ್ನಡದ ಮೊಟ್ಟಮೊದಲ ಪುಸ್ತಕ 'ಕಂಪ್ಯೂಟರ್ ಮತ್ತು ಕನ್ನಡ' ಪ್ರಕಟಣೆ (2014) ಉಚಿತ ಪುಸ್ತಕ ಸಂಸ್ಕೃತಿ ಅಭಿಯಾನ (freebookculture.com/ freebookculture.riverthoughts.com)**
- 'ಇಂಟೆಗ್ರೇಟಡ್ ಪವರ್ ಪಾಲಿಸಿ' ಕುರಿತ ಪುಸ್ತಕದ ಬಿಡುಗಡೆ ಕಾರ್ಯಕ್ರಮ, ಪ್ರಚಾರ (2013)
- ಎಂಡೋಸಲ್ಫಾನ್ ಸಂತ್ರಸ್ತರಿಗೆ ಸೂಕ್ತ ಪರಿಹಾರ ಕೊಡುವಂತೆ ಒತ್ತಾಯಿಸಿ ರಾಜ್ಯ ಸರ್ಕಾರಕ್ಕೆ ಮನವಿ, ವಿಶೇಷ ಮಾಹಿತಿ ಸಭೆ (2011)
- ರಾಜ್ಯದ ಇಂಧನ ನೀತಿಯಲ್ಲಿ ಪರಿಸರ ಸಂರಕ್ಷಣೆಗೆ ಒತ್ತು ನೀಡಲು ಮುಖ್ಯಮಂತ್ರಿಯವರಿಗೆ ಒತ್ತಾಯ; ಕನ್ನಡದ ಪ್ರಮುಖ ದಿನಪತ್ರಿಕೆಗಳಲ್ಲಿ ಹಿರಿಯ ಸಾಹಿತಿ, ಕಲಾವಿದರ ಸಹಿಯ ಬಹಿರಂಗ ಪತ್ರ ಪ್ರಕಟಣೆ (2010)
- ವಿದ್ಯುತ್ ತಜ್ಞ ಶ್ರೀ ಶಂಕರ ಶರ್ಮ, ಮಕ್ಕಳ ಮನೋವಿಜ್ಞಾನಿ ಡಾ॥ ಮಾಳವಿಕಾ ಕಪೂರ್ ಮುಂತಾದವರಿಂದ ಮಾಹಿತಿ ಸಭೆಗಳು.

# ಡಾ॥ ಎಲ್ ಆರ್ ಹೆಗಡೆ

ಅಪ್ರಕಟಿತ ಸಂಗ್ರಹ ಮಾಲೆ

೧ ನಾಮಧಾರಿಗಳ ಆಡುಭಾಷೆಯ ಕಥೆಗಳು



ಉತ್ತರ ಕನ್ನಡದ ನಶಿಸಿಹೋಗುತ್ತಿರುವ ಜಾನಪದ ಸಂಪತ್ತನ್ನು ಸಂಗ್ರಹಿಸಿ, ಉಳಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದ ಮಹಾಚೇತನ. ಅಧ್ಯಾಪನದಿಂದ ನಿವೃತ್ತಿಯಾದ ನಂತರ ತಮ್ಮೆಲ್ಲ ಸಮಯವನ್ನು ಜಾನಪದ ಸಾಹಿತ್ಯ ಸಂಗ್ರಹ ಮತ್ತು ಸಂರಕ್ಷಣೆಯ  ಕೆಲಸಕ್ಕೇ ಮೀಸಲಿಟ್ಟಿದ್ದ ಸಮಾಜಜೀವಿ. ಜಾನಪದ ಕ್ಷೇತ್ರದಲ್ಲಿ ಅವರ ಸಾಧನೆ ಅಪೂರ್ವ. ಅವರಿರುವಾಗ ಪ್ರಕಟವಾದ ಪುಸ್ತಕಗಳು ಹಾಗೂ ಅವರೇ ಬರೆದ ಪಾಂಡಿತ್ಯ ಪೂರ್ಣ ಪೀಠಿಕೆ, ಮುನ್ನುಡಿಗಳು ಜಾನಪದ ಕ್ಷೇತ್ರದಲ್ಲಿ ಅವರ ಆಳವಾದ ಅಧ್ಯಯನವನ್ನು ಎತ್ತಿ ತೋರಿಸುತ್ತವೆ. ಉತ್ತರ ಕನ್ನಡದ ಬುಡಕಟ್ಟು ಜನಾಂಗಗಳ ಕುರಿತ ಅವರ ಅಧ್ಯಯನಗಳು ಅನನ್ಯ; ಸಂಶೋಧನಾ ಪ್ರಬಂಧಗಳು, ಭಾಷಣಗಳು, ಜಾನಪದ ಲೇಖನಗಳು ಅಸಂಖ್ಯ.

ಈಗಾಗಲೇ ಅವರ 84 ಕೃತಿಗಳು ಪ್ರಕಟಣೆ ಕಂಡಿವೆ. ಅವರ ಅಪಾರ ಸಂಗ್ರಹದಲ್ಲಿ ಪ್ರಕಟವಾಗದ ಜಾನಪದ ಸಾಹಿತ್ಯ ಇನ್ನೂ ಸಾಕಷ್ಟಿದೆ. ಅವುಗಳಲ್ಲಿ ಕೆಲವನ್ನು ಆಯ್ದು ಅಪ್ರಕಟಿತ ಸಾಹಿತ್ಯ ಸರಣಿಯನ್ನು ಈ ಮೂಲಕ ಆರಂಭಿಸಲಾಗಿದೆ. ಅವರ ಪುತ್ರಿ ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ ಅವರು ಈ ಸಂಗ್ರಹಗಳನ್ನು ನಾಡಿಗಾಗಿ ಸಂರಕ್ಷಿಸಿ, ಸಂಪಾದಿಸಿ ಕೊಟ್ಟಿದ್ದಾರೆ.

ಉಚಿತ ಪುಸ್ತಕ

ಮಿತ್ರಮಾಧ್ಯಮ
ಮುಕ್ತ ಮಾಹಿತಿಗೆ ಪುಟ್ಟ ಹೆಜ್ಜೆ